ಮೂಲಭೂತ ವಿಜ್ಞಾನ

ಪುಸ್ತಕ ಮಾಲೆ

ಪ್ರಾಣಿ – ಪ್ರಾಣಿ ಪರಿಸರ

ಪ್ರೊ|| ವಿ. ಎ. ಕುಲಕರ್ಣಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಮೂಲಭೂತ ಶೈಕ್ಷಣಿಕ ಪುಸ್ತಕ ಮಾಲೆ

ಪ್ರಾಣಿ
ಪ್ರಾಣಿ ಪರಿಸರ

ಪ್ರೊ|| ಎ.ಎ. ಕುಲಕರ್ಣಿ

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ
ಬೆಂಗಳೂರು -೫೬೦ ೦೧೮

PRANI - PRANI PARISARA : A book on Animal and Animal World by Prof. V.A. Kulakarni, & Published by Administrative Officer, Kannada Pustaka Pradhikara (Kannada Book Authority), Pampa Mahakavi Road, Chamarajpet, Bangalore-560 018.

Pp : 135 + vi

ಪ್ರಥಮ ಮುದ್ರಣ : 1999

ಬೆಲೆ : ರೂ. 30/-

ಮುದ್ರಣ :

ಪ್ರಶಾಂತ್ ಎಂಟರ್‌ಪ್ರೈಸಸ್

ನಂ. ೨೧೩, ಬಾಲಾಜಿ ರಸ್ತೆ

ತ್ಯಾಗರಾಜನಗರ, ಬೆಂಗಳೂರು - ೫೬೦ ೦೨೮

ದೂರವಾಣಿ : ೬೬೭೭೦೧೬

ಮುನ್ನುಡಿ

ಜ್ಞಾನ ಸಂಪಾದನೆ ಮತ್ತು ಜ್ಞಾನ ಪ್ರಸಾರಗಳ ಅತ್ಯಂತ ಪ್ರಬಲ ಮತ್ತು ಪರಿಣಾಮಕಾರಿ ಮಾಧ್ಯಮ ಅಕ್ಷರ ಮಾಧ್ಯಮ. ಈ ಮಾಧ್ಯಮದಲ್ಲಿ ಆಹ್ಲಾದಕಾರಿಯೂ, ಅತ್ಯಾಕರ್ಷಕವೂ ಆದ ಅಪೂರ್ವ ಮಾಧ್ಯಮವೇ ಸಾಹಿತ್ಯ. ನಿತ್ಯ ಪರಿವರ್ತನ ಶೀಲವಾದ ಜಗತ್ತಿನ ಜ್ಞಾನ, ವಿಜ್ಞಾನ ಸಂಸ್ಕೃತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಪ್ರವಹಣ ಮಾಡುತ್ತ ಮನುಷ್ಯನ ಜೀವನವನ್ನು ಪುಷ್ಟಿಗೊಳಿಸುತ್ತ, ತುಷ್ಟಿಗೊಳಿಸುತ್ತ, ವಿಕಾಸಗೊಳಿಸುತ್ತ, ಪೂರ್ಣತೆಯ ಕಡೆಗೆ ಅವನನ್ನು ಕರೆದೊಯ್ಯುವುದೇ ಇದರ ಪರಮ ಗುರಿ. ಇಂಥ ಜೀವನೋತ್ಥಾನಕಾರಿಯಾದ ಉತ್ತಮ ಜ್ಞಾನ ಸಂಪತ್ತನ್ನು ವಿಶಿಷ್ಟ ಹಾಗೂ ಅರ್ಥಪೂರ್ಣ ಗ್ರಂಥಗಳ ಮೂಲಕ ಕನ್ನಡ ಓದುಗರಿಗೆ ಒದಗಿಸುವ ಗುರುತರ ಜವಾಬ್ದಾರಿಯನ್ನು ಕನ್ನಡ ಪುಸ್ತಕ ಪ್ರಾಧಿಕಾರ ಹೊತ್ತುಕೊಂಡು ನಿರ್ವಹಿಸುತ್ತಿದೆ.

ಜ್ಞಾನ, ಸಂಸ್ಕೃತಿ ಮತ್ತು ಸಾಹಿತ್ಯ ಪ್ರಸಾರ ಕಾರ್ಯಕ್ಕೆ ಕರ್ನಾಟಕ ಸರ್ಕಾರ ಬಹು ಹಿಂದಿನಿಂದ ಒತ್ತಾಸೆ ನೀಡುತ್ತ ಬಂದಿದೆ. ಈ ಪರಂಪರೆಯನ್ನು ಮುಂದುವರಿಸುತ್ತ ಅದರ ಬಹುಮುಖ ಸಾಧನೆಗಳ ಪರಿಚಯವನ್ನು ವೈವಿಧ್ಯಮಯ ಕೃತಿಗಳ ಪ್ರಕಟಣೆ ಮೂಲಕ ಅರ್ಥಪೂರ್ಣವಾಗಿ ವಿಸ್ತರಿಸಲಾಗುತ್ತಿದೆ. ವಿಶಾಲಾರ್ಥದಲ್ಲಿ ಸಾಹಿತ್ಯವನ್ನು ಮುಖ್ಯವಾಗಿ ಮೂರು ಕವಲುಗಳಲ್ಲಿ ವಿಭಾಗಿಸಬಹುದು. ಒಂದು, ಮನಸ್ಸನ್ನು ಮುದಗೊಳಿಸುವ, ಹೃದಯವನ್ನು ಸಂಸ್ಕರಿಸುವ ಸೃಜನ ಪ್ರಧಾನವಾದ ಸಾಹಿತ್ಯ ; ಎರಡು, ಜೀವನ ದೃಷ್ಟಿಯನ್ನು ವಿಸ್ತರಿಸುವ ಪುಷ್ಟಿಗೊಳಿಸುವ, ಮೊನಚುಗೊಳಿಸುವ ಚಿಂತನ ಪ್ರಧಾನವಾದ ವೈಚಾರಿಕ ಸಾಹಿತ್ಯ ಮತ್ತು ಮೂರು, ಮನುಷ್ಯನ ಸಮಗ್ರ ಬದುಕಿಗೆ ಪೂರ್ಣತೆಯನ್ನು ತಂದುಕೊಡುವ ಅವನ ಅನಂತ ಬೌದ್ಧಿಕ ಮತ್ತು ಸಂಶೋಧನಾ ಸಾಹಸದ ಚಟುವಟಿಕೆಗಳನ್ನು ಪರಿಚಯಿಸುವ ಮೂಲಕ ಜ್ಞಾನದ ಉನ್ನತಸ್ತರಗಳನ್ನು ಸ್ಪರ್ಶಿಸುವಂತೆ ಪ್ರೇರೇಪಿಸುವ ಜ್ಞಾನ ಸಾಹಿತ್ಯ. ಈ ಮೂರು ನೆಲೆಗಳಲ್ಲಿ ಕನ್ನಡ ಪುಸ್ತಕ ಪ್ರಾಧಿಕಾರ ಕಾರ್ಯಪ್ರವೃತ್ತವಾಗಿದೆ. ಕನ್ನಡದ ಮಕ್ಕಳು ಜಗತ್ತಿನ ಎಲ್ಲ ಶಾಖೆಗಳ ಜ್ಞಾನವನ್ನು ಕನ್ನಡದ ಮೂಲಕವಾಗಿಯೇ ಅಭ್ಯಾಸಮಾಡಿ ಬೌದ್ಧಿಕ ಅರಿವನ್ನು ತಂದುಕೊಳ್ಳಲು ಪೂರಕವಾಗುವ ಕೃತಿಗಳನ್ನು ''ಮೂಲಭೂತ ಶೈಕ್ಷಣಿಕ ಪುಸ್ತಕ ಮಾಲೆ''ಯ ಮೂಲಕ ಪ್ರಾಧಿಕಾರ ಪ್ರಕಟಿಸುತ್ತಿದೆ. ಎಂಥದೇ ಗಹನ ವಿಷಯವನ್ನು ಅಭಿವ್ಯಕ್ತಿಸಲು ಕನ್ನಡ ಸರ್ವಸಮರ್ಥವಾಗಿದೆ ಎಂಬುದನ್ನು ಪರಿಣಾಮಕಾರಿಯಾಗಿ ಬಿಂಬಿಸಲು ಹಾಗೂ

ವಿದ್ಯಾರ್ಥಿಗಳ ಮತ್ತು ಶಿಕ್ಷಣಾರ್ಥಿಗಳ ಜ್ಞಾನ ವಿಕಾಸಕ್ಕೆ ಇಂಬು ಕೊಡಲು ಆಯಾ ವಿಷಯಗಳಲ್ಲಿ ಪರಿಣತರಾದವರಿಂದ ಪುಸ್ತಕಗಳನ್ನು ಬರೆಸಿ ಈ ಮೂಲಕ ಪ್ರಕಟಿಸಲಾಗುತ್ತಿದೆ. ಶಾಲಾ-ಕಾಲೇಜುಗಳಲ್ಲಿ ಓದಿಸಲಾಗುವ ಪಠ್ಯ ವಿಷಯಗಳಿಗೆ ಪೂರಕವಾಗಿ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಹೆಚ್ಚಿನ ಅಧ್ಯಯನ ಸಾಮಗ್ರಿಯನ್ನು ಒದಗಿಸಲು ಸಹ ಈ ಮಾಲೆಯ ಪುಸ್ತಕಗಳು ನೆರವಾಗುತ್ತವೆ. ಕನ್ನಡದಲ್ಲಿ ಇಂಥ ವಿಷಯಗಳ ಬಗ್ಗೆ ಇರುವ ಆಕರ ಗ್ರಂಥಗಳ ಕೊರತೆಯನ್ನು ತುಂಬಿಕೊಟ್ಟು ಜ್ಞಾನ ಪಿಪಾಸುಗಳ ಗಂಭೀರ ಉದ್ದೇಶವನ್ನು ಪೂರೈಸುವುದು ಕೂಡಾ ಈ ಮಾಲೆಯ ಉದ್ದೇಶವಾಗಿದೆ.

ಈ ಮಾಲೆಯಲ್ಲಿ ಈಗಾಗಲೇ ಹಲವು ಕೃತಿಗಳು ಪ್ರಕಟವಾಗಿದ್ದು ಇವು ವಿದ್ಯಾರ್ಥಿಗಳ ಮತ್ತು ಶಿಕ್ಷಣ ಪ್ರೇಮಿಗಳ ಮನ್ನಣೆಗೆ ಪಾತ್ರವಾಗಿದೆ. ಈ ನಿಟ್ಟಿನಲ್ಲಿ ಪ್ರೊ. ವಿ.ಎ. ಕುಲಕರ್ಣಿ ಅವರ ಪ್ರಾಣಿ - ಪ್ರಾಣಿ ಪರಿಸರ ಕೃತಿಯನ್ನು ಈ ಮಾಲೆಯಲ್ಲಿ ಪ್ರಕಟಿಸಲಾಗುತ್ತಿದೆ. ಈ ಕೃತಿ ಎಂದಿನಂತೆ ಶಿಕ್ಷಣ ಕ್ಷೇತ್ರದ ಪ್ರೀತಿಗೆ ಪಾತ್ರವಾಗುತ್ತದೆ ಎಂಬ ಭರವಸೆ ನಮಗಿದೆ. ಈ ಕೃತಿಯನ್ನು ಈ ಮಾಲೆಯಲ್ಲಿ ಪ್ರಕಟಿಸಲು ಒಪ್ಪಿರುವ ಮಿತ್ರರಾದ ಪ್ರೊ. ವಿ.ಎ. ಕುಲಕರ್ಣಿ ಅವರಿಗೆ ಮತ್ತು ಅದನ್ನು ಸುಂದರವಾಗಿ ಮತ್ತು ಸಕಾಲದಲ್ಲಿ ಮುದ್ರಿಸಿಕೊಟ್ಟ ಪ್ರಶಾಂತ್ ಎಂಟರ್‌ಪ್ರೈಸಸ್ ಮುದ್ರಣಾಲಯದವರಿಗೆ ಪ್ರಾಧಿಕಾರದ ಪರವಾಗಿ ಧನ್ಯವಾದಗಳು.

ಈ ಮಾಲೆಯ ಕೃತಿಗಳ ಪ್ರಕಟಣೆಯ ಕಾರ್ಯದಲ್ಲಿ ತುಂಬು ಮನಸ್ಸಿನಿಂದ ಸಹಕಾರ ನೀಡುತ್ತಿರುವ ಪ್ರಾಧಿಕಾರದ ಮಾನ್ಯ ಸದಸ್ಯರಿಗೆ ಕೃತಜ್ಞತೆಗಳು. ಈ ಮಾಲೆಯ ಪುಸ್ತಕಗಳ ಗುಣಮಟ್ಟವನ್ನು ಎತ್ತರಿಸಲು ಸಹೃದಯದಿಂದ ಬರಬಹುದಾದ ಸಲಹೆ ಸೂಚನೆಗಳಿಗೆ ಸದಾ ಸುಸ್ವಾಗತ.

23-6-1999
ಬೆಂಗಳೂರು


ಡಾ|| ಎಚ್. ಜಿ. ಲಕ್ಕಪ್ಪಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ಪರಿವಿಡಿ

ಪ್ರಾಣಿಗಳಿಂದ ಕಲಿಯಬಹುದೆ ?


ಸಿಂಹಾದೇಕಂ ಬಕಾದೇಕಂ ಶಿಕ್ಷೇಚ್ಚತ್ವಾರಿ ಕುಕ್ಕುಟಾತ್ ।
ವಾಯುಸಾತ್ಪಂಚ ಶಿಕ್ಷೇಚ್ಚ ಷಟ್ ಶುನಸ್ತ್ರೀಣಿ ಗಾರ್ದಭಾತ್ ॥೧॥

ಸಿಂಹ, ಬಕಪಕ್ಷಿಗಳಿಗಿಂತ ಒಂದೊಂದು ಗುಣವನ್ನೂ, ಕೋಳಿಯಿಂದ ನಾಲ್ಕುಗುಣಗಳನ್ನೂ, ಕಾಗೆಯಿಂದ ಐದು ಗುಣಗಳನ್ನೂ, ನಾಯಿಯಿಂದ ಆರು ಗುಣಗಳನ್ನೂ ಕತ್ತೆಯಿಂದ ಮೂರು ಗುಣಗಳನ್ನೂ ಕಲಿತುಕೊಳ್ಳಬೇಕು.




ಪ್ರಭೂತಂ ಕಾರ್ಯಮಲ್ಪಂ ವಾ ಯೋ ನರಃ ಕರ್ತು ಮಿಚ್ಛತಿ ।
ಸರ್ವಾರಂಭೇಣ ತತ್ಕಾರ್ಯಮ್ ಸಿಂಹಾದೇಕಂ ಪ್ರಚಕ್ಷತೇ ॥೨॥

ಕಾರ್ಯವು ಚಿಕ್ಕದಿರಲಿ, ದೊಡ್ಡದಿರಲಿ ಆದನ್ನು ಮಾಡಬೇಕೆಂದು ಇಚ್ಛಿಸುವ ಮನುಷ್ಯ ಪ್ರಯತ್ನ ಪೂರ್ವಕ ಮಾಡುವ ಗುಣ ಒಂದನ್ನು ಸಿಂಹದಿಂದ ಕಲಿತುಕೊಳ್ಳಬೇಕು.




ಇಂದ್ರಿಯಾಣಿ ಚ ಸಂಯಮ್ಯ ಬಕವತ್ಪಂಡಿತೋ ನರಃ।
ದೇಶಕಾಲ ಬಲಂ ಜ್ಞಾತ್ವಾ ಸರ್ವಕಾರ್ಯಾಣಿ ಸಾಧಯೇತ್ ॥೩॥

ಜ್ಞಾಣನಾದ ಮಾನವನು ಬಕಪಕ್ಷಿಯಂತೆ ಇಂದ್ರಿಯನಿಗ್ರಹ ಮಾಡಿಕೊಂಡು ದೇಶ ಕಾಲ ಬಲಾಬಲಗಳನ್ನು ತಿಳಿದುಕೊಂಡು ಎಲ್ಲ ಕಾರ್ಯಗಳನ್ನು ಸಾಧಿಸಿಕೊಳ್ಳತಕ್ಕದ್ದು.




ಗೂಢಮೈಥುನಕಾರಿತ್ವಂ ಕಾಲೇ ಕಾಲೇ ಚ ಸಂಗ್ರಹಮ್ ।
ಅವಿಶ್ವಾಸೋಽಪ್ರಮತ್ತತ್ವಂ ಪಂಚ ಶಿಕ್ಷೇಚ್ಚ ವಾಯಸಾತ್ ॥೫॥

ಗುಪ್ತ ಮೈಥುನ, ಧೈರ್ಯ, ಸಮಯಾನುಸಾರ ಸಂಗ್ರಹ ಮಾಡಿಕೊಳ್ಳುವ ಬುದ್ಧಿ, ಎಚ್ಚರದಿಂದಿರುವುದು, ಯಾವುದರಲ್ಲಿಯೂ ವಿಶ್ವಾಸವಿಡದಿರುವುದು- ಈ ಐದು ಗುಣಗಳನ್ನು ಕಾಗೆಯಿಂದ ಕಲಿತುಕೊಳ್ಳಬೇಕು.




ಪ್ರತ್ಯುತ್ಥಾನಂ ಚ ಯುದ್ಧಂ ಚ ಸಂ ವಿಭಾಗಂ ಚ ಬಂಧುಷು ।
ಸ್ವಯಂ ಸಂಕ್ರಮ್ಯ ಭುಂಜೀತ ಶಿಕ್ಷೇಚ್ಚತ್ವಾರಿ ಕುಕ್ಕುಟಾತ್ ॥೪॥

ಯೋಗ್ಯ ಕಾಲದಲ್ಲಿ ಏಳುವುದು, ಯುದ್ಧ ಮಾಡುವುದು, ತಾನು ಸಂಪಾದಿಸಿದುದರಲ್ಲಿ ಬಂಧುಗಳಿಗೆ ಕೊಡುವುದು, ತರುವಾಯ ತಾನು ಊಟ ಮಾಡುವುದು - ಈ ನಾಲ್ಕು ಗುಣಗಳನ್ನು ಕೋಳಿಯಿಂದ ಕಲಿತುಕೊಳ್ಳಬೇಕು.



ಬಹ್ವಾಶೀಃ ಸ್ವಲ್ಪ ಸಂತುಷ್ಟಃ ಸುನಿದ್ರೋ ಲಘುಚೇತನಃ ।
ಸ್ವಾಮಿಭಕ್ತಶ್ಚ ಶೂರಶ್ಚ ಷಡೇತೇ ಶ್ವಾನತೋ ಗುಣಾಃ ॥ ೬ ॥

ಪ್ರಸಂಗ ನೋಡಿ ಬಹಳ ಊಟ ಮಾಡುವುದು, ಅಲ್ಪತೃಪ್ತಿ, ಗಾಢನಿದ್ರೆ, ಆದಾಗ್ಯೂ ಬೇಗನೇ ಜಾಗೃತವಾಗುವುದು, ಸ್ವಾಮಿಭಕ್ತಿ ಹಾಗೂ ಶೂರತನ - ಈ ಆರು ಗುಣಗಳನ್ನು ನಾಯಿಯಿಂದ ಕಲಿಯಬೇಕು.



ಸುಶ್ರಾಂತೋಽಪಿ ವಹೇದ್ ಭಾರಂ ಶೀತೋಷ್ಣಂ ನ ಚ ಪಶ್ಯತಿ ।
ಸಂತುಷ್ಟಶ್ಚರತೇ ನಿತ್ಯಂ ತ್ರೀಣಿ ಶಿಕ್ಷೇಚ್ಚ ಗಾರ್ದಭಾತ್ ॥ ೭ ॥

ಅತ್ಯಂತ ಶ್ರಮವಾದರೂ ಭಾರ ಹೊರುವುದು, ಶೀತೋಷ್ಣತೆಗಳ ಪರಿವೇ ಇಲ್ಲದಿರುವುದು, ನಿರಂತರವೂ ಸಂತುಷ್ಟವಾಗಿಯೇ ನಡೆಯುವುದು - ಈ ಮೂರು ಗುಣಗಳನ್ನು ಕತ್ತೆಯಿಂದ ಕಲಿಯತಕ್ಕದ್ದು.

ಯ ಏತಾನ್ ವಿಂಶ್ಯತಿ ಗುಣಾನಾಚರಿಷ್ಯತಿ ಮಾನವಃ ।
ಕಾರ್ಯಾವಸ್ಥಾಸು ಸರ್ವಾಸು ಹ್ಯಜೇಯಃ ಸಂಭವಿಷ್ಯತಿ ॥ ೮ ॥

ಈ ಎಲ್ಲ ಇಪ್ಪತ್ತು ಗುಣಗಳನ್ನು ಯಾವ ಮನುಷ್ಯನು ಆಚರಿಸುತ್ತಾನೋ ಅವನು ಸರ್ವ ಕಾರ್ಯಗಳಲ್ಲಿಯೂ ಅಂಜಿಕ್ಯನಾಗುತ್ತಾನೆ.

-ವೃದ್ಧ ಚಾಣಕ್ಯ

***

೨. ನಿಸರ್ಗದ ಚೋದ್ಯ : ತೊಗಲು ಬಾವಲಿ

ಅದರ ರಹಸ್ಯವರಿತರೆ ಅನೇಕ ಸಮಸ್ಯೆಗಳು ಪರಿಹಾರವಾಗಬಲ್ಲವು



ಪ್ರಪಂಚದಲ್ಲೆಲ್ಲ ವಿಜ್ಞಾನಿಗಳು ತೊಗಲು ಬಾವಲಿಯ (ಗಬ್ಬಿಲ, ಕಣ್ಣು ಕಪ್ಪಡಿ) ಜೀವನವನ್ನು ಅಭ್ಯಸಿಸುತ್ತಿದ್ದಾರೆ. ತಲೆ ಕೆಳಗಾಗಿ ಜೋತಾಡುತ್ತ ಜೀವನ ಮಾಡುವ ಈ ಪ್ರಾಣಿ ಅವರಿಗೊಂದು ಸಮಸ್ಯೆಯಾಗಿದೆ. ಅದರ ಜೀವನ ವೈಚಿತ್ರ್ಯಗಳ ರಹಸ್ಯವನ್ನು ಬಿಡಿಸಿದರೆ ವೈದ್ಯಶಾಸ್ತ್ರ, ಸಮರಶಾಸ್ತ್ರ, ಪ್ರಾಣಿಶಾಸ್ತ್ರ, ವಾಯುಯಾನಶಾಸ್ತ್ರ ಮೊದಲಾದವುಗಳಲ್ಲಿ ಎಣಿಕೆ ಮೀರಿದ ಪ್ರಗತಿಯಾಗಬಲ್ಲದೆಂದು ಅವರಿಗೆ ಆಶೆಯಿದೆ.

ಧ್ರುವ ಪ್ರದೇಶಗಳನ್ನು ಹೊರತಾಗಿ ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಈ ಪ್ರಾಣಿಗಳು ವಿಪುಲವಾಗಿ ಕಾಣಸಿಗುತ್ತವೆ. ಈವರೆಗೆ ಒಟ್ಟು ೧೩೦೦ ಜಾತಿಗಳ ತೊಗಲುಬಾವಲಿಗಳನ್ನು ಗುರುತಿಸಲಾಗಿದೆ. ಅವು ಸಂಘಜೀವಿಗಳು. ಇವುಗಳಲ್ಲಿ ಎರಡು ಗುಂಪುಗಳು : ಹಣ್ಣು ಕಾಯಿಗಳನ್ನು ಆಹಾರವಾಗಿ ಸೇವಿಸುವ ಬಾವಲಿಗಳು ಗಾತ್ರದಲ್ಲಿ ದೊಡ್ಡವು. ಇವು ಆಸ್ಟ್ರೇಲಿಯ, ಸಿಲೋನ್/ಶ್ರೀಲಂಕಾ, ಆಫ್ರಿಕ ಹಾಗೂ ನಮ್ಮ ದೇಶಗಳಲ್ಲಿಯೂ ಕಾಣಸಿಗುತ್ತವೆ. ಬಿಚ್ಚಿದ ಒಂದು ರೆಕ್ಕೆಯ ಅಗಲಳತೆ ಕೆಲವೊಮ್ಮೆ ಎರಡು ಅಡಿಗಳಿಗೂ ಮಿಕ್ಕುತ್ತವೆ. ಇವುಗಳ ಮುಖವು ನರಿಯ ಮುಖವನ್ನು ಹೋಲುವುದರಿಂದ ಇವುಗಳಿಗೆ 'ಹಾರುವ ನರಿಗಳು' ಎಂದೂ ಅನ್ವರ್ಥಕ ಹೆಸರು. ಇನ್ನೊಂದು ಗುಂಪಿಗೆ ಸೇರಿದ ತೊಗಲುಬಾವಲಿಗಳು ಸಾಮಾನ್ಯವಾಗಿ ಗಾತ್ರದಲ್ಲಿ ಚಿಕ್ಕವು. ಇವು ಕೀಟಾಹಾರಿ ಸಸ್ತನಿಗಳು. ಚೆನ್ನಾಗಿ ಹಾರಬಲ್ಲವು. ಒಂದು ಚಿಕ್ಕ ಗವಿಯಲ್ಲಿ ಸಾವಿರಾರು ಬಾವಲಿಗಳು ವಾಸಿಸಬಹುದು. ದಕ್ಷಿಣ

ಆಫ್ರಿಕೆಯಲ್ಲಿ ಕಾಣ ಸಿಗುವ 'ವ್ಹೆಂಪಾಯರ' ಎಂಬ ತೊಗಲುಬಾವಲಿ 'ರಕ್ತ - ಪಿಪಾಸಿ' ಎಂದು ಕುಪ್ರಸಿದ್ಧವಾಗಿದೆ. ಇದು ಕುದುರೆ, ದನ ಕರುಗಳ ರಕ್ತವನ್ನಲ್ಲದೆ ಆಗಾಗ ಮನುಷ್ಯನ ರಕ್ತವನ್ನೂ ಹೀರುತ್ತದೆ. ತನ್ನ ಮೊನಚಾದ ಹಲ್ಲುಗಳಿಂದ ಪ್ರಾಣಿಗಳ ಕುತ್ತಿಗೆಯನ್ನೇ ಬಲವಾಗಿ ಅದುಮಿ ಹಿಡಿದು, ರಕ್ತನಾಳ ಹಿಡಿದು ಕಂಠಪೂರ್ತಿ ರಕ್ತ ಕುಡಿಯುತ್ತದೆ!

ಹಗಲೆಲ್ಲ ಹಾಳು ಗುಡಿಗಳಲ್ಲೋ, ಗವಿಗಳಲ್ಲೋ ವಾಸಿಸಿ ರಾತ್ರಿಯಲ್ಲಿ ಆಹಾರಾನ್ವೇಷಣೆಗೆ ಹೊರಡುವ ಈ ಜೀವಿಯು ಸಸ್ತನಿ (ಮರಿಗಳಿಗೆ ಮೊಲೆಯೂಡುವ) ಪ್ರಾಣಿಯಾಗಿದ್ದರೂ ಹಾರುತ್ತದೆ. ಇದರಷ್ಟು ಅಂದಗೇಡಿ ಪ್ರಾಣಿ ಅಪರೂಪ. ನರಿಯ ಮುಖವನ್ನು ಹೋಲುವ ಬಲು ಚಿಕ್ಕ ಮುಖ, ಅದರ ಪಕ್ಕದಲ್ಲಿ ಸೆಟೆದು ನಿಂತ ಎರಡು ಮೊರಗಿವಿಗಳು, ಶರೀರದ ಎರಡು ಮೂರು ಪಟ್ಟು ಉದ್ದವಾಗಿ ಬೆಳೆದ ದೈತ್ಯ ಬೆರಳುಗಳು, ಅವುಗಳಲ್ಲಿ ನಾಲ್ಕನ್ನು ಜೋಡಿಸಿದ ತೊಗಲಿನ ದೆಸೆಯಿಂದ ಉಂಟಾಗಿ ಎರಡಾಗಿ ಕತ್ತರಿಸಿದ ಕೊಡೆಯಂತೆ ಕಾಣುವ ವಿಲಕ್ಷಣ ರೆಕ್ಕೆಗಳು, ಸಾಲದ್ದಕ್ಕೆ ಹಿಂಗಾಲುಗಳ ಹೊರಬದಿಯ ತೊಗಲು ಪಸರಿಸಿ ರೆಕ್ಕೆಗಳ ಕ್ಷೇತ್ರವನ್ನು ಹೆಚ್ಚಿಸಿದ ಬಗೆ, ತುಪ್ಪಳದಿಂದ ಆಚ್ಛಾದಿತವಾದ ಮೆತ್ತನೆ ಮೈ - ಇವುಗಳಿಂದ ಇದು ಪ್ರಪಂಚದ ಯಾವ ಪ್ರಾಣಿಯನ್ನೂ ಹೋಲದ ತಮಾಷೆ ಸೃಷ್ಟಿಯಂತೆ ಕಾಣುತ್ತದೆ.

ತೊಗಲು ಬಾವಲಿ ಪ್ರಾಣಿಶಾಸ್ತ್ರದ ಯಾವ ನಿಯಮಕ್ಕೂ ಆಧೀನ ವಾಗಿಲ್ಲವೇನೋ ಎನಿಸುತ್ತದೆ. ಅದರಿಂದ ವಿಜ್ಞಾನಿಗಳ ಕುತೂಹಲ ಕೆರಳಿದೆ. ಪ್ರಥಮತಃ ಸಸ್ತನಿಯಾದರೂ ಬಾವಲಿ ಹಾರಲು ಹೇಗೆ ಕಲಿಯಿತು ? ಪ್ರಾಣಿ ವಿಜ್ಞಾನಿ ಡಬ್ಲ್ಯು. ಕೆ. ಗ್ರಿಗರಿಯವರ ಪ್ರಕಾರ ಕೋಟ್ಯಂತರ ವರುಷಗಳ ಹಿಂದೆ ಕೆಲ ಕೀಟಾಹಾರಿ ಸಸ್ತನಿಗಳು ಮರಗಳನ್ನು ಆಶ್ರಯಿಸಿರಬೇಕು. ಅವು ಟೊಂಗೆಯಿಂದ ಟೊಂಗೆಗೆ ಹಾರುವ ಯತ್ನದಲ್ಲಿ ಸಾವಿರಾರು ತಲೆಮಾರುಗಳಲ್ಲಿ ಕೈಗಳನ್ನು ರೆಕ್ಕೆಗಳಾಗಿ ಬೆಳೆಸಿಕೊಂಡು ತೊಗಲುಬಾವಲಿ ಗಳಾಗಿರಬೇಕು. ಇದು ಊಹೆ ಮಾತ್ರ.

ಅನೇಕ ಪ್ರಯೋಗ ಶಾಲೆಗಳಲ್ಲಿ ಶೀತ ಕಪಾಟುಗಳ ಮೇಲೆ "ಬಾವಲಿಗಳು ನಿದ್ರಿಸುತ್ತಿವೆ, ಸದ್ದು ಮಾಡಬೇಡಿ!" ಎಂಬ ಫಲಕಗಳು ತೂಗುತ್ತಿವೆ. ಅಲ್ಲಿ ವಿಜ್ಞಾನಿಗಳು ಬಾವಲಿಗಳ ಶಿಶಿರ ನಿದ್ರೆಯ ನಿಗೂಢವನ್ನು ಶೋಧಿಸುತ್ತಿದ್ದಾರೆ.

! ನಿರ್ನಾಳಗ್ರಂಥಿ ತಜ್ಞರೂ ಸ್ತ್ರೀರೋಗ ವೈದ್ಯರೂ ಹೆಣ್ಣು ಬಾವಲಿಗಳ ವೀರ್ಯಾಣುಸಂಗ್ರಹ ರಹಸ್ಯವನ್ನು ಕುರಿತು ಆಲೋಚಿಸುತ್ತಿದ್ದಾರೆ. ಕೃತಕ ಗರ್ಭಧಾರಣೆ ಮತ್ತು ಸಂತತಿ ನಿಯಂತ್ರಣಕ್ಕೆ ಈ ತಿಳಿವಳಿಕೆ ಸಹಾಯಕವಾದೀತೇ ?

ಬಾವಲಿಗಳ ಹಾರಾಟ ಶಕ್ತಿಯೂ ಅಗಾಧವಾದುದು. ಹಾರುವ ಕೌಶಲ್ಯದಲ್ಲಿ ಚೆನ್ನಾಗಿ ಹಾರಬಲ್ಲ ಪಕ್ಷಿಗಳ ಎತ್ತರಕ್ಕೆ ಹಾರದಿದ್ದರೂ ಸಾಮಾನ್ಯವಾದ ಪಕ್ಷಿಗಳಿಗೇನೂ ಕಡಿಮೆ ಇಲ್ಲ. ಹಾರಾಟದಲ್ಲಿ ತಮ್ಮ ತೂಕದ ಎರಡು ಪಟ್ಟು ಭಾರವನ್ನು ಅನಾಯಾಸವಾಗಿ ಹೊರಬಲ್ಲವು. ಹಾರುತ್ತಿರುವಾಗಲೇ ತನ್ನ ಆಹಾರವಾದ ಕೀಟಗಳನ್ನು ಹಿಡಿದು ನುಂಗುವುದೊಂದು ಇದರ ವಿಚಿತ್ರ ವರ್ತನೆ. ಬಾವಲಿಯು ಬಾಯಿಯಿಂದ ಕೀಟವನ್ನು ಎತ್ತಿಕೊಳ್ಳುವುದೆಂದು ಈ ಮೊದಲು ತಿಳಿಯಲಾಗಿತ್ತು. ಆದರೆ ತನ್ನ ರಿಬ್ಬನಿನಂತಹ ತೆಳ್ಳನ್ನು ಪಕ್ಕಗಳ ಪೊರೆಯಿಂದ ಮುಸುಕು ಹಾಕಿ ಪಕ್ಕಗಳ ಮಡಿಕೆಗಳಲ್ಲಿ ಕೀಟಗಳನ್ನು ಎತ್ತಿಕೊಂಡು ಬಾಯಲ್ಲಿ ಹಾಕಿಕೊಳ್ಳುತ್ತದೆಂದು ಕ್ಷಿಪ್ರ ವೇಗದ ಕ್ಯಾಮರಾಗಳಿಂದ ತೆಗೆದ ಫೋಟೋಗಳಿಂದ ಕಂಡುಹಿಡಿಯಲಾಗಿದೆ.

ಕತ್ತಲುಗವಿಯಲ್ಲಿಯೂ ಸಾವಿರಾರು ಬಾವಲಿಗಳು ಒಂದಕ್ಕೊಂದು ತಾಗದಂತೆ, ಗೋಡೆಗಳಿಗೆ ತಪ್ಪಿಯೂ ಢಿಕ್ಕಿ ಹೊಡೆಯದಂತೆ ಅನಾಯಾಸವಾಗಿ, ಸಲೀಲವಾಗಿ ಅತಿ ವೇಗದಲ್ಲಿ ಹಾರಬಲ್ಲವು. ಈ ಅನುಪಮ ಶಕ್ತಿ ಪ್ರಪಂಚದ ಇನ್ನಾವ ಪ್ರಾಣಿಗೂ ಇಲ್ಲ. ಪ್ರಯೋಗ ಶಾಲೆಯೊಂದರಲ್ಲಿ ಒಂದು ಮಿಲಿ ಮೀಟರ್ ದಪ್ಪವಾದ ನೂರಾರು ತಂತಿಗಳನ್ನು ಎಷ್ಟೇ ಕ್ಲಿಷ್ಟಮಯವಾಗಿ ತೂಗು ಹಾಕಿದರೂ ಅನೇಕ ಬಾವಲಿಗಳು ಯಾವ ತಂತಿಗಳಿಗೂ ತಾಕದೆ, ಜೊತೆ ಬಾವಲಿಗಳಿಗೂ ಸಂಘರ್ಷಿಸದೆ ನಿರಾಯಾಸವಾಗಿ ಹಾರಾಡಿದವು. ಇದು ಹೇಗೆ ಸಾಧ್ಯವಾಗುತ್ತದೆ. ? ೧೯೨೦ರಷ್ಟು ಹಿಂದೆಯೆ ಪ್ರೊಫೆಸರ್ ಹ್ಯಾರಿಜ್ ಅವರು ಬಾವಲಿಗಳು ಶ್ರವಣಾತೀತ ಧ್ವನಿತರಂಗಗಳ ಸಹಾಯದಿಂದ ಹಾರುತ್ತಿರಬೇಕೆಂದು ತರ್ಕಿಸಿದ್ದನ್ನು ಅನಂತರ ಜೀವವಿಜ್ಞಾನಿ ಡೊನಾಲ್ಡ್ ಗ್ರಿಫನ್ನರು ಪ್ರಯೋಗಗಳಿಂದ ಸಿದ್ಧ ಮಾಡಿ ತೋರಿಸಿದರು.

ನಡೆಯುವುದಿಷ್ಟು : ಬಾವಲಿ ಹಾರುವಾಗ ಮಾನವನ ಕಿವಿಗೆ ಕೇಳಿಸದಷ್ಟು ತೀವ್ರವಾದ ಧ್ವನಿಯನ್ನು ಹೊರಡಿಸುತ್ತಲೇ ಇರುತ್ತದೆ. ಆ ಧ್ವನಿ ಎದುರಿಗಿದ್ದ ವಸ್ತುಗಳಿಗೆ ಬಡಿದು ಪ್ರತಿಫಲಿಸಿ ಹಿಂದಿರುಗಿದಾಗ ಬಾವಲಿಯ ಸೂಕ್ಷ್ಮ ಶ್ರವಣೇಂದ್ರಿಯವು ಅದನ್ನು

ಗ್ರಹಿಸಿ ಎದುರಿಗಿನ ಪದಾರ್ಥಗಳ ಅಸ್ತಿತ್ವ ಮತ್ತು ದೂರವನ್ನಷ್ಟೇ ಅಲ್ಲ, ಅದರ ಸ್ವರೂಪವನ್ನೂ ಅರಿತುಕೊಳ್ಳುತ್ತದೆ. ಬಾವಲಿಯನ್ನು ಕಿವುಡು ಮಾಡಿದರೆ ಅದು ಎದುರಿಗಿನ ಪದಾರ್ಥಗಳನ್ನು ಗ್ರಹಿಸಲಾರದೆ ಡಿಕ್ಕಿ ಹೊಡೆಯುವುದೆಂದು ಪ್ರಯೋಗಗಳು ತೋರಿಸಿವೆ.

ಇದೇನೋ ಸರಳವಾಗಿ ಕಾಣುತ್ತದೆ. ಆದರೆ ಬಾವಲಿಯ ಧ್ವನಿಗ್ರಹಣಶಕ್ತಿಯನ್ನು ನೋಡಿ ವಿಜ್ಞಾನಿಗಳು ಬೆರಳು ಕಚ್ಚಿದ್ದಾರೆ.

ಒಂದು ಪ್ರಯೋಗ ಕೇಂದ್ರದ ಪ್ರಯೋಗ ಶಾಲೆಯಲ್ಲಿ ೭೦ ಧ್ವನಿವರ್ಧಕ ಯಂತ್ರಗಳನ್ನು ಒಳಗಿನ ಗೋಡೆಗೆ ಆನಿಸಿ ಇಡಲಾಯಿತು. ಕೂದಲುಗಿಂತಲೂ ತೆಳುವಾದ ೨೮ ತಂತಿಗಳನ್ನು ಮೂಲೆಯಿಂದ ಮೂಲೆಗೆ ಮನಬಂದಂತೆ ಕಟ್ಟಲಾಯಿತು. ಬಾವಲಿಗಳು ಕಳಿಸುವ ಸಂಕೇತ ('ಬೀಪ್ ' ಎಂದು ಹೆಸರು) ದಿಂದ ಉಂಟಾಗುವ ಪ್ರತಿಧ್ವನಿಯ ೨೦೦೦ ಪಟ್ಟು ಅಧಿಕ ಪ್ರಮಾಣದಿಂದ ಧ್ವನಿವರ್ಧಕವನ್ನು ಒದಗಿಸಲಾಯಿತು. ಆದಾಗ್ಯೂ ಬಾವಲಿಗಳು ಕೋಣೆಯಲ್ಲಿ ತಂತಿಗಳೇ ಇಲ್ಲದಂತೆ ಹಾರಿದವು ! ಒಂದು ಗ್ರ್ಯಾಮಿಗಿಂತಲೂ ಎಷ್ಟೋ ಪಾಲು ಕಡಿಮೆ ತೂಕದ ಬಾವಲಿಯ ಅತಿ ಚಿಕ್ಕ ಶ್ರವಣೇಂದ್ರಿಯವು ತಂತಿಗಳಿಂದ ಪರಾವರ್ತಿತವಾದ ನಿಜ ಪ್ರತಿಧ್ವನಿಯನ್ನೂ ಹಿಂಬದಿಯ ಧ್ವನಿವರ್ಧಕಗಳ 'ರಾಕ್ಷಸ' ಧ್ವನಿಯನ್ನೂ ವಿಂಗಡಿಸಿ ಗುರುತಿಸಿ ಕೊಂಡಿತ್ತು!

ಬಾವಲಿಗಳ ಶ್ರವಣಾತೀತ ಪ್ರತಿಧ್ವನಿಯ ಬಲದಿಂದ ಎದುರಿಗಿನ ಪದಾರ್ಥಯಾವುದೆಂದು ಕೂಡ ಗೊತ್ತು ಹಚ್ಚಬಲ್ಲದು. ಅತಿ ವೇಗದಿಂದ ಹಾರುತ್ತ ಗಿಡಗಳ ತೊಗಟೆಯಲ್ಲಿ ಹುದುಗಿದ ಕೀಟವನ್ನಷ್ಟೇ ಎತ್ತಿಕೊಂಡು ತೊಗಟೆಯನ್ನು ಹಾಗೆಯೇ ಬಿಡುತ್ತದೆ. ತಾನು ಕಳಿಸಿದ ಧ್ವನಿ ಸಂಕೇತಗಳಿಗೆ ಉತ್ತರವಾಗಿ ಟೊಂಗೆಯ ತೊಗಟೆಯಿಂದಲೂ ಕೀಟದ ದೇಹದಿಂದಲೂ ಪ್ರತಿ ಸಂಕೇತಗಳು ಮರಳಿ ಬಂದಾಗ ತೊಗಟೆಯಿಂದ ಬಂದ ಸಂಕೇತ ಬಾಧಕ, ಕೀಟದ ಶರೀರದಿಂದ ಬಂದ ಸಂಕೇತ ಹಿತಕಾರಕ ಎಂದು ಅದು ಭಿನ್ನ ಸಂಕೇತ ಗಳನ್ನು ವಿಂಗಡಿಸುತ್ತದೆ. ಇಷ್ಟೇ ಅಲ್ಲ; ವಿಲಕ್ಷಣ ವೇಗದಲ್ಲಿಯೂ ತೊಗಟೆಯನ್ನು ಕೂಡ ಸ್ಪರ್ಶಿಸದೆ ಕೇವಲ ಜಾರುವ ಕೀಟವನ್ನಷ್ಟೇ ನೇರವಾಗಿ ಎತ್ತಿಕೊಳ್ಳುತ್ತದೆ.

ಸಮರತಂತ್ರಜ್ಞರು ಜಗತ್ತಿನಲ್ಲೆಲ್ಲ ಬಾವಲಿಯ ಈ ಅಪ್ರತಿಮ ಸಾಮರ್ಥ್ಯದ ಮೂಲ ಶೋಧಿಸುತ್ತಿದ್ದಾರೆ. ಯುದ್ಧ ಕಾಲದಲ್ಲಿ ಶತ್ರುಗಳಿಂದ ಬರುವ ವಿಮಾನ, ಅಸ್ತ್ರಗಳನ್ನು ದೂರದಿಂದಲೇ ಗೊತ್ತು ಹಚ್ಚಲು 'ರೇಡಾರ್' ಎಂಬ ಸಾಧನವನ್ನು ಬಳಸಲಾಗುತ್ತಿದೆ. ರೇಡಾರ್‌ಗೂ ಬಾವಲಿಯ 'ಸೋನಾರ್'ಗೂ ಬಹಳ ಸಾಮ್ಯವಿದೆ. ಸೋನಾರ್‌ನಲ್ಲಿ ಎದುರಿಗಿರುವ ಪದಾರ್ಥವನ್ನು ಗೊತ್ತು ಹಚ್ಚಲು ಧ್ವನಿತರಂಗಗಳನ್ನು ಉಪಯೋಗಿಸಲಾಗುತ್ತದೆ. ಆದರೆ ಯುದ್ಧ ವಿಜ್ಞಾನಿಗಳ ರೇಡಾರ್ ಗಬ್ಬಿಲದ ಸೋನಾರ್‌ನ ಪರಿಪೂರ್ಣತೆಗೆ ಇನ್ನೂ ಹತ್ತಿರ ಕೂಡ ಬಂದಿಲ್ಲ. ಅವರು ಗಬ್ಬಿಲದಿಂದ ಕಲಿಯಬಯಸುತ್ತಾರೆ. ಅದರ ಸಂಕೇತ ಶಕ್ತಿಯು ಮಾನವ ನಿರ್ಮಿತ ಅತಿ ಶ್ರೇಷ್ಠ ರೇಡಾರ್ ಶಕ್ತಿಗಿಂತ ಒಂದು ನೂರು ಕೋಟಿ ಪಟ್ಟು ಸೂಕ್ಷ್ಮವೂ, ಕಾರ್ಯಕ್ಷಮವೂ ಆಗಿದೆ.

ಬಾವಲಿಗಳು ಕುರುಡಾಗಿರುತ್ತವೆಂಬ ತಪ್ಪು ಕಲ್ಪನೆ ಹಲವರಲ್ಲಿದೆ. 'ಕಣ್ಣು ಕಪ್ಪಡಿಯಂತೆ ಕುರುಡು' ಎಂಬ ನಾಣ್ನುಡಿ ಕೂಡ ತಪ್ಪಾಗಿ ರೂಢಿಯಲ್ಲಿ ಬಂದಿದೆ. ಸತ್ಯವಿಷ್ಟೇ: ಹಗಲಿನ ಪ್ರಖರವಾದ ಸೂರ್ಯ ಕಿರಣಗಳನ್ನು ತಡೆದುಕೊಳ್ಳುವ ಶಕ್ತಿ ಹಾಗೂ ರಚನೆ ಅವುಗಳ ಕಣ್ಣಿಗೆ ಇರುವುದಿಲ್ಲ. ಬೆಳಕಿಗೆ ತರುತ್ತಲೆ ಕಣ್ಣು ಮುಚ್ಚಿಕೊಳ್ಳುವುದರಿಂದ ಕುರುಡುಗಣ್ಣು ಎಂಬ ತಪ್ಪು ಗ್ರಹಿಕೆ ಉಂಟಾಗಿದೆ ಅಷ್ಟೇ.

ಈ ಅಂದಗೇಡಿ ಪ್ರಾಣಿಯನ್ನು ಕಂಡು, ಅಸಹ್ಯಪಡುವವರೇ ಬಹಳ. ಇದು ಹೊಲಸು ಪ್ರಾಣಿ ಎಂಬ ದೋಷಾರೋಪ. ವಾಶಿಂಗ್‌ಟನ್ನಿನ ರಾಷ್ಟ್ರೀಯ ಪ್ರಾಣಿ ಸಂಗ್ರಹಾಲಯದ ನಿವೃತ್ತ ಉಪ ನಿರ್ದೇಶಕರಾದ ಅರ್ನೆಸ್ಟ್ ವಾಕರ್ ಹೇಳುತ್ತಾರೆ, 'ಬಾವಲಿಗಳು ಎಂದಿಗೂ ಹೊಲಸಾದ ಪ್ರಾಣಿಗಳಲ್ಲ. ಬೆಕ್ಕುಗಳಷ್ಟೇ ಸ್ವಚ್ಛವಾದ ಪ್ರಾಣಿಗಳು. ಪ್ರತಿ ಬೆಳಗಿನಲ್ಲೂ ಆಹಾರ ಸೇವನೆಯ ನಂತರ ತಪ್ಪದೆ ಬೆಕ್ಕಿನಂತೆ 'ಬಾಯಿ ತೊಳೆದುಕೊಳ್ಳುತ್ತವೆ' . ಅವು ನಿಜವಾಗಿಯೂ ಅಪೂರ್ವ ಪ್ರಾಣಿಗಳು. '' ಮೊದ ಮೊದಲು ಅವುಗಳ ಸ್ಪರ್ಶ ಅಸಹ್ಯವೆನಿಸಬಹುದು. ಆದರೆ ಕೊಸರಿಕೊಳ್ಳಲು ಯತ್ನಿಸುವ ಚಿಕ್ಕ ಪ್ರಾಣಿಯನ್ನು ತುಸು ಹೊತ್ತಾದರೂ ಕೈಯಲ್ಲಿ ಹಿಡಿದು ನಿಮ್ಮ ಕೈಯ ಶಾಖವನ್ನು ಅದಕ್ಕೆ ತಟ್ಟಿಸಿರಿ; ಕೂಡಲೇ ಅದು ಕೊಸರಿಕೊಳ್ಳುವುದನ್ನು ನಿಲ್ಲಿಸುತ್ತದೆ ಹಾಗೂ ಚೆನ್ನಾಗಿ ಆಕಳಿಸಿ, ಮೈ ಮುರಿದು ನಿಮ್ಮ ಕೈಯಲ್ಲಿಯೇ ಹಾಯಾಗಿ ಒರಗಬೇಕೆನ್ನುತ್ತದೆ.

❋❋❋

೩. ಬಕಾಸುರ ಹೆಬ್ಬಾವು



ಮಿರಿ ಮಿರಿ ಮಿಂಚುವ ಮೈ, ಬಣ್ಣ ಬಣ್ಣದ ನಕ್ಷೆಗಳಂಥ ಹುರುಪೆಗಳು, ನಯವಾದ ಸ್ನಾಯುಗಳು, ಮೊಂಡ ಮೂಗಿನ ತಲೆ, ಅಜಾನುಬಾಹು ದೇಹದಿಂದೊಡಗೂಡಿ ಮೆಲ್ಲನೆ, ಮೆತ್ತಗೆ, ಮನೋಹರವಾಗಿ, ನಿರಾಯಾಸವಾಗಿ ನಾಗ ಮುರಿಗೆಯಾಕಾರದಲ್ಲಿ ಹರಿಯುತ್ತ ಸಾಗುವ ಹೆಬ್ಬಾವು ಕಣ್ಣಿಗೊಂದು ಹಬ್ಬ.

ಹೆಬ್ಬಾವು ನಿರುಪದ್ರವಿ, ನಿರ್ವಿಷಕಾರಿ. ಮಾನವನನ್ನು ಕಂಡರೆ ಅಂಜುವ ಮುಗ್ಧ ಪ್ರಾಣಿ. ಕೆಣಕದಿದ್ದರೆ ಮನುಷ್ಯನ ಸನಿಹಕ್ಕೂ ಬಾರದ 'ಧರ್ಮರಾಜ'! ಅದರಿಂದ ದೂರವಿರಲು ಮಾನವ ಬಯಸಿದರೆ, ಮಾನವನಿಂದ ದೂರವಿರಲು ಸರ್ಪ ಜಗತ್ತಿನ ಈ ದೈತ್ಯ ಹಾವಿಗೆ ಇನ್ನಷ್ಟು ಸಂತೋಷ. 'ಪಾಪಿಗಳಿದ್ದಲ್ಲಿ ರೂಪುಳ್ಳ ವಸ್ತುವ ತೋರಬಾರದು' ಎಂದೇನೋ ಅದು ಬಯಲಿಗಿಳಿಯದೆ ದೂರ ದಟ್ಟಡವಿಯಲ್ಲಿ ಕಲ್ಲುಬಂಡೆಗಳ ಅರ್ಧ ಬಿರುಕುಗಳಲ್ಲಿ ಮನೆ ಮಾಡಿಕೊಂಡಿರುತ್ತದೆ.

ಆದರೆ ಮಾನವನ ಅತೃಪ್ತಿ, ಆಶೆ, ಎಂದಿಗೂ ಬರಿದಾಗಿರುವ ಅವನ ಹೊಟ್ಟೆ ಯಾವ ಪ್ರಾಣಿಯನ್ನಾದರೂ ಸ್ವತಂತ್ರವಾಗಿರಲು ಕೊಟ್ಟಿವೆಯೇ ? ಅವನಿಗೆ ಹೆಬ್ಬಾವಿನ ಚರ್ಮದ ಮೇಲೆ ಕಣ್ಣು ; ಅದರ ಮಾಂಸದ ಮೇಲೆ ಆಶೆ. ಮಾಂಸದ ಸಾರನ್ನು

ನೆನೆದಾಗಲಂತೂ ಅವನ ಬಾಯಲ್ಲಿ ನೀರು. ಇದಕ್ಕೆ ಪ್ರತಿ ವರ್ಷವೂ ಸಾವಿರಾರು ಹೆಬ್ಬಾವುಗಳು ಬಲಿಯಾಗುತ್ತಿವೆ. ಕೆಲವೇ ವರುಷಗಳ ಹಿಂದೆ ಇನ್ನೂ ಕಾಣಸುತ್ತಿದ್ದ ಅನಾಕೊಂಡಾ ಎಂಬ ಸಿಂಹಳದ ಹೆಬ್ಬಾವು ಈಗ ನಿರ್ವಂಶವಾಗಿದೆ. ಆ ಜಾತಿ ಭಾರತದ ಹೆಬ್ಬಾವಿಗಿಂತಲೂ ದೊಡ್ಡದಿತ್ತು. ಸದ್ಯ ಅದನ್ನು ಕಾಣುವುದು ಚಿತ್ರಗಳಲ್ಲಿ , ಚಕ್ರಬಂಧ ಸ್ಪರ್ಧೆಗಳಲ್ಲಿ ಮಾತ್ರ.

ಭಾರತದ ಬೇಟೆಗಳ್ಳರೇ ವಾಸಿ. ಯಾಕೆಂದರೆ ನಮ್ಮ ದೇಶದ ಹೆಬ್ಬಾವು ಇನ್ನೂ ನಿರ್ವಂಶವಾಗದೆ ಉಳಿದಿದೆ. ಅಸ್ಸಾಂ, ರಾಜಸ್ಥಾನ ಮಧ್ಯಪ್ರದೇಶಗಳ ಗುಡ್ಡಗಾಡು ಜನರನ್ನು ಹೊರತಾಗಿ ಇನ್ನಿತರರಿಗೆ ಅದರ ಸಾರಿನ ರುಚಿ ಹತ್ತದಿದ್ದುದು ಹೆಬ್ಬಾವಿನ ಸುದೈವ ! ಒಂದು ಕಾಲಕ್ಕೆ ಸರೀಸೃಪಗಳ ಚರ್ಮಕ್ಕೆ ಬೇಡಿಕೆ ಬಹಳ ಇತ್ತು. ಹೆಬ್ಬಾವು ಮೊದಲ್ಗೊಂಡು ಮೊಸಳೆ, ಉಡ ಹಾಗೂ ಇನ್ನಿತರ ಹಾವುಗಳ ಚರ್ಮ ಭಾರತದ ಪೇಟೆಗಳಲ್ಲಿ ಮಾರಲ್ಪಡುತ್ತಿತ್ತಲ್ಲದೆ ಬಹುಸಂಖ್ಯೆಯಲ್ಲಿ ಪರದೇಶಗಳಿಗೂ ರವಾನೆಯಾಗುತ್ತಿತ್ತು. ಸುಮಾರು ನಲವತ್ತು ವರುಷಗಳ ಪೂರ್ವದಲ್ಲಿ ಪ್ರತಿ ವರ್ಷವೂ ಹತ್ತು ಲಕ್ಷ ಸರೀಸೃಪಗಳ ಚರ್ಮಗಳು ಪರದೇಶಗಳಿಗೆ ರಫ್ತು ಆಗುತ್ತಿದ್ದವು. ೧೯೩೨ರಲ್ಲಿ ಇದು ಸುಮಾರು ೨೫ ಲಕ್ಷಕ್ಕೇರಿತು. ಮರುವರುಷವೇ ೨೮ ಲಕ್ಷ ಚರ್ಮಗಳು ರಫ್ತು ಆದವು.

ಹೆಬ್ಬಾವು ಹಾಗೂ ಇತರ ಸರೀಸೃಪಗಳ ಚರ್ಮದಿಂದ ಕಂಠವಸ್ತ್ರ, ಬೆಲ್ಟು, ಪರ್ಸು, ಕೈಚೀಲ, ಹಣಿಗೆ ಸಿಗರೇಟುಗಳ ಚಿಕ್ಕ ಪೆಟ್ಟಿಗೆಗಳು, ಆಟಗಾರನ ಜಾಕೀಟು, ಟೊಪ್ಪಿಗೆ, ಚಪ್ಪಲಿ, ಬೂಟು ಮುಂತಾದ ವಿವಿಧ ವಸ್ತುಗಳನ್ನು ತಯಾರಿಸಬಹುದು. ಆದರೆ ಇಂದು ಪ್ಲಾಸ್ಟಿಕ್ , ಬೆಕೆಲೈಟ್, ನೈಲಾನ್‌ದಂಥ ಕೃತಕ ರಾಸಾಯನಿಕ ಪದಾರ್ಥಗಳ ನಿರ್ಮಾಣದಿಂದ ಆ ಪ್ರಾಣಿ ಪ್ರಪಂಚಕ್ಕೆ ಉಸಿರಾಡಲು ಅನುವಾಗಿದೆ. ಯಾಕೆಂದರೆ ಪ್ಲಾಸ್ಟಿಕ್, ನೈಲಾನ್‌ಗಳ ಬೆಲ್ಟು, ಚೀಲ ಮಂತಾದವುಗಳು ಕಡಿಮೆ ಬೆಲೆಗೆ ದೊರೆಯುತ್ತವಲ್ಲದೆ ಬಾಳಿಕೆ, ತಾಳಿಕೆ, ನಯ, ನಾಜೂಕುಗಳಿಗಾಗಿಯೂ ಹೆಸರುಗಳಿಸಿವೆ.

ಆದಾಗ್ಯೂ ಭಾರತದ ಹೆಬ್ಬಾವು ಅಪಾಯದಿಂದ ಮುಕ್ತವಾಗಿಲ್ಲ. ಅದರ ಚರ್ಮಕ್ಕಲ್ಲದಿದ್ದರೂ ಮಾಂಸಕ್ಕಾಗಿ ಅದರ ಹತ್ಯೆಯಾಗುತ್ತಿದೆ. ಅದನ್ನು ಕೊಲ್ಲದಿರಲು ನಿಷೇದಾಜ್ಞೆಯೊಂದನ್ನು ಸರಕಾರ ಹೊರಡಿಸಿದರೆ ಸಾಲದು. ಇಂಥ

ಸುಂದರ ಹಾವನ್ನು ಕಾಪಾಡಿ ನಿರ್ವಂಶ ಮಾಡಗೊಡದಿರಲು ಇನ್ನೂ ಕಟ್ಟುನಿಟ್ಟಾದ ಕ್ರಮಗಳು ಅವಶ್ಯ.

ಹೆಬ್ಬಾವು ಉರಗಪ್ರಪಂಚದ ಅತಿ ದಪ್ಪ, ಅತಿ ಉದ್ದ ಹಾವು. ನ್ಯೂಝೀಲ್ಯಾಂಡ್ ಒಂದನ್ನು ಹೊರತುಪಡಿಸಿ, ಜಗತ್ತಿನ ಎಲ್ಲ ದೇಶಗಳ ಗುಡ್ಡಗಾಡು ಪ್ರದೇಶಗಳಲ್ಲಿ ಇದರ ಅನೇಕ ಜಾತಿ ಪ್ರಬೇಧಗಳು ಕಾಣಸಿಗುತ್ತವೆ. ಹೆಸರೇ ಹೇಳುವಂತೆ ಗಾತ್ರದಲ್ಲಿ ಅವು ಭೀಮಕಾಯ. ಅವುಗಳ ಸರಾಸರಿ ತೂಕ ೨೫೦ ರಿಂದ ೩೦೦ ಪೌಂಡು. ಸರಾಸರಿ ಭಾರತೀಯನ ಇಮ್ಮಡಿ. ಮೈಯ ಸುತ್ತಳತೆ ೨ ಅಡಿ. ಉದ್ದಳತೆಯಲ್ಲಿ ೩೦ ಅಡಿಗಳಷ್ಟಕ್ಕೂ ಬೆಳೆದ ಹೆಬ್ಬಾವನ್ನು ನಮ್ಮ ದೇಶದಲ್ಲಿ ಕಂಡ ದಾಖಲೆಗಳಿವೆ. ಪೈಥಾನ್ ರೆಟಿಕ್ಯುಲೇಟಸ್ ಎಂಬ ಮಲಯಾ ದೇಶದ ರಾಜ ಹೆಬ್ಬಾವು ೨೮ ಅಡಿ, ಭಾರತದ ಪೈಥಾನ್ ಮೊಲ್ಯೂರಸ್ ಎಂಬ ಹೆಬ್ಬಾವು ೨೫ ಅಡಿ, ದಕ್ಷಿಣ ಅಮೇರಿಕದ ಯೂನೆಕ್ಟಿಸ್ ಹೆಬ್ಬಾವು ೩೩ ಅಡಿ ಉದ್ದವಾಗಿವೆ. ಇವುಗಳ ಜಾತಿಗೇ ಸೇರಿದ, ಕ್ಯಾಲಿಫೋರ್ನಿಯಾದ ಚಾರಿನಾ ಎಂಬ ರಬ್ಬರ್ ಹೆಬ್ಬಾವಿನ ಉದ್ದಳತೆ ೨೦ ಅಂಗುಲ ಮಾತ್ರ !

ತಲೆಯ ಮೇಲೆ ಸ್ಫುಟವಾಗಿ ಕಾಣುವ ದೊಡ್ಡ ಆಕಾರದ ಹುರುಪೆಗಳು, ಬೆನ್ನಿನ ಸಣ್ಣ ಹುರುಪೆಗಳ ಮೇಲೆ ಬಣ್ಣ ಬಣ್ಣದ ನಕ್ಷೆಗಳು. ಮೇಲ್ಭಾಗದಲ್ಲಿ ಕಂದು ಹೊಟ್ಟೆಯ ಮೇಲೆ ಬಿಳಿದಾದ ಹುರುಪೆಗಳು, ಮೊಂಡು ಮೂಗು, ಚೂಪುಬಾಲ, ತಲೆಯ ಎಡಬಲಗಳಲ್ಲಿಎರಡು ಕಿರಿ ತಗ್ಗುಗಳು, ಗುದದ್ವಾರದ ಎರಡೂ ಬದಿಗಳಲ್ಲಿ ಕಾಣುವ ಹಿಮ್ಮಡಿ ಮುಳ್ಳುಗಳು; ಇವು ಹೆಬ್ಬಾವಿನ ಲಕ್ಷಣಗಳು. ನೋಬೆಲ್ ಹಾಗೂ ಸಿಮಿಡ್ ಎಂಬ ಪ್ರಾಣಿತಜ್ಞರು ತಮ್ಮ ಪ್ರಯೋಗಗಳಿಂದ ಹೆಬ್ಬಾವಿನ ತಲೆಯ ಮೇಲಿನ ತಗ್ಗುಗಳನ್ನು ಉಷ್ಣಗ್ರಾಹೀ ಅಂಗಗಳೆಂದು ಸಿದ್ಧ ಮಾಡಿದ್ದಾರೆ. ಸುತ್ತಲಿನ ವಾತಾವರಣದಲ್ಲಾಗುವ ಉಷ್ಣತಾಮಾನದ ಸ್ಥಿತ್ಯಂತರಗಳನ್ನು ಅವು ಗ್ರಹಿಸುತ್ತವೆ. ಹಿಮ್ಮಡಿ ಮುಳ್ಳುಗಳು ಬೇರೇನೂ ಅಲ್ಲದೆ ಪೂರ್ತಿ ಬೆಳೆಯದ ಮೂಲಾವಸ್ಥೆಯ ಹಿಂಗಾಲುಗಳು. ಅವು ಒಂದೂವರೆ ಎರಡು ಅಂಗುಲ ಉದ್ದವಿದ್ದು ನಖಗಳಂತೆ ಕಾಣುತ್ತವೆ. ಸರ್ಪಜಗತ್ತಿನಲ್ಲಿ ಹೆಬ್ಬಾವುಗಳಷ್ಟೇ ತಮ್ಮ ಹಿಂಗಾಲುಗಳನ್ನು ಉಳಿಸಿಕೊಂಡಿವೆ. ಅವು ಚಲಿಸಲು ಸಹಾಯಕವಾಗದ ಶೇಷ ಅವಯವಗಳಾದರೂ ಬೇಟೆಯನ್ನು ಕಸುವಿನಿಂದ ಪರಚಿ ತೀವ್ರ ಗಾಯವನ್ನುಂಟು ಮಾಡುವಷ್ಟು ಚೂಪಾಗಿವೆ.

ಹೆಬ್ಬಾವು ಕಲ್ಲು ಬಂಡೆಗಳ ಸಂದುಗಳಲ್ಲಿ ಎಷ್ಟೊಂದು ಸಲೀಲವಾಗಿ ಹರಿದಾಡಬಲ್ಲದೋ ಅಷ್ಟೇ ನಿರಾಯಾಸವಾಗಿ ನೀರಿನಲ್ಲೂ ಈಜಬಲ್ಲದು. ಆದರೆ ವೇಗವಾಗಿ ಹರಿಯುವ ನೀರಿನಲ್ಲಿ ಪ್ರವೇಶಿಸುವ ಧಾರ್ಷ್ಟ್ಯ ಅದಕ್ಕಿಲ್ಲ. ತನ್ನ ದೇಹ ಭಾರದ ಅರಿವೇ ಇಲ್ಲದಂತೆ ಮರವನ್ನು ಸುಲಭವಾಗಿ ಏರಬಲ್ಲದು. ನೆಲದ ಮೇಲಿನಂತೆ ಉಸುಕಿನ ಮೇಲೂ ಸರಾಗವಾಗಿ ಚಲಿಸಬಲ್ಲದು. ಮರದ ಟೊಂಗೆಯೊಂದು ನೆಲಕ್ಕೆ ಸಮೀಪವಾಗಿ ಬಾಗಿದ್ದರೆ ಟೊಂಗೆಗುಂಟ ಮರವನ್ನೇರುವ ಮರ್ಕಟ ಬುದ್ಧಿಯೂ ಇದಕ್ಕುಂಟು.

ಸ್ವಭಾವತಃ ಕುಂಭಕರ್ಣನ ಆಲಸ್ಯ ಇದಕ್ಕಿರುವುದು ನಿಜ. ಆದರೆ ಬೇಟೆ ಕಂಡಾಕ್ಷಣ ಸಾಕ್ಷಾತ್ ಬಕಾಸುರ ಅವತಾರವನ್ನೇ ತೋರುತ್ತದೆ. ವೃಕ್ಷವಾಸಿ ಪಕ್ಷಿಗಳು, ಅವುಗಳ ಮೊಟ್ಟೆಮರಿಗಳು, ತನಗಿಂತ ಚಿಕ್ಕ ಸರೀಸೃಪಗಳು, ಅಳಿಲು, ಮಂಗ ಮುಂತಾದವು. ಭೂಚರಗಳಾದ ಚಿಗರಿ, ಚಿರತೆ, ನಾಯಿ, ಹಂದಿ, ಆಡು, ಕುರಿ ಮುಂತಾದವುಗಳು ಹೆಬ್ಬಾವಿನ ಆಹಾರ. ಇಂಥ ಚಪಲ ಸಸ್ತನಿಗಳನ್ನು ಬೇಟೆಯಾಡಲು ಬೇಕಾದ ಹೆಚ್ಚಿನ ಚಪಲತೆ ಜಡ ದೇಹದ ಶುಂಭನಂತಿರುವ ಹೆಬ್ಬಾವಿಗಿರುವುದು ಆಶ್ಚರ್ಯವೇ. ಬೇಟೆ ಸನಿಹದಲ್ಲಿ ಬಂದಾಗ ಹೆಬ್ಬಾವು ನಿಶ್ಚಲವಾಗಿ, ಅದರ ದೇಹವೇ ಕಣ್ಣಾಗಿ ಬಿದ್ದುಕೊಳ್ಳುತ್ತದೆ. ಬೇಟೆ ತನ್ನಳತ್ತೆಯಲ್ಲಿಬಂದಿತೋ, ತನ್ನ ಜಡವಾದ ತಲೆಯನ್ನು ಬಿರುಸಾಗಿ ಬೀಸಿ ಬೇಟೆಯನ್ನು ಕೆಡಹುತ್ತದೆ. ಅದು ಕಬ್ಬಿಣ ಹಾರೆಯ ಡೊಣ್ಣೆ ಪೆಟ್ಟು ! ಬೇಟೆ ಮೂರ್ಛೆ ಹೋದ ಕ್ಷಣವೇ ಉಕ್ಕಿನ ಹಗ್ಗದಂತಿರುವ ತನ್ನ ಬಲವಾದ , ನೀಳವಾದ ದೇಹವನ್ನು ಬೇಟೆಯ ದೇಹಕ್ಕೆ ಸುತ್ತಿ, ಅದನ್ನು ಹೆಡಮುರಿಗೆ ಬಿಗಿದು ನಿಧಾನವಾಗಿ ಅದುಮಲು ಆರಂಭಿಸುತ್ತದೆ.

ಎಷ್ಟೇ ಒದ್ದಾಡಿದರೂ ಅದರಿಂದ ನಿವೃತ್ತಿ ಇಲ್ಲ. ಬೇಟೆಯನ್ನು ತನ್ನ ತೋಳ ತೆಕ್ಕೆಯಲ್ಲಿ ಓಚುಕಿ ಹಿಡಿಯುವುದರಲ್ಲಿ ಹೆಬ್ಬಾವಿಗೆ ಎರಡು ಉದ್ದೇಶಗಳು : ಒಂದು ಬೇಟೆ ಉಸಿರುಕಟ್ಟಿ ಸಾಯುತ್ತದೆ. ಇನ್ನೊಂದು -ಬೇಟೆಯ ಪೂರ್ವಾಕಾರ ಎಷ್ಟೇ ವಕ್ರ, ವಿಷಮ, ಅಗಲವಾಗಿದ್ದರೂ ಅದು ಅದುಮುವ ಕ್ರಿಯೆಯಿಂದ ಸ್ವಲ್ಪ ಮಟ್ಟಿಗಾದರೂ ಉದ್ದವಾಗುತ್ತದೆ. ಬೇಟೆ ಹಿಗ್ಗಿ ನೀಳವಾದಷ್ಟೂ ನುಂಗುವ ಕಾರ್ಯ ಸುಲಭ ಸದ್ದಿಲ್ಲದೆ, ಗುದ್ದಿಲ್ಲದೆ ಹೆಬ್ಬಾವು ಬೇಟೆಯ ಮುಖವನ್ನು ತನ್ನ ಹಲ್ಲುಗಳಿಂದ ಕಚ್ಚಿ ಹಿಡಿದು ನುಂಗುವ ಕ್ರಿಯೆಯನ್ನು ಒಂದು ತುದಿಯಿಂದ ಆರಂಭಿಸುತ್ತದೆ.

ಹಾವಿನ ಹಲ್ಲುಗಳು ಬೇಟೆಯನ್ನು ಕಚ್ಚಿ ಹಿಡಿದು ಅದು ಪಾರಾಗದಂತೆ ಸಹಾಯ ಮಾಡಬಲ್ಲವೇ ವಿನಃ ಆಹಾರವನ್ನು ತುಂಡರಿಸಿ ತುಣುಕು ಮಾಡುವ ಸಾಮರ್ಥ್ಯ ಅವುಗಳಿಗಿಲ್ಲ. ಆದ್ದರಿಂದ ಹಾವು ಬೇಟೆಯನ್ನು ಇಡಿಯಾಗಿ ನುಂಗದೆ ಅನ್ಯಮಾರ್ಗವಿಲ್ಲ. ಬೇಟೆಯ ಬಾಲವನ್ನು ಬಿಟ್ಟು ತಲೆಯನ್ನು ಮೊದಲು ಕಚ್ಚಿ ಹಿಡಿಯುವ ವಿಧಾನ ಹೆಬ್ಬಾವಿನ ನುಂಗುವ ಕೌಶಲ್ಯವನ್ನು ತೋರಿಸುತ್ತದೆ. ತಲೆಯ ತುದಿಯಿಂದ ನುಂಗುವಾಗ ಬೇಟೆಯ ಕೂದಲುಗಳಾಗಲೀ, ಗರಿಗಳಾಗಲೀ, ಆತಂಕವಾಗಲಾರವು. ಆದ್ದರಿಂದಲೇ ಮುಳ್ಳು ಹಂದಿಗಳನ್ನು ಕೂಡ ಅದು ನುಂಗಬಲ್ಲದು. ಆದರೆ ಒಮ್ಮೊಮ್ಮೆ ಮುಳ್ಳು ಹಂದಿಯ ಈಟಿಗಳು ಹಾವಿಗೆ ಮಾರಕವಾಗುವುದುಂಟು. ೧೮ ಅಡಿ ಉದ್ದದ ಭಾರತೀಯ ಹೆಬ್ಬಾವೊಂದರ ಹೊಟ್ಟೆಯಲ್ಲಿ ಇತರ ಅನೇಕ ಚಿಕ್ಕ ಪ್ರಾಣಿಗಳೊಡನೆ ಒಂದು ಚಿರ್ಚಾ ಸಿಕ್ಕಿತು. ಕೋಡುಳ್ಳ ಪ್ರಾಣಿಗಳನ್ನು ನುಂಗಿದರೆ ಕಾಲಾಂತರದಲ್ಲಿ ಹೆಬ್ಬಾವು ಕೋಡುಗಳನ್ನು ಕಾರಿ ಬಿಡುವುದುಂಟು.

ಚಿರ್ಚು, ಚಿಗರಿಗಳಂಥ ಗಾತ್ರದ ಪ್ರಾಣಿಗಳನ್ನು ಇಡಿಯಾಗಿ ಹೆಬ್ಬಾವು ಹೇಗೆ ನುಂಗಬಲ್ಲದು ? ನಮ್ಮ ದವಡೆಗೂ ಹಾವಿನ ದವಡೆಗೂ ವ್ಯತ್ಯಾಸವಿದೆ. ನಾವು ಕೆಳದವಡೆಯನ್ನು ಎಷ್ಟು ಚಲಿಸಬಲ್ಲೆವು ? ೪೫° ದ ಕೋನವಾಗುತ್ತಲೇ ಸ್ವಯಂಚಾಲಿತ ಬೀಗ ಬಿದ್ದುಬಿಡುತ್ತದೆ. ಆದರೆ ಹಾವಿನ ಕೆಳದವಡೆ ಸರಿಯುತ್ತ, ಸರಿಯುತ್ತ ೧೮೦° ಕೋನದಷ್ಟು ಬಾಯ್ದೆರೆದು ನರಕದ ಹೆಬ್ಬಾಗಿಲನ್ನು ಅಗಲವಾಗಿ ತೆರೆದಿಡುತ್ತದೆ ! ಅಲ್ಲದೆ ನಮಗಿರುವಂತೆ ಅದರ ಕೆಳದವಡೆ ಒಂದೇ ಎಲುಬಿನಿಂದ ಮಾಡಿದ್ದಲ್ಲ. ಎರಡು ಎಲುಬುಗಳು ರಬ್ಬರಿನಂಥ ಅಸ್ಥಿಬಂಧನದಿಂದ ದವಡೆಯ ಮುಂಭಾಗದಲ್ಲಿ ಹೊಂದಿಕೊಂಡಿರುತ್ತದೆ. ಆ ಎರಡೂ ಎಲುಬುಗಳು ಎಡಬಲಕ್ಕೆ ಸರಿದು ಒಳ ಸೇರುವ ಬೇಟೆಗೆ ಅವಕಾಶ ಮಾಡಿಕೊಡುತ್ತವೆ. ತುದಿ ಎರಡಾಗಿ ಸೀಳಿದ ನಾಲಗೆ ಅಂಟಿನಂಥ ದ್ರವ ಪದಾರ್ಥವನ್ನು ಹುಟ್ಟಿಸಿ ಬೇಟೆಯ ಹೊರಮೈಯನ್ನು ಅಂಟಿಸಿ ಹಿಡಿಯಲು ನೆರವಾಗುತ್ತದೆ.

ದವಡೆಗಳಂತೆ ಹೆಬ್ಬಾವಿನ ಕುತ್ತಿಗೆ, ಅದರಾಚೆಗಿನ ದೇಹ ಕೂಡ ಹಿಗ್ಗಬಲ್ಲವು. ನಮ್ಮದೇಹದಲ್ಲಿ ಪಕ್ಕೆಲುಬುಗಳು ಎದೆಮೂಳೆಗೆ ಪೂರ್ತಿ ತಗಲಿಕೊಂಡಿವೆ. ಆದರೆ ಹಾವಿನ ಪಕ್ಕೆಲುವುಗಳ ಒಳ ತುದಿಗಳು ಎದೆ ಮೂಳೆಗೆ

ತಗಲಿಕೊಳ್ಳದೆ ಬದಿಯ ಸ್ನಾಯುಗಳಲ್ಲಿ ನೆಟ್ಟಿರುತ್ತವೆ. ಇಂಥ ರಚನೆಯಿಂದ ಪಕ್ಕೆಲುವುಗಳು ಎಡಕ್ಕೂ ಬಲಕ್ಕೂ ಚಲಿಸಿ ವಕ್ಷಸ್ಥಲದ ಅವಕಾಶವನ್ನು ಹೆಚ್ಚಿಸುತ್ತವೆ. ಈ ಕಾರಣಗಳಿಂದ ಬೇಟೆ ಇಡಿಯಾಗಿ ಒಳ ಸಾಗುತ್ತದೆ. ಹೆಬ್ಬಾವಿನ ನುಂಗುವ ಕ್ರಿಯೆ ಹೂರಣ ಮುದ್ದೆಯನ್ನು ಒಳಸರಿಸುತ್ತ ಹೊರ ಹೊಚ್ಚುವ ಕಣಕದ ಪದರಿನ ಕ್ರಿಯೆಯನ್ನು ಹೋಲುತ್ತದೆ. ನುಂಗಿದ ಮೇಲೆ ಹೆಬ್ಬಾವು ಮಂದವಾಗುತ್ತದೆ. ಕಸಿವಿಸಿಯಿಂದ ತೇಕುತ್ತ ಹೇಗೋ ಸನಿಹದ ಮರವನ್ನು ಸಮೀಪಿಸಿ ಬೇಟೆಯನ್ನು ಸುತ್ತಿದಂತೆ ಮರವನ್ನು ಬಳಸಿ ಬಿಗಿದುಕೊಳ್ಳುತ್ತದೆ. ಬೇಟೆಯ ಎಲುಬುಗಳನ್ನು ಪುಡಿ ಪುಡಿ ಮಾಡುವ ವಿಧಾನ ಅದು ಇರಬೇಕು. ತರುವಾಯ ಕಲ್ಲುಸಂದುಗಳಲ್ಲಿ ಗಂಟೆಗಟ್ಲೆ ಬಿದ್ದುಕೊಂಡು ಆಹಾರವನ್ನು ಜೀರ್ಣಿಸಿಕೊಳ್ಳುತ್ತದೆ.

ಈ ರೀತಿ ತನ್ನ ಮೈಯ ಸುತ್ತಳತೆಗಿಂತಲೂ ಎಷ್ಟೋ ಪಟ್ಟು ದೊಡ್ಡವಿರುವ ಕುರಿ, ಗಂಡು ಹಂದಿ ಮುಂತಾದ ಪ್ರಾಣಿಗಳನ್ನು ಅನಾಯಾಸವಾಗಿ ನುಂಗುವ ಹೆಬ್ಬಾವುಗಳನ್ನು ಕಂಡವರಿದ್ದಾರೆ. ಬೇಟೆ ಅಷ್ಟಾವಕ್ರವಾಗಿದ್ದರೆ ಹಾವಿಗೆ ತೊಂದರೆ. ಚಿಗರಿಯಂತೆ ನೀಳವಾಗಿದ್ದರೆ ನುಂಗಲು ಹಗುರ. ಹೆಬ್ಬಾವು ೮೦ ಪೌಂಡ್ ಭಾರದ ಚಿಗರಿಯನ್ನು ನುಂಗಿದ ದಾಖಲೆಗಳುಂಟು.

ಹಾವಿನ ಸುತ್ತ ಹೊಂದಿಕೊಂಡಿರುವಷ್ಟು ದಂತಕಥೆಗಳು ಇನ್ನಾವ ಪ್ರಾಣಿಯ ಬಗೆಗೂ ಇರಲಿಕ್ಕಿಲ್ಲ. ಹೆಬ್ಬಾವು ತನ್ನ ಉಸಿರಿನಿಂದಲೇ ಬೇಟೆಯನ್ನು ಒಳಕ್ಕೆಳೆದುಕೊಳ್ಳುತ್ತದಂತೆ - ಹವೆಯನ್ನು ಹೀರುವ ಪಂಪಿನಂತೆ. ಒಂದು ಹೆಬ್ಬಾವು ಜೀವಂತ ಶಿಶುವನ್ನು ನುಂಗಿತ್ತಂತೆ. ಹಾವಿನ ದೇಹವನ್ನು ಸೀಳಿ ನೋಡಿದಾಗ ಶಿಶು ಇನ್ನೂ ಜೀವಂತವಾಗಿತ್ತಂತೆ. ಇವು ಪೂರ್ತಿ ಸುಳ್ಳು ಎಂದು ಹೇಳಲಾಗದಿದ್ದರೂ ಉತ್ಪ್ರೇಕ್ಷೆ ಕಲ್ಪನೆಗಳಿಂದ ಕೂಡಿದ ಕತೆಗಳು. ಆನೆ ಹೆಬ್ಬಾವುಗಳ ಮಧ್ಯೆ ನಡೆದ ಘೋರ ಕಾಳಗದಲ್ಲಿ ಹೆಬ್ಬಾವು ಯಶಸ್ವಿಯಾಗಿ ಪಾರಾದ ಕತೆಯೊಂದನ್ನು ಉತ್ತರ ಭಾರತದ ಒಂದು ಪತ್ರಿಕೆ ಕೆಲದಿನಗಳ ಹಿಂದೆ ಪ್ರಕಟಿಸಿತ್ತು. ನಳರಾಜ ತನ್ನ ಪತ್ನಿ ದಮಯಂತಿಯನ್ನು ಏಕಾಏಕಿಯಾಗಿ ಅರಣ್ಯ ಮಧ್ಯದಲ್ಲಿ ಬಿಟ್ಟು ಹೋದಾಗ ಹೆಬ್ಬಾವೊಂದು ಅವಳನ್ನು ಸುತ್ತಿಕೊಂಡಿತ್ತಂತೆ. ನಮ್ಮ ಪ್ರಾಚೀನ ಸಾಹಿತ್ಯದಲ್ಲಿ ಇಂಥ ಕತೆಗಳು ಅನೇಕ.

ಕಡುಚಳಿ ಹೆಬ್ಬಾವಿಗೆ , ಇತರ ಹಾವುಗಳಿಗೆ ಬಾಧಕ, ಆಗ ಅದು ಭೂಮಿಯ ತೀರ ಒಳಕ್ಕೆ ಬಿಲಗಳನ್ನು ತೋಡಿಕೊಂಡು ಶಿಶಿರ ನಿದ್ರೆಯನ್ನು ಕಳೆಯುತ್ತದೆ. ಗ್ರೀಷ್ಮ

ಸರಿಯುತ್ತಲೇ ಹೆಬ್ಬಾವು ಹೊರಬಂದು ೧೦೦ಕ್ಕೆ ಮೇಲ್ಪಟ್ಟು ಮೊಟ್ಟೆಗಳನ್ನಿಡುತ್ತದೆ. ಹೆಣ್ಣು ಹೆಬ್ಬಾವು ಮೊಟ್ಟೆಗಳನ್ನು ಸುತ್ತಿ ಗೋಲಾಕಾರದಲ್ಲಿ ಕುಳಿತು ಕಾವು ಕೊಡುತ್ತದೆ. ೬೦ ದಿನಗಳ ನಂತರ ಮೊಟ್ಟೆಗಳೊಡೆದು ಮರಿಗಳು ಹೊರಬರುತ್ತವೆ. ತಾಯಿ ಹಾವು ಹಸಿದರೆ ಸ್ವಜಾತಿ ಭಕ್ಷಕವಾಗುತ್ತದೆ. ಮಾತೃವಾತ್ಸಲ್ಯಕ್ಕಿಂತ ಹೊಟ್ಟೆಯ ಹಸಿವು ಹಿರಿದಲ್ಲವೆ?

ಸೆರೆಯಲ್ಲಿಟ್ಟ ಹೆಬ್ಬಾವುಗಳು ಒಂದನ್ನೊಂದು ನುಂಗಿದ ಉದಾಹರಣೆ ಗಳೂ ಉಂಟು. ಹೆಬ್ಬಾವುಗಳ ಬಕಾಸುರ ವೃತ್ತಿಯಂತೆ ಅವುಗಳ ಉಪವಾಸ ಶಕ್ತಿಯೂ ಅಗಾಧವೇ. ಒಂದು ವರ್ಷ ಉಪವಾಸವಿದ್ದ ಹೆಬ್ಬಾವಿನ ದಾಖಲೆಗಳು ಧಾರಾಳವಾಗಿವೆ.

ಹೆಬ್ಬಾವಿನ ಆಯುಷ್ಯದ ಬಗ್ಗೆ ಖಚಿತವಾಗಿ ಹೇಳುವುದು ಕಷ್ಟ. ಪ್ರಯೋಗ ಶಾಲೆಗಳಲ್ಲಿ ೧೦ ವರ್ಷಕ್ಕಿಂತ ಹೆಚ್ಚು ಬದುಕುವುದು ವಿರಳ. ಆದರೂ ನೈಸರ್ಗಿಕ ಸ್ಥಿತಿಯಲ್ಲಿ ಇದಕ್ಕಿಂತ ಅನೇಕ ಪಟ್ಟು ಹೆಚ್ಚು ಬದುಕುತ್ತಿರಬೇಕು. ಅದು ಸಾವಕಾಶವಾಗಿ ಬೆಳೆಯುವ ಪ್ರಾಣಿ. ೨೦೦ ಪೌಂಡು ತೂಕಕ್ಕೆ ಬೆಳೆಯಲು ಅದಕ್ಕೆ ಅರ್ಧ ಶತಮಾನಬೇಕೆಂದು ಅಂದಾಜು ಇದೆ.


ಎರಡನೇ ಮಹಾಯುದ್ಧದಲ್ಲಿ ಬರ್ಮಾದ ದಟ್ಟಡವಿಗಳಲ್ಲಿ ಹಾಯ್ದು ಹೋದ ಸೈನಿಕರಿಗೆ ಹೆಬ್ಬಾವುಗಳ ಮಾಂಸವೇ ಜೀವನಾಧಾರವಾಗಿತ್ತಂತೆ. ಅನೇಕ ಪಾಶ್ಚಾತ್ಯ ದೇಶಗಳಲ್ಲಿ, ಹೆಚ್ಚಾಗಿ ಅಮೇರಿಕೆಯಲ್ಲಿ ಕಪ್ಪೆಯ ಹಿಂಗಾಲುಗಳ ಮಾಂಸದ ತುಂಡುಗಳಂತೆ ಹೆಬ್ಬಾವಿನ ಮಾಂಸದ ತುಂಡುಗಳನ್ನೂ ಕರಿದು ಹೋಟೆಲ್ಲುಗಳಲ್ಲಿ ಮಾರುತ್ತಾರೆ. ನಮ್ಮ ದೇಶದಲ್ಲಿ ನೇಫಾದ ಗಿರಿಜನರು, ಮಧ್ಯಪ್ರದೇಶದ ಕಾಡು ಜನಾಂಗದವರು ಹೆಬ್ಬಾವನ್ನು ನಿತ್ಯದ ಆಹಾರವಾಗಿ ಬಳಸುತ್ತಾರೆ. ಅದರ ಸಾರಿನ ರುಚಿ ಇನ್ನಿತರ ಮಾಂಸಾಹಾರಿಗಳಿಗೆ ಗೊತ್ತಾಗಿ ನಮ್ಮ ಹೋಟೆಲ್ಲುಗಳ 'ಮೆನು' ದಲ್ಲಿ ಅದರ 'ಸೂಪ್' ಹೆಸರು ಸೇರಿಕೊಂಡಿದ್ದಾದರೆ ಭಾರತದ ಹೆಬ್ಬಾವಿನ ಇತಿಶ್ರೀ ಆಯಿತೆಂದೇ ತಿಳಿಯಬೇಕು

***

೪. ಸತ್ತ ಪ್ರಾಣಿಗಳಿಗೆ ಬಾಯಿ ಚಪ್ಪರಿಸುವ ಕತ್ತೆಕಿರುಬ

ಸೂರ್ಯೋದಯವಾಗಲು ಇನ್ನೂ ಎರಡು ಗಂಟೆಗಳ ಕಾಲವಿತ್ತು. ಕೃಷ್ಣಪಕ್ಷದ ಚಂದಿರನ ಮಂದ ಬೆಳಕು ಹುಲ್ಲುಗಾವಲು ಪ್ರದೇಶದ ರುದ್ರ ನಾಟಕದ ಮೂಕ ಸಾಕ್ಷಿಯಾಗಿ ಎಲ್ಲೆಡೆಗೂ ಚಾಚಿತ್ತು. ಅಲ್ಲೊಂದು ಇಲ್ಲೊಂದು ವಿರಳವಾಗಿದ್ದ ಮರವೊಂದರ ನೆರಳಿನಲ್ಲಿ ಸದ್ದಿಲ್ಲದೆ ಮೌನವಾಗಿ ನಿಂತಿದ್ದವು ಹಿರಿ ಕಿರಿ ವಯಸ್ಸಿನ ಹತ್ತಿಪ್ಪತ್ತು ಕತ್ತೆಕಿರುಬಗಳು. ಮಧ್ಯದಲ್ಲಿ ನಿಂತಿರುವುದೇ ಮುದಿ ಹೆಣ್ಣು ಕಿರುಬ. ಅವುಗಳ ಉಸಿರಾಟದ ವಿನಃ ಬೇರೇನೂ ಕೇಳದು. ಅದು ನಿದ್ರೆಯ ನೀರವತೆಯಾಗಿರಲಿಲ್ಲ. ಎಚ್ಚರದ ನಿಃಶಬ್ದತೆಯಾಗಿತ್ತು.

ಎಲ್ಲಿಂದಲೋ ಬಹು ದೂರದಿಂದ ಸೀಳಿ ಬಂದ ಖುರಪಟುಗಳ ಶಬ್ದ ಕೇಳಿದ ಮುದಿ ಹೆಣ್ಣು ಕಿರುಬ ಕೂಡಲೇ ಮೈ ಕಿವಿ ಸೆಟೆಸಿ ನಿಂತಿತು. ಸೂಕ್ಷ್ಮ ಗ್ರಾಹಿಯಾದ ಅದರ ಕಿವಿಗಳು ಎರಡು ನೂರು ಖುರಗಳನ್ನು ಎಣಿಸಿದ್ದವು. ಅದಕ್ಕೆ ಗೊತ್ತು ಅದು ಜೀಬ್ರಾಗಳ ನಾಗಾಲೋಟವೆಂದು. ಈಗ ತಂಡದ ನಾಯಕಿ ಇನ್ನೂ ಚುರುಕಾಗಿ ಕಿವಿಗೊಟ್ಟು ಕೇಳಿದಳು. ಖುರಪುಟಗಳ ಹಿಂದೆ ಇನ್ನೊಂದು ತೆರನಾದ ಮೃದುವಾದ ಕಳ್ಳಹೆಜ್ಜೆಯ ಮಾರ್ಜಾಲ ಓಟದ ಸದ್ದು; ಅದು ಸಿಂಹದ ಹೆಜ್ಜೆ ಇರಲೇಬೇಕೆಂಬ ಊಹೆ ಅದಕ್ಕೆ.



ಈಗ ಮಾತ್ರ ಆ ಹೆಣ್ಣು ಕತ್ತೆ ಕಿರುಬದ ಸಹನೆಯ ಕಟ್ಟೊಡೆಯಿತು. ತನ್ನಿಂದ ೬೫ ಕಿಲೋಮೀಟರುಗಳ ಮೇಲಿದ್ದ ಬಿಲದಲ್ಲಿ ಹಸಿವೆಯಿಂದ ಆಕ್ರಂದಿಸುತ್ತಿದ್ದ ಮರಿಗಳ ನೆನಪಾಯಿತು. ಬತ್ತಿನಿಂತ ತನ್ನ ಕೆಚ್ಚಲನ್ನು ನೋಡಿದ್ದೇ ಓಟ ಕಿತ್ತಿತು. ಖುರಪುಟಗಳ ಶಬ್ದ ಬಂದೆಡೆಗೆ. ಅದಕ್ಕೆ ದಿಕ್ಕಿನ ಜ್ಞಾನ, ವೇಗದ ಮಿತಿ, ತಗ್ಗು, ದಿನ್ನೆ, ಪೊದರುಗಳ ಎಚ್ಚರ ಎಲ್ಲವೂ ಗೊತ್ತು. ತಾನು ಮಧ್ಯದಲ್ಲಿ, ಹಿರಿ ಕಿರಿ ಕಿರುಬಗಳು ಎಡ ಬಲಗಳಲ್ಲಿ. ಹೀಗೆ ಓಡುತ್ತ ಬತ್ತಿದ ಹಳ್ಳಗಳನ್ನು ದಾಟುತ್ತ ಮುಳ್ಳು ಕಂಟಿಗಳನ್ನು ಜಿಗಿಯುತ್ತ ಒಂದೆಡೆ ಗಕ್ಕನೆ ನಿಂತಿತು. ಇನ್ನೂ ಬಹು ದೂರ ದಾರಿಯನ್ನು ಕ್ರಮಿಸಬೇಕಿತ್ತೆನೋ, ಅನುಭವವಿಲ್ಲದ ಇತರ ಕಿರುಬಗಳು ಮುದಿ ಕಿರುಬನನ್ನು ಮೂಸಿ ನೋಡಿ ಎತ್ತಲೋ ಮರೆಯಾದವು. ಖುರಪುಟಗಳ ಶಬ್ದ ಒಮ್ಮೆಲೆ ಕೇಳದಂತಾಗಿ ಜಂಟಿಯಾಗಿ ಧಾವಿಸುತ್ತಿದ್ದ ಕಿರುಬ ಸ್ತಬ್ಧವಾಗಿ ನಿಂತುಕೊಂಡಿತು. ಅದಕ್ಕೆ ಭಯಂಕರವಾದ ಚೀತ್ಕಾರ, ಅತ್ಯುಗ್ರವಾದ ಅಪ್ಪಳಿಕೆ ಗಳು ಕೇಳಿಬಂದಿದ್ದವು. ಸಿಂಹದ ಆಕ್ರಮಣಕ್ಕೆ ಜೀಬ್ರಾ ಬಲಿಯಾಗಿರಬೇಕೆಂದು ತರ್ಕಿಸಿತು. ಅದು ನಿಜವಾಗಿತ್ತು.

ಮತ್ತೊಮ್ಮೆ ಸ್ಮಶಾನ ಸದೃಶವಾದ ಮೌನ. ಉಳಿದೆಲ್ಲ ಜೀಬ್ರಾಗಳು ಓಟಕಿತ್ತು ಪಾರಾಗಿದ್ದವು. ವಿಜಯಿ ಸಿಂಹವು ಇನ್ನೂ ಉಸಿರಾಡುತ್ತಿದ್ದ ಜೀವಚ್ಛವವನ್ನು ತುಂಬಾ ಆವೇಶದಿಂದ ಎಳೆಯುತ್ತಿತ್ತು. ಸೂಕ್ಷ್ಮಮತಿಯಾದ ಬೇಟೆಯ ಚಾಕಚಕ್ಯತೆಯಲ್ಲಿಯೇ ಹತ್ತು ವರ್ಷಗಳಿಂದ ಹಣ್ಣಾದ ಹೆಣ್ಣು ಕಿರುಬ ನಾಗಾಲೋಟದಿಂದ ಓಡಿದ್ದೇ ಕ್ಷಣಾರ್ಧದಲ್ಲಿ ಬೇಟೆಯ ಬದಿಗೆ ಬಂದು ನಿಂತಿತ್ತು ! ಮರಿ ಕಿರುಬಗಳ ವಾಸನಾ ಪ್ರಜ್ಞೆಗೇನು ಕಡಿಮೆ ? ಅವೂ ತಮ್ಮ ಧುರೀಣೆಯ ಹಿಂಬದಿಯಲ್ಲೇ ನಿಂತಿದ್ದವು.

ಮುದಿ ಹೆಣ್ಣಿಗೆ ಈಗ ಹಸಿವೆ ತಡೆಯದಾಯಿತು. ಬೇಟೆಗೆ ಕೂಡಲೇ ಬಾಯಿ ಹಾಕುವ ಆಶೆ. ಕೂದಲುಗಳು ನಿಮಿರಿ ನಿಂತವು. ಬಾಲ ವಕ್ರವಾಗಿ ಸೆಟೆಯಿತು. ಅಸಹಾಯಕವಾದರೂ ಆತುರ, ಛಲ, ಅಸಹಿಷ್ಣುತೆಯಿಂದ ಸಣ್ಣ ಧ್ವನಿಯಲ್ಲಿ ಗುರುಗುಟ್ಟುತ್ತ ಮೃಗರಾಜನ ಆಚೆ, ಈಚೆ ಅಷ್ಟೇ ಜಾಗರೂಕತೆಯಿಂದ ಸುತ್ತಾಡತೊಡಗಿತು. ಘನ ಗಾಂಭೀರ್ಯದಿಂದ ಕುಳಿತ ವನರಾಜನಿಗೆ ಈ ಯಕಃಶ್ಚಿತ್ ಪ್ರಾಣಿಯ ಅಂಜಿಕೆ ಎಷ್ಟರದು ? ಅದು ಈ ಮುದಿ ಗೂಬೆಯನ್ನು ನಿರ್ಲಕ್ಷಿಸಿತು.

ತುತ್ತಿನ ಚೀಲ ಬರಿದಾದಾಗ ಕಿರುಬ ತೆಪ್ಪಗೆ ನಿಂತೀತೆ ? ಈ ಮಹಾ ಮಾರ್ಜಾಲದಿಂದ ಕೇವಲ ಎರಡು ಮೀಟರುಗಳ ಅಂತರದಲ್ಲಿ ನಿಂತು ಹಲ್ಲು ಕಿಸಿಯಿತು. ಸಿಂಹವು ಇನ್ನೂ ತನ್ನ ಸಹಜ ಗಾಂಭೀರ್ಯದಿಂದಲೇ ಗಂಟಲಲ್ಲಿ ಗುರುಗುಟ್ಟಿ ಹೆದರಿಸಿತು. ಹುಚ್ಚು ಧೈರ್ಯದ ಕಿರುಬ ಇನ್ನೂ ಸಮೀಪಿಸಿದಾಗ ಸಿಂಹವು ಎದ್ದು ನಿಂತಿತು. ಕೂಡಲೇ ಆ ಕಿರುಬ ಒಂದೇ ನೆಗೆತಕ್ಕೆ ಬೇಟೆಯ ಮೇಲೆ ಜಿಗಿದು ತನ್ನ ಹರಿತವಾದ ಹಲ್ಲುಗಳಿಗೆ ಬಂದಷ್ಟು ಮಾಂಸವನ್ನು ಕಿತ್ತುಕೊಂಡು ಓಡಿತು. ಕೆರಳಿದ ಸಿಂಹ ಆ ಮುದಿ ಹೆಣ್ಣು ಕಿರುಬನ್ನು ಬೆನ್ನಟ್ಟುವುದನ್ನೇ ಕಾಯುತ್ತಿದ್ದ ಉಳಿದ ಕಿರುಬಗಳು ಇಂಥ ಸುಸಂಧಿಯನ್ನು ಕಳೆದುಕೊಂಡಾವೇ ? ಬಾಯಿಗೆ ಸಿಕ್ಕಿದಷ್ಟು ಬೇಟೆಯ ಮಾಂಸವನ್ನು ಕಿತ್ತುಕೊಂಡವು. ದಿಗ್ಭ್ರಮೆಗೊಂಡ ಸಿಂಹ ಪುನಃ ಬೇಟೆ ಎಡೆಗೇ ಧಾವಿಸಿತು.

ನೀರಡಿಸಿದವನಿಗೆ ಬೊಗಸೆ ನೀರು ಸಿಕ್ಕಂತಾಗಿ ಕತ್ತೆ ಕಿರುಬಗಳೆಲ್ಲ ಉತ್ತೇಜಿತವಾಗಿದ್ದವು. ಅವು ಈಗ ಸಾಮೂಹಿಕವಾಗಿ ಕಿವಿ ಗಡಚಿಕ್ಕುವಂತೆ ಬೊಬ್ಬೆ ಇಡುತ್ತ, ಕಿಸಿ ಕಿಸಿ ನಗುತ್ತ, ಗುರು ಗುಟ್ಟುತ್ತ, ಬೇಟೆಯ ಸನಿಹಕ್ಕೆ ಬಂದು ದೂರ ಸರಿದು ನಾಟಕವಾಡುತ್ತ ಸಂಧಿ ಸಿಕ್ಕಾಗ ಸಿಂಹವನ್ನೇ ಗಾಯಗೊಳಿಸಿ ಹಿಂಸಿಸತೊಡಗಿದ್ದವು. ಎಷ್ಟಾದರೂ ಸಿಂಹ ವನರಾಜನಲ್ಲವೇ ? ಒಂದು ಗುಡುಗು ಹಾಕಿ ತನ್ನ ಮುಂಗಾಲಿನ ಅಗಲವಾದ ಪಂಜದ ನಖಗಳಿಂದ ಮರಿ ಕಿರುಬವೊಂದನ್ನು ಬಲವಾಗಿ ಹೊಡೆದು ಅದರ ಬಿಳಿ ಪಕ್ಕೆಲುಬುಗಳನ್ನೇ ಹೊರದೆಗೆಯಿತು. ಒಂದು ಹೋದರೇನು, ಇನ್ನೂ ಹತ್ತೊಂಬತ್ತು ಕಿರುಬಗಳು ಉಳಿದಿವೆಯಲ್ಲ ! ಅವು ಈಗ ಪುನಃ ಒಟ್ಟುಗೂಡಿ ಒಂದೇ ಸಮನೇ ಸಿಂಹದ ಹಿಂಗಾಲುಗಳನ್ನು ಹುಚ್ಚಾಪಟ್ಟೆ ಕಚ್ಚಲು ಆರಂಭಿಸಿದವು. ಈಗ ಮಾತ್ರ ವನರಾಜ ಸಿಂಹಾಸನದಿಂದ ಇಳಿಯಬೇಕಾಯಿತು ! ಆದರ ಎಲ್ಲ ಪ್ರಯತ್ನಗಳೂ ನಿರರ್ಥಕವಾಗಿದ್ದವು. ರಕ್ತ ಸುರಿಯುವ ಕಾಲಿಗೇ ಬುದ್ಧಿ ಹೇಳಬೇಕಾಯಿತು. ಸಿಂಹವೇ ಮರೆಯಾದ ಮೇಲೆ ಕೇಳುವುದೇನು ? ಕತ್ತೆ ಕಿರುಬಗಳಿಗೆ ಸಮೀಚೀನ ಭೋಜನ ! ಕೇವಲ ಹದಿನೈದು ನಿಮಿಷಗಳಲ್ಲಿ ಇಡೀ ಬೇಟೆ ಕತ್ತೆಕಿರುಬಗಳ ಜಠರಾಗ್ನಿಗೆ ಆಹುತಿಯಾಗಿ ಒಂದು ಹನಿ ರಕ್ತವೂ ಕಾಣದಷ್ಟು ಚೊಕ್ಕಟವಾಗಿತ್ತು ಆ ಹಸಿರು ಆಚ್ಛಾದಿತ ನೆಲ.

ಹೀಗಿದೆ ಕತ್ತೆ ಕಿರುಬಗಳ ಬೇಟೆ ಗತ್ತು ; ಮುದಿ ಹೆಣ್ಣು ಕಿರುಬದ ಗಮ್ಮತ್ತು. ಕತ್ತೆಯೂ ಅಲ್ಲದ ಕಿರುಬನೂ ಅಲ್ಲದ ಕತ್ತೆ ಕಿರುಬ ಹೈನಿಡೀ ಕುಟುಂಬಕ್ಕೆ ಸೇರಿದ

ಸಸ್ತನಿ ಮಾಂಸಾಹಾರಿ ★ ಬಿಹಾರ, ಬಂಗಾಲಗಳಲ್ಲಿ ಆಗಾಗ ಕಾಣಿಸುವುದುಂಟು. ಆದರೆ ಇವುಗಳ ತವರೂರು ಪೂರ್ವ ಆಫ್ರಿಕ, ವಿಶಾಲವಾದ ಹುಲ್ಲುಗಾವಲುಗಳಲ್ಲಿ ಬಿಲಗಳನ್ನು ತೋಡಿಕೊಂಡು ವಾಸಿಸುತ್ತವೆ.

ಬೊಜ್ಜು ಮೈಯುಳ್ಳ ಕತ್ತೆ ಕಿರುಬ ನೋಡಲು ಶ್ವಾನ ಸದೃಶ, ಗಾತ್ರದಲ್ಲಿಯೂ ಅಷ್ಟೆ. ಗಂಡು ಜೀವಿಗಿಂತಲೂ ಹೆಣ್ಣು ಕಿರುಬ ತುಸು ದೊಡ್ಡದು. ತಲೆ ಹಾಗೂ ಮುಂಭಾಗ ಸ್ಥೂಲ, ಹಿಂಭಾಗ ತುಸು ಹಗುರ ಹಾಗೂ ದುರ್ಬಲ. ಬೆನ್ನಿನ ಮಧ್ಯೆ ರೇಷ್ಮೆಯ ಕೂದಲುಗಳು ತುಸು ನೀಳ. ಬೇಟೆಗಾಗಿಯೇ ನಿರ್ಮಾಣಗೊಂಡಂತೆ ಚುರುಕು ಓಟದ ಬಲಶಾಲಿ ಕಾಲುಗಳು. ಮುಂಗಾಲುಗಳಿಗಿಂತ ಹಿಂಗಾಲು ಚಿಕ್ಕವು. ಆದರೆ ಹಿಂಗಾಲುಗಳ ಹೆಜ್ಜೆ ಗುರುತುಗಳಿಗಿಂತ ಮುಂಗಾಲಿನವು ದೊಡ್ಡವು. ಅಂಗಾಲುಗಳಲ್ಲಿ ಮೆತ್ತೆದಿಂಬು. ನಖಗಳು ಚಿಕ್ಕವು. ಗುದದ್ವಾರದಲ್ಲಿ ತೂಗಾಡುವ ಗುದಗ್ರಂಥಿ ಇದರ ವಿಶೇಷ ಲಕ್ಷಣ. ಸಾಲು ಹಲ್ಲುಗಳು. ಎಲವುಗಳನ್ನು ಕರಕರ ಕಡಿದು ಪುಡಿಮಾಡಬಲ್ಲ ಒಳ್ಳೆ ಕಸುವಿನ ದವಡೆ ಹಲ್ಲುಗಳು; ಯಾವ ಮಾಂಸಾಹಾರಿಯೂ ಕಣ್ಣೆತ್ತಿ ನೋಡದ ಬೇಟೆಯ ತಲೆಬುರುಡೆ ಕೂದಲು ಖುರ ಕರುಳು ಮುಂತಾದವುಗಳನ್ನು ಜೀರ್ಣಿಸಬಲ್ಲ ಅದರ ಪ್ರಬಲ ಪಾಚಕ ರಸಗಳು. ಮಂದ ಕಂದು ಬಣ್ಣದ ಮೈಗೂದಲು. ಮೈಮೇಲೆ ಮಚ್ಚೆಗಳು ಇಲ್ಲವೇ ಪಟ್ಟೆಗಳ ಗುರುತುಗಳು. ನೀರಿನಲ್ಲಿಯೂ ಸಲೀಸಾಗಿ ಈಜಬಲ್ಲ ಮೈ ಮಾಟ. ರಾತ್ರಿ ಸಂಚಾರಿ.

ಇವುಗಳದು ಅವಿಭಕ್ತ ಕುಟುಂಬ. ವೃದ್ಧ ಹೆಣ್ಣು ಕಿರುಬ ಮನೆಯ 'ಯಜಮಾನತಿ'. ಅವಳು ಹೇಳಿದ್ದೇ ವೇದವಾಕ್ಯ ! ಅವಳ ಆಳವಾದ ಅನುಭವ ಕುಟುಂಬದ ಇನ್ನಾವ ಸದಸ್ಯನಿಗೂ ಇರದು. ಬಾಳಿನುದ್ದಕ್ಕೂ ಕಷ್ಟ ಪರಂಪರೆಗಳನ್ನು ಕಂಡ ಜೀವವದು. ಯಾವುದೊಂದು ಹಿಂಸ್ರಪಶು ಬೇಟೆಯಾಡಿದ ಪ್ರಾಣಿಗಾಗಿ - ಅದು ಕೊಳೆತರೂ ಚಿಂತೆಯಿಲ್ಲ - ಗವಿಯ ಹೊರಗಡೆ ೫೦-೬೦ ಗಂಟೆಗಳ ವರೆಗೂ ಜೊಲ್ಲು ಸುರಿಸುತ್ತ ಕೂಡುವ ಸಹನೆ ಇದಕ್ಕೆ. ಆದರೆ ಪರಾನ್ನ ಭಿಕ್ಷೆಯ ಮೇಲೆಯೇ ಅವಲಂಬಿಸಿದ ಪ್ರಾಣಿಯಲ್ಲ. ಇದು ತನ್ನ ಸ್ವಂತ ಬಲದಿಂದ ಜೀಬ್ರಾಗಳಂಥ ದೈತ್ಯ ಪ್ರಾಣಿಗಳನ್ನು ನೆಲಕ್ಕುರುಳಿಸಬಲ್ಲದು. ಇಂಥ ಹೋರಾಟಗಳಲ್ಲಿ ಯಜ್ಞ ಪಶುಗಳ ಒದೆತ, ಕೋಡುಗಳ ಇರಿತ, ಸಿಂಹದ ಪಂಜುಗಳ ಹೊಡೆತ ಇನ್ನಿತರ

★ ಬಿಹಾರದ ಒಂದು ಹಳ್ಳಿಯಲ್ಲಿ 15-20 ದಿನಗಳ ವಯಸ್ಸಿನ ಕತ್ತೆಕಿರುಬದ ಮರಿಯನ್ನು ನೋಡುವ ಸುಸಂಧಿ ಈ ಲೇಖಕನಿಗೆ ಒದಗಿತ್ತು. ಮೈಮೇಲಿನ ಪಟ್ಟೆಗಳಿಂದ ಹಾಗೂ ಮೆತ್ತನ್ನ ಬೂದು ಬಣ್ಣದ ಕೂದಲುಗಳಿಂದ ಅದು ಚಿರತೆಯ ಮರಿಯಂತೆ ಕಾಣುತ್ತಿತ್ತು.

ಮಾಂಸಾಹಾರಿಗಳ ಕಡಿತದಿಂದುಂಟಾಗುವ ಅಸಂಖ್ಯ ಗಾಯಗಳ ಕಲೆಗಳಿಂದ ಮೈಮೇಲಿನ ಸ್ವಾಭಾವಿಕ ಮಚ್ಚೆಗಳೇ ಕಾಣದಿರುವುದುಂಟು. ಒಮ್ಮೊಮ್ಮೆ ಮಾರ್ಮಾಂತಿಕ ಪೆಟ್ಟು ಕಣ್ಣಿಗೆ ಬಿದ್ದಾಗ ಒಕಣ್ಣಿನಿಂದಲೇ ಶೇಷಾಯುಷ್ಯವನ್ನು ಕಳೆಯುವ ಪ್ರಸಂಗ ಬರಬಹುದು. ಇಲ್ಲವೆ ಬಲವಾದ ಹೊಡೆತಕ್ಕೆ ಮೇಲ್ತುಟಿ ಸೀಳಿ ಹಲ್ಲುಗಳು ಹೊರ ಕಾಣಿಸಿಕೊಂಡು ಕಿರುಬ ಸತತವಾಗಿ ಗುರುಗುಟ್ಟುತ್ತಿರುವಂತೆಯೇ ಕಾಣಬಹುದು. ಕಾಲು ಕುಂಟುತ್ತಿರಲಿ, ಜೀಬ್ರಾದ ಭಯಂಕರ ಒದೆತಕ್ಕೆ ತಲೆ ಗಿಮಿಗಿಮಿ ತಿರುಗುತ್ತಿರಲಿ, ವಯಸ್ಸಿನ ಭಾರದಿಂದ ಮೈದೊಗಲು ಜೋತು ಬಿದ್ದಿರಲಿ - ಆ ಮುದಿ ಹೆಣ್ಣು ಕಿರುಬ ಎಂಥ ಬೇಟೆಗೂ ಸಿದ್ಧ. ಮುದಿತನ ಅದರ ದೇಹಕ್ಕೆ, ಮನಸ್ಸಿಗಲ್ಲ.

ಹುಲ್ಲುಗಾವಲು ಪ್ರದೇಶದ ಪ್ರಾಣಿಗಳಾದ ಜಿಂಕೆ, ಜೀಬ್ರಾಗಳನ್ನು ಬೇಟೆಯಾಡುವ ಇವುಗಳ ಚಾಕಚಕ್ಯತೆ ಇನ್ನೊಂದು ಪ್ರಾಣಿಗೆ ಬಾರದು. ಹಗಲು ಸೋಮಾರಿಯಾಗಿ ಕೆಸರಿನಲ್ಲಿ ಮೈ ತಿಕ್ಕುತ್ತ ಬಿದ್ದುಕೊಂಡಿರುವುದು ಇವುಗಳ ಸ್ವಭಾವ. ಸಂಜೆಯ ಸೂರ್ಯ ಮರದ ನೆರಳನ್ನು ನೀಳವಾಗಿ ಚಾಚುತ್ತ ಮರೆಯಾಗುತ್ತಲೇ ಮುದಿಕತ್ತೆ ಕಿರುಬ ಕೆಸರಿನ ಕಂದಕದಿಂದ ಹೊರ ಬರುತ್ತದೆ. ಮೈ, ಬಾಲ, ಕಿವಿಗಳನ್ನು ಒಮ್ಮೆ ಬಲವಾಗಿ ಜಾಡಿಸಿ ಕೆಸರಿನ ಕಣಗಳನ್ನು ಉದುರಿಸಿ ಚುರುಕಾಗುತ್ತದೆ. ಕತ್ತಲೆ ಮೆಲ್ಲನೆ ಪಸರಿಸುತ್ತಲೇ ಈ ಮುದಿ ಹೆಣ್ಣು ಮೃದುವಾಗಿ, ಅಷ್ಟೇ ತೀಕ್ಷ್ಣವಾಗಿ ಬೊಬ್ಬೆ ಇಡುತ್ತದೆ. ಎಲ್ಲೋ ದೂರದಿಂದ ಸೀಳಿಕೊಂಡು ಬರುವ ಹಲವಾರು ಪ್ರತಿಬೊಬ್ಬೆಗಳಿಂದ ಅದು ಇನ್ನೂ ಉತ್ಸಾಹಿಯಾಗುತ್ತದೆ. ನೋಡನೋಡುವಷ್ಟರಲ್ಲಿ ಬಲಿಷ್ಠ ಗಂಡು ಕಿರುಬಗಳು, ಎಳೆ ವಯಸ್ಸಿನ ಹೆಣ್ಣು ಕಿರುಬಗಳು ಸೇರಿ ಹತ್ತು ಹನ್ನೆರಡು ಕತ್ತೆ ಕಿರುಬಗಳ ಒಂದು ತಂಡ ಸಿದ್ಧವಾಗುತ್ತದೆ. ಬೇಟೆಗೆ ವೇಳೆ ಆಯಿತೆಂಬ ಸಮಯಪ್ರಜ್ಞೆ ಅವುಗಳಿಗಿರಬೇಕು.

ಇಡೀ ತಂಡವು ಮೈಯೆಲ್ಲ ಕಣ್ಣಾಗಿ, ಕಣ್ಣೆಲ್ಲ ಕಿವಿಯಾಗಿ ತುಂಬಾ ಜಾಗರೂಕವಾಗಿ ನಿಂತುಕೊಳ್ಳುತ್ತದೆ. ಹುಲ್ಲು ಮೇಯ್ದು ಹೊಟ್ಟೆ ತುಂಬಿಸಿಕೊಂಡ ಜೀಬ್ರಾಗಳು ಕತ್ತಲಾಗುತ್ತಲೇ ತಮ್ಮ ತಮ್ಮ ವಾಸಸ್ಥಳಗಳಿಗೆ ಧಾವಿಸುತ್ತಿರುವಾಗ ಅವುಗಳ ಖುರಪುಟಗಳ ಧ್ವನಿ ಕೇಳಿಯೋ ಇಲ್ಲವೇ ಬೇಟೆ ಕೈಗೆ ಎಟುಕುವ ಅಂತರದಲ್ಲಿಯೇ ಇದೆ ಎಂಬ ಅಂತಃಸ್ಫೂರ್ತಿಯಿಂದಲೋ - ತಂಡದ 'ನಾಯಕಿ' ಓಡತೊಡಗುತ್ತಾಳೆ. ಉಳಿದವು ಚದುರು ಚದುರಾಗಿ ಹಿಂಬಾಲಿಸುತ್ತದೆ. ಚಿರತೆಯ ಗುರುಗುಟ್ಟುವಿಕೆಯಾಗಲಿ ಬಬೂನ್ ಕಪಿಯ ಬೊಗಳಿಕೆಯಾಗಲಿ ಧಾವಿಸುವ

ಕಿರುಬಗಳನ್ನು ವಿಚಲಿತವಾಗಿ ಮಾಡಲಾರವು. ಕಿರುಬಗಳು ಬೆನ್ನಟ್ಟಿ ಬರುವುದನ್ನು ಗುರುತಿಸಿದ ಜೀಬ್ರಾಗಳು ಹಿಂಬದಿಗೇ ಕಿವಿಗೊಟ್ಟು ಗರಗರ ತಿರುಗುತ್ತ ತೇಕುತ್ತ ಒದೆಯುತ್ತ, ಫೂತ್ಕರಿಸುತ್ತ, ಕಚ್ಚುತ್ತ ಪಾರಾಗಲು ಯತ್ನಿಸುತ್ತವೆ. ಗಂಟೆಗೆ ೨೫ ಕಿಲೋಮೀಟರು ವೇಗದಿಂದ ಓಡಬಲ್ಲ ೨೭೦ ಕಿಲೋಗ್ರಾಂ ದೇಹ ಭಾರದ ಜೀಬ್ರಾಗಳನ್ನು ಗಂಟೆಗೆ ೫೦ ಕಿಲೋಮೀಟರ್ ವೇಗದಿಂದ ಸಲೀಸಾಗಿ ಓಡುವ ೭೦ ಕಿಲೋಗ್ರಾಂ ತೂಕದ ಕತ್ತೆ ಕಿರುಬಗಳು ಲೀಲಾಜಾಲವಾಗಿ ಬೆನ್ನಟ್ಟಿ ಹಿಂದೆ ಹಾಕಬಲ್ಲವು. ಜೀವದ ಆಸೆಗಾಗಿ ಓಡುವ ಜೀಬ್ರಾಗಳನ್ನು ಜೀವದ ಹಂಗುದೊರೆದು ಹಿಂಸಿಸುವ ಮುದಿ ಹೆಣ್ಣು ಕಿರುಬದ ಚಾಣಾಕ್ಷ ತಂತ್ರಗಳನ್ನು ನೋಡಬೇಕು. ಓಡುವ ಭಂಗಿಯಲ್ಲಿಯೇ ಟಣ್ಣನೆ ಜೀಬ್ರಾದ ದೇಹದ ಕೆಳಕ್ಕೆ ಸರಿದು ಬೇಟೆಯ ಕಾಲುಗಳ ತುಳಿತಕ್ಕೆ ಸಿಕ್ಕದಂತೆ ಜಾಗ್ರತೆ ವಹಿಸಿ ಕ್ಷಣಾರ್ಧದಲ್ಲಿ ಉದರ ಭಾಗವನ್ನು ಕಚ್ಚಿ ಹೊರಬರುತ್ತದೆ. ಸಂಧಿ ಸಾಧಿಸಿ ಬೇಟೆಯ ಹಿಂಬದಿಗೆ ಬಂದು ಅದರ ಕಾಲುಗಳನ್ನು ಬಲವಾಗಿ ಕಚ್ಚಿ ಮರ್ಮಾಂತಿಕ ಗಾಯವನ್ನು ಮಾಡುತ್ತದೆ. ಈ ಸಾಹಸದಲ್ಲಿ ಕತ್ತೆ ಕಿರುಬಗಳು ಎದುರಿಸುತ್ತಿರುವ ಗಂಡಾಂತರಗಳೇನೂ ಕಡಿಮೆ ಇಲ್ಲ. ಜೀಬ್ರಾದ ಕಾಲಿನ ಪ್ರಬಲ ಒದೆತಕ್ಕೆ ಕತ್ತೆ ಕಿರುಬದ ಒಂದು ಕಣ್ಣು ಗುಡ್ಡೆಯೇ ಕಿತ್ತುಕೊಂಡು ಹೋಗಬಹುದು. ಇಲ್ಲವೆ ಆ ಹೊಡೆತ ಚಿಕ್ಕ ವಯಸ್ಸಿನ ಕಿರುಬಕ್ಕೆ ಬಿದ್ದರೆ ಅದು ತರಗೆಲೆಯಂತೆ ಮೇಲೆ ನೆಗೆದು ಕೆಳಕ್ಕೆ ಬಿದ್ದು ತಕ್ಷಣ ಪ್ರಾಣಕ್ಕೆರವಾಗಬಹುದು.

ಗಾಯಗೊಂಡ ಜೀಬ್ರಾ ಕುಂಟುತ್ತ ಓಡವುದು ಅನಿವಾರ್ಯವಾಗಿ ಹಿಂದುಳಿಯುತ್ತದೆ. ಆಗ ಕತ್ತೆ ಕಿರುಬಗಳು ಆ ಜೀಬ್ರಾವನ್ನು ಕಂಡಲ್ಲಿ ಕಚ್ಚಿ ನೆಲಕ್ಕುರುಳಿಸುತ್ತವೆ. ಎಲ್ಲ ಬೇಟೆಗಳೂ ಯಶಸ್ವಿಯಾಗುತ್ತವೆಂತಲ್ಲ. ಇಂಥ ಮೂರು ಬೇಟೆಗಳಲ್ಲಿ ಒಂದು ಮಾತ್ರ ಸಫಲವಾಗುವುದುಂಟು.

ಒಂದೊಂದು ವರುಷ ಅನಾವೃಷ್ಟಿಯಿಂದ ಹುಲ್ಲಿನ ಅಭಾವವಾದಾಗ ಜಿಂಕೆ ಜೀಬ್ರಾಗಳಂಥ ಸಸ್ಯಾಹಾರಿಗಳು ವಲಸೆ ಹೋಗುವುದುಂಟು. ಆಗ ಕತ್ತೆ ಕಿರುಬಗಳು ವಿರಳವಾಗಿ ಸಿಗುವ ಸಣ್ಣ ಬೇಟೆಗಳನ್ನು ತಿಂದು ಅರೆಹೊಟ್ಟೆಯಿಂದಲೋ ಇಲ್ಲವೆ ನಿರಾಹಾರವಾಗಿಯೋ ಜೀವಿಸುತ್ತವೆ. ಇಂಥ ಪ್ರತಿಕೂಲ ಪರಿಸ್ಥಿತಿಗಳಲ್ಲಿ ಪ್ರಬಲವಾದ ಗಂಡು ಕಿರುಬಗಳಾಗಲಿ ಚಿರತೆ ಸಿಂಹಗಳಂಥ ಹಿಂಸ್ರಪಶುಗಳಾಗಲಿ ಕತ್ತೆ ಕಿರುಬಗಳ ಬಿಲಗಳ ಮೇಲೆ ದಾಳಿಯಿಕ್ಕಿ ಮರಿಗಳನ್ನು ನಿರ್ದಯವಾಗಿ ಬಾಯಲ್ಲಿ ಕಚ್ಚಿ ಒಯ್ಯುತ್ತವೆ. ಅವುಗಳ ಸಾವನ್ನು ಕಣ್ಣೆದುರಿನಲ್ಲಿಯೇ ನೋಡುತ್ತ ತಾಯ್ತನವನ್ನು ಶಪಿಸುತ್ತ ನಿಲ್ಲುತ್ತವೆ ಅಸಹಾಯಕವಾದ ಹೆಣ್ಣು ಕತ್ತೆ ಕಿರುಬಗಳು.


***

೫. "ಹೆಂಡತಿಗೆ ಹೆದರುವ ಗಂಡಂದಿರು"

ಕೆಲವು ಜಾತಿಯ ಗಂಡು ಪ್ರಾಣಿಗಳು ಮನೆ ಕಟ್ಟಿ, ಮೊಟ್ಟೆಗಳನ್ನು ಇಡಿಸಿ, ಕಾವು ಕೊಟ್ಟು ಮರಿ ಮಾಡುತ್ತವೆ. ಪುತ್ರ ವಾತ್ಸಲ್ಯ ಅತಿರೇಕವಿದ್ದ ಇನ್ನು ಕೆಲವು, ಮರಿಗಳನ್ನು ನಿರಂತರವೂ ತಲೆಯ ಮೇಲೆ ಹೊತ್ತುಕೊಂಡೇ ತಿರುಗುತ್ತವೆ. ಆಹಾರಾನ್ವೇಷಣೆ ಮಾಡಿ ಹೆಂಡಂದಿರಿಗೆ, ಮರಿಗಳಿಗೆ ಉಣಿಸುವುದೂ ಉಂಟು. ಇವುಗಳಲ್ಲಿ ಹೆಣ್ಣೋ ನಿಶ್ಚಿಂತೆಯಿಂದ ತನ್ನ ಕೆಲಸವೇ ಬೇರೆ ಎಂಬಂತೆ ಸ್ವೇಚ್ಛಾಚಾರಿಯಾಗಿ ತಿರುಗುತ್ತದೆ.

ಪ್ರಾಣಿಗಳಲ್ಲಿ ಸುಸ್ಪಷ್ಟವಾಗಿ ಕಾಣುವ ಈ ಸ್ತ್ರೀವಶ ಬುದ್ಧಿಯ ಕಾರಣವು ವಿಜ್ಞಾನಕ್ಕೆ ಸಮಸ್ಯೆಯಾಗಿದೆ. ಇಂಥ 'ಭೋಳೆ' ಗಂಡುಗಳು ಹೆಚ್ಚಾಗಿ ಕಾಣಸಿಗುವುದು ಮೀನು, ದ್ವಿಚರ ಹಾಗೂ ಪಕ್ಷಿ ವರ್ಗಗಳಲ್ಲಿ.

ಸ್ಟಿಕಲ್ ಬ್ಯಾಕ್ (Stickleback) ಎಂಬುದೊಂದು ಸಿಹಿ ನೀರಿನಲ್ಲಿ ಸಿಗುವ ಚಪಲವಾದ ಮೀನು. ಆಶೆಬುರುಕವಾದರೂ ಅದರ ಜೀವನ ವೈಭವಪೂರ್ಣ ವಾದುದು. ಮೊದಲು ಹುಲ್ಲು ಕಡ್ಡಿಗಳ ಸಹಾಯದಿಂದ ನೀರಿನಲ್ಲಿಯೇ ಸೇಬು ಹಣ್ಣಿನಾಕಾರದ ಸುಂದರ ಮನೆಯನ್ನು ಕಟ್ಟಿಕೊಳ್ಳುತ್ತದೆ. ಈ ಮನೆಗೆ ಎರಡು ಬಾಗಿಲುಗಳು - ಒಂದರಿಂದ ಪ್ರವೇಶ, ಇನ್ನೊಂದರಿಂದ ನಿರ್ಗಮನ. ಪ್ರಿಯಾರಾಧನೆ ಸಮಯ ಸನ್ನಿಹಿತವಾದಾಗ ಕೆಂಪು ಬಣ್ಣವನ್ನು ಧರಿಸುತ್ತದೆ. ಈ ಆಕರ್ಷಕ ವರ್ಣ ವೈಖರಿಯನ್ನು ಪ್ರದರ್ಶಿಸಿ, ಸಂಗಾತಿಯನ್ನು ಬೆರಗುಗೊಳಿಸಿ, ಅವಳ ಪ್ರೇಮಯಾಚನೆ ಮಾಡುತ್ತದೆ. ಅವಳ ಮನವೊಲಿಸಿ ತಾನು ಕಟ್ಟಿದ ಮನೆಯೊಳಗೆ ಮೊಟ್ಟೆಗಳನ್ನಿಡುವಂತೆ ಪ್ರೇರೇಪಿಸುತ್ತದೆ. ಮೊಟ್ಟೆಗಳು ದೊರೆತ ಮರುಕ್ಷಣದಲ್ಲಿಯೇ ಲೋಭಿ ಗಂಡನು ಬಣ್ಣಕ್ಕೆ ಮೆಚ್ಚಿ ಬಂದ ಹೆಣ್ಣನ್ನು ನಿರ್ಗಮನ ದ್ವಾರದಿಂದ ಹೊರ ದೂಡುತ್ತಾನೆ. ತಾನು ಪ್ರವೇಶ



ದ್ವಾರದಿಂದ ಒಳಸೇರಿ ಮೊಟ್ಟೆಗಳನ್ನು ಫಲವತ್ತಾಗಿ ಮಾಡುತ್ತಾನೆ. ಮನೆ ತುಂಬದ ಮೊಟ್ಟೆಗಳನ್ನು ಕಂಡು ಅತೃಪ್ತವಾದ ಗಂಡು ಇನ್ನೊಂದು ವಧುವಿನ ಶೋಧನೆಯಲ್ಲಿ ತೊಡಗುತ್ತದೆ. ಮೊಟ್ಟೆಗಳಿಂದ ಮನೆ ತುಂಬುವವರೆಗೂ ಅದು ತನ್ನ 'ಬಹುಪತ್ನಿತ್ವ' ವ್ರತವನ್ನು ಬಿಡಲಾರದು. ಒಮ್ಮೆ ಮನೆ ತುಂಬಿತೆಂದರೆ ಆತ್ಯಂತಿಕ ಪ್ರೀತಿಯಿಂದ ಮನೆಯನ್ನು ಕಾಯತೊಡಗುತ್ತದೆ. ಬೇರೆ ಯಾವುದಾದರೂ ಪ್ರಾಣಿ ಸನಿಹದಲ್ಲಿ ಸುಳಿದರೂ ಸಾಕು, ಅದನ್ನು ಧೈರ್ಯದಿಂದ ಎದುರಿಸುತ್ತದೆ. ಹತ್ತು ಹನ್ನೆರಡು ದಿನಗಳಲ್ಲಿ ಮೊಟ್ಟೆಗಳೊಡೆದು ಮರಿಗಳು ಹೊರಬಂದಾಗಲೂ ಅವುಗಳ ಯೋಗಕ್ಷೇಮವನ್ನು ಸಾಧು ತಂದೆಯೇ ನೋಡಿಕೊಳ್ಳುತ್ತಾನೆ.

'ಗಂಡು ತಾಯ್ತನ'ದ ಇನ್ನೊಂದು ವಿಚಿತ್ರ ವರ್ತನೆಗೆ ಸಮುದ್ರ - ಕುದುರೆ (Sea - horse) ಎಂಬ ಮೀನು ಸಾಕ್ಷಿ. ಈ ಮೀನಿನ ಹೊಟ್ಟೆಯ ಹೊರಭಾಗಕ್ಕೆ ತೊಗಲಿನ ಮಡಿಕೆಗಳಿಂದ ನಿರ್ಮಿತವಾದ ಒಂದು ಕೃತಕ ಗರ್ಭಾಶಯವಿರುತ್ತದೆ.



ಸಮುದ್ರ ಕುದುರೆ

ವಿಕಟ ವಿಗ್ರಹದಂತಿರುವ ದಂಪತಿಗಳೆರಡೂ ಸಂಭೋಗಪೂರ್ವದಲ್ಲಿ ನೃತ್ಯ ಮಾಡುತ್ತವೆ. ಈ ಗಂಡು ಮೀನಿನಷ್ಟು ಕರುಣಾಜನಕ ಪ್ರಾಣಿ ಇನ್ನೊಂದು ಇರಲಿಕ್ಕಿಲ್ಲ. ಹೊಟ್ಟೆಗೆ ಅಂಟಿಕೊಂಡ ಬರಿದಾದ 'ಸಂಚಾರಿ ಚೀಲ'ವನ್ನು ತನ್ನ ಸಂಗಾತಿಯ ಎದುರು ಹಿಡಿದು ಅದೆಷ್ಟು ದೈನ್ಯದಿಂದ ಮೊಟ್ಟೆಗಳ ಭಿಕ್ಷೆ ಬೇಡಿದರೂ ಆ ನಿಷ್ಠುರ ಹೆಣ್ಣು ಮುಖ ತಿರುಗಿಸುವುದೇ ಹೆಚ್ಚು. ಅಸಹಾಯಕವಾದ ಗಂಡು ಇನ್ನೂ ವಿನಯಿಯಾಗಿ ಮೊಟ್ಟೆಚೀಲವನ್ನು ಇನ್ನೊಂದು ವಧುವಿನೆದುರು ಒಡ್ಡುತ್ತದೆ. ಯಾವುದೊಂದು ದಯಾಮಯಿ ಹೆಣ್ಣು ಕನಿಕರಗೊಂಡು ಬಾಗಿಲಿಗೆ ಬಂದು ನಿಂತ ಗಂಡು ಮೀನನ್ನು ಪತಿ ಎಂದು ಗ್ರಹಿಸಿ ಅವನ 'ಜೇಬಿ'ನಲ್ಲಿ ಸುಮಾರು ಎರಡು ನೂರು ಮೊಟ್ಟೆಗಳನ್ನು ಹಾಕುತ್ತಾಳೆ. ಸಂತೃಪ್ತನಾದ ಗಂಡನು ಮೊಟ್ಟೆಗಳನ್ನು ಫಲವತ್ತಾಗಿ ಮಾಡಿ ತನ್ನ ಕೃತ್ರಿಮ ಗರ್ಭಾಶಯದ ಬಾಯಿಯನ್ನು ಅಂಟಿನಂಥ ದ್ರವದಿಂದ ಮುಚ್ಚಿಕೊಳ್ಳುತ್ತಾನೆ. ಬೆಳೆಯುವ ಮೊಟ್ಟೆಗಳನ್ನು ಹೊತ್ತು ತಿರುಗುವ ಈ ಮೀನು


ಒಂದು ಪ್ರಾಣಿಯಂತೆ ಕಾಣದೆ ಚಲಿಸುವ ಸಜೀವ ಇನ್‌ಕ್ಯುಬೇಟರ್ (ಶಾಖಕೊಡುವ ಕೃತ್ರಿಮ ಉಪಕರಣ)ದಂತೆ ಕಾಣುತ್ತದೆ. ಈ ರೀತಿ ಬಸಿರು ಹೊತ್ತ ಗಂಡು ಕೆಲವೇ ದಿನಗಳಲ್ಲಿ ಅನೇಕ ಮರಿ ಮೀನುಗಳಿಗೆ ಜನ್ಮ ಕೊಡುತ್ತದೆ. ಮರಿಗಳು ಹುಟ್ಟುವ ಪೂರ್ವದಲ್ಲಿ ಗಂಡುಮೀನಿಗೆ 'ಪ್ರಸವವೇದನೆ'ಯ ಅನುಭವವೂ ಆಗುತ್ತದೆ ! ಹೊರಬಂದ ಮರಿಗಳು ತಂದೆಯ ದವಡೆ, ತಲೆ, ಬೆನ್ನುಗಳಿಗೆ ಅಂಟಿಕೊಂಡು ತಂದೆ ಹೋದಲ್ಲೆಲ್ಲ ತಾವೂ ಈಜುತ್ತವೆ. ಪಿತೃತ್ವ ಹಂಬಲದ ಪರಮಾವಧಿಯನ್ನು ತಲುಪಿದ ಇಂಥ ಪ್ರಾಣಿಗಳು ತುಂಬಾ ವಿರಳವೆನ್ನಬಹುದು.

ಉದ್ದವಾದ, ತೆಳು ದೇಹದ ಕೊಳವೆಮೀನು (Pipe - fish) ಸಮುದ್ರ ಕುದುರೆಯ ಕಕ್ಕನ ಮಗ. ಈ ಮೀನಿನ ದೇಹದಲ್ಲಿ ಎಲುಬಿನ ಹೊರತು ಇನ್ನೇನೂ ಸಿಗಲಾರದು. ಇದರ ಗಂಡು ಸರ್ವೋತ್ಕೃಷ್ಟ 'ದಾಯಿ' ಎಂದು ಹೆಸರು ಗಳಿಸಿದೆ. ಸಮುದ್ರ ಕುದುರೆಗಿರುವಂತೆ ಇದರ ಹೊಟ್ಟೆಯ ಹೊರಬದಿಗೂ ಕೃತಕ ಗರ್ಭಾಶಯವಿರುತ್ತದೆ. ಆದರೆ ಅದು ಸಂಪೂರ್ಣವಾಗಿ ಕೃತಕವಾಗಿರದೆ ಒಳ ಬದಿಯು ಸ್ಪಂಜಿನಂತಹ ಅಂಗಾಂಶದಿಂದ ಆಚ್ಛಾದಿತವಾಗಿರುತ್ತದೆ. ಹಾಗೂ ಅದರಲ್ಲಿ ಅಸಂಖ್ಯಾತ ರಕ್ತನಾಳಗಳು ಇರುತ್ತವೆ. ರಕ್ತ ನಾಳಗಳ ಜಾಲದಲ್ಲಿ ಹುದುಗುವ ಮೊಟ್ಟೆಗಳಿಗೆ ಸಸ್ತನಿಯ ಭ್ರೂಣದಂತೆ ಪೋಷಕ ಆಹಾರದ ಪೂರೈಕೆಯಾಗುತ್ತದೆ. ಹೆಣ್ಣಿಗೆ ಇದಾವ ಪರಿವೆಯೂ ಇಲ್ಲ ; ಚಿಂತೆಯೂ ಇಲ್ಲ.

ಚೀನಾ ದೇಶದಲ್ಲಿ ಸಿಗುವ ಪ್ಯಾರಾಡೈಸ್‌ಮೀನು (Paradise fish) ಹೀಗೆಯೇ. ಉಜ್ವಲ ಮೈಬಣ್ಣದ ಗಂಡುಮೀನುಗಳು ಗಾತ್ರದಲ್ಲಿ ಚಿಕ್ಕವು ; ಆದರೆ ಸಂಖ್ಯೆಯಲ್ಲಿ ಹೆಣ್ಣಿಗಿಂತ ತೀರ ವಿರಳ ವಾದವುಗಳು. ಹೆಸರಿನ ಸಾರ್ಥಕತೆ ಪಡೆಯಲು ತನ್ನ ಮನೆಯೂ ಮುತ್ತಿನ ಮನೆಯಂತಿರಬೇಕೆಂಬುದು ಇದರ ಆಶೆ. ಗಂಡು ಮೀನು ನೀರಿನ ಪಾತಳಿಗೆ ಬಂದು ಬಾಯಿ ಯಲ್ಲಿ ನೀರು ತುಂಬಿ ಕೊಂಡು ಒಳಗಿನ ಜಿಗುಟು ದ್ರವದೊಂದಿಗೆ ಒಳ್ಳೇ ರಭಸದಿಂದ




ಉಗುಳುತ್ತದೆ. ಈವಿಚಿತ್ರ 'ಪಿಚಕಾರಿ'ಯಿಂದುಂಟಾ ಗುವ ಅಸಂಖ್ಯಾತ ಗುಳ್ಳೆಗಳು ಅಪ್ಸರೆ ಯರಿಗೆ ಶೋಭಿಸು ವಂಥ ಬುರುಗಿನ ಅರಮನೆಯನ್ನು ನಿರ್ಮಿಸುತ್ತವೆ. ತರುವಾಯ ಗಂಡು ಮೀನು ತನ್ನ 'ಸಖಿ'ಯನ್ನು ಶೋಧಿಸಿ ರತಿ ಕ್ರೀಡೆಗಾಗಿ ಸಿಹಿಮಾತಿನಿಂದ ಕರೆಯುತ್ತದೆ. ವಿರೋಧ ಬಂದರೆ



ಒತ್ತಾಯದಿಂದ ಎಳೆಯುತ್ತದೆ. ಒಲಿದು ಬಾರದ ಮುನಿಸು ಹೆಣ್ಣು ಮನಬಂದಂತೆ ಮೊಟ್ಟೆಗಳನ್ನಿಟ್ಟು 'ವಿವಾಹ - ವಿಚ್ಛೇದನೆ' ಪಡೆಯುತ್ತಾಳೆ. ಲೋಭಿಯಾದ ಗಂಡನು ಎಲ್ಲ ತತ್ತಿಗಳನ್ನೂ ಗಪಗಪನೆ ಬಾಯಿಯಲ್ಲಿ ಸಂಗ್ರಹಿಸಿ ತೇಲುವ 'ರಾಜಗೃಹ'ದಲ್ಲಿ ಇರಿಸುತ್ತಾನೆ. ತಂದೆ ಈಗ ತೇಲುವ ಮನೆಯ ಕಾವಲುಗಾರ ! ಮರಿಗಳು ಹೊರ ಬರುವವರೆಗೂ ಅವನ ನಿತ್ಯ ಕಾವಲು ತಪ್ಪಿದ್ದಲ್ಲ.

ಪುತ್ರ ವಾತ್ಸಲ್ಯವನ್ನು ಅತಿರೇಕಕ್ಕೆ ಒಯ್ದ ಇನ್ನೊಂದು ಪ್ರಾಣಿ ಸಮುದ್ರದ ಕ್ಯಾಟ್ ಮೀನು (Cat fish) ತನ್ನ ಬಾಯಿಯನ್ನೇ ತಾತ್ಕಾಲಿಕ ಗರ್ಭಾಶಯವನ್ನಾಗಿ ಮಾಡಿಕೊಂಡಿದೆ. ಹೆಂಡತಿ ಮೊಟ್ಟೆಗಳನ್ನು ಇಡುತ್ತಲೇ ಅವುಗಳನ್ನು ಪಟಪಟನೆ ಬಾಯಿಯಲ್ಲಿ ಸೇರಿಸಿಕೊಳ್ಳುತ್ತದೆ. ಬೆಳೆಯುವ ಅಂಡಗಳನ್ನು ಬಾಯಿಯಲ್ಲಿಟ್ಟು




ಕೊಂಡು ಜತನದಿಂದ ವಿಹರಿಸುತ್ತದೆ. ಅವು ಒಡೆದು ಮರಿಯಾಗಲು ಎರಡು ತಿಂಗಳು ಅವಧಿ ಯಾದರೂ ಬೇಕು. ಆ ವರೆಗೂ 'ಶಿಶು - ಹಂಬಲದ ' ಗಂಡು ಮೀನಿಗೆ ಅಖಂಡ ಉಪವಾಸ! ಮರಿಗಳು ಹೊರಬಂದಾಗ ಆಕಸ್ಮಿಕ ಗಂಡಾಂತರ ಬಂದರೆ ಪುನಃ ತಂದೆಯ ಬಾಯಿಯೇ ರಕ್ಷಣಾ ಕ್ಷೇತ್ರ !

ನಮ್ಮ ದೇಶದ ಕರಾವಳಿಯಲ್ಲಿ ಸಿಗುವ ಮತ್ತೊಂದು ಚಿಕ್ಕ ಮೀನು ಸಾಧು ಸ್ವಭಾವದ ಗಂಡಂದಿರ ಗುಂಪಿಗೆ ಸೇರಿದುದು. ಇದರ ತಲೆಯ

ಮುಂಭಾಗದಲ್ಲಿ ಉದ್ದ ವಾದ ಎಲುವಿನ ಕೊಕ್ಕೆ ಇರುತ್ತದೆ. ಹೆಣ್ಣು ಮೀನು ತತ್ತಿಗಳನ್ನು ಎರಡು ಗುಂಪುಗಳನ್ನಾಗಿಟ್ಟು, ಸೂಕ್ಷ್ಮ ಎಳೆಯಿಂದ ಜೋಡಿಸಿ, ಬರಲಿರುವ ಪ್ರೇಮಾರಾಧಕನಿಗೆ ಪೂ ಮಾಲೆಯನ್ನು ಸಿದ್ಧ ಗೊಳಿಸುತ್ತದೆ. ಗಾಂಧರ್ವ ವಿವಾಹ ಪದ್ಧತಿಯಂತೆ ಸಮುದ್ರರಾಜನ ಸಾಕ್ಷಿಯಾಗಿ ಆ ಭಾರವಾದ ಹೊಣೆಗಾರಿಕೆಯ 'ಪೂಮಾಲೆ' ಯನ್ನು ಗಂಡನ ಕೊಕ್ಕಿನಲ್ಲಿ ಸಿಕ್ಕಿಸಿ ತೃಪ್ತಳಾಗಿ ಮೆಲ್ಲನೆ ಅಲ್ಲಿಂದ ಕಾಲ್ದೆಗೆಯುತ್ತಾಳೆ.

ಕಪ್ಪೆಯ ಜಾತಿಗೆ ಸೇರಿದ ಎರಡು ಪ್ರಾಣಿಗಳು ಉತ್ಕ್ರಾಂತಿಯ ದಾರಿಗುಂಟ ತಮ್ಮ ಪೂರ್ವಜರ (ಮೀನುಗಳ) 'ಪಿತೃತ್ವಹಂಬಲ' ವನ್ನು ಕಾಯ್ದುಕೊಂಡು ಬಂದಿವೆ. ಫ್ರಾನ್ಸ್, ಇಟಲಿ ದೇಶಗಳಲ್ಲಿ ಸಿಗುವ ದಾಯಿ - ನೆಲಗಪ್ಪೆಯು ತುಂಬಾ ಚಿತ್ತಾಕರ್ಷಕ ಉದಾಹರಣೆ. ಗಂಡು ಕಪ್ಪೆ ತನ್ನ ಸಂಗಾತಿಯ ಗುದದ್ವಾರವನ್ನು ತನ್ನ 'ಕೈಗಳಿಂದ ' ಶ್ರದ್ಧಾಪೂರ್ವಕವಾಗಿ ಮೆಲ್ಲನೆ ತಿಕ್ಕುತ್ತದೆ. ಈ ರಮಿಸುವ ಉಪಚಾರ ಮುಗಿದ ನಂತರ ಹೆಣ್ಣು ಬಹಳೇ ಪ್ರಯಾಸದಿಂದ ಗೊಂಚಲ ಗೊಂಚಲಾಗಿ ಮೊಟ್ಟೆಗಳನ್ನು ಹೊರಹಾಕುತ್ತದೆ. ಕೂಡಲೇ ಗಂಡು ಅವುಗಳನ್ನು ಫಲವತ್ತಾಗಿ ಮಾಡಿ ತನ್ನ ಹಿಂಗಾಲುಗಳಿಗೆ ಸುತ್ತಿಕೊಳ್ಳುತ್ತದೆ. ಗಂಡನು ತುಂಬಾ ಜಾಗ ರೂಕನಾಗಿ ಮೆಲ್ಲನೆ ಸರಿಯುತ್ತ ಭೂ ಗರ್ಭದಲ್ಲಿ ಯಾವು ದೊಂದು ಅಂಧಃಕಾರ ಮಯವಾದ, ತೇವು ಇರುವ ಅಜ್ಞಾತ 'ಜೇಲಿ' ಗೆ ಸಾಗುತ್ತಾನೆ. ಮದುವೆಯ ಮೊದಲ ರಾತ್ರಿಗೇ ಕತ್ತಲು ಜೇಲಿನ ಸಹವಾಸ ಇವನಿಗೆ! ನಿಃಶಬ್ದ ವಾದ ರಾತ್ರಿಯಲ್ಲಿ ಕಳ್ಳನಂತೆ ಹೊರಸುಳಿದು, ಬದಿಗಿದ್ದ ಜಲಾಶಯದಲ್ಲಿ ಮುಳುಗಿ, ಬೆಳೆಯುವ ಮೊಟ್ಟೆಗಳಿಗೂ 'ಅಭ್ಯಂಜನ' ಮಾಡಿಸಿ ಪುನಃ ತನ್ನ ಗುಹೆಯನ್ನು ಸೇರುತ್ತದೆ ಬಾಣಂತಿ ಗಂಡು. ಮೊಟ್ಟೆಗಳು ದೊಡ್ಡ ಆಕಾರದವು



ಇದ್ದು ಭ್ರೂಣದ ಪೂರ್ಣ ಬೆಳವಣಿಗೆಗೆ ಸಾಕಾಗುವಷ್ಟು ಪೋಷಕ ಆಹಾರದ ಸಂಗ್ರಹವೂ ಅವುಗಳಲ್ಲಿ ಇರುತ್ತದೆ. ಮರಿಗಳು ಹೊರ ಬರುವ ಲಕ್ಷಣವನ್ನು ಒಳದನಿಯೊಂದು ಸೂಚಿಸುವವರೆಗೂ ಕೋಮಲ ಸ್ವಭಾವದ ಗಂಡು ಕೂಳು ನೀರಿನ ಪರಿವೆ ಇಲ್ಲದೆ ಮೊಟ್ಟೆಗಳನ್ನು ಕಾಪಾಡುತ್ತದೆ. ಮೊಟ್ಟೆ ಒಡೆಯುವುದು ಸೂಚ್ಯವಾಗಿ ತಿಳಿದೊಡನೆ ಸ್ವಲ್ಪವೂ ವಿಳಂಬ ಮಾಡದೆ ಸನಿಹದ ಜಲಾಶಯಕ್ಕೆ ಮೆಲ್ಲನೆ ಜಿಗಿದು ಮರಿಗಪ್ಪೆಗಳನ್ನು ನೀರಿಗೆ ಬಿಡುತ್ತದೆ.

ಚಿಲಿ ದೇಶದ ಡಾರ್ವಿನ್ - ಕಪ್ಪೆ (Darwin's Frog) ಹೆಂಡತಿಯ ಕೆಲಸವನ್ನು ವಹಿಸಿಕೊಂಡ ಇನ್ನೊಂದು ಬಡಪ್ರಾಣಿ. ಗಂಡು ಕಪ್ಪೆಯ ಮುಖದ ಎಡಬಲಗಳಲ್ಲಿ ಒಂದೊಂದು ಧ್ವನಿಕೋಶಗಳಿರುತ್ತವೆ. ಉತ್ಪಾದನಾ ಋತುವಿನಲ್ಲಿ ಧ್ವನಿಕೋಶಗಳು ಸಂಗಾತಿಯನ್ನು ಕರೆಯುವ ಸಿಗ್ನಲ್‌ಗಳಂತೆ ಉಪಯೋಗವಾಗುತ್ತವೆ. ಪ್ರಣಯಚೇಷ್ಟೆ ಮುಗಿದ ನಂತರ ಆ ಕೋಶಗಳೇ ಮೊಟ್ಟೆಗಳ ಬೆಳವಣಿಗೆಯ ಕೃತಕ ಗರ್ಭಾಶಯಗಳಾಗುತ್ತವೆ. ಹೆಂಡತಿ ಎಷ್ಟು ಚಪಲಳಾಗಿ ಮೊಟ್ಟೆಗಳನ್ನು ಹೊರಹಾಕುವಳೋ, ಅದಕ್ಕಿಂತ ಇಮ್ಮಡಿ ಚಪಲತೆಯಿಂದ ಗಂಡನು ಅವುಗಳನ್ನು ಬಾಯಿಯೊಳಗೆ ನುಗ್ಗಿಸಿಕೊಳ್ಳುತ್ತಾನೆ.

ಮೊಟ್ಟೆಗಳು ಬೆಳೆದಂತೆಲ್ಲ, ಸ್ಥಿತಿಸ್ಥಾಪಕ ಗುಣದ ಕೋಶಗಳೂ ಹಿಗ್ಗಿ, ಮುಖದ ಕೆಳಭಾಗವನ್ನೂ ವ್ಯಾಪಿಸಿ ಕೊನೆಗೆ ಇಡೀ ದೇಹವನ್ನೇ ಬಳಸಿ ನಿಂತಾಗ - ಆ ವಿದ್ರೂಪಿ ಗಂಡನ ಗೋಳು ಅವನನ್ನು ಹುಟ್ಟಿಸಿದವನಿಗೇ ಗೊತ್ತು !

ಏಶಿಯಾ, ಆಫ್ರಿಕಾ ಮತ್ತು ಆಸ್ಟ್ರೇಲಿಯಗಳಲ್ಲಿ ಸಿಗುವ ಟರ್ನಿಕ್ಸ್ (Turnix) ಎಂಬ ಪಕ್ಷಿ ಸ್ತ್ರೀವಶ ಬುದ್ಧಿಯದು. ಹೆಣ್ಣು ಗಾತ್ರದಲ್ಲಿ ಗಂಡಿಗಿಂತ ತುಸು ದೊಡ್ಡದು. ಮೈಬಣ್ಣ ಕಾಂತಿಯುಳ್ಳದ್ದು ಹಾಗೂ ಮಿಲನಕ್ಕೆ ಪ್ರೋತ್ಸಾಹ ಕೊಡುವಂತಹದು ಸಂಗಾತಿಯನ್ನಾಕರ್ಷಿಸಲು ಮೃದುವಾದರೂ ಎತ್ತರವಾದ ಗಂಭೀರ ಧ್ವನಿಯಲ್ಲಿ ಕೇಕೆ ಹಾಕಿ ಮಿಲನಕ್ಕೆ ಆಹ್ವಾನಿಸುತ್ತದೆ. ಗಂಡಿನ ಲಕ್ಷ್ಯವನ್ನು ಸೆಳೆಯಲು ಮುಂದು ಮುಂದಾಗಿ ಹೆಣ್ಣುಗಳು ತಮ್ಮೊಳಗೇ ತೀವ್ರವಾದ ಜಗಳ ಕಾಯುವುದೂ ಉಂಟು. ಗಂಡಿನ ಒಲವು ಗೆದ್ದ ಹೆಣ್ಣು ಮೊಟ್ಟೆಗಳನ್ನಿಟ್ಟು, ಗಂಡನಿಗೊಪ್ಪಿಸಿ, ಕಾಡಿನಲ್ಲಿ ಅವನನ್ನು ಏಕಾಕಿಯಾಗಿ ಬಿಟ್ಟು ತನ್ನ ಮೋಹಪಾಶದಲ್ಲಿ ಬೀಳುವ ಇನ್ನೊಬ್ಬ

ಪುರುಷನನ್ನು ಅರಸಲು ಹೊರಟು ಹೋಗುತ್ತಾಳೆ.



ಮಾನವನ ಸನಿಹದ ಸಂಬಂಧಿಕರಲ್ಲಿ ಒಂದೇ ಒಂದಾದ ಸ್ತ್ರೀವಶ ಗಂಡು ಮಧ್ಯ ಅಮೆರಿಕದ ಮಾರ್ಮೊಸೆಟ್ (Marmoset) ಎಂಬ ಮಂಗ. ಇದು ದೊಡ್ಡ ಇಣಚಿಯಷ್ಟು ಚಿಕ್ಕದು. ಇದನ್ನು ಸಾಕು ಪ್ರಾಣಿ ಎಂದು ಉಪಯೋಗಿಸುವುದೂ ಉಂಟು. ಇವುಗಳಲ್ಲಿ ಗಂಡನು ಸೂಲಗಿತ್ತಿಯೂ ಆಗುತ್ತಾನೆ. ಪ್ರಸವದ ನಂತರದಲ್ಲಿ ಗಂಡನೇ ಮರಿಯನ್ನು ಸ್ವೀಕರಿಸುತ್ತಾನೆ. ಹಾಲುಣಿಸುವುದರ ಹೊರತು ಪಡಿಸಿ ಇನ್ನಿತರ ಎಲ್ಲ ಬಗೆಯ ಯೋಗಕ್ಷೇಮವನ್ನೂ ಅವನೇ ನೋಡಿಕೊಳ್ಳುತ್ತಾನೆ. ಮನೆಯ ಯಜಮಾನಿಗೆ ಹೊಸ್ತಿಲ ಹೊರಗಿನ ವಿನೋದವೇ ಹೆಚ್ಚು ರುಚಿಸಿದರೆ ಪಾಪ, 'ಏಕಪತ್ನೀ ವ್ರತಸ್ಥನಾದ' ಯಜಮಾನನಿಗೆ ಅಡುಗೆ ಮನೆ, ತೊಟ್ಟಿಲು ತಪ್ಪಿದ್ದಲ್ಲ. ತನ್ನ ಅಮೂಲ್ಯ 'ಭಾರ'ವನ್ನು ಹೊತ್ತುಕೊಂಡೇ ಗಂಡನು ಟೊಂಗೆಗಳ ಮೇಲೆ ವಿಹರಿಸುತ್ತ ಕಾಲ ಕಳೆಯುತ್ತಾನೆ. ಮಗು ಹಸಿದಾಗ ಮಾತ್ರ ಹೆಂಡತಿಯ ಕೈಯಲ್ಲಿ ಕೊಟ್ಟು ಮನೆಯ ಸೇವಕನಂತೆ ಮರೆಗೆ ನಿಲ್ಲುತ್ತಾನೆ. ಅವಳೋ ತನ್ನ ಕರ್ತವ್ಯವನ್ನು ಪೂರೈಸಿದೊಡನೆ ಮಗುವನ್ನು ಅಲ್ಲಿಯೇ ಬಿಟ್ಟು ತನ್ನ ಉದ್ಯೋಗವೇ ಬೇರೆ ಎಂದು ಆಫೀಸಿಗೆ ಓಡುವ ವಿವಾಹಿತ ಪುರುಷರಂತೆ ಅಲ್ಲಿಂದ ಕಾಲ್ದೆಗೆಯುತ್ತಾಳೆ.

***

೬. ಹಾವು, ಅದರ ಸತ್ಯ - ಮಿಥ್ಯ



ಪುರಾಣ ಕಾಲದಿಂಧ ಇಂದಿನ ವರೆಗೂ ಹಾವಿಗಾಗಿ ಪ್ರತ್ಯೇಕ ಸ್ಥಾನಮಾನಗಳು ಕಾಯ್ದಿರಿಸಲ್ಪಟ್ಟಿವೆ. ಬೇರೆ ಯಾವ ಪ್ರಾಣಿಯಿಂದಲೂ ಸಾಧಿಸದ ವಿಶೇಷ ಯಶಸ್ಸನ್ನು ಹಾವು ಸಾಧಿಸಿದೆ. ಬೌದ್ಧಿಕ ವಿಕಸನದ ಉನ್ನತ ಶಿಖರವನ್ನು ಮುಟ್ಟಿದ ಮಾನವನೇ ತನ್ನ ಕೈಗಳನ್ನು ಜೋಡಿಸಿ ತಲೆಬಾಗಿಸಿ ಹಾವಿಗೆ ಸಾಷ್ಟಾಂಗವೆರಗಿದ್ದಾನೆ. ಯುಗಯುಗಾಂತರಗಳಿಂದ ಬಂದ ಅಂಧಶ್ರದ್ಧೆಯೇ ಇದಕ್ಕೆ ಕಾರಣ.

ಮೂಢನಂಬಿಕೆಗಳು ಇಂದು ನಿನ್ನೆಯವಲ್ಲ. ಶಿಲಾಯುಗದಲ್ಲಿ ಅವತರಿಸಿ ಆಧುನಿಕ ಯುಗದವರೆಗೂ ತಮ್ಮ ಅಸ್ತಿತ್ವವನ್ನು ಕಾಯ್ದುಕೊಂಡು ಬಂದಿವೆ. ಅತಿ ಕಾಡು ಸ್ಥಿತಿಯಲ್ಲಿದ್ದಾಗಿನಿಂದಲೂ ಭಯಾನಕ ಘಟನೆಗಳಿಗೆ ಏನೋ ಸಂಬಂಧ ಕಲ್ಪಿಸುತ್ತ ಭಯವಿದ್ದಲ್ಲಿ ಭಗವಂತನಿದ್ದಾನೆಂಬ ತರ್ಕ ಸಿದ್ಧಾಂತಕ್ಕೆ ತಲುಪಿದುದೇ ಮೂಢನಂಬಿಕೆಗಳಿಗೆ ಆದಿಯಾಯಿತು. ಇದಕ್ಕೆ ನಮ್ಮ ಪುರಾಣಗಳು ಸಾಕ್ಷಿ. ಶಿವನ ಕೊರಳಲಂಕಾರವಾಗಿ ಹೆಡೆ ಬಿಚ್ಚಿದ ನಾಗ ಇರದಿದ್ದರೆ ಆತ ಶಿವನೇ ಅಲ್ಲ !

ಆದಿಶೇಷನೇ ದೀರ್ಘ ಗೋಲಾಕಾರದ ಮೈಯ ಸುತ್ತುಗಳೇ ಅಲ್ಲವೆ ವಿಷ್ಣುವಿನ ಹಾಸಿಗೆ ? ಮಹಾಶೇಷನ ಸಾವಿರ ತಲೆಗಳನ್ನು ಆಶ್ರಯಿಸಿ ನಿಂತಿದೆಯಲ್ಲವೆ ನಾವು ವಾಸಿಸುವ ಈ ಪೃಥ್ವಿ ? ವಿಜ್ಞಾನಿ ಗೆಲಿಲಿಯೋ ಸೊನ್ನೆಯ ಶಕ್ತಿಯ ವಿಚಾರವನ್ನು ವಿವರಿಸುವಾಗ 'ನಿಲ್ಲಲು ಸಾಕಷ್ಟು ಸ್ಥಳವನ್ನೂ, ಕೈಯಲ್ಲಿ ಸಾಕಷ್ಟು ಉದ್ದವಾದ ಕೋಲನ್ನೂ ಕೊಟ್ಟರೆ ಪೃಥ್ವಿಯನ್ನೇ ಉರುಳಿಸಬಲ್ಲೆ'' ಎಂದು ಹೇಳಿದ್ದ. ಆ ಮಹಾನುಭಾವ ಹಾಗೇನಾದರೂ ಮಾಡಿದ್ದರೆ ಸಾವಿರ ಹೆಡೆಗಳ ಆದಿಶೇಷ ಭುಸುಗುಟ್ಟಿ ಎಂಥ ಭಯಂಕರ ಪ್ರಳಯಕ್ಕೆ ಕಾರಣವಾಗುತ್ತಿದ್ದನೋ ಏನೋ !

ಪ್ರಾಚೀನ ಮಾನವನ ಪದ್ಧತಿಗಳನ್ನು ಬಹುಮಟ್ಟಿಗೆ ಆಚರಣೆಯಲ್ಲಿ ತಂದು ಹೆಚ್ಚಿನ ಬಣ್ಣ ಬಳಿದವರೆಂದರೆ ಸರ್ಪಪೂಜಕರೆಂದು ಹೆಸರಾದ ದ್ರಾವಿಡರು. ಹಾವುಗಳನ್ನು 'ದೇವಾಂಶ ಸಂಭೂತ' ಎಂದು ಕರೆದರು. ಕಾಲಿಲ್ಲದ ಈ ಪ್ರಾಣಿಗಳಿಗೆ ತಲೆ ಬಾಗಿದರು. ಅವು ಹರಿದ ಜಾಗವನ್ನೂ ಅರಿಷಿಣ ಕುಂಕುಮಗಳಿಂದ ಪೂಜಿಸಿದರು. ಅವುಗಳ ಶಾಪಕ್ಕೆ ಭಯ-ಭೀತರಾಗಿ ಅವುಗಳನ್ನು ಪ್ರಸನ್ನಗೊಳಿಸಿದರೇನೇ ಜನಾಂಗಕ್ಕೆ ಹಿತವೆಂದು ಭಾವಿಸಿದರು. ಹಾವುಗಳ ಸಳಸಳ ಹರಿದಾಟ, ಹೆಡೆಯೆತ್ತಿ ನಿಲ್ಲುವ ವಿಶಿಷ್ಟ ಭಂಗಿ, ಭುಸುಗುಟ್ಟುತ್ತ ತಲೆಯನ್ನು ನೆಲಕ್ಕಪ್ಪಳಿಸುವ ದರ್ಪ, ನಿಯತಕಾಲಿಕ ಪರೆ ಬಿಚ್ಚುವಿಕೆ, ನೋಡನೋಡು ವಷ್ಟರಲ್ಲಿಯೇ ನುಸುಳಿ ಮರೆಯಾಗುವ ಚತುರತೆ ಅಂದಿನ ಮಾನವನನ್ನು ಭಯ ಚಕಿತನನ್ನಾಗಿ ಮಾಡಿ ಮೂರ್ತಿಪೂಜೆಗೆ ಅವಕಾಶ ಮಾಡಿಕೊಟ್ಟಿರಬೇಕು. ದ್ರಾವಿಡ ಸಂಸ್ಕೃತಿಯನ್ನು ಕಾಯ್ದುಕೊಂಡ ಮೂಲನಿವಾಸಿಗಳು ಭಾರತದ ಗುಡ್ಡಗಾಡುಗಳಲ್ಲಿ ಇಂದಿಗೂ ಇದ್ದಾರೆ.

ಅಂದು ವಿಚಾರವು ಅಂಧವಾಗಿದ್ದರೂ ಶ್ರದ್ಧೆ ಸತ್ಯವಾಗಿತ್ತು. ಈ ಅಂಧಶ್ರದ್ಧೆಯ ದುರುಪಯೋಗವನ್ನು ಸ್ವಪ್ರಯೋಜನಕ್ಕಾಗಿ ಮಾಡಿಕೊಂಡವರು ಆ ಕಾಲದಿಂದಲೂ ನಡೆದು ಬಂದ ಧರ್ಮಬೋಧಕರು ಹಾಗೂ ದೇವಾಲಯದ ಪೂಜಾರಿಗಳು ; ಹಾವಾಡಿಗರೂ ಇದಕ್ಕೆ ಹೊರತಾಗಲಿಲ್ಲ. ಅವರ ಕಟ್ಟುಕತೆಗಳನ್ನು ಪೃಥಕ್ಕರಿಸಿ ವೈಜ್ಞಾನಿಕವಾಗಿ ವಿಚಾರಿಸುವುದು ನಾಗರಿಕತೆಗೆ ಭೂಷಣವೆನಿಸುತ್ತದೆ.

ಆದಿಶೇಷನು ಪೃಥ್ವಿಯನ್ನು ಹೊತ್ತುನಿಂತಿದ್ದಾನೆಂಬ ಗ್ರಹಿಕೆ ಮಿಥ್ಯವಾದುದು. ಚಳಿಗಾಲದ ತಂಪು ಹಾವುಗಳಿಗೆ ಬಾಧಕ. ಶೀತೋಷ್ಣಗಳ ಸಮತೂಕವನ್ನು

ಕಾಯ್ದುಕೊಳ್ಳುವ ಅಂತಃರಚನೆ ಅವುಗಳಲ್ಲಿಲ್ಲ. ಅಲ್ಲದೆ ಚಳಿಗಾಲದಲ್ಲಿ ಆಹಾರದ ಕೊರತೆಯೂ ಹೆಚ್ಚುತ್ತದೆ. ಈ ಕಾರಣಗಳಿಂದ ಹಾವುಗಳು ಭೂಮಿಯಲ್ಲಿ ಆಳವಾದ ತಾವುಗಳನ್ನು ಹುಡುಕಿ ತಿಂಗಳುಗಟ್ಲೆ, ಒಂದೊಂದು ಸಲ ವರುಷದವರೆಗೂ ನಿರಾಹಾರದಿಂದ ಶಿಶಿರ ನಿದ್ರೆಯನ್ನು ಕಳೆಯುತ್ತವೆ. ಅವುಗಳ ಈ ವರ್ತನೆಯೇ ಆದಿಶೇಷನ ಕಲ್ಪನೆಗೆ ಅವಕಾಶಮಾಡಿಕೊಟ್ಟಿರಬೇಕು.

ಹಾವುಗಳು ಹೂಳಿಟ್ಟ ಧನವನ್ನು ರಕ್ಷಿಸುತ್ತವೆಂದು ಅನೇಕರು ತಿಳಿಯುತ್ತಾರೆ. ಕಾರಣ ಅವುಗಳಿಗೆ 'ಧನಗಾಹಿ' ಎಂದು ಹೆಸರು. ವಾರಸುದಾರನಿಲ್ಲದೆ ಶ್ರೀಮಂತನೊಬ್ಬ ನಿಧನ ಹೊಂದಿದರೆ ಆತ ಹೂಳಿಟ್ಟ ಧನಕ್ಕೆ ಘಟಸರ್ಪವೊಂದು 'ಸರ್ಪಗಾವಲು' ಹಾಕಿ ಕುಳಿತಿರುತ್ತದೆಂದೂ, ಆಸ್ತಿಯು ಯಾರ ದೈವಲಿಖಿತ ದಲ್ಲಿದೆಯೋ ಅವನ ಕನಸಿನಲ್ಲಿ ಅದು ಕಾಣಿಸಿಕೊಂಡು, ಹೂಳಿಟ್ಟ ಸ್ಥಳದ ಪರಿಚಯ ಕೊಟ್ಟು ಆ ತಾವಿನಿಂದ ಮರೆಯಾಗಿ ಬಿಡುತ್ತದೆಂದೂ ನಂಬಿಕೆ. ಇದು ಕೇವಲ ಕತೆ ! ಭೂಮಿಯಲ್ಲಿ ನಾವು ಮಾಡುವ ಪೊಳ್ಳು ಜಾಗೆಯಿಂದ ಹಾವಿಗೆ ಬೆಚ್ಚಗಿನ ಹಿತಕರವಾದ ಮನೆಯನ್ನೇ ನಿರ್ಮಿಸಿ ಕೊಟ್ಟಂತಾಗುತ್ತದೆ. ಸಾಮಾನ್ಯವಾಗಿ ಹಾವುಗಳು ಇಂಥ ಸ್ಥಳದಲ್ಲಿ ಬಂದು ವಾಸಿಸುವುದರಿಂದ ಅವು ಧನವನ್ನು ಕಾಯುತ್ತವೆಂಬ ತಪ್ಪು ತಿಳುವಳಿಕೆ ಜನಗಳಲ್ಲಿ ಬಂದಿದೆ. ಆಸ್ತಿಯನ್ನು ಕಾಯುವಷ್ಟು ತೀಕ್ಷ್ಣವಾದ ಬುದ್ಧಿಶಕ್ತಿ ಹಾವುಗಳಿಗಿದೆ ಎಂಬುದಕ್ಕೆ ಯಾವ ವೈಜ್ಞಾನಿಕ ಆಧಾರಗಳೂ ಇಲ್ಲ.

ನಮ್ಮ ಪೂರ್ವಜರು ಎಲ್ಲ ಜಾತಿಯ ಹಾವುಗಳಿಗೂ ದೇವಪಟ್ಟವನ್ನು ಕೊಡಲಿಲ್ಲ. ಒಟ್ಟಿಗಿರುವ ೩೦೦ ಜಾತಿಯ ಹಾವುಗಳಲ್ಲಿ 'ನಾಜಾ ಟ್ರಿಪುಡಿಯನ್ಸ್' ಎಂಬ ಹೆಸರಿನ ನಾಗರಹಾವಿಗೆ ಮಾತ್ರ ಪೂಜೆ ಪುನಸ್ಕಾರಗಳು ದೊರೆತವು. ಅದರ ಹೆಡೆ ಪೂಜೆಗೆ ಪ್ರಧಾನ ಲಕ್ಷಣವಾಗಿರಬೇಕು. ಈ ಹಾವಿನ ಬಗೆಗೆ ಅಸಂಖ್ಯಾತ ವಿಚಿತ್ರ ಕಲ್ಪನೆಗಳುಂಟು. ಇದನ್ನು ಕೊಂದರೆ ಹಿತವಾಗದೆಂಬ ಭಯ ಹಲವರಿಗೆ. ಅದನ್ನು ಪ್ರಸನ್ನಗೊಳಿಸಲು ಹಾಲು, ತತ್ತಿ ಕೊಡುವುದುಂಟು. ನಾಗರ ಪಂಚಮಿಯ ದಿನ ಹಾವಾಡಿಗರು ವಿಷದ ಹಲ್ಲುಗಳನ್ನು ಹೊರತೆಗೆದ ನಾಗರ ಹಾವನ್ನು ಬುಟ್ಟಿಯಲ್ಲಿಕೊಂಡು ಓಣಿಗುಂಟ ತಿರುಗುವ ದೃಶ್ಯ, ಹೆಣ್ಣು ಮಕ್ಕಳು ಹಾಲು ನೆಲಗಡಲೆ ಅರ್ಪಿಸುವ ರೀತಿನೀತಿಗಳು ಹೊಸವೇನಲ್ಲ.

ನಾಗಗಳಲ್ಲಿ ನಾಗರಾಜ ದೊಡ್ಡದು. ಹದಿನೆಂಟು ಅಡಿಗಳಷ್ಟು ಉದ್ದ ಬೆಳೆಯುತ್ತದೆ. ಇದರ ಹೆಡೆಯಲ್ಲಿ ನೀಲಮಣಿ ಇರುತ್ತದೆಂದೂ, ರಾತ್ರಿ ಅದನ್ನು ಹೊರತೆಗೆದಿಟ್ಟು ಅದರ ಬೆಳಕಿನಲ್ಲಿ ಬೇಟೆ ಹುಡುಕುತ್ತದೆಂದೂ, ಇಂಥ ನೀಲಮಣಿಯು ಸಾಮಾನ್ಯವಾಗಿ ವಯಸ್ಕ ನಾಗರಹಾವಿನಲ್ಲಿ ಇರುತ್ತದೆಂದೂ ಸರ್ವ ಸಾಮಾನ್ಯವಾದ ಜನಶ್ರುತಿ. ಪಾಶ್ಚಾತ್ಯ ದೇಶಗಳಲ್ಲಿ ನಾಗರಹಾವು ಇಲ್ಲದಿರುವುದರಿಂದ ನೀಲಮಣಿಯ ಘನತೆಯನ್ನು ಕಾಡು ಕಪ್ಪೆಗೆ ಕೊಡಲಾಗಿದೆ. ಶೇಕ್ಸ್‌ಪಿಯರನು ತನ್ನ 'ಆ್ಯಜಯುಲೈಕ್' ಇಟ್' ನಾಟಕದಲ್ಲಿ 'ವಿದ್ರೂಪಿ ವಿಷಪೂರಿತ ನೆಲಗಪ್ಪೆಯಾದರೂ ಅದರ ತಲೆಯಲ್ಲಿ ಅಮೂಲ್ಯ ರತ್ನ ಇದೆ'' ಎಂದು ಹೇಳುತ್ತಾನೆ. ನಿಜವಾಗಿ ಹಾವು ನಿಶಾಚರ ಪ್ರಾಣಿ. ಆಹಾರವನ್ನು ಹುಡುಕುವಾಗ ಬೆಳಕು ಬೇಕಾಗುವುದಿಲ್ಲ ಎಂಬುದಕ್ಕೆ ಆಧಾರಗಳಿವೆ.

ಒಂದು ಜಾತಿಯ ಮಣ್ಣಿನ ಹಾವಿನ ದುರುಪಯೋಗವನ್ನು ಕೆಲವು ಹಾವಾಡಿಗರು ಮಾಡಿಕೊಂಡಿದ್ದಾರೆ. ಬಾಲದ ತುದಿಯಲ್ಲಿ ಅಡ್ಡವಾಗಿ ಒಂದು ಸೀಳು ಹಾಕಿ, ಕೃತ್ರಿಮ ಬಾಯಿಮಾಡಿ ಎರಡು ತಲೆಯ ಹಾವು ಎಂದು ಹೇಳುತ್ತಾರೆ. ಅಲ್ಲದೆ ಅದು ಸೂರ್ಯನ ದೂತನೆಂದು, ಸೂರ್ಯನು ಹೇಗೆ ಆರು ತಿಂಗಳಿಗೊಮ್ಮೆ ಕರ್ಕ ಮಕರ ವೃತ್ತಗಳಿಗೆ ತಲುಪುವನೋ, ಹಾಗೆಯೇ ಈ 'ದ್ವಿಮುಖ' ಹಾವು ಪ್ರತಿ ಆರು ತಿಂಗಳಿಗೊಮ್ಮೆ ಒಂದೊಂದು ತಲೆಯಿಂದ ಚಲಿಸುತ್ತದೆಂದು ಹೇಳಿ ಜನರನ್ನು ಮೋಸ ಮಾಡುತ್ತಾರೆ. ಸತ್ಯವಿಷ್ಟೇ : ಈ ಹಾವಿನ ಬಾಲ ಮೊಂಡಾಗಿದ್ದು ಇನ್ನೊಂದು ತಲೆಯಂತೆ ಕಾಣುತ್ತದೆ. ಇದೇ ಹಾವು ದೇಹಕ್ಕೆ ತಗುಲಿದ ಮಾತ್ರಕ್ಕೆ ಕುಷ್ಠರೋಗ ಉಂಟಾಗುತ್ತದೆಂಬುದು ಇನ್ನೊಂದು ವಿಚಿತ್ರ ನಂಬಿಕೆ. ಇಂಥ ಸುಳ್ಳಿನ ಕಂತೆಗೆ ಕಾರಣರು ಗಾರುಡಿಗರೇ. ಸುಳ್ಳಿನ ಬ್ರಹ್ಮನಿಗೆ ನಿವಾರಣೋಪಾಯವೂ ಗೊತ್ತಿರಬೇಕಾದುದು ನ್ಯಾಯವಲ್ಲವೇ ? ತಾಕಿದ ಹಾವನ್ನು ಹಿಡಿದು, ಬಾಲದ ಚೂರನ್ನು ಕಡಿದು, ಬಾಳೆಯ ಎಲೆಯಲ್ಲಿ ಮಡಿಚಿ ರೋಗಿಗೆ ತಿಳಿಯದಂತೆ ತಿನ್ನಿಸಿದರೆ ರೋಗ ನಿವಾರಣೆಯಾಗುವದಂತೆ ! ಇಂಥ ಅಸಂಬದ್ಧ ಅವಿಚಾರಗಳಿಗೆ ವಿಜ್ಞಾನ ಮೌನವಾದಿತೇ ವಿನಾ ಉತ್ತರಿಸಲಾರದು.

ಭಾರತದ ಅನೇಕ ಕಡೆಗಳಲ್ಲಿ ಧಮನ್ ಎಂಬ ನಿರುಪ್ರದವಿ ಹಾವು ಸಾಮಾನ್ಯವಾಗಿ ಕಾಣಸಿಗುತ್ತದೆ. ಇದನ್ನೂ, ನಾಗರಹಾವನ್ನೂ ಕೂಡಿಯೇ

ನೋಡಿದರೆ ಕುರುಡರಾಗುತ್ತಾರೆಂಬ ಹುಚ್ಚು ಕಲ್ಪನೆ, ಹಲವರಲ್ಲಿ. ಪ್ರಾಣಿಗಳ ಕೂಟ ನೋಡಬಾರದೆಂಬುದೇ 'ಘನ' ಉದ್ದೇಶವಾಗಿರಬೇಕು. ಈ ಹಾವಿನ ವಿಷಯವಾಗಿ ವಿಲಕ್ಷಣ ಕಥೆಗಳು ಹುಟ್ಟಿಕೊಂಡಿವೆ. ಇದು ದನಕರುಗಳನ್ನು ಕೊಲ್ಲುವ ವರೆಗೆ ರಕ್ತ ಹೀರುವುದೆಂದೂ, ಇದನ್ನು ಕಂಡ ಮಾತ್ರಕ್ಕೆ ಮನುಷ್ಯನು ಕುರುಡನಾಗುವನೆಂದೂ ನಂಬಿಕೆ. ಇದೇ ಜಾತಿಗೆ ಸೇರಿದ ಯುರೋಪದ 'ಝೂಮಿನಿಸ್ ವಿರಿಡಿಫ್ಲೆವಸ್' ಎಂಬ ಹಾವು ಕೆಚ್ಚಲು ಬತ್ತುವವರೆಗೂ ಆಕಳ ಮೊಲೆಯುಣ್ಣುವುದೆಂದು ಪಾಶ್ಚಾತ್ಯರಲ್ಲಿ ಹಲವರು ನಂಬುತ್ತಾರೆ. ಈ ಹಾವು ಒಂದು ತರದ ಸೂಕ್ಷ್ಮ ಧ್ವನಿಯನ್ನು ಹೊರಡಿಸಿ ಪಕ್ಷಿಗಳನ್ನು ಕೂಡ ಮರುಳು ಮಾಡಬಲ್ಲದಂತೆ. ವಯಸ್ಕ ಹುಲ್ಲುಹಾವುಗಳು ಆಕಳ ಹಾಗೂ ಹೆಣ್ಣು ಮಕ್ಕಳ ಮೊಲೆಯುಣ್ಣುತ್ತವೆಂದು ಫ್ರಾನ್ಸ್ ದೇಶದ ಒಕ್ಕಲಿಗರು ನಂಬುತ್ತಾರೆ. ಹುಲ್ಲು ಹಾವಿನ ಮರಿಗಳು ಮುದಿ ಹುಂಜದ ತತ್ತಿಗಳಿಂದ ಹುಟ್ಟುತ್ತವೆಂದು ತಿಳಿಯುವುದು ಅವಿವೇಕದ ಪರಮಾವಧಿಯೇ ಸರಿ ! ಇಂಥ ಅಸಂಭಾವ್ಯ ಸಂಗತಿಗಳನ್ನು ಹಲವರಾದರೂ ನಂಬುತ್ತಾರೆಂದರೆ ಪ್ರಾಣಿಶಾಸ್ತ್ರವು ಆತ್ಮಹತ್ಯೆಗೆ ಸಿದ್ಧವಾಗಬೇಕು !

ಹಾವು ತನ್ನ ದೇಹ ಗಾತ್ರಕ್ಕಿಂತ ಹಿರಿದಾದ ಪ್ರಾಣಿಯನ್ನು ನುಂಗಬಲ್ಲದೆಂಬುದು ಸತ್ಯ ಸಂಗತಿ. ಈ ಸಾಮರ್ಥ್ಯ ನಿಜವಾಗಿಯೂ ವಿಲಕ್ಷಣವಾದುದು. ಬೇಟೆ ಚಪಲವಿದ್ದಷ್ಟೂ ಹಾವಿಗೆ ಸಂತೋಷ. ಚಂಚಲವಾದ ಬೇಟೆ ಪಾರಾಗಲು ಎಷ್ಟು ಹವಣಿಸುತ್ತದೋ, ಅಷ್ಟು ಆಳವಾಗಿ ಹಾವಿನ ಜೀರ್ಣಾಂಗದಲ್ಲಿ ಇಳಿಯುತ್ತದೆ. ಹಾವಿನ ಒಳವಕ್ರವಾದ ಹಲ್ಲುಗಳು ಬೇಟೆಯನ್ನು ಚುಚ್ಚದೆ, ಕಚ್ಚದೆ, ಕಡಿಯದೆ ಕೇವಲ ಬೇಟೆ ಹೊರ ಬೀಳದಂತೆ ನೋಡಿಕೊಳ್ಳುತ್ತವೆ - ಜೇಲಿನ ಸಿಪಾಯಿಗಳಂತೆ. ೨೫ ಅಡಿಗಳ ಹಾವು ೭೫ ಪೌಂಡು ಭಾರದ ಚಿಗರಿಯನ್ನು ಅನಾಯಾಸವಾಗಿ ನುಂಗಬಲ್ಲದು. ಬೇಟೆಯ ಆಕಾರ ಮಹತ್ವ ವಾದುದು ; ಅದರ ತೂಕವಲ್ಲ. ಬೇಟೆ ಉದ್ದವಿದ್ದಷ್ಟೂ ಹಾವಿಗೆ ಹಗುರ.

ಏಶಿಯದ ಒಂದು ಜಾತಿಯ ಹಾವು ಹಾರಾಡುತ್ತದೆ ಎಂಬುದು ಕೇವಲ ಅತಿಶಯೋಕ್ತಿ. ಇದು ಗಿಡದ ಟೊಂಗೆಗಳಲ್ಲಿ ವಾಸಿಸುವ ಪ್ರಾಣಿ. ಒಂದು ಟೊಂಗೆಯಿಂದ ಇನ್ನೊಂದಕ್ಕೆ ನುಸುಳುವಾಗ ತನ್ನ ಬಾಲವನ್ನು ಒಂದು ಟೊಂಗೆಗೆ ಸುತ್ತಿ, ನೀಳವಾದ ತೆಳು ದೇಹವನ್ನು ಭೂಮಿಗೆ ಸಮಾಂತರವಾಗಿ ಚಾಚಿ

ಬಾಯಿಯಿಂದ ಇನ್ನೊಂದು ಟೊಂಗೆಯನ್ನು ಅವಚುತ್ತದೆ. ಈ ರೀತಿ ಸದ್ದಿಲ್ಲದೆ ಜಾರುತ್ತದೆಯೇ ಹೊರತು ಹಾರುವುದಿಲ್ಲ.

ಹಾವುಗಳು ಮಳೆಯನ್ನೂ ನೀರನ್ನೂ ತಮ್ಮ ನಿಯಂತ್ರಣದಲ್ಲಿಟ್ಟುಕೊಂಡಿವೆ ಎಂಬುದು ಇನ್ನೊಂದು ಅಸಹಜವಾದ ಕಲ್ಪನೆ. ಮಳೆಗಾಲದಲ್ಲಿ ಅವು ಹೆಚ್ಚಾಗಿ ಕಾಣಸಿಗುವುದರಿಂದ ಈ ಭಾವನೆ ಬಂದಿರಬೇಕು. ದಟ್ಟಡವಿ, ಹೆಚ್ಚು ಮಳೆ ಬೀಳುವ ಪ್ರದೇಶಗಳಾದ ಬಂಗಾಲ ಆಸಾಮ ಪ್ರಾಂತಗಳ ಜನಗಳಲ್ಲಿ ಈ ಮೂಢ ನಂಬಿಕೆ ಹೆಚ್ಚು.

ಹಾವುಗಳ ಗಾತ್ರದ ಬಗೆಗೆ ಕೂಡ ಅಬದ್ಧ ಕಲ್ಪನೆಗಳಿವೆ. ಹಾವುಗಳಲ್ಲಿ ಏಶಿಯದ ಹೆಬ್ಬಾವು ದೊಡ್ಡದು. ಅದು ೩೨ ಅಡಿಗಳ ಉದ್ದಕ್ಕೂ ಬೆಳೆಯುತ್ತದೆ. ಅಮೆರಿಕದ ಹೆಬ್ಬಾವು ೩೦ ಅಡಿ ಉದ್ದವಿರುತ್ತದೆ. ಆಫ್ರಿಕಾ ಹಾಗೂ ಆಸ್ಟ್ರೇಲಿಯಗಳಲ್ಲಿ ಕಾಣಸಿಗುವ ಹೆಬ್ಬಾವುಗಳು ಅನುಕ್ರಮವಾಗಿ ೨೫ ಹಾಗೂ ೨೧ ಅಡಿಗಳವರೆಗೆ ಬೆಳೆಯುತ್ತದೆ.

ಕೆಲವು ಹಾವುಗಳು ತಮ್ಮನ್ನು ಹಿಂಸಿಸಿದವರನ್ನು ಗುರುತಿಸಿ ಬೆನ್ನು ಹತ್ತುವುವೆಂದೂ ಧ್ವನಿಯನ್ನು ಕೂಡ ಗುರುತಿಸಬಲ್ಲವೆಂದೂ. ವೈರ ಸಾಧಿಸುವ ಸಾಗರ ಹಾವು ವರುಷಗಟ್ಲೆ ಆ ದಾರಿಯಲ್ಲಿ ಪ್ರತೀಕಾರಕ್ಕಾಗಿ ಕಾಯುತ್ತಿರುವುದೆಂದೂ ಅನೇಕರು ಹೇಳುತ್ತಾರೆ. ಇದು ಹುರುಳಿಲ್ಲದ ವದಂತಿ. ವಾಸನೆಯ ತೀಕ್ಷ್ಣ ಶಕ್ತಿಯಿಂದ ಸ್ಥಳಗಳನ್ನು ಗುರುತಿಸಬಲ್ಲವೇ ವಿನಾ ಮನುಷ್ಯರನ್ನು ಗುರುತಿಸುವ ಜ್ಞಾನ ಇವುಗಳಿಗಿರುವುದಿಲ್ಲ.

ಚಣಗಿ ಹಾವು ಕೂಡ ಸೇಡಿನ ಪ್ರಾಣಿ ಎಂದು ಹೇಳುತ್ತಾರೆ. ಇದರ ವಿಷಯವಾಗಿ ಒಂದು ಮೋಜಿನ ಕತೆಯಿದೆ. ತನ್ನ ಆಕ್ರಮಣಕಾರನನ್ನು ಕಚ್ಚಿ ಆಹುತಿ ತೆಗೆದುಕೊಂಡು ಗಿಡದ ತುತ್ತ ತುದಿಯಲ್ಲಿ ಕುಳಿತುಕೊಳ್ಳುವುದಂತೆ. ದಹನಕ್ರಿಯೆಯ ಹೊಗೆಯನ್ನು ಕಂಡ ಮೇಲೆಯೇ ಕೆಳಗೆ ಇಳಿಯುವದಂತೆ !

ಹಾವಿಗೆ ಎರಡು ನಾಲಗೆಗಳು ಎಂದೇ ಎಲ್ಲರೂ ಸಾಮಾನ್ಯವಾಗಿ ತಿಳಿಯುತ್ತಾರೆ. ಅದಕ್ಕಿರುವುದು ಒಂದೇ ನಾಲಗೆ. ಅದರ ಮುಂಭಾಗದಲ್ಲಿ ಸೀಳು ಇರುವುದರಿಂದ ಎರಡು ನಾಲಗೆಗಳಂತೆ ಕಾಣುತ್ತದೆ. ಎಂತಲೇ ಹಾವಿಗೆ 'ದ್ವಿಜಿಹ್ವೆ' ಎಂಬ ತಪ್ಪು ಹೆಸರು ರೂಢಿಯಲ್ಲಿ ಬಂದಿದೆ.

ಹಾವಿನ ಭಯವೂ ಸಾವಿನ ಭಯವೂ ಕೂಡಿಯೇ ಬರುವುದರಿಂದಲೋ ಏನೋ ಹಾವಿನಿಂದ ಕಚ್ಚಲ್ಪಟ್ಟವನು ಸಾಯುವುದೇ ಹೆಚ್ಚು. ಪ್ರತಿ ವರುಷವೂ ನಮ್ಮದೇಶದಲ್ಲಿ ಹಾವಿನ ಕಡಿತದಿಂದ ೩೦,೦೦೦ ಜನರು ಸಾಯುತ್ತಾರೆಂದು ಎಣಿಕೆ ಮಾಡಲಾಗಿದೆ. ಇದರಲ್ಲಿ ಪ್ರತಿಶತ ತೊಂಬತ್ತರಷ್ಟು ಜನ ಸಾಯುವುದು ವಿಷಕಾರಿ ಹಾವುಗಳಿಂದಲ್ಲ ; ಮಾನಸಿಕ ದೌರ್ಬಲ್ಯದಿಂದ ; ರಕ್ತಗತವಾದ ಹಾವಿನ ಭಯದಿಂದ. ಎರಡು ಮೂರಾಂಶ ಹಾವುಗಳು ಕಾದಾಟಕ್ಕೆ ಇಳಿಯದೆ ನುಸುಳಿ ಮರೆಯಾಗುವ ಜಾತಿಗಳು. ಹೀಗಾಗಿ ಅತಿಕ್ರಮಣ ಮಾಡಬಲ್ಲ ಹಾವುಗಳು ಬೆರಳಿನಿಂದೆಣಿಸುವಷ್ಟು. ಘಟಸರ್ಪ, ನಾಗರ, ಬಳೆಗಡಕ, ಕರಗಸ ಪೊರೆಗಳ ಮಂಡಲ ಹಾಗೂ ರಸೆಲ್ ಮಂಡಲ. ಈ ಐದು ಪ್ರಭೇದಗಳಿಂದ ಅವುಗಳ ಇಡೀ ಕುಲಕ್ಕೇ ಅಳಿಸಲಾರದ ಕಳಂಕ ತಗಲಿದುದು ಅವುಗಳ ದುರ್ದೈವವೋ ನಮ್ಮ ಅಸಮರ್ಪಕ ಜ್ಞಾನವೋ ತಿಳಿಯದು.

ಹಾವಿನ ವಿಷಯವಾಗಿ ಸರಿಯಾದ ಜ್ಞಾನ ಇರುವವರು ಅತಿ ವಿರಳ. ತಪ್ಪು ತಿಳಿದವರೇ ಬಹಳ. ಹಾವನ್ನು ಕಂಡರೆ ಸಾಕು ಮೊದಲನೆಯ ವಿಚಾರ ಅದನ್ನು ಕೊಲ್ಲುವುದು. ಹಾವು ವಿಷಕಾರಿಯೇ, ನಿರ್ವಿಷಕಾರಿಯೇ ಎಂಬುದನ್ನು ತಿಳಿಯುವ ಗೊಡವೆಗೆ ಕೂಡ ಹೋಗುವುದಿಲ್ಲ. ಈ ಅಜ್ಞಾನ ಅಳಿಸಬೇಕು. ಇಲಿಗಳಂಥ ದಂಶಕ ಪ್ರಾಣಿಗಳ ಸಂಖ್ಯೆಯನ್ನು ತಗ್ಗಿಸುವಲ್ಲಿ ಹಾವುಗಳ ಪಾತ್ರ ಹಿರಿದು ಎಂಬ ತಿಳುವಳಿಕೆ ಜನಗಳಿಗಾಗಬೇಕು.

ನಮ್ಮ ದೇಶದಲ್ಲಿ ಹಾವುಗಳೂ ಬಹಳ, ಹಾವಾಡಿಗರ ಸಂಖ್ಯೆಯೂ ದೊಡ್ಡದು. ಇಲ್ಲಿರುವಷ್ಟು ಹಾವಾಡಿಗರು ಬೇರಾವ ದೇಶದಲ್ಲಿಯೂ ಇಲ್ಲ. ಬಂಗಾಲದ 'ಸಂಗೀಜ' ಅಥವಾ 'ತುಬ್ರಿವಾಲ್' ಎಂಬ ಜನಾಂಗವು ನಿಜವಾದ ಹಾವಾಡಿಗರದು. ಕುಂಬಳ ಕಾಯಿಯ ಪುಂಗಿಯಿಂದ ಮೃದುವಾದ, ಒಂದೇ ರಾಗದ ಶ್ರುತಿಯನ್ನು ಹೊರಡಿಸಬಲ್ಲರು. ಈ ಧ್ವನಿ ತರಂಗಗಳನ್ನು ನೇರವಾಗಿ ಕೇಳಲು ಹಾವಿಗೆ ಕಿವಿಗಳಿರುವುದಿಲ್ಲ. ಭೂಮಿಯಲ್ಲಿ ಸೇರುವ ಕಂಪನಗಳನ್ನು ಗ್ರಹಿಸುವಷ್ಟು ಹಾವಿನ ಪೊರೆಗಳು ಶೀಘ್ರವೇದಿಗಳಾಗಿರುತ್ತವೆ. ಅಲ್ಲದೆ ಕಣ್ಣುಗಳು ತೀಕ್ಷ್ಣವಾಗಿರುವುದರಿಂದ ಹಾವಾಡಿಗನ ಕೈಯಲ್ಲಿಯ ಪುಂಗಿಯು ಹೇಗೆ ಗೋಲಾಕಾರವಾಗಿ ತಿರುಗುತ್ತದೆಯೋ ಹಾಗೆ ಹಾವು ತನ್ನ ಹೆಡೆಯನ್ನೂ

ತಾಳಬದ್ಧವಾಗಿ ತಿರುಗಿಸುತ್ತದೆ. - ಶ್ರವಣದಿಂದಲ್ಲ, ಕಣ್ಣೋಟದಿಂದ. ಕಾರಣವೇ ಹಾವಿಗೆ ಒಂದು ಅನ್ವರ್ಥಕ ಹೆಸರು 'ಚಕ್ಷುಶ್ರವ'

ಮಲೆನಾಡಿನಲ್ಲಿ ಹಾವುಗಳ ಉಪಟಳ ಹೆಚ್ಚಾಗಿರಬಹುದೆಂದು ತೋರುತ್ತದೆ. ಅಲ್ಲಿರುವ ದಟ್ಟಡವಿ, ನೀರಿನ ವಿಪುಲತೆಗಳೇ ಕಾರಣಗಳಿರಬಹುದು. ಮಲೆನಾಡಿನ ಜನತೆ ಹಾವುಗಳ ಬಗೆಗೆ ಗೌರವ ಭಾವನೆ ತಾಳಿದವರು ಎಂಬುದಕ್ಕೆ ಅವರ ಸಂಸ್ಕೃತಿ, ಸಾಮಾಜಿಕ ನಡೆ ನುಡಿಗಳೇ ಸಾಕ್ಷಿ. 'ಭೂಸಪ್ಪನವರು' ಎಂಬ ಹೆಸರಿನ ನಾಗಪೂಜೆ ಇಂದಿಗೂ ಅಲ್ಲಿ ಪ್ರಚಲಿತವಿದೆ. ತೊಟ್ಟಿಲು ಕೂಸಿನ ನಾಮಕರಣ 'ನಾಗ' ಹೆಸರಿನಿಂದಲೇ ಆರಂಭವಾಗುತ್ತದೆ. ನಾಗರಾಜ, ನಾಗಮ್ಮ, ನಾಗಮಣಿ, ನಾಗಭೂಷಣ, ನಾಗರತ್ನ, ಶೇಷಯ್ಯ ಎಂಬ ಹೆಸರುಗಳು ಅಲ್ಲಿ ಸಾಮಾನ್ಯ. ಅದು ಅವರಿಸಿಕೊಂಡ 'ನಾಗಮಹತಿ'ಯನ್ನು ತೋರಿಸುತ್ತದೆ.

ಹೀಗೆ ನಮ್ಮ ದೇಶದಲ್ಲಿ ಹಾವುಗಳ ವಿಷಯವಾಗಿ ಪರಂಪರೆಯಿಂದ ಬಂದ ಕಟ್ಟುಕತೆಗಳಿಗೆ ಲೆಕ್ಕವಿಲ್ಲ. ಒಂದೊಂದು ಊರಿನಲ್ಲಿ ನೂರಾರು ತರದ ದಂತ ಕಥೆಗಳು. ಗಂಡು ಸಂತತಿ ನಾಗರ ಹಾವಿನ ನಿಯಂತ್ರಣದಲ್ಲಿ ಇದೆಯಂತೆ. ನಾಗರಹಾವನ್ನು ಕೊಂದವನಿಗೆ ಇಪ್ಪತ್ತು ಸಂತತಿಗಳ ವರೆಗೆ ಗಂಡು ಮಕ್ಕಳು ಹುಟ್ಟುವುದಿಲ್ಲವಂತೆ. ನಾಗರಹಾವು ಕನಸಿನಲ್ಲಿ ಕಚ್ಚಿದರೆ ಆತನ ಹೆಂಡತಿ ಗರ್ಭಿಣಿ ಇರುವಳೆಂದು ತಿಳಿಯಬೇಕಂತೆ. ಹಾವುಗಳ ಪುರಾಣಕ್ಕೆ ಆದಿ ಇದ್ದರೂ ಅವುಗಳ ಕತೆಗೆ ಅಂತ್ಯ ಇಲ್ಲದಂತೆ ಕಾಣುತ್ತದೆ. ಈ ಐತಿಹ್ಯಗಳು ಹಿಂದೂ ಜನರ ಧರ್ಮ ಇತಿಹಾಸಗಳಲ್ಲಿ ಹಾಸುಹೊಕ್ಕಾಗಿ ಬಂದಿವೆ. ಕಲ್ಪಿತ ಕತೆಗಳನ್ನು ವಿಮರ್ಶಿಸುವ ಕಾಲ ಈಗ ಬಂದಿದೆ. ಸತ್ಯಕ್ಕೆ ವಿರುದ್ಧವೆಂದು ವಿಜ್ಞಾನದ ದೃಷ್ಟಿಯಲ್ಲಿ ನಿರ್ಣಯವಾದ ಮೇಲಾದರೂ ಮೂಢನಂಬಿಕೆಗಳನ್ನು ತೊಡೆದುಹಾಕಬೇಕು. ಹಾವುಗಳ ವಿಷಯವಾಗಿ ಶಾಸ್ತ್ರೀಯ ಜ್ಞಾನವನ್ನು ಪ್ರತಿಯೊಬ್ಬನೂ ಮಾಡಿಕೊಂಡರೆ ಈಗಾಗುತ್ತಿರುವ ಅಪಮೃತ್ಯುಗಳ ಸಂಖ್ಯೆ ಅರ್ಧಕ್ಕಾದರೂ ಇಳಿದೀತು. ವಿಷಕಾರಿ ಹಾಗು ನಿರ್ವಿಷಕಾರಿ ಹಾವುಗಳನ್ನು ಗುರುತಿಸುವುದೇನೂ ಕಷ್ಟವಲ್ಲ. ಪೊರೆಗಳ ಲಕ್ಷಣ ಅಭ್ಯಾಸದಿಂದ ಎಂಥ ಅನಭಿಜ್ಞನೂ ಅವುಗಳನ್ನು ಗುರುತಿಸಬಲ್ಲ. ಇಂಥ ಕ್ರಮಬದ್ಧ ಶಾಸ್ತ್ರೀಯ ಜ್ಞಾನವನ್ನು ಪಡೆದು ಮೂಢನಂಬಿಕೆಗಳಿಂದ ದೂರಾಗುವುದರಲ್ಲಿ ಮಾನವನ ಕಲ್ಯಾಣವೂ ಇದೆ, ಮಾನಸಿಕ ಆರೋಗ್ಯವೂ ಇದೆ.

❋❋❋


೭. ಮಹಾ ಹಂತಕ ಚಿರತೆ

ಬೇಟೆಯ ಪ್ರಾಣಿಗಳಲ್ಲಿ ಅತ್ಯಂತ ಚತುರ ಪ್ರಾಣಿ ಚಿರತೆ. ಇದು ಮಾರ್ಜಾಲಗಳ ರಾಜ. ಹುಲಿಗಿಂತಲೂ ಜಾಣ. ಸಿಂಹಕ್ಕಿಂತಲೂ ಭಯಂಕರ. ಮಾಂಸಾಹಾರಿಗಳಲ್ಲಿಯೇ ಅತ್ಯಂತ ಬಲಿಷ್ಠ. ಕಿವಿ ಕಣ್ಣಾಗಿ, ಕಣ್ಣು ಕಿವಿಯಾಗಿ ತದೇಕಚಿತ್ತದಿಂದ ಕುಳಿತಿದೆಯೆಂದರೆ ಯಾವುದೋ ಒಂದು ಪ್ರಾಣಿಯ ಆಯುಷ್ಯ ಮುಗಿದಿದೆ ಎಂದೇ ತರ್ಕ. ನೋಡಲು ಎಷ್ಟು ರಮ್ಯವೋ ಅಷ್ಟೇ ಕ್ರೂರ ಹಾಗೂ ವಂಚಕ. ಅದರ ಅರಳಿದ ಕಣ್ಣುಗಳು, ಚೂಪಾದ ಕೋರೆ ಹಲ್ಲುಗಳು, ಹರಿತ ನಖಗಳು ಕ್ರೂರತನದ ಸಂಕೇತಗಳೆನಿಸಿದರೆ, ಹೊಂಬಣ್ಣದ ಕೇಶರಾಶಿಯ ಮೈದೊಗಲು ಸೌಂದರ್ಯದ ಲಕ್ಷಣವಾಗಿದೆ.

ಕಾಡು ಪ್ರಾಣಿಗಳ ಬೇಟೆಯಲ್ಲಿ ಪಳಗಿದ ಓರ್ವ ಅರಣ್ಯಾಧಿಕಾರಿ ಹೇಳುತ್ತಾನೆ. ''ಹುಲಿ ಕೇವಲ ತನ್ನ ತಲೆಯನ್ನು ಮರೆಮಾಡಲಾರದಷ್ಟು ಜಾಗೆಯಲ್ಲಿ ಚಿರತೆ ಮುದ್ದೆಯಾಗಿ ಪೂರ್ತಿ ಅವಿತುಕೊಳ್ಳಬಲ್ಲದು. ಹುಲಿಯಾಗಲಿ, ಸಿಂಹವಾಗಲಿ ಮರವನ್ನು ಹತ್ತಲಾರದು. ಆದರೆ ಚಿರತೆ ಮರವನ್ನು ಸುಲಭವಾಗಿ ಏರುವುದಲ್ಲದೆ ಮರದ ಮೇಲಿಂದ ನೇರವಾಗಿ ನಿಮ್ಮ ಬೆನ್ನ ಮೇಲೆ ನೆಗೆಯಬಲ್ಲದು. ಧೀಶಕ್ತಿ, ಸ್ನಾಯುಬಲ ಮತ್ತು ಸೌಂದರ್ಯಗಳ ಇಂಥ 'ತ್ರಿವಿಕ್ರಮ' ಪ್ರಾಣಿ ಈ ಪ್ರಪಂಚದಲ್ಲಿ ಇನ್ನೊಂದಿಲ್ಲ.''



ಚಿರತೆಗಳು ಸಾಮಾನ್ಯವಾಗಿ ನರಭಕ್ಷಕವಲ್ಲ. ಆದರೆ ಆಕಸ್ಮಾತ್ತಾಗಿ ಮನುಷ್ಯನನ್ನು ಕೊಂದಾಗ ಅವನನ್ನು ಕೊಲ್ಲುವುದು ಎಷ್ಟು ಸುಲಭ ಎಂದು ತಿಳಿದು ಅದು ಮಾನವ ಸಂಹಾರಕವಾಗಿ



ಬಿಡುವುದುಂಟು. ಒಮ್ಮೊಮ್ಮೆ ಶಾರೀರಿಕ ದೌರ್ಬಲ್ಯದಿಂದಲೋ ವೃದ್ಧಾಪ್ಯ ದಿಂದಲೋ ಮನುಷ್ಯನನ್ನು ಕೊಂದು ತಿನ್ನುವುದುಂಟು. ಆದರೆ ಸಾಮಾನ್ಯವಾಗಿ ಚಿರತೆಯಂಥ ನಿಪುಣ ಬೇಟೆಗಾರ ಪ್ರಾಣಿ ಅತ್ಯಲ್ಪ ಮಾಂಸವುಳ್ಳ ಮಾನವನನ್ನು ತುಚ್ಛೀಕರಿಸುವುದೇ ಹೆಚ್ಚು.

ಮಾನವ ಸಂಹಾರಗಳಲ್ಲಿ ಅತಿ ಭಯಂಕರವೆನಿಸಿದ್ದು ರುದ್ರಪ್ರಯಾಗದ ನರಮಾಂಸ ಭಕ್ಷಕ ಚಿರತೆ. ಸುಪ್ರಸಿದ್ಧ ಬೇಟೆಗಾರನಾದ ಜಿಮ್ ಕಾರ್ಬೆಟ್ ಅದನ್ನು ಕೊಲ್ಲುವವರೆಗೂ ಅದು ೧೯೧೮ ರಿಂದ ೧೯೨೬ರ ಅವಧಿಯಲ್ಲಿ ಗಢವಾಲ ಸುತ್ತಲಿನ ಸುಮಾರು ೫೦೦ ಚದರ ಮೈಲು ಕ್ಷೇತ್ರದಲ್ಲಿ ೧೨೫ ಮಾನವ ಜೀವಿಗಳ ಆಹುತಿ ತೆಗೆದುಕೊಂಡಿತ್ತಂತೆ.

೧೯೫೮ ಫೆಬ್ರುವರಿ ತಿಂಗಳ ಒಂದು ದಿನ. ಮಧ್ಯಪ್ರದೇಶದ ಹಳ್ಳಿಯೊಂದರಲ್ಲಿ ಕಳ್ಳ ಹೆಜ್ಜೆಯಿಂದ ಮನೆಯ ಆವರಣದಲ್ಲಿ ನುಸುಳಿ ಬಂದ ಚಿರತೆ ಸಾಲಾಗಿ ಮಲಗಿಕೊಂಡ ಮೂವರು ಬಾಲಿಕೆಯರಲ್ಲಿ ಎಡ ಬಲಗಳಲ್ಲಿ ನಿದ್ರಿಸುತ್ತಿದ್ದವರ ನಿದ್ರೆಗೆ ಸ್ವಲ್ಪವೂ ಭಂಗ ತರದಂತೆ ಕೇವಲ ಮಧ್ಯದಲ್ಲಿ ಮಲಗಿದವಳನ್ನು ಮಾತ್ರ ಕೊಂಡೊಯ್ದಿತಂತೆ. ನಿಸ್ಸಂದೇಹವಾಗಿಯೂ ಚಿರತೆ ಅತ್ಯಂತ ಬುದ್ಧಿಶಾಲಿ, ಹಿಂಡುಹಿಂಡಾಗಿ ಮೇಯುವ ಜಿಂಕೆಗಳ ಮೇಲೆ ಅದು ಒಮ್ಮೆಲೆ ಆಕ್ರಮಣ

ಮಾಡುವುದಿಲ್ಲ . ಅವು ಮೇಯುತ್ತಿರುವ ಹುಲ್ಲುಗಾವಲಿನ ಅನತಿದೂರದಲ್ಲಿ ಚಿರತೆ ನೆಲದ ಮೇಲೆ ಉರುಳಿ ಮುದ್ದೆಯಾಗಿ ಬೆಕ್ಕಿನ ಮರಿಯಂತೆ ತನ್ನ ಬಾಲದ ಜೊತೆಗೆ ಆಟವಾಡಿದಂತೆ ನಟಿಸುತ್ತದೆ. ಮಚ್ಚೆ ಜಿಂಕೆಗಳು ಸ್ವಭಾವತಃ ಕುತೂಹಲಿ ಪ್ರಾಣಿಗಳು. ಯಾವುದೊಂದು ಜಿಂಕೆ ಪರೀಕ್ಷಿಸಲೋಸುಗ ಸಮೀಪಿಸಿದಾಗ ಈ ಬೆಕ್ಕಿನ ಮರಿ-ವೇಷದ ದೈತ್ಯ ಚಿರತೆ ಚಂಗನೇ ಜಿಗಿದು ಕ್ಷಣಾರ್ಧದಲ್ಲಿ ಅದನ್ನು ಕಬಳಿಸಿ ಬಿಡುತ್ತವೆ.

ಮಾನವನ ಬೆರಳು ಗುರುತುಗಳಂತೆ ಯಾವ ಎರಡು ಚಿರತೆಗಳ ತ್ವಚೆಯ ಮಚ್ಚೆಗಳು ತದ್ರೂಪವಾಗಿರುವುದಿಲ್ಲ. ಗುಲಾಬಿಪಕಳೆಯಾಕಾರದ ಕಪ್ಪು ಮಚ್ಚೆಗಳು, ಸಾಮಾನ್ಯ. ಮೈದೊಗಲಿನ ವರ್ಣ ವಿನ್ಯಾಸ ಮಾಸಲು ಹಳದಿ ಬಣ್ಣದಿಂದ ಒಣ ಹುಲ್ಲಿನ ಬಣ್ಣದ ವರೆಗೆ ಹಲವಾರು ಛಾಯೆಗಳಲ್ಲಿ ಕಂಡುಬರಬಹುದು. ಪರ್ಶಿಯಾದ ಚಿರತೆಗಳು ದಟ್ಟಬೂದು ಬಣ್ಣದವು. ಜಾವಾದ ಚಿರತೆಗಳು ಮಸುಕು ಕಂದು ಬಣ್ಣದವು. ಏಶಿಯಾದ ಚಿರತೆಗಳಿಗಿಂತಲೂ ಆಫ್ರಿಕದ ಚಿರತೆಗಳ ಮಚ್ಚೆಗಳು ಚಿಕ್ಕವಾಗಿಯೂ, ಸಾಂದ್ರವಾಗಿಯೂ ಇರುತ್ತವೆ. ನಮ್ಮ ದೇಶದ ಕಾಡು ಚಿರತೆಗಳು ಎಲ್ಲಕ್ಕಿಂತ ದೊಡ್ಡವು. ಇವುಗಳ ಮೈ ಬಣ್ಣ ಕಂದು. ಗುಲಾಬಿ ಆಕಾರದ ಮಚ್ಚೆಗಳು ವಿರಳ.

ಪ್ರೌಢ ಗಂಡು ಸುಮಾರು ೬ ರಿಂದ ೮ ಅಡಿಗಳ ಉದ್ದಕ್ಕೆ ಬೆಳೆಯಬಲ್ಲದು. ತೂಕ ೧೦೦ ರಿಂದ ೧೮೦ ಪೌಂಡುಗಳಷ್ಟು. ಕೇವಲ ಗಾತ್ರದಿಂದ ಚಿರತೆಯ ಸಾಮರ್ಥ್ಯವನ್ನು ಅಳೆಯಲು ಬಾರದು. ಈ ಚಾಣಾಕ್ಷ ಪ್ರಾಣಿಯ ಯೋಗ್ಯತೆ ಹಾಗೂ ಪ್ರತಿಷ್ಠೆ ಅದು ನಿಯೋಜಿಸುವ ಬೇಟೆಯ ತಂತ್ರದಲ್ಲಿದೆ. ಕೆನ್ಯಾದಲ್ಲಿ ಒಮ್ಮೆ ಸೈದ್ ಡೌನಿ ಎಂಬ ಬೇಟೆಗಾರನು ಎಮ್ಮೆ ಕರುವಿನ ಮೇಲೆ ಆಕ್ರಮ ಮಾಡಲು ಚಿರತೆ ಯೋಜಿಸಿದ ಉಪಾಯ ಕಂಡು ಬೆರಳು ಕಚ್ಚಿದ. ಅದು ಮಾಡಿದ್ದು ಇಷ್ಟೇ. ತನ್ನ ದೇಹವನ್ನು ಎಮ್ಮೆಯ ಸಗಣಿಯಲ್ಲಿ ಸಾಕಷ್ಟು ಹೊರಳಾಡಿಸಿ ಕರುವಿನ ಬಳಿ ಸಾರಿತು. ಈ ಠಕ್ಕ. ವೇಷ ಬದಲಾವಣೆಯಿಂದ ತನ್ನ ದೇಹದ ಮೂಲ ವಾಸನೆಯನ್ನು ತಡೆಗಟ್ಟಿತಲ್ಲದೆ ಎಮ್ಮೆ ಕರು ಗಾಬರಿಯಾಗದಂತೆಯೂ ನೋಡಿಕೊಂಡಿತು. ಕೇಳುವುದೇನು ? ಮುಗ್ಧ ಕರು ಮೇಯುತ್ತ ನಿಂತಂತೆಯೇ ಕ್ಷಣಾರ್ಧದಲ್ಲಿ ಅದನ್ನು ಕಚ್ಚಿಕೊಂಡು ಪಲಾಯನಗೈದಿತು !

ಜೋಡಿ ಚಿರತೆಗಳ ಧೂರ್ತ ಯೋಜನೆಯನ್ನು ಕಂಡವರು ಜಾಕ್ ಡೆಂಟನ್ ಸ್ಕಾಟ್ ಎಂಬುವರು. ಈ 'ದಂಪತಿ'ಗೆ ಕಪ್ಪು ಮುಖದ ಮಂಗನ ಮಾಂಸವನ್ನು ತಿನ್ನುವ ಚಪಲ. ಅದಕ್ಕಾಗಿ ಇವು ಮರವನ್ನೇರುತ್ತಲೇ ಮರದ ಮೇಲಿನ ಮಂಗಗಳು ಜೀವದಾಶೆಯಿಂದ ಮುಂದಿನ ಮರಕ್ಕೆ ನೆಗೆದವು. ಟೊಂಗೆಯಿಂದ ಟೊಂಗೆಗೆ ಹಾರಲು ಬಾರದ ಆ ಚಿರತೆಗಳು ಚುರುಕಾಗಿ ಕೆಳಗಿಳಿದು ಮಂಗಗಳು ಕುಳಿತ ಮರಕ್ಕೆ ಮುತ್ತಿಗೆ ಹಾಕಿದವು. ಮಂಗಗಳು ಪುನಃ ಮುಂದಿನ ಮರಕ್ಕೆ ಜಿಗಿದವು. ಹೀಗೆಯೇ ಸಾಗಿತು ಅವುಗಳ ಮುಟ್ಟಾಟ. ಆದರೆ ಅದನ್ನು ಕೊನೆಗೊಳಿಸಿದ ಚಿರತೆಗಳ 'ತಂತ್ರ' ನಿಜಕ್ಕೂ ಬೆರಳುಕಚ್ಚುವಂತಹದು. ಮಂಗಗಳನ್ನು ಈ ರೀತಿ ಅಟ್ಟುತ್ತ ಬಯಲು ಸೀಮೆಗೆ ಹೊಂದಿದ್ದ ಮರದ ಹತ್ತಿರ ಬಂದವು. ಚಿರತೆಗಳು ಈ ಕೊನೆಯ ಮರವನ್ನು ಹತ್ತತೊಡಗುತ್ತಲೇ ಮಂಗ ಕೆಳಗಿಳಿದು ಬಯಲು ದಾಟಿ ದೂರದ ಮರದತ್ತ ಹೋಗುವುದು ಅನಿವಾರ್ಯವಾಯಿತು. ಚಿರತೆ 'ದಂಪತಿ'ಯ ಹಂಚಿಕೆ ಫಲಿಸಿತು.

ಚಿರತೆಯ ಸ್ನಾಯುಬಲವೂ ಅಸಾಧಾರಣವಾಗಿದೆ. ಮರದ ಟೊಂಗೆಗಳಲ್ಲಿ ಕುಳಿತುಕೊಂಡ ಚಿರತೆಯೊಂದು ೩೦೦ ಪೌಂಡು ಭಾರತ ಜೀರಾಫೆಯ ಕುತ್ತಿಗೆ ಸೀಳಿ ಕೊಂದ ಅಸಾಧಾರಣ ಘಟನೆಯನ್ನು ಕಂಡವರು ಆಫ್ರಿಕ ಸಫಾರಿಗಳ ಸಂಘಟಕರಾದ ಡೊನಾಲ್ ಕರ್ ಎಂಬುವರು. ಕೊಂದ ಕತ್ತೆಯನ್ನು ಹೆಗಲ ಮೇಲೆ ಚೆಲ್ಲಿಕೊಂಡು ಒಂದು ಚಿರತೆ ಕಲ್ಲು ಬಂಡೆಗಳ ದಾರಿಯನ್ನು ಕಾಲು ಮೈಲುದ್ದಕ್ಕೂ ಕ್ರಮಿಸಿದ್ದನ್ನು ಬೇಟೆಗಾರನೊಬ್ಬ ಕಣ್ಣಾರೆ ಕಂಡ ದಾಖಲೆ ಇದೆ. ಡನ್‌ಬರ್ ಬ್ರ್ಯಾಂಡರ್ ಎಂಬ ನಿಸರ್ಗ ಪ್ರೇಮಿ ಚಿರತೆಯೊಂದನ್ನು ಸಜೀವವಾಗಿ ಹಿಡಿದು ಬೋನಿನಲ್ಲಿ ಹಾಕಿದ. ಎಂಥ ಬಲಶಾಲಿಯೂ ಸುಲಭವಾಗಿ ಮಣಿಸದಂತಹ ಗಟ್ಟಿ ಕೊಂಡಿಯನ್ನು ತಿರುವಿ ಆಳುಗಳನ್ನು ಕರೆತರಲು ಹೋದ. ಮರಳಿ ಬಂದಾಗ ಬೋನು ಖಾಲಿ ! ನಂಬಲಸಾಧ್ಯವಾದ ಶಕ್ತಿ ಪ್ರಯೋಗಿಸಿ ಆ ಚಿರತೆ ತನ್ನ ಪಂಜಾದಿಂದ ಕೊಂಡಿಯನ್ನು ಹಿಂದೆ ತಿರುವಿ ಬೋನಿನ ಬಾಗಿಲು ತೆರೆದು ಪಲಾಯನ ಗೈದಿತ್ತು!

ಸಿಂಹ, ಖಡ್ಗಮೃಗಗಳನ್ನು ಬೇಟೆಯಾಡುವುದರಲ್ಲಿ ಜಾಗತಿಕ ವಿಕ್ರಮ ಸ್ಥಾಪಿಸಿದ ಜಾನ್ ಹಂಟರ್ ''ಚಿರತೆಯ ಬೇಟೆಯಾಡಲು ಎದೆಗಾರಿಕೆ ಬೇಕು'' ಎಂದು ಹೇಳಬೇಕಾದರೆ ಅದರ ಚಾಕಚಕ್ಯ. ಬೇಟೆಗಾರಿಕೆಯ ಗತ್ತು ಎಂಥದಿರಬೇಕು ಎಂಬುದರ ಅರಿವಾಗುತ್ತದೆ. ತನ್ನ ಜಾಡು ಹಿಡಿದು ಬೇಟೆಗಾರನೊಬ್ಬ ಬೆನ್ನು

ಹತ್ತಿರುವುದು ಚಿರತೆಗೆ ತಿಳಿದರೆ ಅದು ಮರವನ್ನೇರಿ ಕಾಲುದಾರಿಯ ಮೇಲ್ಗಡೆಗೆ ಚಾಚಿದ ಟೊಂಗೆಯನ್ನಾಶ್ರಯಿಸಿ ಚಪ್ಪಟೆಯಾಗಿ ಮಲಗುತ್ತದೆ. ಅದೇ ಕಾಲುದಾರಿಯಿಂದ ಬರುವ ಬೇಟೆಗಾರ ತನ್ನಷ್ಟಕ್ಕೆ ತಾನು ಮುನ್ನಡೆದನೋ ಚಿರತೆ ಅವನ ಗೋಜಿಗೆ ಹೋಗುವುದಿಲ್ಲ. ಆಕಸ್ಮಾತ್ತಾಗಿ ಆತನೇನಾದರೂ ಕುತೂಹಲದಿಂದ ಮೇಲ್ಗಡೆ ನೋಡಿದನೋ ಅವನ ಆಯುಷ್ಯವೇ ತುಂಬಿ ಬಂದಂತೆ.

ನಮ್ಮ ರಾಜ್ಯದವರೇ ಆದ ಡಿ. ಆರ್. ಕುಲಕರ್ಣಿಯವರು ಸುಪ್ರಸಿದ್ಧ ಬೇಟೆಗಾರರು. ಹಿಂದಿನ ಮುಂಬಯಿ ರಾಜ್ಯದಲ್ಲಿ ಅರಣ್ಯಾಧಿಕಾರಿಯಾಗಿ ನಿವೃತ್ತರಾದವರು. ಸೂಪಾ ಊರಿನ ಸಮೀಪದ ಗುಡ್ಡದಲ್ಲಿ ತಾವು ಎದುರಿಸಿದ ಚಿರತೆಯ ಚತುರತೆಯನ್ನು ತುಂಬ ಮನೋಜ್ಞವಾಗಿ ನಿರೂಪಿಸಿದ್ದಾರೆ. (ಡಿಸೆಂಬರ್ ೧೯೮೦ 'ಕಸ್ತೂರಿ'ಯಲ್ಲಿ.)

ಇಂಥದೇ ಒಂದು ಪ್ರಸಂಗವನ್ನು ಹನ್ನೆರಡು ವರುಷದ ಬಾಲಕನಿದ್ದಾಗ ನಾನು ಎದುರಿಸಿದ್ದೆ. ತುಂಬ ನಸುಕಿನಲ್ಲಿ ಬಟ್ಟೆ ಒಗೆಯಲೋಸುಗ ದೂರದ ಗುಡ್ಡದ ಬಾವಿಗೆ ಹೋಗಿದ್ದೆ. ಬಟ್ಟೆಗಳನ್ನು ತೋಯಿಸುವಾಗ ಆಕಸ್ಮಾತ್ತಾಗಿ ನನ್ನ ದೃಷ್ಟಿ ಎದುರಿಗೆ ಹೋಯಿತು. ಕೇವಲ ಮೂವತ್ತು ಅಡಿಗಳಾಚೆ ಬಾವಿಯ ಎದುರಿನ ಅಂಚಿನಲ್ಲಿ ನಿಂತಿದೆ ಅರಳುಗಣ್ಣಿನ ಚಿರತೆ. ಅದು ಮಿಸುಕಾಡದೆ ನನ್ನೆಡೆಗೆ ನೋಡುತ್ತಿತ್ತು. ನನ್ನ ದೇಹ ಮರಗಟ್ಟಿದಂತಾಗಿ ಯಾಂತ್ರಿಕವಾಗಿ ಅದರೆಡೆಗೆ ನೋಡಿದ್ದಷ್ಟೇ ನೆನಪು. ಸ್ಮೃತಿ ತಪ್ಪಿ ಕಲ್ಲುಗಳ ಮೇಲೆ ಒರಗಿದ ನನ್ನನ್ನು ಎಚ್ಚರಿಸಿದವರು ದನಗಾಹಿ ಹುಡುಗರು ; ಆ ರಾತ್ರಿ ನಾನು ತೀವ್ರ ಜ್ವರದಿಂದ ಬಳಲಿದೆ ಎಂಬುದನ್ನು ಬೇರೆ ಹೇಳಬೇಕಿಲ್ಲ.

ಚಿರತೆಯ ಗಲ್ಲ ಮೀಸೆಗಳು, ಮುಂಗಾಲುಗಳ ಮೇಲಿನ ಬಿರುಗೂದಲುಗಳು ರೇಡಾರ್‌ಗಳಂತೆ ಉಪಯುಕ್ತವಾಗಿವೆ. ಎಂಥ ಪರಿಸರವೇ ಇರಲಿ ಅದರ ಸ್ಪರ್ಶಜ್ಞಾನವನ್ನು ಅವು ಮಿದುಳಿಗೆ ಕೂಡಲೆ ರವಾನಿಸುತ್ತವೆ. ನೆಟ್ಟಗೆ ನಿಂತ ಅದರ ಕಿವಿಗಳು ಅನತಿ ದೂರದಿಂದ ಬರುವ ಅತ್ಯಂತ ಸೂಕ್ಷ್ಮ ಧ್ವನಿತರಂಗಗಳನ್ನು ಗ್ರಹಿಸಲು ಸಮರ್ಥವಾಗಿವೆ. ಜಾಕ್ ಸ್ಕಾಟ್ ಎಂಬ ಬೇಟೆಗಾರ ಮರದ ಮೇಲೆ ಕುಳಿತಾಗ ಅವನ ಜೇಬಿನಿಂದ ಕೆಳಗೆ ಬಿದ್ದ ಚಿಕ್ಕ ಡೈರಿಯ ಸಪ್ಪಳವನ್ನು ೬೦೦ ಅಡಿಗಳಷ್ಟು ದೂರದಿಂದ ಕೇಳಿದ ಚಿರತೆ ತಲೆ ಎತ್ತಿ ನೋಡಿ ಮರೆಯಾಯಿತಂತೆ. ಬದಿಯಲ್ಲಿಯೇ ಕುಳಿತ

ಜೊತೆಗಾರನಿಗೆ ಆ ಸಪ್ಪಳ ಕೇಳಿರಲಿಲ್ಲವಂತೆ!

ಬೇಟೆಯ ಯಶಸ್ಸಿಗೆ ಬೇಕಾಗುವ ಗುಣವೈಶಿಷ್ಟ್ಯ ಎರಡು : ಮಾಟಾಗಿ ಮುದುಡಿ ಅಡಗಿಕೊಳ್ಳುವ ಶರೀರ ಹಾಗೂ ಅನಿರೀಕ್ಷಿತ ಆಕ್ರಮಣ. ಈ ಎರಡೂ ಲಕ್ಷಣಗಳು ಚಿರತೆಯಲ್ಲಿವೆ. ಅದರ ನಡಿಗೆ ತುಂಬ ಮೃದು ಹಾಗೂ ನಿಶ್ಯಬ್ಧ. ಮುಂಗಾಲುಗಳ ಐದು ಹಾಗೂ ಹಿಂಗಾಲುಗಳ ನಾಲ್ಕು ಹರಿತವಾದ ನಖಗಳು ಬೆರಳುಗಳ ಕೊನೆಯ ಕೀಲಗಳೊಂದಿಗೆ ಒಳತಿರುವಿಕೊಂಡು ಸಂರಕ್ಷಿಸಲ್ಪಟ್ಟಿವೆ. ಸಾಲದೆಂಬಂತೆ ನಖಗಳು ಚರ್ಮದ ಪೊರೆಯಲ್ಲಿ ಭದ್ರವಾಗಿವೆ. ಈ ಸಂಯುಕ್ತ ಅಂಗವೇ ಅದರ ಪಂಜು- ಉಗುರುಗಳು. ಹೀಗೆ ನೆಲಕ್ಕೆ ನೇರವಾಗಿ ಸ್ಪರ್ಶಿಸದೆ ಚೂಪಾಗಿಯೇ ಇರಲು ಅವುಗಳಿಗೆ ಸಾಧ್ಯವಾಗಿದೆ: ಆಕ್ರಮಣದ ವೇಳೆಯಲ್ಲಿ ಮಾತ್ರ ಮುಂಗಾಲುಗಳ ಸ್ನಾಯುಗಳಿಗೆ ಹೊಂದಿಕೊಂಡ ಸ್ನಾಯುಬಂಧವು ಒಳತಿರುಚಿಕೊಂಡ ಕೀಲನ್ನು ತೀವ್ರಗತಿಯಲ್ಲಿ ಹಿಂದೆ ಜಗ್ಗುವುದರಿಂದ ಚಿರತೆಯ ಪ್ರಮುಖ ಅಸ್ತ್ರಗಳಾದ ನಖಗಳು ತುಸುವೇ ಕೆಳಮುಖವಾಗಿ ಹೊರಚಾಚಿ ಬೇಟೆಗೆ ಮರಣಾಂತಿಕ ಪೆಟ್ಟು ಕೊಡಬಲ್ಲವು. ಸಾಮಾನ್ಯ ಸ್ಥಿತಿಯಲ್ಲಿ ನೆಲವನ್ನು ಮುಟ್ಟುವ ಅದರ ಕಾಲಿನ ಭಾಗವೆಂದರೆ ಬೆರಳ ಮಧ್ಯದ ಕೀಲಗಳು ಇವುಗಳ ಹೊರ ಬದಿಯ ಚರ್ಮವು ಮೃದು ಅಂಗಾಂಶವನ್ನು ಬೆಳಸಿಕೊಂಡು ಮೆತ್ತೆದಿಂಬಿನಂತಾಗಿ ಚಿರತೆಯ ನಿಶ್ಯಬ್ದ ನಡಿಗೆಗೆ ಇಲ್ಲವೆ ಓಟಕ್ಕೆ ಕಾರಣವಾಗಿದೆ. ಅದರ ಓಟವಂತೂ ಕಣ್ಣಿಗೊಂದು ಹಬ್ಬ. ಮುಂಗಾಲುಗಳನ್ನು ಪುಟಿಸುತ್ತ ನೆಗೆಯುತ್ತ ಸುಂಯ್ ಸುಂಯ್ ಎಂದು ಫ್ಯಾಂಟಮ್‌ನಂತೆ ಮುನ್ನುಗ್ಗುವ ದೃಶ್ಯ ರುದ್ರ ಮನೋಹರವಾದದ್ದು: ಓಟದ ಗತಿಯಲ್ಲಿ ಒಂದೇ ನೆಗೆತಕ್ಕೆ ಅದು ೪೦ ಅಡಿಗಳಷ್ಟು ದೂರ ಜಿಗಿಯಬಲ್ಲದು. ಮುಂಗಾಲುಗಳ ಹೆಜ್ಜೆ ಇಟ್ಟ ಜಾಗದಲ್ಲಿಯೇ ಕರಾರುವಕ್ಕಾಗಿ ಹಿಂಗಾಲುಗಳನ್ನು ಊರುವ ಅದರ ಗತಿ ಎಂಥ ಒಣಗಿದೆಲೆಗಳ ಮೇಲೆ ಓಡುವಾಗಲೂ ಸಪ್ಪಳದ ತೀವ್ರತೆಯನ್ನು ಬಹುಮಟ್ಟಿಗೆ ಕ್ಷೀಣಿಸಲು ಕಾರಣವಾಗಿದೆ.

ಚಿರತೆಯ ಸುಂದರವಾದ ಕಾಂತಿಯುಕ್ತ ಮೈದೊಗಲು ಹಾಗೂ ಅದರ ಮೇಲಿರುವ ಕಪ್ಪು ಮಚ್ಚೆಗಳು ಕೂಡ ಬೇಟೆಗೆ ಹಾಗೂ ಅದರ ಉಳಿವಿಗೆ ಸಹಾಯಕವಾಗಿವೆ. ಅರಣ್ಯದ ಅಂಚಿನಲ್ಲಿ ನಿಂತು ಮರಗಳ ಸಂದುಗಳಲ್ಲಿ ಆಳವಾಗಿ ದೃಷ್ಟಿ ಹಾಯಿಸಿದರೆ ಅಲ್ಲಿ ಕಾಣುವುದು ನೆರಳು ಬೆಳಕುಗಳ ಚದುರಂಗದಾಟವಷ್ಟೆ.

ಅಂಥ ಪರಿಸರದಲ್ಲಿ ಚಿರತೆ ಮರೆಯಾಗಿ ನಿಂತುಕೊಂಡಾಗ ಅದರ ಮೈದೊಗಲಿನ ವರ್ಣ ವಿನ್ಯಾಸ ಪರಿಸರದೊಂದಿಗೆ ಒಂದಾಗಿ ಮಾನವ ಕಣ್ಣುಗಳನ್ನು ಕೂಡ ಮೋಸಗೊಳಿಸಬಲ್ಲದು. ಎರಡನೇ ಮಹಾಯುದ್ಧದ ಕಾಲದಲ್ಲಿ ಅರಣ್ಯ ಪರಿಸರದಲ್ಲಿ ಕಾದಾಡುವ ಸೈನಿಕರಿಗೆ ಚಿರತೆಯ ಮೈ ಬಣ್ಣವನ್ನು ಹೋಲುವ ಪೋಷಾಕುಗಳನ್ನು ಒದಗಿಸಲಾಗಿತ್ತಂತೆ. ಮಿಲಿಟರಿಯ ಈ ತಂತ್ರ ನಿಸ್ಸಂದಿಗ್ಧವಾಗಿ ಚಿರತೆಯನ್ನು ಮೋಸಪಡಿಸಲಿಕ್ಕಂತೂ ಇರಲಾರದು.

ಚಿರತೆಯ ಈ ಎಲ್ಲ ಅದ್ಭುತವಾದ ದೈಹಿಕ ದತ್ತಿಗಳಿಗಿಂತಲೂ ಮಿಗಿಲಾದ ಅದರ ಏಕೈಕ ಸ್ವತ್ತು ಅದಕ್ಕಿರುವ ತೀಕ್ಷ್ಣ ಬುದ್ಧಿ. ಬೋನಿನಲ್ಲಿ ಬಂಧಿಸಲ್ಪಟ್ಟ ಇತರ ಪ್ರಾಣಿಗಳು ವ್ಯರ್ಥವಾಗಿ ಕಿರಿಚುವುದನ್ನು ಕಂಡ ಡನ್‌ಬರ್ ಬ್ರ್ಯಾಂಡರ್ ಚಿರತೆಯನ್ನು ಬೋನಿನಲ್ಲಿ ಹಾಕಿದಾಗ ಎಲ್ಲವೂ ನಿಶ್ಶಬ್ದ. ಅವನಿಗೆ ಕೇಳಿಸಿದ್ದು ತಾನೇ ತಿರುವಿದ ಬೋನಿನ ಕೊಂಡಿಯ ಶಬ್ದ ಮಾತ್ರ. ಚೀತ್ಕಾರ ವ್ಯರ್ಥ ಶ್ರಮ ಎಂಬುದು ಚಿರತೆಗೆ ಗೊತ್ತು. ತಾನು ಪಾರಾಗುವ ಯೋಚನೆಯಲ್ಲಿ ಅದು ಮೌನಿಯಾಗಿಬಿಡುತ್ತದೆ.

ಗಂಡು ಚಿರತೆ ಏಕಪತ್ನೀವ್ರತಸ್ಥ. ಕೂಡಿದ ಗಂಡು ಹೆಣ್ಣುಗಳ ಪ್ರೀತಿ ಅತ್ಯಂತ ನಿಕಟ ಹಾಗೂ ವಾತ್ಸಲ್ಯಮಯ. ಒಂದು ಗ್ರಾಮದಲ್ಲಿ ದನಕರುಗಳನ್ನು ಕೊಳ್ಳೆ ಹೊಡೆಯುತ್ತಿದ್ದ ಚಿರತೆಯ ದಾರಿಯಲ್ಲಿ ಒಬ್ಬ ಬೇಟೆಗಾರ ವಿಷಮಿಶ್ರಿತ ಆಹಾರವನ್ನಿಟ್ಟ. ಬೆಳಿಗ್ಗೆ ಬಂದು ನೋಡಿದ ಅವನಿಗೆ ಕರುಣಾಪೂರಿತ ದೃಶ್ಯ ಕಾದಿತ್ತು. ಸತ್ತ ಹೆಣ್ಣು ಚಿರತೆಯ ಮೈಮೇಲೆ ತಲೆಯನ್ನು ಚೆಲ್ಲಿ ಮಲಗಿತ್ತು ಅದರ ಗಂಡು ಸಂಗಾತಿ. ಎಷ್ಟು ಪ್ರಯತ್ನಿಸಿದರೂ ಸರಿಯದ ಗಂಡು ಚಿರತೆಯನ್ನು ಕೊನೆಗೆ ಕೊಲ್ಲಲೇಬೇಕಾಯಿತು. ಸಾವು ಅವುಗಳನ್ನು ಬೇರ್ಪಡಿಸಲಿಲ್ಲ.

ಹೆಣ್ಣು ಚಿರತೆಯ ಗರ್ಭಧಾರಣೆಯ ಅವಧಿ ಮೂರು ತಿಂಗಳು. ಪ್ರೌಢಹೆಣ್ಣು ಒಂದೆ ವೇಳೆಗೆ ೨ ರಿಂದ ೪ ಮರಿಗಳನ್ನು ಈಯುತ್ತದೆ. ಹುಟ್ಟಿದಾಗ ಮರಿಗಳ ಕಣ್ಣು ತೆರೆದಿರುವದಿಲ್ಲ. ಗವಿ, ಶಿಲಾ ಬಂಡೆಗಳ ನೆರಳು ಅಥವಾ ಮರಗಳ ಪೊಟರೆ ಚಿರತೆಯ ವಾಸಸ್ಥಾನಗಳು. ನಾಲ್ಕನೆಯ ತಿಂಗಳಿಗೆ ತಾಯಿಯ ಹಾಲು ತೊರೆದು ತಮ್ಮ ಜೀವಮಾನ ಪರ್ಯಂತವೂ ಸುಮಾರು ೨೩ ವರುಷಗಳವರೆಗೆ ಬೇಟೆಯಾಡಿಯೇ ಅವು ಬದುಕುತ್ತವೆ. ಮರಿಗಳು ದಟ್ಟಡಿ ಇಡಲು ಆರಂಭಿಸಿದಾಗ

ತಾಯಿ ಚಿರತೆ ಅವುಗಳಿಗೆ ಬೇಟೆಯ ಕಲೆಯನ್ನು ಕಲಿಸತೊಡಗುತ್ತದೆ. ಪ್ರಥಮ ಪಾಠದಲ್ಲಿ ತಾಯಿಯ ಬಾಲವೇ ಮರಿಗಳಿಗೆ 'ಬೇಟೆಯ ಪ್ರಾಣಿ'. ಗತ್ತಿನಿಂದ ಬಾಲವನ್ನು ಗಂಭೀರವಾಗಿ ಅತ್ತಿತ್ತ ತಿರುಗಿಸುತ್ತ ಅದನ್ನು ಹಿಡಿಯಲು ಮರಿಗಳಿಗೆ ಆದೇಶ ನೀಡುತ್ತದೆ.

ಮರಿಗಳು ತುಸು ದೊಡ್ಡವಾಗುತ್ತಲೇ ತಾಯಿ ಚಿರತೆ ಅವುಗಳನ್ನು ಬಯಲಿಗೆ ಕರೆದೊಯ್ದು ಕಾಡುಮೇಕೆಯೊಂದನ್ನು ಸಜೀವವಾಗಿ ಕಚ್ಚಿಕೊಂಡು ಅಲ್ಲಿಗೆ ತರುತ್ತದೆ. ಮರಿಗಳೆದುರು ತಾಯಿ ಚಿರತೆ ತಾನು ತಂದ ಬೇಟೆಯನ್ನು ಪಂಜಿನಿಂದ ಹೊಡೆದು ಗಾಯಗೊಳಿಸುವ, ಅದನ್ನು ಸ್ವಲ್ಪ ಓಡಲು ಬಿಟ್ಟು ಹಿಂದುಗಡೆಯಿಂದ ಆಕ್ರಮಿಸುವ , ನೆಲದ ಮೇಲೆ ಮಲಗಿ ಟಣ್ಣನೇ ನೆಗೆದು ಎರಗುವ, ಹೀಗೆ ಹಲವಾರು ವಿವಿಧ ಭಂಗಿಗಳನ್ನು ಪ್ರದರ್ಶಿಸಿ ಬೇಟೆಯನ್ನು ಕೊಲ್ಲುವ ಪಾಠ ಹೇಳಿಕೊಡುತ್ತದೆ.

ಅನಿರೀಕ್ಷಿತ ಧ್ವನಿಗೆ ಚಿರತೆ ಸಾಮಾನ್ಯವಾಗಿ ಕುತೂಹಲ ತೋರುವುದಿಲ್ಲ. ಅದು ಅಪಾಯದ ಧ್ವನಿ ಎನಿಸಿದ ಕೂಡಲೇ ನೆಲ ಕಚ್ಚಿ ಚಪ್ಪಟೆಯಾಗಿ ಮಲಗಿಬಿಡುತ್ತದೆ. ಇಂಥ ಧ್ವನಿ ಆಲಿಸಿ ಕುತೂಹಲ ತಡೆಯದ ಮರಿ ಏನಾದರೂ ಮುಂದಡಿ ಇಟ್ಟಿತೋ, ತಾಯಿ ಚಿರತೆ ಅದನ್ನು ಹಿಡಿದೆತ್ತಿ, ಮೊದಲಿದ್ದ ಸ್ಥಳಕ್ಕೆ ಎಳೆತಂದು ತನ್ನ ಪಂಜನ್ನು ಅದರ ಬೆನ್ನ ಮೇಲಿಟ್ಟು ಮೆಲ್ಲನೆ ಅದುಮುತ್ತದೆ. ಅದು ಮರಿಗೆ ಕೊಡಬೇಕಾದ ಶಿಕ್ಷೆಯೂ ಹೌದು. ಪಾಠವೂ ಹೌದು. ಈಗ ತಾಯಿ ಚಿರತೆ ತನ್ನ ಪಾದವನ್ನು ಹಿಂತೆಗೆದುಕೊಂಡರೂ ಮರಿ ಓಡಿ ಹೋಗದು. ತಾನು ಹೇಳಿಕೊಟ್ಟ ಪಾಠವನ್ನು ಮರಿ ತಿಳಿದುಕೊಂಡಿದೆ ಎಂಬ ತೃಪ್ತಿ ತಾಯಿಗೆ, ಕಿವಿ ಹಿಂಡಿ ಕಲಿಸುವ ವಾತ್ಸಲ್ಯಮಯ ಶಿಕ್ಷಕನಂತೆ.

ಪ್ರಪಂಚದ ಅತ್ಯಂತ ವೇಗದ ಅಸಿನಾನಿಕ್, ಜುಬೆಟಿಸ್ ಎಂಬ ಜಾತಿಯ ಕಪ್ಪು ಚುಕ್ಕೆಯ ಚಿರತೆ ಇಂದು ನಮ್ಮ ದೇಶದಲ್ಲಿ ಒಂದೂ ಉಳಿದಿಲ್ಲ. ಭರದಿಂದ ಸಾಗಿರುವ ಅರಣ್ಯನಾಶವೇ ಇದಕ್ಕೆ ಕಾರಣ. ಸುದೈವದಿಂದ ಈ ಪ್ರಭೇದವನ್ನು ಇಂದು ಆಫ್ರಿಕಾದಲ್ಲಿ ನೋಡಬಹುದು. ಅಲ್ಲಿಯೂ ಹಲವಾರು ಜಾತಿಯ ಚಿರತೆಗಳು ಭರದಿಂದ ಕಣ್ಮರೆಯಾಗುತ್ತಿವೆ. ಸುಮಾರು ೫೦ ವರುಷಗಳ ಹಿಂದೆ ತುಪ್ಪಳು

ಚರ್ಮದಷ್ಟು ಕಣ್ಣು ಕುಕ್ಕಿಸುವಂಥ ಚಿರತೆಯ ಸುಂದರ ವೈದೊಗಲು ಜನಪ್ರಿಯವಾಗಿತ್ತು. ಅದಕ್ಕೆ ಬೇಡಿಕೆ ಹೆಚ್ಚಿ ಒಂದೆರಡು ವರುಷಗಳಲ್ಲಿಯೇ ವಾಕಂಬಾ ಹಾಗೂ ಕೆನ್ಯಾ ಪ್ರದೇಶದ ಚಿರತೆಗಳು ನಿರ್ನಾಮವಾಗುವ ಹಂತವನ್ನು ತಲುಪಿದವು. ಕೊನೆಗೆ ಬ್ರಿಟಿಷ್ ಸರ್ಕಾರವು ಕಾಯ್ದೆ ಕಾನೂನುಗಳನ್ನು ಕಡ್ಡಾಯವಾಗಿ ಜಾರಿಗೆ ತಂದು ಈ ಅಪರೂಪ ಪ್ರಾಣಿ ಪ್ರಭೇದಗಳ ಉಳಿವಿಗೆ ಕಾರಣವಾಯಿತು. ಇತ್ತೀಚಿನ ದಿನಗಳಲ್ಲಿ ಪುನಃ ಚಿರತೆಯ ವೈದೊಗಲಿಗಾಗಿ ಶ್ರೀಮಂತರು, ವಿಲಾಸಿಗಳು ತಮ್ಮ ಮೈ ಪರಚಿಕೊಳ್ಳುತ್ತಿದ್ದಾರೆ. ಇಂಥ ಜನಗಳ ಮೈಯನ್ನು ಪ್ರೀತಿಯಿಂದ ಸವರಿ, ಮನಗಾಣಿಸಿ ಈ ಅಪೂರ್ವ ವನ್ಯಮೃಗವನ್ನು ಕಾಪಾಡುವುದು ಪ್ರತಿಯೊಬ್ಬ ಪ್ರಜ್ಞಾವಂತ ನಾಗರಿಕನ ಕರ್ತವ್ಯ.


***

೮. ಕಪ್ಪೆಗಳಲ್ಲಿ ಪ್ರಣಯಾರಾಧನೆ

ಕಪ್ಪೆಯನ್ನು ಕಂಡು ಅಸಹ್ಯಪಡುವ ಜನಗಳೇ ಬಹಳ. ಕಾಲಲ್ಲಿ ಕಪ್ಪೆ ಕಂಡಾಕ್ಷಣ ಜಿಗಿಯುವವರನ್ನು ನೋಡಿದಾಗ ಸ್ವಭಾವತಃ ಕುಪ್ಪಳಿಸುವ ಪ್ರಾಣಿ ಕಪ್ಪೆಯೋ ಅಥವಾ ಮಾನವನೋ ಎಂದು ಅರೆಕ್ಷಣವಾದರೂ ಶಂಕೆ ಬಾರದಿರದು ! ನಿಜ ಹೇಳಬೇಕೆಂದರೆ ಕಪ್ಪೆಯನ್ನು ಕಂಡವರು ವಿರಳ. ಇದು ಆಶ್ಚರ್ಯವೆನಿಸಿದರೂ ನಂಬಲೇಬೇಕು. ಬಚ್ಚಲು ಮನೆಯಲ್ಲಿ, ಹಿತ್ತಲಲ್ಲಿ, ದಾರಿಯಲ್ಲಿ ಅಕಸ್ಮಾತ್ತಾಗಿ ಕಣ್ಣಿಗೆ ಬೀಳುವ ಕಪ್ಪೆಯಂತಹ ಪ್ರಾಣಿ ನಿಜವಾದ ಕಪ್ಪೆಯಲ್ಲ ; ಅದು ನೆಲಗಪ್ಪೆ. ಆಂಗ್ಲ ಭಾಷೆಯಲ್ಲಿ ಅದಕ್ಕೆ 'ಟೋಡ್' ಎಂದು ಹೆಸರು. ನಿಜವಾದ ಕಪ್ಪೆ ನೀರಗಪ್ಪೆ, ಇಂಗ್ಲೀಷಿನಲ್ಲಿ ಇದಕ್ಕೆ 'ಬುಲ್‌ಫ್ರಾಗ್' ಎನ್ನುವರು. ಇದು ಸಿಹಿನೀರಿನ ಜಲಾಶಯಗಳ ಬಳಿ ವಾಸಿಸುವುದು. ನೆಲಗಪ್ಪೆಯಂತೆ ಇದರ ಮೈ ಒರಟಲ್ಲ, ನುಣುಪು. ನೆಲಗಪ್ಪೆ ಹಲ್ಲಿಲ್ಲದ ಮುದುಕ. ನೀರಗಪ್ಪೆಗೆ ಮೇಲ್ದವಡೆಯಲ್ಲಿ ಮಾತ್ರ ಹಲ್ಲುಗಳುಂಟು. ಅಲ್ಲದೆ ಇದರ ಹಿಂಗಾಲು ಬೆರಳುಗಳ ಮಧ್ಯದಲ್ಲಿರುವ ಜಾಲಪಾದ ನೆಲಗಪ್ಪೆಗೆ ಇರುವುಲ್ಲ.

ಈ ವ್ಯತ್ಯಾಸಗಳನ್ನು ಗುರುತಿಸಲು ಸಾಧ್ಯವಾದರೆ ನಿಜವಾದ ಕಪ್ಪೆ ಯಾವುದು ಎಂದು ಹೇಳಲು ಬಂದೀತು. ನಮ್ಮ ದೇಶದಲ್ಲಿ ಕಪ್ಪೆ ಜಾತಿಯ ಪ್ರಭೇದಗಳು ನೂರಕ್ಕೂ ಹೆಚ್ಚು. ಇವು ಉಭಯ ಜೀವಿ ಎಂಬ ಚಿತ್ತಾಕರ್ಷಕ ವರ್ಗಕ್ಕೆ ಸೇರಿದ ದ್ವಿಚರಗಳು.

ಕಪ್ಪೆ ಒಂದು ಸಾಧು ಪ್ರಾಣಿ. ಪುಕ್ಕಲು ಜೀವಿ. ಇನ್ನೊಂದು ಪ್ರಾಣಿಯನ್ನು ಹೆದರಿಸುವಂತಹ ದೈಹಿಕ ಶಕ್ತಿಯೂ ಇಲ್ಲ. ಆಕ್ರಮಣಕಾರೀ ಅಸ್ತ್ರವೂ ಇಲ್ಲ. ಹೀಗಾಗಿ ನೆಲ - ಜಲಗಳ ಮಧ್ಯದ ಇಕ್ಕಟ್ಟಿನಲ್ಲಿ ವಾಸಿಸುವುದೊಂದೇ ಅದಕ್ಕಿರುವ ಸಂರಕ್ಷಣೆ.



ಭೂಮಿಯ ಮೇಲೆ ವೈರಿ ಕಂಡಿತೋ ನೀರಿನಲ್ಲಿ ನೆಗೆಯುತ್ತದೆ. ನೀರಿನಲ್ಲಿ ಶತ್ರು ಎದುರಾಯಿತೋ ಟಣ್ಣನೆ ಭೂಮಿಗೆ ಜಿಗಿಯುತ್ತದೆ.

ಕಪ್ಪೆಗೆ ಮಾನವ ಚಿರಋಣಿಯಾಗಿರಬೇಕು. ಕಪ್ಪೆಯ ಕಾಲುಗಳ ರುಚಿಗಾಗಿ ಅಲ್ಲ; ಪ್ರಪ್ರಥಮ ಭೂಸ್ಪರ್ಶದ ಸಾಹಸಕ್ಕಾಗಿ. ಭೂಚರ ಯೋಗ್ಯವಾದ ಕಾಲುಗಳನ್ನು ಹುಟ್ಟಿಸಿಕೊಳ್ಳುವ ಕೆಚ್ಚನ್ನು ಅದು ತೋರಿರದಿದ್ದರೆ ನಾವು ಇನ್ನೂ ಜಲಚರ ರೂಪದಲ್ಲಿಯೇ ಇರುತ್ತಿದ್ದೇವೇನೋ. ಭೂಮಿಯ ಮೇಲೆ ವಾಸಿಸುವ ಪ್ರಾಣಿಗಳ ಉಗಮಕ್ಕೆ ಕಪ್ಪೆ ಕಾರಣವಾಯಿತೆಂಬುದೇನೋ ನಿಜ. ಆದರೆ ತಾನೇ ಸೋತು ನೀರಿಗೆ ಮರಳಿತೆಂಬುದೂ ಅಷ್ಟೇ ಸತ್ಯ. ಇದನ್ನೇ ರೋಮರ್ ಎಂಬ ನಿರ್ವಂಶ ಜೀವಶಾಸ್ತ್ರಜ್ಞನು ವಿರೋಧಾಭಾಸ ಶಬ್ದಗಳಲ್ಲಿ ತುಂಬ ಮಾರ್ಮಿಕವಾಗಿ ಹೇಳಿದ್ದಾನೆ. ''ಕಪ್ಪೆಗೆ ಕೈಕಾಲು ಹುಟ್ಟಿಕೊಂಡಿರುವುದು ಅದನ್ನು ಭೂಚರವನ್ನಾಗಿ ಮಾಡಲಿಕ್ಕಲ್ಲ ; ಪುನಃ ನೀರಿನೆಡಗೆ ಕರೆದೊಯ್ಯಲು.'' ಎಂದು. ಪ್ರಕೃತಿಗೆ ಬೇಕಾದುದು ಸಂತಾನಾಭಿವೃದ್ಧಿ ತಾನೆ ! ಅದಕ್ಕೇ ಶರಣೆಂದ ಕಪ್ಪೆ ನೀರಿಗೆ ತೆವಳುವುದು ಅನಿವಾರ್ಯವಾಯಿತು.

ಕಪ್ಪೆಗೂ ಮಳೆಗೂ ಎಲ್ಲಿಲ್ಲದ ನಂಟು. ರೋಹಿಣಿ ಮಳೆಯ ಮೊದಲು ಕಪ್ಪೆಯ ಸುಳಿವು ಕೂಡ ಇರುವುದಿಲ್ಲ. ವರುಷದ ಮೊದಲ ಹನಿ ಆಕಾಶದಿಂದ ಬೀಳುತ್ತಲೇ ಕಪ್ಪೆಯ ವಟಗುಟ್ಟುವ ಧ್ವನಿ ಕೇಳಲಾರಂಭಿಸುವುದು. ಆ ವರೆಗೆ ಎಲ್ಲಿಯೂ ಕಾಣದಿದ್ದ ಕಪ್ಪೆ ಒಮ್ಮೆಲೇ ಕಂಡಾಗ ಅದು ಮಳೆ ಹನಿಯಗುಂಟ ಕೆಳಗಿಳಿದಿರಬೇಕೆಂದು ನಂಬುವವರೂ ಇದ್ದಾರೆ. ಆದರೆ ನಿಜಸ್ಥಿತಿ ಬೇರೆಯಾಗಿರುತ್ತದೆ. ಭೂಮಿಯ ಆಳದಲ್ಲಿ ಶಿಶಿರ ನಿದ್ರೆಗೊಳಗಾದ ಕಪ್ಪೆಗಳು ಮನ್ಸೂನ್ ಮಳೆಯೊಂದಿಗೆ ಹೊರಬರುತ್ತವೆ. ಹೀಗೆ ಮೇ - ಜೂನ್ ತಿಂಗಳುಗಳಲ್ಲಿ ಹೊರಬಂದ ಕಪ್ಪೆಗಳು ಪುನಃ ಭೂಗರ್ಭ ಸೇರಿ ಶಿಶಿರ ನಿದ್ರೆಗೆ ಒಳಗಾಗುವುದು ನವ್ಹೆಂಬರ್ ಡಿಸೆಂಬರ್ ತಿಂಗಳುಗಳಲ್ಲಿ ಈ ಮಧ್ಯಂತರ ಅವಧಿಯಲ್ಲಿ ಅವು ಮಾಡುವ ಕಾರ್ಯಗಳು ಎರಡೇ ಎರಡು: ಪುನರುತ್ಪಾದನೆ ಹಾಗೂ ಆಹಾರಾನ್ವೇಷಣೆ. ಹೀಗೆ ಅಜ್ಜಿಯ ಕಥೆಗಳಲ್ಲಿಯ ರಾಕ್ಷಸನಂತೆ ಅವುಗಳ ಜೀವನ ಚಕ್ರ ಆರು ತಿಂಗಳು ನಿದ್ರೆ, ಇನ್ನಾರು ತಿಂಗಳು ಎಚ್ಚರ. ಬದುಕಿಗಾಗಿ ಹೋರಾಟ.

ಮಳೆಯೊಂದಿಗೆ ಹೊರಬಂದ ಕಪ್ಪೆಗಳ ಮೊದಲ ಕೆಲಸವೆಂದರೆ ವಟರ್ ಗುಟ್ಟುವುದು. ರಪ್ ರಪ್ ಎಂದು ಮಳೆಹನಿ ಆಕಾಶದಿಂದ ಕೆಳಕ್ಕೆ ಬೀಳುತ್ತಿರುವಾಗ

ಕಪ್ಪೆಗಳ 'ವಟರ್ ವಟರ್' ಧ್ವನಿ ಭೂಮಿಯಿಂದ ಗಗನಕ್ಕೆ ಏರುತ್ತಿರುತ್ತದೆ. ಹೀಗೆ ಕಿರಿಚಿಕೊಳ್ಳುವುದು ಗಂಡು ಕಪ್ಪೆ ಮಾತ್ರ. ಅವುಗಳ ಕೂಗಾಟ ಸಹನಾತೀತವಾದುದು - ಸ್ಟಂಟ್ ಸಿನೆಮಾ ಹೀರೋಗಳ ಕೇಕೆಯಂತೆ. ಒಂದೇ ಎರಡೇ. ನೂರಾರು ಕಪ್ಪೆಗಳು ಏಕಪ್ರಕಾರವಾಗಿ ತಾರಕ ಸ್ವರದಲ್ಲಿ ಕಂಠಶೋಷಣೆ ಮಾಡಿಕೊಳ್ಳುವುದು ಕೇವಲ ಹೆಣ್ಣಿನ ವಶೀಕರಣಕ್ಕಾಗಿ. ಹೆಣ್ಣು ಕಪ್ಪೆಗೆ ಕೂಗಲು ಬರುವುದಿಲ್ಲವಂತಲ್ಲ. ಅದಕ್ಕೂ ಧ್ವನಿ ಪೆಟ್ಟಿಗೆಯುಂಟು. ಆದರೆ ಗಂಡಿನಂತಹ ಧ್ವನಿವರ್ಧಕಗಳು ಅದಕ್ಕಿಲ್ಲ. ಧ್ವನಿಪೆಟ್ಟಿಗೆಗೆ ಹೊಂದಿಕೊಂಡಂತೆ ಕೆಳದವಡೆಯ ಬುಡದಲ್ಲಿ ಗಂಡು ಕಪ್ಪೆಗೆ ಎರಡು ಧ್ವನಿಕೋಶಗಳಿವೆ. ಈ ಚೀಲಗಳು ಹವೆಯನ್ನು ಒಳಕ್ಕೆಳೆದು ಉಬ್ಬಿದಾಗ ಟೇಬಲ್ ಟೆನಿಸ್ ಚೆಂಡಿನಷ್ಟು ದೊಡ್ಡದಾಗುವು ದುಂಟು. ಅವುಗಳ ಆ ಕುಂಚನ ಪ್ರಸರಣದಿಂದ ಧ್ವನಿ ಕಂಪನಗಳು ವರ್ಧಿಸುತ್ತವೆ. ಹೆಣ್ಣು ಕಪ್ಪೆಯಲ್ಲಿ ಇಂಥ ರಚನೆ ಇಲ್ಲ. ಅದರ ಈ ಬಂಗಾರದಂಥ ಗುಣವು ಹಾಗೆಯೇ ಉತ್ಕ್ರಾಂತಿಯ ದಾರಿಗುಂಟ ಸಾಗಿ ಮಾನವನವರೆಗೂ ಬಂದಿದ್ದರೆ....

ಗಂಡು ಕಪ್ಪೆಗಳ ಕೂಗು ಬಹು ದೂರದವರೆಗೆ ಕೇಳುವುದುಂಟು. ಕೆಲವರಿಗೆ ಇದು ಕರ್ಕಶವಾಗಿ ಕೇಳಿಬಂದರೆ, ಇನ್ನು ಕೆಲವರಿಗೆ ಪುಕ್ಕಟೆ ಸಂಗೀತ. ಪ್ರಾಣಿಶಾಸ್ತ್ರ ಕಲಿಸುತ್ತಿದ್ದ ನನ್ನ ಓರ್ವ ಗುರುವಿಗೆ ಇದು ಭೈರವೀ ಆಲಾಪದಂತೆನಿಸಿ ನಿದ್ರೆ ಬರುತ್ತಿತ್ತಂತೆ. ನಾನು ಮಾತ್ರ ವಿನೋದದಿಂದ ಈ ರಾಗವನ್ನು 'ಮಂಡೂಕ ಮೇಘ ಮಲ್ಹಾರ' ಎಂದು ಕರೆಯುತ್ತೇನೆ. ನನ್ನ ಮಿತ್ರನೊಬ್ಬನಿಗೆ ಇದರ ಧ್ವನಿ 'ಯು ಆರ್ ಡ್ರಂಕ್ , ಯು ಆರ್ ಡ್ರಂಕ್ '' ಎಂದಂತೆಯೂ ನನ್ನ ಅತ್ತೆಯ ಕಿವಿಗೆ, 'ಮ್ಯಾಟ್ರಿಕ್ ಸ್ಟುಡಂಟ್, ಮ್ಯಾಟ್ರಿಕ್ ಸ್ಟುಡಂಟ್' ಎಂದಂತೆಯೂ ಕೇಳಿಸುತ್ತದಂತೆ. ಒಬ್ಬೊಬ್ಬರಿಗೆ ಒಂದೊಂದು ತೆರನಾಗಿ ಕೇಳುತ್ತಿರಬಹುದು. ಆದರೆ ಒಂದು ಮಾತಂತೂ ನಿಜ; ಇವುಗಳ ಸಾಮೂಹಿಕ ಗಾಯನ ಉಚಿತವಷ್ಟೇ ಅಲ್ಲ, ಈ ಕರ್ಣಕಠೋರ ಸಂಗೀತದಿಂದ ತಪ್ಪಿಸಿಕೊಳ್ಳಲೂ ಸಾಧ್ಯವಿಲ್ಲ - ಕಿವುಡರ ಹೊರತಾಗಿ. ಆದರೆ ಅದು ನಮಗೆ ಅಪ್ರಿಯವಾದರೂ ಗಂಡುಕಪ್ಪೆಗೆ ಪ್ರಣಯಾರಾಧನೆಯ ಮಂತ್ರ. ಅದಕ್ಕೆ ಹೊಟ್ಟೆಯ ಹಸಿವೆಗಿಂತಲೂ ಪ್ರಣಯದ ಚಿಂತೆ ಹೆಚ್ಚು. ಈ ಪ್ರಣಯಚೇಷ್ಟೆಗೆ ಗಂಡುಕಪ್ಪೆಯ ಆಯುಷ್ಯ ಇಷ್ಟೇ ಇರಬೇಕೆಂಬ ನಿಯಮವೇನೂ ಇಲ್ಲ. ಹಗಲು ರಾತ್ರಿಗಳೆಂಬ ವೇಳೆಯ ನಿರ್ಬಂಧವೂ ಇಲ್ಲ. ವಾನಪ್ರಸ್ಥಾಶ್ರಮ ಎಂಬುದು ಅದರ ಜೀವನದಲ್ಲಿ ಇದ್ದರೆ ತಾನೆ ! ಗಂಡು ತನ್ನ ಆಯುಷ್ಯದುದ್ದಕ್ಕೂ ಫಲೋತ್ಪಾದಕವಾದದ್ದೆ.

ಶಿಶಿರ ನಿದ್ರೆಯಿಂದ ಎಚ್ಚತ್ತು ಮೃಗ ಮಳೆಗೆ ಮೈಯೊಡ್ಡಿ ಹೊರಬರುವ ಕಪ್ಪೆಗಳ ಮೈ ಬಣ್ಣ ರಾಳದ ಹಳದಿ ವರ್ಣದ್ದಾಗಿರುತ್ತದೆ. ಗಂಡು ಕಪ್ಪೆ ತನ್ನ ಕೂಗಿನ ಅಬ್ಬರವನ್ನು ಹೆಚ್ಚಿಸಿದಂತೆ ಹೆಚ್ಚು ಉದ್ರೇಕಗೊಳ್ಳುತ್ತದೆ. ಹೀಗೆ ಭಾವೋದ್ರೇಕಕ್ಕೆ ಒಳಗಾದ ಕಪ್ಪೆಯ ಮುಂಗಾಲುಗಳ ಪ್ರಥಮ ಬೆರಳಿನ ★ ಒಳಭಾಗ ನಿಧಾನವಾಗಿ ಉಬ್ಬಿಕೊಳ್ಳುತ್ತ ಮೆತ್ತದಿಂಬಿನಂತಾಗುತ್ತದೆ. ಈ ರೀತಿ ಮೈಮೇಲೆ ಹಳದೀ ಬಣ್ಣದ 'ಸೂಟ್ ಕೇಸು' ಬೆರಳುಗಳಲ್ಲಿ ಮೆತ್ತದಿಂಬಿನ, ಕುತನಿಬಟ್ಟೆ ಆಚ್ಛಾದಿತ ಕಲಶ, ಕಂಠದಲ್ಲಿ ಏಕಪ್ರಕಾರವಾದ 'ಸಂಗೀತ ನಾದ' - ಇವುಗಳಿಂದೊಡಗೂಡಿದ 'ಮದುವಣಿಗ' ತನ್ನ ಸಂಗಾತಿಯನ್ನು ಕೂಡಿಕೊಳ್ಳಲು ಸಿದ್ಧನಾಗುತ್ತಾನೆ. ಹೆಣ್ಣು ಕಪ್ಪೆಯ ಮೈಡೊಗಲು ಹಳದೀ ವರ್ಣದ್ದಾಗಿರುತ್ತದೆ. ಇನ್ನುಳಿದ ಬದಲಾವಣೆಗಳು ಅಲ್ಲಿ ಕಾಣವು.

ಮೇ, ಜೂನ್ ಹಾಗೂ ಜುಲೈ ತಿಂಗಳುಗಳಲ್ಲಿ ಗಂಡುಕಪ್ಪೆ ತನ್ನ 'ಸಖಿ'ಯನ್ನು ಶೋಧಿಸಿ ಸಂತಾನಾಭಿವೃದ್ಧಿಯಲ್ಲಿ ತೊಡಗುತ್ತದೆ. ಅದರ ಪ್ರಥಮ ಅಂತಃಸ್ಫೂರ್ತಿ ಹೆಣ್ಣು ಕಪ್ಪೆಯನ್ನು ಸಂಧಿಸುವುದು. ಬಿಲದಿಂದ ಹೊರಬಂದ ಮೂರು ನಾಲ್ಕು ದಿನಗಳ ವರೆಗೆ ಸುತ್ತಲಿನ ಹವಾಮಾನಕ್ಕನುಸಾರವಾಗಿ ಗಂಟಲು ಹರಿದುಕೊಳ್ಳುವಂತೆ ವಟಗುಟ್ಟುವುದೊಂದೇ ಗಂಡು ಕಪ್ಪೆಯ ಕೆಲಸ. ಹೆಣ್ಣು ಕಪ್ಪೆ ಬದಿಯಲ್ಲಿಯೇ ಇದ್ದರೂ ಗಮನ ಕೊಡದೆ ಮೊದ್ದು ಗಂಡು ಹುಚ್ಚನಂತೆ ಬರಿ ಅಬ್ಬರಿಸುತ್ತಲೇ ಇರುತ್ತದೆ. ಅದರ ಚೀತ್ಕಾರ, ಆರ್ಭಟ, ಕರ್ಕಶ ಕೂಗಾಟಕ್ಕೆ ಬೆದರಿದ 'ಮೌನ ಗೌರಿ' ಸನಿಹಕ್ಕೆ ಸರಿಯುತ್ತಾಳೆ. ಹೆಣ್ಣಿನ ಸಾನ್ನಿಧ್ಯವನ್ನು ಗುರುತಿಸಿದ ಗಂಡು ಕಪ್ಪೆ ಮೊದ ಮೊದಲು 'ನಾಚಿಕೆ'ಯಿಂದಲೋ ಏನೋ, ತುಸು ವಿಚಲಿತವಾದಂತೆ ತೋರುತ್ತದೆ. ಕೂಡಲೇ ಸನಿಹದಲ್ಲಿ ಇನ್ನೊಂದು ಗಂಡು ಕಪ್ಪೆಯನ್ನು ಕಂಡ ಮೊದಲಿನ ಗಂಡು ಉಗ್ರ ನರಸಿಂಹನ ಅವತಾರ ತಾಳುತ್ತದೆ. ಕೇಳುವುದೇನು, ಹೆಣ್ಣಿನ ವಶೀಕರಣಕ್ಕಾಗಿ ಗಂಡುಗಳಲ್ಲಿ ಹೋರಾಟ ಪ್ರಾರಂಭ. ಮುಂಗೈ ಜೋರಿನ ಯಾವುದೊಂದು ಗಂಡು ಕೂಡಲೇ ಸಂಧಿ ಸಾಧಿಸಿ ಹೆಣ್ಣು ಕಪ್ಪೆಯ ಹಿಂಬದಿಯಿಂದ ಸರಿದು 'ಸಖಿ'ಯನ್ನು ಅವಚಿ ಹಿಡಿದುಕೊಳ್ಳುತ್ತದೆ. ಇಂಥ ಅಪ್ಪುಗೆಗೆ ಬೆರಳಿನ ಮೆತ್ತದಿಂಬು ಸಹಾಯಕ. ಹೆಣ್ಣಿನ ಮೇಲೆ ಸವಾರಿ ಮಾಡಿದ ಗಂಡು ಕಪ್ಪೆಯನ್ನು ಕೆಳಗಿಳಿಸುವ ಮತ್ಸರ ಪ್ರತಿಸ್ಪರ್ಧಿ ಗಂಡುಗಳಿಗೆ. ಆಗ ನೋಡಬೇಕು

★ **ಕಪ್ಪೆಯ ಮುಂಗಾಲಿನಲ್ಲಿ ನಾಲ್ಕೇ ಬೆರಳು, ಹೆಬ್ಬೆರಳು ಇರುವುದಿಲ್ಲ.**

ವಿಜಯೀ ಗಂಡಿನ ರುದ್ರಾವತಾರ ! ತನ್ನ ಕೈ ಕಾಲುಗಳನ್ನು ಲಾಠಿಯಂತೆ ವ್ಯೆ ಸುತ್ತಲೂ ಬೀಸುತ್ತ ಪ್ರತಿಸ್ಪರ್ಧಿಗಳನ್ನು ಅಚೀಚೆ ಒದೆಯುತ್ತ ಹೆಣ್ಣು ಕಪ್ಪೆಯನ್ನು ಮುಂದೆ ಮುಂದೆ ತಳ್ಳುತ್ತಾ ಸಾಗುತ್ತದೆ. ಇಂಥ ಉದ್ರೇಕಕಾರಿ ಹೋರಾಟದಲ್ಲಿ ಒಂದೊಂದು ಬಾರಿ ಗಂಡು ಕಪ್ಪೆ ಸಲಿಂಗ ಜೀವಿಯನ್ನೇ ಅವಚಿಕೊಳ್ಳುವುದುಂಟು. ಆಗ ಆಕ್ರಮಣಕೊಳ್ಳಗಾದ ಗಂಡು ಕಪ್ಪೆ ಉಗ್ರವಾಗಿ ಪ್ರತಿಭಟಿಸುತ್ತದೆ. ಎಚ್ಚರಗೊಂಡ ಸವಾರಿಕಪ್ಪೆ ತಪ್ಪೊಪ್ಪಿಕೊಂಡು ಮುಂಗೈ ಹಿಡಿತವನ್ನು ಸಡಿಲಗೊಳಿಸುತ್ತದೆ.

ಈಗ ಗಂಡಿನ ಕೂಗು ಗಕ್ಕನೆ ನಿಲ್ಲುತ್ತದೆ. ಗಂಡು ಕಪ್ಪೆಯನ್ನು ಬೆನ್ನಮೇಲೆ ಹೊತ್ತುಕೊಂಡು ಹೆಣ್ಣು ನಿಧಾನವಾಗಿ ಸನಿಹದ ಯಾವುದೊಂದು ಸಿಹಿನೀರಿನ ಜಲಾಶಯದತ್ತ ತೆವಳುತ್ತದೆ. ಆ ಸಮಯದಲ್ಲಿ ಗಂಡು ಕಪಿಮುಷ್ಟಿ ಎಷ್ಟು ಪ್ರಬಲವಾಗಿರುತ್ತದೆಂದರೆ ಅದರ ತಲೆಯನ್ನು ದೇಹದಿಂದ ಬೇರ್ಪಡಿಸಿದಾಗಲೂ ಮುಂಗೈ ಹಿಡಿತ ಎಷ್ಟೂ ಸಡಿಲವಾಗುವುದಿಲ್ಲ.

ಜಲಾಶಯದ ಅಂಚನ್ನು ತಲುಪಿದಾಗ ಗಂಡು ಕಪ್ಪೆ ಹೆಣ್ಣಿನ ಬೆನ್ನನ್ನು ಮುಂಗೈಗಳಿಂದ ಮೆಲ್ಲನೆ ಉಜ್ಜುತ್ತದೆ. ಆಗ ಮಾತ್ರ ಉತ್ತೇಜಿತವಾದ ಹೆಣ್ಣು ಕಪ್ಪೆ ಬಹುಸಂಖ್ಯೆಯಲ್ಲಿ ಮೊಟ್ಟೆಯನ್ನು ಹೊರಹಾಕುತ್ತದೆ. ಕೂಡಲೇ ಮೇಲೆ ಕುಳಿತ ಗಂಡು ಕಪ್ಪೆ ವೀರ್ಯಾಣುಗಳನ್ನು ಹೊರಚೆಲ್ಲುತ್ತದೆ. ಹೀಗೆ ದೇಹದ ಹೊರಗೆ ನೀರಿನಲ್ಲಿ ಪ್ರಜನನ ಜೀವಕೋಶಗಳು ಕಲೆತು ಫಲೀಕರಣವಾಗುತ್ತದೆ. ತಾವು ಸಂಧಿಸಿದ್ದೆವೋ ಇಲ್ಲವೋ ಎನ್ನುವಂತೆ ಹೆಣ್ಣು ಗಂಡು ಕಪ್ಪೆಗಳು ಬೇರ್ಪಟ್ಟು, ಹೊಟ್ಟೆಯ ಹಸಿವಿನ ಕರೆಗೆ ಓಗೊಟ್ಟು ಆಹಾರಾನ್ವೇಷಣೆಗಾಗಿ ಸುತ್ತತೊಡಗುತ್ತವೆ. ಆಗ ಅವುಗಳ ಬಣ್ಣ ನಿಧಾನವಾಗಿ ಕಂದುವರ್ಣಕ್ಕೆ ಬದಲಾಯಿಸುತ್ತದೆ. ಗಂಡಿನ ಕೈಬೆರಳುಗಳ ಮೆತ್ತೆದಿಂಬುಗಳೂ ಮಾಯವಾಗುತ್ತದೆ.

ಸಾಕಷ್ಟು ಆಹಾರ ಸಂಗ್ರಹಿಸಿ, ಅದನ್ನು ಸ್ನಿಗ್ಧಾಂಗಗಳಲ್ಲಿ ಶೇಖರಿಸಿ ನವ್ಹೆಂಬರ್ - ಡಿಸೆಂಬರ್ ತಿಂಗಳುಗಳ ಚಳಿ ಆರಂಭವಾಗುತ್ತಲೇ ಭೂಮಿಯೊಳಗೆ ಬಿಲಗಳನ್ನು ತೋಡಿಕೊಂಡು ಬೆಚ್ಚಗಾಗಿ ಒಳಸೇರುತ್ತವೆ. ಪುನಃ ಆರುತಿಂಗಳ ಕಾಲ ಅವುಗಳಿಗೆ ಶಿಶಿರ ನಿದ್ರೆ. ಯಾವ 'ಭೈರವೀ', 'ಬೋರ್-ವಿ' ರಾಗಗಳಿಲ್ಲದೆ ನಮಗೂ ಸುಖ ನಿದ್ರೆ.

***

೯. ರಕ್ತ ಪಿಪಾಸು ವ್ಹಾಂಪಾಯರ್ ಬಾವಲಿಗಳು

ನಿಮಗರಿಯದಂತೆಯೆ ಅವು ನಿಮ್ಮ ನೆತ್ತರು ಹೀರುವುವು




ಡೆಸ್ಮೊಡಸ್ ಜಾತಿಗೆ (Genus) ಸೇರಿದ ರೊಟೆಂಡಸ್ ಹಾಗೂ ರುಫಸ್ ಎಂಬೀ ಬಾವಲಿಗಳು ರಕ್ತ ಪಿಪಾಸುಗಳೆಂದು ಪ್ರಸಿದ್ಧವಾಗಿವೆ. ಇವು ಮಧ್ಯ ಹಾಗೂ ದಕ್ಷಿಣ ಅಮೆರಿಕೆಯ ತಪ್ಪಲು ಪ್ರದೇಶಗಳಲ್ಲಿ ವಾಸಿಸುವ ಸಸ್ತನಿಗಳು. ಇವುಗಳಿಗೆ 'ವ್ಹಾಂಪಾಯರ್' ಬಾವಲಿಗಳು ಎಂದೂ ಹೆಸರು. ಕೀಟಾಹಾರಿ ಹಾಗೂ ಫಲಾಹಾರಿ ತೊಗಲು ಬಾವಲಿಗಳು ಸಾಮಾನ್ಯವಾಗಿ ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಕಂಡು ಬರುತ್ತವೆ ; ಆದರೆ ರಕ್ತ ಪಿಪಾಸುಗಳು ತೀರ ಅಲ್ಪ ಸಂಖ್ಯೆಯಲ್ಲಿ ಕೆಲವೆಡೆಗಳಲ್ಲಿ ಮಾತ್ರ ಸಿಗುತ್ತವೆ. ಇವು ತಮ್ಮ ಆಹಾರಕ್ಕಾಗಿ ಬೇರೆ ಪ್ರಾಣಿಗಳ ರಕ್ತವನ್ನು ಅವಲಂಬಿಸಿರುವ ಪರಪುಟ್ಟ ಜೀವಿಗಳು. ಇವುಗಳ ಗಂಟಲು ತೀರ ಚಿಕ್ಕದು. ಗಟ್ಟಿಯಾದ, ಬಿರುಸಾದ ಪದಾರ್ಥಗಳು ಗಂಟಲಲ್ಲಿ ಇಳಿಯಲಾರವು. ಆದುದರಿಂದ ರಕ್ತದಂಥ ತೆಳುವಾದ, ಸುಲಭವಾಗಿ ಒಳ ತೆಗೆದುಕೊಳ್ಳಬಲ್ಲ , ಪೌಷ್ಟಿಕವಾದ ಆಹಾರವನ್ನು ಅವಲಂಬಿಸುವುದು ಸ್ವಾಭಾವಿಕವಾಗಿದೆ.

ಈ ವ್ಹೆಂಪಾಯರ್ ಬಾವಲಿ ಗಿಡದ ತುತ್ತತುದಿಯಲ್ಲಿ ದಟ್ಟವಾಗಿ ಬೆಳೆದ ಎಲೆಗಳ ಮಧ್ಯದಲ್ಲಿ ಗೂಡು ಕಟ್ಟಿಕೊಳ್ಳುತ್ತದೆ. ಹಗಲು ವೇಳೆ ತನ್ನ ಗೂಡಿನಲ್ಲಿಯೋ, ಗಿಡದ ಪೊದರಿನಲ್ಲಿಯೋ ಅಡಗಿ ಜೋತಾಡುತ್ತಿರುತ್ತದೆ. ಅದರ ಹಲ್ಲುಗಳು ಎಷ್ಟು ತೀಕ್ಷ್ಣವೋ ಅಷ್ಟೇ ಸೂಕ್ಷ್ಮವಾಗಿರುತ್ತವೆ. ಛೇದಕ ಹಲ್ಲುಗಳ ತುದಿಗಳು ಚಾಕುವಿನಂತೆ ಹರಿತವಾದವುಗಳು. ಸೂಲದ ಹಲ್ಲುಗಳು ಚೂಪಾಗಿ, ಮೊನಚಾಗಿರುತ್ತವೆ ; ಆದರೆ ಮಾಂಸಾಹಾರಿಗಳಲ್ಲಿಯಂತೆ ಸಶಕ್ತವಾದವುಗಳಲ್ಲ.

ಇವು ರಕ್ತ ಶೋಷಣೆ ಮಾಡುವ ಪದ್ಧತಿಯು ತುಂಬಾ ವಿಚಿತ್ರ ಹಾಗೂ ವಿಸ್ಮಯಕಾರಕವಾಗಿದೆ. ಪೋಷಕ ಜೀವಿಗಳಿಗೆ ಗೊತ್ತಾಗದಂತೆ ರಕ್ತ ಶೋಷಿಸುವ ಕಲೆ ಇವುಗಳಿಗೆ ಗೊತ್ತು - ಪ್ರವಾಸಿಯ ಕಿಸೆ ಕತ್ತರಿಸುವ ಕಿಸೆಗಳ್ಳನಂತೆ. ನೇರವಾಗಿ ಮೈಮೇಲೆ ಬಂದು ಕುಳಿತು ಗಾಯ ಮಾಡಲಾರವು. ಮೊದಲು ತನ್ನ 'ಯಜ್ಞಪಶು'ವಿನ ಬಳಿ ಸುಳಿದು ಹಾರಾಡುತ್ತ ಮಾಸಲವಾದ ಹಾಗೂ ಮೃದುವಾದ ದೇಹ ಭಾಗದ ಮೇಲೆ ನಿಧಾನವಾಗಿ ಎರಗಿ ತಮ್ಮ ಛೇದಕ ಹಲ್ಲುಗಳಿಂದ ಪ್ರಾಣಿಯ ತೊಗಲನ್ನು ಅದುಮಿ ಹಿಡಿಯುತ್ತವೆ. ಸಾಮಾನ್ಯವಾಗಿ ಕುತ್ತಿಗೆಯ ಭಾಗವನ್ನೇ ಕಚ್ಚಿ ಹಿಡಿಯುವದು ಹೆಚ್ಚು. ಅಲ್ಲಿರುವ ದೊಡ್ಡ ರಕ್ತನಾಳಗಳಿಂದ ಸಾಕಷ್ಟು ರಕ್ತವು ತುಸು ವೇಳೆಯಲ್ಲಿಯೇ ಸಿಗಬಲ್ಲದು. ತಾವು ಕಚ್ಚಿದ್ದು ಪೋಷಕ ಜೀವಿಗೆ ತಿಳಿಯಬಾರದೆಂಬ ಉದ್ದೇಶದಿಂದ ತನ್ನೆರಡೂ ಪಕ್ಕೆಗಳನ್ನು ಬಿಚ್ಚಿ ಕಚ್ಚಿದ ಮಾಸಲ ಭಾಗಕ್ಕೆ ಗಾಳಿ ಹಾಕತೊಡಗುತ್ತವೆ ! 'ಬೀಸಣಿಕೆ'ಯಿಂದ ರಮಿಸುತ್ತಲೇ ಸೂಲದ ಹಲ್ಲುಗಳನ್ನು ಯಾವುದೊಂದು ರಕ್ತನಾಳದಲ್ಲಿ ಚುಚ್ಚಿ, ಛಿದ್ರಮಾಡಿ ರಕ್ತ ಶೋಷಣೆಗೆ ಆರಂಭಿಸುತ್ತವೆ. ಒಳಗೆ ಚೂರಿ; ಹೊರಗೆ ಛತ್ರ ಚಾಮರಗಳು !

ಈ ತೊಗಲುಬಾವಲಿಯು ತನ್ನ ಆಹಾರಕ್ಕಾಗಿ ದನಕರುಗಳನ್ನೋ, ಕತ್ತೆ ಕುದುರೆಗಳನ್ನೋ ಅವಲಂಬಿಸುವುದೇ ಹೆಚ್ಚು. ಓಡುವ ಪ್ರಾಣಿಗಳನ್ನು ಕೂಡ ಬೆನ್ನಟ್ಟಿ, ದೇಹಭಾಗವನ್ನು ಕಚ್ಚಿ ಹಿಡಿದು ತನ್ನ ರಕ್ತಗೂಳನ್ನು ಗುಟುಕರಿಸಬಲ್ಲದು. ಮನುಷ್ಯನ ಮೇಲೂ ಆಕ್ರಮಣ ಮಾಡುವುದು ಅಪರೂಪವೇನಲ್ಲ. ಆದರೆ ಬಯಲಲ್ಲಿ, ಹೊಲಗಳಲ್ಲಿ ಮಲಗಿ ನಿದ್ರಿಸುವ ಮನುಷ್ಯನನ್ನು ಮಾತ್ರ ಹುಡುಕಿ ಕೊಂಡು ಅವರ ರಕ್ತವನ್ನು ಹೀರುತ್ತದೆ. ಉಳಿದ ಪ್ರಾಣಿಗಳ



ಎದುರಿನಿಂದ
(ಸೂಲದ ಹಲ್ಲು)

ಮಾತಿರಲಿ ; ಅತಿಸೂಕ್ಷ್ಮ ಸಂವೇದನೆಗಳಿಗೂ ಪ್ರತಿಕ್ರಿಯೆ ತೋರಿಸಬಲ್ಲ ಮಾನವ ನರಮಂಡಲಕ್ಕೆ ಮಣ್ಣೆರಚುವಂತೆ ಅರ್ಥಾತ್ ಮನುಷ್ಯನಿಗೆ ಸ್ವಲ್ಪವೂ ಗೊತ್ತಾಗದಂತೆ ''ಶಸ್ತ್ರಕ್ರಿಯೆ'' ಮಾಡಿ ತನ್ನ ಹೊಟ್ಟೆಯೊಳಕ್ಕೆ ''ಬ್ಲಡ್ ಟ್ರಾನ್ಸ್‌ಫ್ಯೂಶನ್' ಮಾಡಿಕೊಳ್ಳುತ್ತದೆ ! ಮನುಷ್ಯನು ತನ್ನ ಮೈಮೇಲೆ ರಕ್ತಸ್ರಾವವಾಗುವುದನ್ನು ತಿಳಿಯುವುದು ತಾನು ನಿದ್ರೆಯಿಂದ ತಿಳಿದೆದ್ದಾಗಲೇ ! ಇನ್ನೊಂದು ಪ್ರಾಣಿಯ ನಿದ್ರೆ ಕೆಡಿಸಿ ತೊಂದರೆ ಕೊಡುವ ದುರ್ಬುದ್ಧಿ ಈ ಬಾವಲಿಗಿಲ್ಲ. ಬದಲು ತನ್ನ ಬೀಸಣಿಕೆಯ ಗತಿಯನ್ನು ಇನ್ನೂ ಹೆಚ್ಚಿಸಿ, ಗಾಢ ನಿದ್ರೆಯನ್ನು ತರಿಸಿ, 'ರಕ್ತಚೋರ'ನಾಗುವ ಸ್ವಾರ್ಥ ಬುದ್ಧಿ ಮಾತ್ರ ಸಾಕಷ್ಟಿದೆ.

ತನ್ನ ಹಲ್ಲುಗಳಿಂದ ರಕ್ತನಾಳದಲ್ಲಿ ಛಿದ್ರವನ್ನುಂಟುಮಾಡಿ, ಅಲ್ಲಿ ನಾಲಗೆಯನ್ನು ಒಳವಕ್ರವಾಗಿ ಹಿಡಿದು, ಪಿಚಕಾರಿಯಂತೆ ರಕ್ತವನ್ನು ಒಳಕ್ಕೆಳೆದು ಕೊಳ್ಳುತ್ತದೆ. ಹೊಟ್ಟೆ ಗಂಟಲುಗಳಷ್ಟೇ ಅಲ್ಲ- ಸುಮಾರಾಗಿ ಇಡೀ ಶರೀರವೇ ತುಂಬಿ ಉಬ್ಬಿ ಬಲೂನಿನಂತಾಗುವಷ್ಟು ರಕ್ತವನ್ನು ಶೋಷಿಸಿಕೊಳ್ಳುವವರೆಗೂ ಆ ಸ್ಥಳದಿಂದ ಬಾವಲಿಯು ಕದಲಲಾರದು.

ಬೇಟ್ಸ್, ಡಾರ್ವಿನ್ ಹಾಗೂ ವಾಲೇಸ್‌ರಂಥ ಶ್ರೇಷ್ಠ ಪ್ರಾಣಿಶಾಸ್ತ್ರಜ್ಞರು ತಮ್ಮ ಅವಿರತ ಪರಿಶ್ರಮದಿಂದ, ಅಭ್ಯಾಸ ಬಲದಿಂದ ರಕ್ತಶೋಷಕ ಬಾವಲಿಯ ಗುಣಧರ್ಮವನ್ನೂ, ಸ್ವಭಾವ ವೈಶಿಷ್ಟ್ಯಗಳನ್ನೂ ಬರೆದಿಟ್ಟಿದ್ದಾರೆ. ಈ ಜಾತಿಯ ಬಾವಲಿಗಳು ಕಾಣಸಿಗುವುದೇ ವಿರಳ ; ಯಾಕೆಂದರೆ ಮಧ್ಯ ಹಾಗೂ ದಕ್ಷಿಣ ಅಮೇರಿಕೆಯನ್ನು ಹೊರತುಪಡಿಸಿ ಜಗತ್ತಿನ ಬೇರೆ ಭಾಗಗಳಲ್ಲಿಇವು ಸಿಗಲಾರವು ★ ಬೇಟ್ಸ್, ಡಾರ್ವಿನ್ ಹಾಗೂ ವಾಲೇಸ್ ಇವರು ದಕ್ಷಿಣ ಅಮೇರಿಕೆದ ತಪ್ಪಲು ಪ್ರದೇಶಗಳಲ್ಲಿ ತಿರುಗುವಾಗ ಇಂಥ ಅವರು ಕಂಡಿದ್ದರು. ಈ ರೀತಿ ಅವುಗಳ ವಿಚಿತ್ರ ಜೀವನದ ರೀತಿನೀತಿಗಳನ್ನು ಅಭ್ಯಸಿಸುವ ಸುಸಂಧಿ ಅವರಿಗೆ ಸಿಕ್ಕಿತ್ತು.



ಪಕ್ಕದಿಂದ ವ್ಯಾಂಪಾಯರ ಹಲ್ಲುಗಳು

★ ವೆಸ್ಟ್ ಇಂಡೀಸ್ ಬೆಟ್ಟಗಳಲ್ಲಿಯೂ ಸಿಗಬಹುದೆಂದು ಹೇಳಲಾಗುತ್ತಿದೆ.

ಬಾವಲಿಗಳನ್ನು ಕಂಡಿದ್ದಾರೆ. ಅಮೆರ್ಝಾನ್ ನದಿಯ ಕೊಳ್ಳದಲ್ಲಿ ಈ ಬಾವಲಿಗಳು ಇವರನ್ನು ದಿಕ್ಕು ತಪ್ಪಿಸಿದ್ದುಂಟು. ಒಂದು ವಿಶಿಷ್ಟ ಪ್ರಕಾರದ ತೊಗಲು ಬಾವಲಿಯು ಕುದುರೆಯ ಬೆನ್ನಿನ ಮೇಲೆ ಕುಳಿತು ರಕ್ತ ಹೀರುತ್ತಿದ್ದಾಗಲೇ ಅದನ್ನು

ಈ ಬಾವಲಿಗಳಿಂದ ಆಕಳು, ಎಮ್ಮೆ, ಕುದುರೆಗಳಿಗೆ ತುಂಬಾ ಉಪದ್ರವ ವಾಗುತ್ತದೆ. ಕುದುರೆಗಳಲ್ಲಿ ಕಂಡುಬರುವ 'ಟ್ರಿಪ್ಯಾನೋಸೋಮಿಯಾಸಿಸ್' ಎಂಬ ರೋಗವು ಇವುಗಳ ಮೂಲಕವೇ ಹಬ್ಬುತ್ತದೆ. ಒಂದೊಂದು ಬಾರಿ ಹಿಂಡಾಗಿ ಈ ಬಾವಲಿಗಳು ಬಂದಾಗಲಂತೂ ದನಕರುಗಳಂಥ ಮೂಕ ಪ್ರಾಣಿಗಳು ತಮ್ಮ ಪ್ರಾಣಕ್ಕೆ ಸಂಚಕಾರವನ್ನು ಕೊಡಬೇಕಾಗಿ ಬರುತ್ತದೆ. ಅನೇಕ ವೇಳೆ ಗುಂಪಾಗಿ ಬಂದು ದನಗಳ ಹಟ್ಟಿಯನ್ನೋ ಕೋಳಿಗಳ ಗೂಡುಗಳನ್ನೋ ಹೊಕ್ಕು ಹಲ್ಲೆ ಮಾಡುವದೂ ಉಂಟು. ನಾಯಿ ಹುಚ್ಚು ರೋಗವನ್ನು ಕೂಡ ಇವು ಹಬ್ಬಿಸಬಹುದು. ಕೀಟಾಹಾರಿ ಬಾವಲಿಗಳೂ ಫಲಾಹಾರಿ ಬಾವಲಿಗಳೂ ರಕ್ತ ಶೋಷಕ ಬಾವಲಿಗಳಿಗಿಂತ ಗಾತ್ರದಲ್ಲಿ ತುಸು ದೊಡ್ಡವು ; ಎತ್ತರವಾದ ಬೃಹದಾಕಾರದ ಕಿವಿಗಳು ಬೇರೆ. ಹೀಗಾಗಿ ಅವು ನೋಡಲು ಚಮತ್ಕಾರಿಕವಾಗಿ, ಭೀತಿದಾಯಕವಾಗಿ ಕಾಣುತ್ತವೆ. ರಕ್ತ ಶೋಷಕ ಬಾವಲಿಗಳ ದೇಹವು ೩''-೩೧/೨'' ಗಳಷ್ಟು ಚಿಕ್ಕದು. ಉಳಿದ ಬಾವಲಿಗಳಿಗಿರುವ ಚಿಕ್ಕ ಗಾತ್ರದ ಬಾಲ ಇದಕ್ಕಿಲ್ಲದುದು ಇದರ ಇನ್ನೊಂದು ವೈಶಿಷ್ಟ್ಯ. ಕಿವಿಗಳು ಮಾತ್ರ ಚಿಕ್ಕವು. ಹೀಗಾಗಿ ನೋಡಲು ಇದು ''ವ್ಯಾಘ್ರ ಬುದ್ಧಿಯ ಗೋಮುಖ !'' ಮೂರ್ತಿ ಚಿಕ್ಕದು ; ಆದರೆ ಕೀರ್ತಿ ದೊಡ್ಡದು !

❋❋❋

೧೦. ಮಾನವನ ವೈಶಿಷ್ಟ್ಯವೇನು?

ವಿಕಾಸದ ತುತ್ತ ತುದಿಗೇರಿದ ಮಾನವನ ಶರೀರ ರಚನೆಯಲ್ಲಿ ಇತರ ಪ್ರಾಣಿಗಳಿಗಿಲ್ಲದ ವೈಶಿಷ್ಟ್ಯ ಮೂರೇ ಮೂರು.

ನೀವೆಂದಾದರೂ ನಿಮ್ಮ ಶರೀರವನ್ನು ನಖ ಶಿಖಾಂತ ಪೂರ್ತಿಯಾಗಿ ನೋಡಿಕೊಂಡಿದ್ದೀರಾ? ಇಲ್ಲವಾದರೆ ಸ್ನಾನಗೃಹಕ್ಕೆ ತೆರಳಿದಾಗ ಅಲ್ಲಿರುವ ನಿಲುವುಗನ್ನಡಿ ಎದುರು ನಿಂತುಕೊಂಡು ನಿಮ್ಮನ್ನು ನೀವೇ ಸೂಕ್ಷ್ಮವಾಗಿ ನೋಡಿಕೊಳ್ಳಿ. ಎದೆ ಸೆಟೆಸಿ ಹುಬ್ಬು ಕುಣಿಸಿ ಹೆಮ್ಮೆಯಿಂದ ನಗುತ್ತಿಲ್ಲವೇ ನೀವು? ನಿಜ. ಪ್ರಾಣಿ ಜಗತ್ತಿನ ವಿಕಾಸದ ಉನ್ನತತಮ ಶಿಖರವನ್ನೇರಿ ಪ್ರಪಂಚದಾದ್ಯಂತವೂ ಜಯಭೇರಿ ಹೊಡೆದ ಮಾನವ ನೀನು ಎಂಬ ಹೆಮ್ಮೆ ನಿಮಗೆ. ನಿಜ, ಹೆಮ್ಮೆಪಡಬೇಕಾದ್ದೇ.

ಆದರೆ ಮಾನವನು ಇಷ್ಟೊಂದು ಅದ್ಭುತಗಳನ್ನು ಸಾಧಿಸಿಕೊಂಡ ಗುಟ್ಟೇನು ಎಂದು ಕೇಳಿದರೆ ಯಥೋಚಿತವಾಗಿ ನೀವು ನಿಮ್ಮ 'ತಲೆ' ತೋರಿಸುತ್ತೀರಿ ಅಲ್ಲವೇ? ಬೌದ್ಧಿಕ ಚಟುವಟಿಕೆಗಳಿಗೆಲ್ಲ ಮಿದುಳೇ ಕೇಂದ್ರ ಎಂಬುದು ನಿಮ್ಮ ಅಭಿಪ್ರಾಯ. ಸ್ವಲ್ಪ ತಾಳಿ; ನಿಮ್ಮ ತಲೆಯ ಟೊಪ್ಪಿಗೆ ಬಾಲವಿಲ್ಲದ ಕಪಿಗಳಾದ ಗಿಬ್ಬನ್, ಗೊರಿಲ್ಲ, ಉರಂಗಉತಾನ, ಚಿಂಪಾಂಜಿಗಳ ತಲೆಗಳಿಗೆ ಅಷ್ಟೇನೂ ಸಡಿಲಾಗುವುದಿಲ್ಲ ಎಂಬುದನ್ನು ಸ್ಮರಿಸಿಕೊಳ್ಳಿ, ನಿಮ್ಮ ಮಿದುಳಿನ ತೂಕ ಸರಾಸರಿ ೧೩೫೦ ಗ್ರ್ಯಾಮಗ್ಳಷ್ಟಿದ್ದರೆ ಗೋರಿಲ್ಲಾ ಕಪಿಯ ಮಿದುಳು ೪೫೦ ಗ್ರ್ಯಾಮ್ ತೂಗುತ್ತದೆ. ಚಿಂಪಾಂಜಿಯ ಮಿದುಳು ಇನ್ನೂ ದೊಡ್ಡದು. ಮಾನವರಲ್ಲಿ ಬಹುಭಾಗ ಮಿದುಳು ಉಪಯೋಗವಾಗದೇ ಉಳಿಯುತ್ತದೆ ಎಂದು ವಿಜ್ಞಾನಿಗಳು ಕಂಡಿದ್ದಾರೆ. ಜರ್ಮನಿಯ ಪ್ರೊ. ಕೊಲರ್ ಅವರು 'ಚಿಂಪಾಂಜಿ ಅತ್ಯಂತ ಉನ್ನತ ಬುದ್ಧಿಶಕ್ತಿಯುಳ್ಳ ಪ್ರಾಣಿ' ಎಂದು ಹೇಳುತ್ತಾರೆ. ಅವುಗಳ ಬುದ್ಧಿಶಕ್ತಿಯನ್ನಳೆಯುವ ನೂರಾರು ಪ್ರಯೋಗಗಳನ್ನೂ ನಡೆಸಿದ್ದಾರೆ. "ಚಿಂಪಾಂಜಿಗಳು ತಾವಾಗಿಯೇ ಹೊಸ ಪ್ರಯೋಗ ನಡೆಸಬಲ್ಲವು, ತಾವಾಗಿ ಪ್ರಯತ್ನ ಪಟ್ಟು ಪಾಠಗಳನ್ನು ಕಲಿಯಬಲ್ಲವು, ಕೋಪ,

ತಾಪ, ಹಿಗ್ಗು, ಕುಗ್ಗು ಉತ್ಸಾಹ ಆನಂದಗಳನ್ನು ನಮಗಿಂತಲೂ ತೀಕ್ಷ್ಣವಾಗಿ ತಮ್ಮ ಮುಖದಲ್ಲಿ ಪ್ರಕಟಿಸಬಲ್ಲವು'' ಎಂದು ಡಾ. ಕೊಲರ್ ಹೇಳುತ್ತಾರೆ. ಅವುಗಳ ಭಾವಗಳನ್ನು ಪರಿಶೀಲಿಸಿದಂತೆ, ಬುದ್ಧಿ ಶಕ್ತಿಯನ್ನು ಅಳೆಯಲು ಡಾ, ಕೊಲರ್ ಪ್ರಯತ್ನಿಸಿ ಚಿಂಪಾಂಜಿಗಳಿಗೆ ಎಟುಕದಷ್ಟು ದೂರದಲ್ಲಿ ಹಣ್ಣಿನ ಗೊಂಚಲನ್ನು ತೂಗುಬಿಟ್ಟು, ಆ ದೂರ ಎಟುಕುವುದಕ್ಕೆ ಬೇಕಾದ ಒಂದೇ ಕೋಲಿನ ಎರಡು ತುಂಡುಗಳನ್ನು ಇರಿಸಿದಾಗ, ಈ ಕಪಿಗಳು ಆ ಎರಡು ತುಂಡುಗಳನ್ನು ಒಂದಕ್ಕೊಂದು ಜೋಡಿಸಿ, ಅದನ್ನು ಕೊಕ್ಕೆಯಂತೆ ಬಳಸಿ, ಹಣ್ಣಿನ ಗೊಂಚಲನ್ನು ತಮ್ಮ ಬಳಿಗೆ ಎಳೆದುಕೊಂಡವು. ಎಂದಮೇಲೆ ಇಂಥ ಬುದ್ಧಿಶಕ್ತಿಯನ್ನು ತೋರುವ ಚಿಂಪಾಂಜಿಗೂ ಮನುಷ್ಯನಿಗೂ ಮೂಲ ವ್ಯತ್ಯಾಸವೆಲ್ಲಿಂದ ಬಂತು? ಚಿಂಪಾಂಜಿಗೆ ಸ್ವಲ್ಪ ಕಡಿಮೆ ಮಾನವನಿಗೆ ತುಸು ಹೆಚ್ಚು ಅಷ್ಟೇ.

ನೀವೆಷ್ಟು ಸೂಕ್ಷ್ಮವಾಗಿ ನಿಮ್ಮ ದೇಹವನ್ನು ಪರಿಶೀಲಿಸಿದರೂ ಪ್ರಾಣಿ ಸಹಜವಾದ ಸಾಮಾನ್ಯ ಗುಣಗಳನ್ನೋ, ಕೋಟಿ ಕೋಟಿ ವರುಷಗಳ ಹಿಂದೆ ಕಾಣಿಸಿಕೊಂಡ ಪ್ರಾಚೀನ ಲಕ್ಷಣಗಳನ್ನೋ ಕಾಣುತ್ತೀರಿ ವಿನಾ ಮಾನವನಿಗೆ ಮೀಸಲಾದ ವೈಶಿಷ್ಟ್ಯಗಳನ್ನು ಗುರುತಿಸಲಾರದೆ ಹೋಗುವಿರಿ.

ನೀವು ಜೀವವಿಕಾಸದ ತುತ್ತತುದಿ ಏರಿದ್ದೀರಿ ನಿಜ. ಆದರೆ ಇದರಿಂದ ನೀವು ದುರ್ಬಲರಾಗಿದ್ದೀರಿ. ನಿಮ್ಮ ನಿರ್ವೀರ್ಯತೆಯನ್ನು ಬಚ್ಚಿಟ್ಟುಕೊಳ್ಳಲು ಸಮಾಜಜೀವಿಯ ಸೋಗು ಹಾಕಿಕೊಂಡಿದ್ದೀರಿ. ದುರ್ಬಲಜೀವಿಗಳಾದ ಇರುವೆ, ಗೆದ್ದಲು ಮುಂತಾದವುಗಳು ಮಾತ್ರ ಸಾಂಘಿಕ ಜೀವನಕ್ಕೆ ಶರಣೆಂದಿವೆ. ಅದೇ ಹುಲಿಯನ್ನು ನೋಡಿರಿ ; ಆ ಶೂರ ನಿರ್ಭೀತ ಪ್ರಾಣಿ ಏಕಾಕಿಯಾಗಿ ಅಲೆಯುತ್ತದೆ.

ನಿಮ್ಮಂಥ ಸುಂದರ ಮುಖ ಇತರ ಪ್ರಾಣಿಗಳಿಗೆ ಇಲ್ಲವೆನ್ನುತ್ತೀರಾ? ಸುಳ್ಳು. ಹೆಗ್ಗಣವೂ ತನ್ನ ಮುಖದ ಬಗ್ಗೆ ಹೀಗೆಯೇ ಹೇಳಿಕೊಳ್ಳುತ್ತಿರಬೇಕು! ಏನಿದೆ ನಿಮ್ಮ ಮುಖದಲ್ಲಿ? ಸಿಂಹದ ಗಾಂಭೀರ್ಯವಿದೆಯೇ? ಆಕಳ ಪ್ರಸನ್ನತೆ ಇದೆಯೇ? ಹುಲಿಯ ಕ್ರೂರಭಾವವಿದೆಯೇ? ನರಿಯ ಠಕ್ಕತನವಾದರೂ ಅಡಗಿದೆಯೇ? ಎಂದ ಮೇಲೆ ನಿಮ್ಮ ಮುಖ ಸುಂದರವಾದುದೆಂದು ಆತ್ಮಗೌರವದಿಂದ ಹೇಳಿಕೊಳ್ಳುವಂಥ ಸ್ಫುರದ್ರೂಪಿ ಲಕ್ಷಣಗಳೆಲ್ಲಿ ಕಂಡವೋ ಈ ಸಪ್ಪಗಿನ ಚಪ್ಪಟೆ ಮುಖದಲ್ಲಿ!

ಸಾರಂಗದ ಕೋಡುಗಳ ಹಾಗೆ ಮನೋಹರ ಕೋಡುಗಳಿಲ್ಲ. ದಾಳಿಂಬದ ಬೀಜದಷ್ಟಿರುವ ನಿಮ್ಮ ಹಲ್ಲುಗಳಿಗಾಗಿ ನಿಮ್ಮನ್ನು ಗುಂಡುಹಾಕಲು ಕನಸಿನಲ್ಲಿ ಕೂಡ



ಯಾರೂ ವಿಚಾರಿಸಲಾರರು. ನಿಮ್ಮ ಹಲ್ಲುಗಳೇನು ಆನೆಯ ಕೋರೆಗಳೇ? ಇಲಿಯಂಥ ಚಿಕ್ಕ ಪ್ರಾಣಿಯ ಛೇದಕ ಹಲ್ಲುಗಳು ಕೂಡ ನಿಮ್ಮ ಹಲ್ಲುಗಳಿಗಿಂತ ಎಷ್ಟೋ ವಾಸಿ. ಅವುಗಳಂತೆ ಕಡಿಯಲು ನಿಮಗೆ ಬಾರದು. ನಿಮ್ಮ ತೊಗಲು? ಸ್ಪಷ್ಟವಾಗಿ ಹೇಳಬೇಕಾದರೆ ಅದು ಬಾತಿಗೆಬಾರದ್ದು; ಪೂರ್ತಿ ನಿಷ್ಪ್ರಯೋಜಕ! ಸೂಜಿ ಚುಚ್ಚಿದರೆ ಸಾಕು, ರಕ್ತ ಬಳಬಳ ಸುರಿಯುತ್ತದೆ. ಮಾನವತೊಗಲು, ಚೀಲ, ಚಪ್ಪಲಿಗಳ ತಯಾರಿಕೆಗೆ ಬರುತ್ತದೆಂದರೆ ನಗೆಗೀಡು ಮಾತಾದೀತು. ಒಂದೇ ಒಂದು ದೀಪದ ಕಡ್ಡಿಯಿಂದ ಪೇಪರಿನಷ್ಟು ಸುಲಭವಾಗಿ ಕ್ಷಣಮಾತ್ರದಲ್ಲಿ ಸುಟ್ಟೊಗೆಯಬಹುದು ನಿಮ್ಮ ಸ್ನೋ, ಪೌಡರ್ ಲೇಪಿತ ಚರ್ಮವನ್ನು! ಹೋಗಲಿ. ನಿಮ್ಮ ಉಗುರುಗಳನ್ನಾದರೂ ನೋಡಿಕೊಳ್ಳಿ. ಆಹಾ! ಒಂದು ಬೆಕ್ಕಿನ ಮರಿ ನಿಮ್ಮನ್ನು ಸಲೀಲವಾಗಿ ಪರಚೀತೇ ವಿನಾ ನೀವು ಅದನ್ನು ಮರಳಿ ಪರಚಲಾರಿರಿ. ಓತೀಕಾಟದಂತೆ ಮೈ ಬಣ್ಣವನ್ನು ಬದಲಿಸಿಕೊಳ್ಳುವ ವಿದ್ಯೆ ಕೂಡ ನಿಮಗಿಲ್ಲ.

ಬೇರೆ ಗ್ರಹದಿಂದ ಪ್ರಾಣಿಶಾಸ್ತ್ರಜ್ಞನೇನಾದರೂ ಪೃಥ್ವಿಗೆ ಆಕಸ್ಮಾತ್ತಾಗಿ ಬಂದರೆ (ಬರಬಾರದೇಕೆ?) ನಿಮ್ಮನ್ನು ಕಂಡು ''ಏನಿದು..... ಕೆಲವೇ ವೈಶಿಷ್ಟ್ಯಗಳನ್ನೊಳಗೊಂಡ ಈ ಕುಳ್ಳ ಮಾನವ- ೧೦ ಕೋಟಿ ವರ್ಷಗಳ ಸಸ್ತನಿ ವಿಕಾಸದುದ್ದಕ್ಕೂ ಇಷ್ಟೊಂದು ಯಶಸ್ವಿಯಾಗಿ ಹೇಗೆ ಬಾಳಿದ?'' ಎಂದು ಉದ್ಗರಿಸುವುದರಲ್ಲಿ ಸಂದೇಹವೇ ಇಲ್ಲ. ದೇಹರಚನಾ ಶಾಸ್ತ್ರದ ದೃಷ್ಟಿಯಿಂದ ಮಾನವ ತೀರ ಹಿಂದುಳಿದ ಪ್ರಾಣಿ ಎಂದು ಹೇಳವದು ಅನಿವಾರ್ಯ. ಗೊರಿಲ್ಲಾ, ಚಿಂಪಾಂಜಿಗಳಿಗಿಂತ ನೀವು ಹಿಂದೆ ಬಿದ್ದವರು. ಅವುಗಳಿಗೆ ನಿಡಿದಾದ ಕೈಗಳಿವೆ; ಅವುಗಳ ಸಹಾಯದಿಂದ ಗಿಡದಿಂದ ಗಿಡಕ್ಕೆ ಉಯ್ಯಾಲೆಯಾಡುತ್ತ ಸಾಗಲು ಸಮರ್ಥವಾಗಿವೆ; ವಕ್ಷಃಸ್ಥಳದಲ್ಲಿ ತೇರಿನ ಹಗ್ಗದಂತಿರುವ ಸ್ನಾಯುಗಳಿವೆ. ಹೇಳಿಕೊಳ್ಳುವಂಥ ಇಂಥ ಒಂದಾದರೂ ರಚನಾವಿಶೇಷ ನಿಮಗಿದೆಯೇ ಹೇಳಿ?

ನಿಮ್ಮ ಚಪ್ಪಟೆ ಮುಖ ಇತರ ಪ್ರಾಣಿಗಳಿಗೆ ಇಲ್ಲವೆನ್ನುತ್ತೀರಾ? ಸರಿ ನಿಮ್ಮ ಪೂರ್ವಜರ ಮುಂದೊತ್ತಿದ ಭಾರವಾದ ದವಡೆಗಳು ಹಿಂದೆ ಹಿಂದೆ ಸರಿದಂತೆ ಮುಖ

ಚಪ್ಪಟೆಯಾದುದು ಸಹಜ. ಆ ಒಂದು ವ್ಯತ್ಯಾಸವು ಮುಖದಲ್ಲಿ ಹಲವು ವ್ಯತ್ಯಾಸಗಳನ್ನು ತಂದಿದೆ. ನಿಮ್ಮ ಮೂಗು ಸ್ಫುಟವಾಗಿ ಎದ್ದು ಕಾಣುತ್ತಿದೆ ನೋಡಿ. ಒಳನೆಟ್ಟ ಕಣ್ಣುಗಳು ಮುಖದ ಮುಂಭಾಗಕ್ಕೆ ಬಂದು ತಮ್ಮ ದೃಷ್ಟಿಜ್ಞಾನವನ್ನೇ ಬದಲಿಸಿಕೊಂಡಿವೆ. ಉಳಿದ ಪ್ರಾಣಿಗಳ ಕಣ್ಣುಗಳು ಮುಖದ ಎಡಬಲಗಳಲ್ಲಿದ್ದು ಒಂದೊಂದೂ ಪ್ರತ್ಯೇಕವಾಗಿ ವಸ್ತುವಿನ ಪ್ರತಿಬಿಂಬವನ್ನು ಮಿದುಳಿನಲ್ಲಿ ಮೂಡಿಸುತ್ತವೆ. ನಮ್ಮದು ಹಾಗಲ್ಲ. ದರ್ಶಕ ಯಂತ್ರದಂತಿರುವ ನಿಮ್ಮ ಎರಡೂ ಕಣ್ಣುಗಳು ಕಿಂಚಿತ್ ಭಿನ್ನ ಕೋನದಲ್ಲಿ ಕುಳಿತಾಗ್ಯೂ ವಸ್ತುವಿನ ಒಂದೇ ಸ್ಪಷ್ಟ ಚಿತ್ರವನ್ನು ಮಿದುಳಿಗೆ ಒದಗಿಸುತ್ತವಲ್ಲದೆ ಅದರ ತ್ರಿ- ವಿಸ್ತಾರವನ್ನೂ ಚೆನ್ನಾಗಿ ಗ್ರಹಿಸುತ್ತವೆ. ಇದಲ್ಲದೆ ಬೆರಳುಗಳಲ್ಲಿ ಕಾಣುವ ಒಂದು ಮಹತ್ವದ ಬದಲಾವಣೆಯೂ ನಿಮ್ಮ ಗಮನಕ್ಕೆ ಬಂದಿರಬಹುದು. ಅದು ನಿಮ್ಮ ಬೆರಳಿನ ಸೂಕ್ಷ್ಮ ತುದಿಯನ್ನು ಮುಚ್ಚಿದ ಉಗುರು. ಅದರೇನು? ಇಲ್ಲಿಯೂ ನೀವು ನಿರಾಶೆಪಡಬೇಕಾದದ್ದೇ. ಈ ಎಲ್ಲ ರಚನಾವಿಶೇಷಗಳಲ್ಲಿಯೂ ಬಾಲರಹಿತ ಕಪಿಗಳು ನಿಮ್ಮೊಂದಿಗೆ ಭಾಗಿಗಳಾಗಿವೆ ಎಂದು ತಿಳಿದಾಗ ಅವುಗಳ ಮೇಲೆ ಕೋಪಿಸಲಿಕ್ಕಿಲ್ಲವಷ್ಟೇ!

ಹಾಗಾದರೆ ಮಾನವನಿಗೆ ಮಾನವೀಯ ಎನ್ನಬಹುದಾದ ವೈಶಿಷ್ಟ್ಯಗಳು ಯಾವವು? ನಿಮಗಿರುವ ಮೂರೇ ಮೂರು ರಚನಾವ್ಯತ್ಯಾಸಗಳು ಒಂದೊಂದಾಗಿ ದೇಹದ ಕೆಳತುದಿ, ಮಧ್ಯಭಾಗ, ಮೇಲ್ತುದಿಗಳಲ್ಲಿ ಕಾಣಿಸಿಕೊಂಡಿವೆ.

ಮೊದಲು ನಿಮ್ಮ ಪಾದಗಳನ್ನು ನೋಡಿಕೊಳ್ಳಿ. ಜಗತ್ತಿನಲ್ಲಿ ಇನ್ನಾವ ಪ್ರಾಣಿಗೂ ಇರದಂಥ ಪಾದರಚನೆ ನಿಮಗಿದೆ ಎಂಬ ಹೆಮ್ಮೆ ಇರಲಿ. ಎಂದು ಆ ಕುಳ್ಳ ವಾಮನ ತನ್ನ ಪಾದವನ್ನು ಭೂಮಿಯೇ ತುಂಬುವಂತೆ ಪೂರ್ತಿಯಾಗಿ ಊರಿದನೋ ಅಂದೇ ಹುಟ್ಟಿತು ಮಾನವನ ಮೊದಲ ವೈಶಿಷ್ಟ್ಯ. ನೆಲವನ್ನು ಅದುಮಿ ಹಿಡಿದ ಆ ಪಾದದ ಬಲದಿಂದಲೆ ದೇಹ ಸೆಟೆದು ನೀಟಾಯಿತು. ನೀವು ಇತರ ಪ್ರಾಣಿಗಳಿಗಿಂತ ನೆಟ್ಟಗೆ, ಗಗನದಲ್ಲಿ ತಲೆ ಚುಚ್ಚಿ ನಿಲ್ಲುತ್ತೀರಿ. ಪಾದಗಳ ಈ 'ಉಡಹಿಡಿತ' ದಿಂದ ನಿಮ್ಮ ತೂಕವನ್ನು ಕಾಯ್ದುಕೊಳ್ಳಲು ಶಕ್ತರಾಗಿದ್ದೀರಿ; ಚತುಷ್ಪಾದ ಓಟದಿಂದ ಮುಕ್ತರಾಗಿದ್ದೀರಿ. ಯಾವ ಮಂಗ ಇಲ್ಲವೆ ಬಾಲರಹಿತ ಕಪಿಯೂ ಈ ಶಕ್ತಿಗಳನ್ನು, ಇಂಥ ರಚನಾಭೇದಗಳನ್ನು ಹೊಂದಿಲ್ಲ. ಗೊರಿಲ್ಲಾ, ಚಿಂಪಾಂಜಿ ಗೂನು ಬೆನ್ನಿನಂತೆ ಬಾಗಿದ ಸ್ಥಿತಿಯಲ್ಲಿ ಕೆಲವು ಅಂತರವನ್ನು ಕ್ರಮಿಸಬಹುದು. ಪಾದವನ್ನು ಪೂರ್ತಿಯಾಗಿ ನೆಲಕ್ಕೆ ಊರಲಾರದ ಕಪಿ ಹೇಗೆ ತಾನೇ ತೂಕಬದ್ಧವಾಗಿ ನಡೆದೀತು? ಕ್ಷಣ ಕ್ಷಣಕ್ಕೂ



ತೂಕ ತಪ್ಪುವದರಿಂದ ಅವುಗಳ ನೀಳವಾದ ಕೈಗಳು ನೆಲವನ್ನು ಆಶ್ರಯಿಸುವುದು ಅನಿವಾರ್ಯವಾಗಿ ಬಿಡುತ್ತದೆ. ಆದರೆ ನೆಟ್ಟಗೆ ನಡೆಯುವ ನಿಮ್ಮ ನಿಲುವಿನಿಂದ ನಿಮ್ಮ ಕೈಗಳು- ಸ್ವತಂತ್ರವಾದವು. ನಿಮ್ಮ ನತಮುಖವನ್ನು ಊರ್ಧ್ವಮುಖವನ್ನಾಗಿ ಮಾಡಿದ ಪಾದಗಳಿಗೆ ನೀವು ಋಣಿ.

ನಿಮ್ಮ ದೇಹದ ಮಧ್ಯಭಾಗದಲ್ಲಿ ಇನ್ನೊಂದು ರಚನಾವಿಶೇಷ ಅಡಗಿದೆ ನೋಡಿ. ಅದು ಪೃಷ್ಠ ಭಾಗವನ್ನು ಬಳಸಿ ನಿಂತ ಸ್ನಾಯುಸಮೂಹ ! ಅದು ದೇಹದ ಪ್ರತಿಯೊಂದು ಚಲನವಲನದ ಕೇಂದ್ರ ಸ್ಥಾನವಾಗಿದೆ. ನಮ್ಮ ಶಿರಸ್ಸು ಮೇಲೆದ್ದು ನಿಂತಾಗ ದೇಹದ ಹೊಸ ತೂಕವನ್ನು ಕಾಯ್ದುಕೊಂಡ ಮಧ್ಯಬಿಂದು ಅದೇ. ಬರೀ ತೂಕವನ್ನಲ್ಲ, ವಕ್ಷಃಸ್ಥಲ ಹಾಗೂ ಮಸ್ತಕದ ಭಾರವನ್ನೂ ಕೂಡ ಹೊರಲು ಸಮರ್ಥವಾಗಿವೆ ನಿಮ್ಮ ಕಟಿಭಾಗದ ಸ್ನಾಯುಗಳು. ನಿಮ್ಮ ಚಲನವಲನದ ಚಾಕಚಕ್ಯತೆ, ಅಂಗಾಂಗಗಳ ತಿರುವು ಮುರುವು, ಓಟ, ಜಿಗಿದಾಟ, ಹರಿದಾಟ, ಅಂಗಾಂಗಗಳ ತೂರಾಟ - ಎಲ್ಲವೂ ನೆತ್ತಿಯಿಂದ ಅಂಗುಷ್ಠದ ವರೆಗಿನ ಯಾವ ಚಲನೆಯೂ ಈ ನಿತಂಬದ ಸ್ನಾಯುಗಳ ನಿಯಂತ್ರಣಕ್ಕೇ ಒಳಪಟ್ಟಿದೆ ಸ್ನಾಯುಗಳ ಇಂಥ ವ್ಯೂಹ ರಚನೆ ಯಾವ ಬಾಲರಹಿತ ಕಪಿಗೂ ಇಲ್ಲದಿರುವದು ಮಾನವನ ಎರಡನೇ ವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತದೆ. ನಿಮ್ಮ ಕಟಿಭಾಗದಲ್ಲಿ ಅಭಿಮಾನವಿರಲಿ, ಅದರ ಸ್ನಾಯು ಸಮೂಹವನ್ನು ಕಂಡು ಸಂತೋಷಿಸಿರಿ ; ಹೆಮ್ಮೆಯಿಂದ ಮೃದುವಾಗಿ ತಟ್ಟಿಕೊಳ್ಳಿರಿ.

ಆದರೆ ಇವೆರಡನ್ನು ಕೂಡ ನಿಮ್ಮ ಸ್ವಂತ ವೈಶಿಷ್ಟ್ಯ ಎನ್ನಲುಬಾರದು. ಕಪಿಗೂ ಮಾನವನಿಗೂ ನಡುವಣ ಅಸ್ಟ್ರೋಲೋಪಿಥೆಕಸ್ ಅಥವಾ ದಕ್ಷಿಣ ಕಪಿಮಾನವನಿಗೆ ಇವೆರಡೂ ವೈಶಿಷ್ಟ್ಯಗಳಿದ್ದವೆಂದು ಪ್ರಾಣಿಶಾಸ್ತ್ರಜ್ಞರು ತರ್ಕಿಸಿದ್ದಾರೆ.

ಆ ಪ್ರಾಣಿ ಸಜೀವವಾಗಲಿ ಇಲ್ಲವೆ ಪಳೆಯುಳಿಕೆ ರೂಪದಲ್ಲಾಗಲಿ ನಮಗಿನ್ನೂ ಸಿಕ್ಕಿಲ್ಲ ಎಂಬುದು ನಿಜ. ಆದರೆ ಕಪಿ ಮಾನವನಾಗುವ ಮೊದಲು ಮಧ್ಯಾವಸ್ಥೆಯಲ್ಲಿ ಅವನು ಈ ಶಾರೀರಿಕ ಬದಲಾವಣೆಗಳನ್ನು ಹೊಂದಿರಲೇಬೇಕು.

ನಿಮ್ಮ ಮುಖದಲ್ಲಿಯೇ ಮರೆಯಾದ ಮೂರನೆಯ ವೈಶಿಷ್ಟ್ಯ ಎಂದಿಗೂ, ಅನಂತ ಕಾಲಕ್ಕೂ ನಿಮ್ಮದೇ. ಅದರ ಮೇಲೆ ನಿಮಗೆ ಸಂಪೂರ್ಣ ಹಕ್ಕಿದೆ. ದಕ್ಷಿಣ ಕಪಿಮಾನವ, ಅವಲಕ್ಷಣದ ಹಿಮಮಾನವ- ಯಾರೇ ಇರಲಿ, ನಿಮ್ಮ ಮುಖದಲ್ಲಿಯ ಮೂರನೆಯ ವೈಶಿಷ್ಟ್ಯ ನೂರಕ್ಕೆ ನೂರರಷ್ಟು ನಿಮ್ಮದು. ಅಪ್ಪಟ ಮಾನವೀಯ ವಾದುದು. ನಿಮ್ಮ ಮುಖದ ಲಂಬರೇಖೆಗೆ ಸುಮಾರು ೪೫° ಕೋನಮಾಡಿ ಚೂಪಾಗಿ, ಚಿಕ್ಕದಾಗಿ, ಮುದ್ದಾಗಿ ಹೊರಚಾಚಿದ ಆ ಎಲುಬಿನ ತುದಿ- ನಿಮ್ಮ ಗದ್ದ! ಈ ಮುದ್ದು ಗದ್ದ ಅಳಿದ ಜೀವಿಗಳಲ್ಲಾಗಲೀ, ಉಳಿದ ಪ್ರಾಣಿಗಳಲ್ಲಾಗಲೀ ಕಿಂಚಿತ್ ಮಾತ್ರವೂ ಇಲ್ಲ.

ಈ ಒಂದೇ ಒಂದು ವ್ಯತ್ಯಾಸದ ಬಲದಿಂದ ನಿರ್ವಂಶಜೀವಶಾಸ್ತ್ರಜ್ಞರು ಮಂಗಗಳ, ಬಾಲರಹಿತ ಕಪಿಗಳ ಹಾಗೂ ಕಪಿಮಾನವರ ಪಳೆಯುಳಿಕೆಗಳನ್ನು ವರ್ಗೀಕರಿಸಲು- ಸಮರ್ಥರಾಗಿದ್ದಾರೆ. ಇದಕ್ಕಿಂತಲೂ ಹೆಚ್ಚಿನ ವೈಶಿಷ್ಟ್ಯ ಏನು ಬೇಕು ನಿಮಗೆ ? ನಿಮ್ಮ ದೇಹದಲ್ಲಿ ಅಪ್ಪಟ ನಿಮ್ಮದೆನ್ನುವ ಈ ಗದ್ದಕ್ಕಾಗಿ ನಿಮ್ಮ ಅಭಿಮಾನವಿರಲಿ. ಹೊರಗೆ ಹಣಿಕ್ಕಿದ ಈ ಆನಿಕೆಯನ್ನು ಪ್ರತಿಷ್ಠೆಯಿಂದ ನೇವರಿಸಿಕೊಳ್ಳಿರಿ. ಗಂಡಸರೇ, ಅದರ ಮೇಲೆ ಕೂದಲುಗಳ ರಾಶಿ ಬೆಳೆಸಿದ್ದರೆ ಬೋಳಿಸಿಕೊಂಡು ನಿಮ್ಮ ಗದ್ದವನ್ನು ಮುಚ್ಚುಮರೆಯಿಲ್ಲದೆ ಉದಾರವಾಗಿ ಪ್ರದರ್ಶಿಸಿರಿ.

***

೧೧. ದಕ್ಷಿಣ ಧ್ರುವದ ಅಜಾತ ಶತ್ರು - ಪೆಂಗ್ವಿನ್

ಸಮುದ್ರವನ್ನೇ ಜಗತ್ತನ್ನಾಗಿ ಮಾಡಿಕೊಂಡ ಈ ಪಕ್ಷಿಗಳು ದಕ್ಷಿಣ ಧ್ರುವದ ಸಾರ್ವಭೌಮರು.

ಎಲ್ಲಿ ನೋಡಿದರೂ ಭೂಮಿಗೆ ಹೊದಿಕೆಯಾಗಿ ಬೆಳ್ಳನೆ ಬೆಳಗುವ ಹಿಮರಾಶಿ, ತಿಂಗಳುಗಟ್ಟಲೆ ಹಗಲನ್ನೇ ಕಾಣದ ಆಗಸದಲ್ಲಿ ತೇಜಃಪುಂಜವಾಗಿ ಬೆಳಗುವ ನಕ್ಷತ್ರರಾಶಿ. ಎರಡು ವಾರಗಳ ವರೆಗೂ ಮುಳುಗದೆ ಮಂಜಿನ ಗಡ್ಡೆಯಂತೆ ನಯನ ಮನೋಹರ ವಾಗಿ ಕಾಣುವ ಸುಂದರ ಚಂದಿರ. ವರುಷದ ಹಲವು ತಿಂಗಳು ಮಾತ್ರ ದೂರ ಕ್ಷಿತಿಜದಲ್ಲಿ, ದಟ್ಟ ಮಂಜಿನ ಮೋಡಗಳಾಚೆ ಕಾಣಲೋ, ಬೇಡವೋ ಎಂದು ಇಣುಕಿ ನೋಡುವ ಸೂರ್ಯ. ಶೂನ್ಯಾಂಶದ ಕೆಳಗೆ ೧೦೦ಕ್ಕೆ ಇಳಿದ ಕಡುಚಳಿ, ಹಿಮ ಪರ್ವತಗಳು ರಭಸದಿಂದ ಜಾರುತ್ತ ಸಮುದ್ರ ತಲಪುತ್ತಲೇ ಭಯಂಕರ ವಾಗಿ ಗರ್ಜಿಸಿ ಒಡೆದು ಹಿಮಗಿರಿಗಳಾಗಿ ತೇಲುವ ಭೀಕರ ದೃಶ್ಯ ! ಸ್ವರ್ಗ ನರಕದ ಈ ಸಂಗಮದಲ್ಲಿ ಯಾವುದಾದರೂ ಪ್ರಾಣಿ ಬದುಕೀತೇ ಎಂಬುದು ಸಹಜ ಸಂದೇಹ.



ಈ ಬಿಳಿಯ ಬೆಂಗಾಡಿನಲ್ಲಿ, ನಿರಭ್ರ ಆಕಾಶದ ನಕ್ಷತ್ರ ಕಾಂತಿಯಲ್ಲಿ, ಮಂಜಿನ ಮುಸುಕಿನಡಿ ಶಾಶ್ವತ ಉಷಃಕಾಲದಲ್ಲಿ, ಕೊರೆಯುವ ಶೈತ್ಯದಲ್ಲೂ ಯಶಸ್ವಿಯಾಗಿ ವೈಭವಪೂರ್ಣವಾಗಿ ಬಾಳಿವೆ, ಬಾಳುತ್ತಿವೆ - ಪೆಂಗ್ವಿನ್ ಪಕ್ಷಿಗಳು.

ಇವು ಅಪುಚ್ಛವಾದ ಹಾರದ ಪಕ್ಷಿಗಳು. ಒಟ್ಟಿಗಿರುವ ಇಪ್ಪತ್ತು ಜಾತಿ ಪ್ರಭೇದಗಳೂ ದಕ್ಷಿಣ ಗೋಲಾರ್ಧದಲ್ಲಿ ಮಾತ್ರ ಕಂಡು ಬರುವುದು ಒಂದು ವೈಶಿಷ್ಟ್ಯ. ಉತ್ತರದ ನಿಬಿಡವಾದ ಮಾನವ - ಜಾತಿ ಇವುಗಳಿಗಿಷ್ಟವಿಲ್ಲವೇನೊ! ಇವು ಅಂಟಾರ್ಕ್ಟಿಕಾ ಸಮುದ್ರದಿಂದಾರಂಭಿಸಿ ಆಸ್ಟ್ರೇಲಿಯ, ಹಿಂದೂ ಮಹಾಸಾಗರದ ದಕ್ಷಿಣ ದ್ವೀಪಗಳು, ದಕ್ಷಿಣ ಆಫ್ರಿಕ, ದಕ್ಷಿಣ ಅಮೆರಿಕದ ತೀರಗಳವರೆಗೂ ಬೀಡುಬಿಟ್ಟಿವೆ. ಸಮಭಾಜಕ ವೃತ್ತದಿಂದ ದಕ್ಷಿಣ ಧ್ರುವದತ್ತ ಹೋದಂತೆ ದೊಡ್ಡ ಗಾತ್ರದ ಪೆಂಗ್ವಿನ್‌ಗಳು ಕಾಣಸಿಗುತ್ತವೆ ದಕ್ಷಿಣಧ್ರುವ ಪ್ರದೇಶದ ಸಾರ್ವಭೌಮ ಪೆಂಗ್ವಿನ್‌ದ ಎತ್ತರ ನಾಲ್ಕು ಅಡಿ, ತೂಕ ಸುಮಾರು ೮೦ ಪೌಂಡ್. ನ್ಯೂಜಿಲೆಂಡ್‌ನ ಸಮೀಪದಲ್ಲಿ ವಾಸಿಸುವ ಕೆಲವು ಜಾತಿ - ಪ್ರಭೇದಗಳು ಎರಡೂವರೆ ಅಡಿಗಳಷ್ಟು ಎತ್ತರ, ೪೦ ಪೌಂಡ್ ತೂಕ ಹೊಂದಿವೆ. ಗೆಲಪೊಗೋಸ್ ದ್ವೀಪಗಳಲ್ಲಿರುವ ಸ್ಪೆನಿಸ್‌ಕಸ್ ಎಂಬ ಜಾತಿ ಗಾತ್ರದಲ್ಲಿ ಇನ್ನೂ ಚಿಕ್ಕದು.

ಅಂಟಾರ್ಕ್ಟಿಕಾ ಸಮುದ್ರಯಾನವನ್ನು ಕೈಗೊಂಡ ಹಡಗುವಾಸಿಗಳನ್ನು ಮರುಳುಗೊಳಿಸಿದ ಪಕ್ಷಿಗಳು ಇವು. ಅವು ನಿಂತಾಗ ಕುಳ್ಳ ಮಾನವರಂತೆ ಕಾಣುವುದರಿಂದ ನೋಡುವವರಿಗೆ ಇನ್ನಿಷ್ಟು ಮೋಜು. ೧೯೧೧ರಲ್ಲಿ ಕ್ಯಾಪ್ಟನ್ ಸರ್ ರಾಬರ್ಟ್ ಸ್ಕಾಟರ ನೇತೃತ್ವದಲ್ಲಿ ಹೊರಟ ಸಮುದ್ರಯಾನದಲ್ಲಿ ಲೆಫ್ಟನಂಟ್ಸ್ - ರಾಯಡ ಹಾಗೂ ಸ್ಕೆಲಿಟನ್‌ರವರು ಅಂಟಾರ್ಕ್ಟಿಕಾದ ನೀರ್ಗಲ್ಲು ಪ್ರದೇಶಗಳಲ್ಲಿ ಮೊದಲ ಬಾರಿ ಈ ಪಕ್ಷಿಗಳನ್ನು ಕಂಡರು. ಈಚೆಗೆ ಛಾಯಾಗ್ರಾಹಕರು ತಮ್ಮ ಕ್ಯಾಮರಾಗಳಲ್ಲಿ ಅವುಗಳ ನಡವಳಿಕೆ, ಸಾಮಾಜಿಕ ಜೀವನದ ವಿವಿಧ ಚೇಷ್ಟೆಗಳನ್ನು ಸೆರೆಹಿಡಿದಿದ್ದಾರೆ.

ಎಲ್ಲ ಜಾತಿಯ ಪೆಂಗ್ವಿನ್ ಪಕ್ಷಿಗಳು ತಮ್ಮ ಜೀವಮಾನದಲ್ಲಿ ಒಮ್ಮೆಯೂ ಭೂಮಿಯ ಮೇಲೆ ಕಾಲಿಡದೆ ನೀರ್ಗಲ್ಲುಗಳ ಮೇಲೆಯೇ ಕಾಲ ಕಳೆಯುವುವೆಂದು ನಂಬಲಾಗಿತ್ತು. ಅದು ನಿಜವಲ್ಲ. ಕೆಲವೊಂದು ಜಾತಿಯ ಪಕ್ಷಿಗಳು ಅಂಟಾರ್ಕ್ಟಿಕಾ ಸಮುದ್ರ ತೀರದ ಭೂಮಿಯಲ್ಲಿ ಕಂಡಿವೆ.

ಜೀವಂತ ನಾವೆ

ಇವು ಜಲಜೀವನಕ್ಕೆ ಹೊಂದಿಕೊಂಡ ಪಕ್ಷಿಗಳು, ನಂಬಲಾಗದ ವೇಗದಲ್ಲಿ ಈಜಬಲ್ಲವು. ಈಜುವಾಗಿನ ಚಾಕಚಕ್ಯತೆ, ಗಮನಶೀಲತೆ -, ನೀರಮಟ್ಟದಿಂದ ಎದ್ದು ಪುನಃ ಮುಳುಗುಹಾಕುವ ಪರ್ಯಾಯ, ಪೆಂಗ್ವಿನ್‌ಗಲ್ಲದೆ ಇನ್ನಾವ ಪ್ರಾಣಿಗೂ ಬಾರದು.

ಜಲಜೀವನಕ್ಕೆ ಹೊಂದಿಕೊಳ್ಳುವಂತೆ ಇವುಗಳ ದೇಹರಚನೆಯಲ್ಲಿ ಮಾರ್ಪಾಟಾಗಿದೆ. ರೆಕ್ಕೆಯ ಮೊಳಕೈ ಹಾಗೂ ಮಣಿಕಟ್ಟಿನ ಭಾಗಗಳು ಬಾಗದಿರುವುದರಿಂದ ಇಡೀ ರೆಕ್ಕೆ ನೆಟ್ಟಗೆ ನೀಡಿರುತ್ತದೆ. ಭುಜದ ಬಳಿ ಮಾತ್ರ ಅದು ಚಲಿಸುತ್ತದೆ. ಚಪ್ಪಟೆ ಎಲುಬುಗಳುಳ್ಳ ರೆಕ್ಕೆಗಳು ಸಮರ್ಥ ಈಜು ಅಂಗಗಳು. ಅವು ನಾವಿನ ಹುಟ್ಟಿನಂತೆ ನೀರನ್ನು ರಭಸವಾಗಿ ಸೀಳಬಲ್ಲವು. ಹಾರುವ ಹಕ್ಕಿಗಿರುವ ಕ್ವಿಲ್‌ಗರಿಗಳು ಇಲ್ಲದಿರುವುದರಿಂದ ನೀರಿನ ಪ್ರತಿರೋಧಕ ಶಕ್ತಿಯೂ ಕಡಿಮೆಯಾಗಿಬಿಡುತ್ತದೆ. ಹಿಂದೆ ಚಾಚಿದ ಕಾಲುಗಳೆರಡು ಚುಕ್ಕಾಣಿಯಾಗುತ್ತದೆ. ಹೀಗೆ ಈ 'ಜೀವಂತ ನಾವೆ' ನೀರಿನ ಒತ್ತಡದಿಂದ ಕಲ್ಪನೆಯೇ ಇಲ್ಲದೆ ಸಲೀಲವಾಗಿ ಅತಿ ವೇಗದಲ್ಲಿ ಈಜುವುದನ್ನು ನೋಡಿದರೆ ಅದು ನೀರಿನಲ್ಲಿ ಹಾರುತ್ತಿದೆ ಏನೋ ಎಂದು ಭಾಸವಾಗುತ್ತದೆ. ನೀರಿಗಿಳಿಯುವಾಗ ಎರಡೂ ರೆಕ್ಕೆಗಳನ್ನು ಒಂದಾಗಿ ಮುಂದೆ ತಂದು ಬಾಣದಂತೆ ಸುಯ್ಯನೆ ನೀರಿನಾಳವನ್ನು ಸೇರುವ ಕೌಶಲ್ಯವನ್ನು ನಿಜವಾದ ಈಜುಗಾರ ಈ ಪಕ್ಷಿಯಿಂದಲೇ ಕಲಿಯಬೇಕು! ಪೆಂಗ್ವಿನ್‌ನ ಕಾಲುಗಳು ತೀರ ಗಿಡ್ಡ. ಕಾಲ್ಬೆರಳುಗಳ ಮಧ್ಯೆ ಚರ್ಮ ಬೆಳೆದು ಜಾಲಪಾದಗಳಾಗಿವೆ. ಇವು ನೀರ್ಗಲ್ಲುಗಳ ಮೇಲೆ ಸರಾಗವಾಗಿ ನಡೆಯಬಲ್ಲವು. ಇಳಿಜಾರದ ಹಿಮಪರ್ವತಗಳನ್ನು ಸುಲಭವಾಗಿ ಏರಬಲ್ಲವು. ಅವು ನಿಂತಾಗ ಮಾತ್ರ ಕುಳ್ಳ ಮಾನವರಂತೆ ಕಾಣಲು ದೇಹದ ಹಿಂಭಾಗಕ್ಕೆ ಹೊಂದಿಕೊಂಡ ಕಾಲುಗಳೇ ಕಾರಣ. ಮೈತುಂಬ ತುಪ್ಪಳದ ಹೊದಿಕೆ ಇದೆ. ಬೆನ್ನಿನ ಮೇಲೆ ನೀಲಿ ಮಿಶ್ರಿತ ಬೂದು ತುಪ್ಪಳ. ಹೊಟ್ಟೆಯ ಮೇಲೆ ಬಿಳಿ ತುಪ್ಪಳ. ಕೆಲವು ಜಾತಿಯ ಪೆಂಗ್ವಿನ್‌ಗಳ ತಲೆಯ ಮೇಲೆ ಉದ್ದ ಗರಿಗಳಿವೆ. ಎಲ್ಲಕ್ಕೂ ದೊಡ್ಡದಾದ ಸಾರ್ವಭೌಮ ಪೆಂಗ್ವಿನ್‌ನ ಕಣ್ಣುಗಳ ಹಿಂಬದಿಗೆ ಹಳದಿ ತುಪ್ಪಳದ ಮಚ್ಚೆಯಿದೆ. ಚುಂಚು ತೆಳುವಾಗಿ ನೀಳವಾಗಿದೆ.

ಆಹಾರಾನ್ವೇಷಣೆಗಾಗಿ ಇವು ಸಮುದ್ರಕ್ಕೆ ಹೋಗಬೇಕು. ಕೊಪಿಪೋಡ್ಸ್‌ನಂತಹ ಕಠಿಣ ಚರ್ಮಿಗಳು ಇವುಗಳ ಆಹಾರ. ಅವು ನಿಬಿಡವಾಗಿರುವ ಪ್ರದೇಶ ಪೆಂಗ್ವಿನ್‌ಗಳಿಗೆ ಗೊತ್ತು. ಈಜುವಾಗ ಅರೆದೆರೆದ ಚುಂಚಿನ ಮುಂಭಾಗದಿಂದ ನೀರು ಒಳ ಸೇರಿ ಹಿಂಭಾಗದಿಂದ ಹೊರಬೀಳುವುದಷ್ಟೇ. ನೀರಿನೊಡನೆ ಬರುವ ಕಠಿಣ ಚರ್ಮಿಗಳನ್ನು ಮುಳ್ಳುಮುಳ್ಳಾದ ನಾಲಗೆ ಸೆರೆ ಹಿಡಿದು ಗಂಟಲಿಗೆ ನೂಕಿಬಿಡುತ್ತದೆ.

ಪೆಂಗ್ವಿನ್‌ಗಳು ತಮ್ಮ ದೇಹದ ೧೦೦° ಫ್ಯಾರನ್‌ಹೀಟ್ ಉಷ್ಣತೆ ಕಾಪಾಡಿಕೊಂಡು ಮರಿಮಾಡುವಾಗ ಮೊಟ್ಟೆಗೆ ಬೇಕಾದ ಶಾಖವನ್ನೂ ಪೂರೈಸಬೇಕು.

ಸುತ್ತಲಿನ ಉಷ್ಣತೆ ಶೂನ್ಯಾಂಶದ ಕೆಳಗೆ ೧೦೦° ಇರುವಾಗ ಅದಕ್ಕೂ ಮೊಟ್ಟೆಗೂ ಬೇಕಾದ ಉಷ್ಣತೆ ಹೇಗೆ ಲಭ್ಯವಾದೀತೆಂಬುದು ವಿಜ್ಞಾನಕ್ಕೆ ಆಶ್ಚರ್ಯವಾಗಿತ್ತು. ಆದರೆ ಪ್ರಕೃತಿದತ್ತವಾಗಿ ಬಂದ ಪಕ್ಷಿಯ ಗಂಗೆದೊಗಲು ಆ ಸಮಸ್ಯೆಯನ್ನು ಬಿಡಿಸಿದೆ. ಕೊಬ್ಬನ್ನು ಒಳಗೊಂಡ ಗಂಗೆದೊಗಲು ಒಂದಂಗುಲ ದಪ್ಪವಾಗಿದ್ದು, ಎಂಥ ಚಳಿಯನ್ನೂ ತಡೆದುಕೊಳ್ಳಬಲ್ಲದು.

ಇವು ಸಂಗಶೀಲ ಪ್ರಾಣಿಗಳು, ಒಮ್ಮೊಮ್ಮೆ ತೊಂಭತ್ತು ಲಕ್ಷಕ್ಕೂ ಮೀರಿ ಒಂದೆಡೆ ಕಲೆಯಬಹುದು. ನಡು ಚಳಿಗಾಲದಲ್ಲಿ ಸಂತಾನೋತ್ಪತ್ತಿ ಮಾಡುವುದು ಇವುಗಳ ವೈಶಿಷ್ಟ್ಯ. ಡಾ|| ಎ. ಎಡ್ವರ್ಡ್ ವಿಲ್ಸನ್, ಡಾ|| ಮುರೆಲೇವಿಕ್ ಇವರುಗಳು ಈ ಪಕ್ಷಿಯ ವಿಲಕ್ಷಣವಾದ ಜೀವನ ಚರಿತ್ರೆ, ಸಂತಾನೋತ್ಪತ್ತಿಯ ಸ್ವಾರಸ್ಯ ಪೂರ್ಣ ನಡವಳಿಕೆ ಅಭ್ಯಸಿಸಿ. ಪ್ರಾಣಿಪ್ರಪಂಚದ ಸಾಹಿತ್ಯಕ್ಕೆ ಬಹಳ ಉಪಕಾರ ಮಾಡಿದ್ದಾರೆ.

ಸಾಮಾಜಿಕ ಜೀವನದ ತುತ್ತ ತುದಿಯನ್ನು ಏರಿರುವುದಾಗಿ ಹೇಳಿಕೊಳ್ಳುವ ಮಾನವನು ಈ ಪಕ್ಷಿಗಳ ದಾಂಪತ್ಯಭಕ್ತಿಯನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳಬೇಕು. ಒಂದು ಋತು ಕೊನೆಗೊಳ್ಳುವವರೆಗೂ ಗಂಡು ಪಕ್ಷಿ ಏಕಪತ್ನೀ ವ್ರತಸ್ಥನಾಗಿರುತ್ತಾನೆ. ಯಾವುದೊಂದು ಜೋಡಿಯ ಸಂಭೋಗದ ಸಮಾರಂಭ ಕೂಡ ಎಷ್ಟೇ ವೈಭವ ಪೂರ್ಣವಾಗಿದ್ದರೂ ಅದು ಪ್ರತ್ಯೇಕವಾಗಿ ಗುಪ್ತರೀತಿಯಲ್ಲಿ ನಡೆಯುತ್ತದೆ.

ಮಾರ್ಚ್ ತಿಂಗಳು ಅಲ್ಲಿ ಗ್ರೀಷ್ಮಾರಂಭ. ಸಹಸ್ರಾರು ಪೆಂಗ್ವಿನ್‌ಗಳು ತಮ್ಮ ಉತ್ಪಾದನಾ ಕ್ಷೇತ್ರಕ್ಕೆ ವಲಸೆ ಬರಲಾರಂಭಿಸುತ್ತವೆ. ತಿಂಗಳು ಕೊನೆಗೆ ೧೦,೦೦೦ಕ್ಕೂ ಹೆಚ್ಚು ಪಕ್ಷಿಗಳು ಒಂದುಗೂಡುತ್ತವೆ. ಅವುಗಳಲ್ಲಿ ಅತಿ ಸ್ವಾರಸ್ಯವಾದ ನಡವಳಿಕೆಯನ್ನು ತೋರುವ ಪಕ್ಷಿ ಎಂದರೆ ಚಕ್ರವರ್ತಿ (ಎಂಪರರ್) ಹೆಸರಿನ ಪೆಂಗ್ವಿನ್. ಅಂಟಾರ್ಟಿಕಾದ ಚಳಿಗಿಂತಲೂ ಇನ್ನೂ ದಕ್ಷಿಣದ ಹಿಮಗಿರಿಯ ಕುಳಿರ್ಗಾಳಿಗೆ ಮೈಯೊಡ್ಡುವುದೆಂದರೆ ಅದರ ಶರೀರ ಹಿಗ್ಗಿನಿಂದ ಉಬ್ಬುತ್ತದೆ. ಚಳಿಯೆಂದರೆ ಅಷ್ಟು ಉತ್ಸಾಹ. ಅದು ಆ ಪ್ರದೇಶದ ಅಜಾತ ಶತ್ರು; ಶಾಶ್ವತ ಪ್ರತಿನಿಧಿ.

ಪ್ರೇಮಾಲಾಪ

ಚಕ್ರವರ್ತಿ ಪಕ್ಷಿಗೆ ಚಕ್ರವರ್ತಿಣಿಯನ್ನು ಆರಿಸಿಕೊಳ್ಳುವ ಮುನ್ನ ಅದು ಎಲ್ಲ ವಿಧದ ಪ್ರಣಯ ಚೇಷ್ಟೆಗಳನ್ನು ಮಾಡತೊಡಗುತ್ತದೆ. ಪ್ರಣಯಾರಾಧನೆಯ ಆರಂಭ

ಪ್ರೇಮಾಲಾಪದಿಂದ, ಕಹಳೆಯಂತೆ ಕೂಗುವುದೇ ಅದರ ಆಲಾಪನೆ. ಹೆಣ್ಣಿನ ಪ್ರತಿಕ್ರಿಯೆಯನ್ನು ಅರಿಯಲು ಗಂಡು ಮೌನಿಯಾಗುತ್ತದೆ. ಚಕ್ರವರ್ತಿನಿ ಏನು ಕಡಿಮೆ ಅಂತಸ್ತಿನವಳೇ? - ಬಿಮ್ಮನೆ ಬೀಗಿಕೊಂಡೇ ನಿಂತಿರುತ್ತಾಳೆ. ನಮ್ರಭಾವದ ರಾಜ ತನ್ನ ಪ್ರಣಯಾರಾಧನೆಯನ್ನು ಮುಂದುವರೆಸಿ ತಾನು ಬಯಸಿದ ಹೆಣ್ಣಿನೆದುರು ಒಂದು ಕಲ್ಲನಿಟ್ಟು ವಿವಾಹದ ಪ್ರಸ್ತಾಪ ಮಾಡುತ್ತದೆ. ಸೂಚನೆಯನ್ನು ಹೆಣ್ಣು ಒಪ್ಪಿದರೆ ಕೂಡಲೆ ಅದು ತನ್ನ ಚುಂಚಿನಿಂದ ಕಲ್ಲನ್ನೆತ್ತಿ ಭಾವೋದ್ರೇಕದಿಂದ ಅಷ್ಟೇ ವೈಯ್ಯಾರದಿಂದ ಗಂಡಿನೆಡೆಗೆ ಬೀಸುತ್ತದೆ. ತಕ್ಷಣ ಎರಡೂ ಪಕ್ಷಿಗಳು ಅನೇಕ ಸಲ ತಮ್ಮ ತಮ್ಮ ಕತ್ತುಗಳನ್ನು ತಗ್ಗಿಸಿ, ಉಭಯ ಸಮ್ಮತಿ ತೋರಿಸಿ ತಲೆಗಳನ್ನು ಮೇಲೆತ್ತಿ ಕೂಗಲಾರಂಭಿಸುತ್ತವೆ.

ಆದರೆ ಮೊದಲ ನೋಟಕ್ಕೆ ಹೆಣ್ಣಿನ ಒಲವು ಗಳಿಸುವ ಗಂಡು ಭಾಗ್ಯಶಾಲಿ. ಒಮ್ಮೊಮ್ಮೆ ನಾಲ್ಕು ದಿನಗಳವರೆಗೂ ಪ್ರಣಯ - ಪ್ರಯತ್ನ ಮುಂದುವರೆಯುತ್ತದೆ. ಹೆಣ್ಣು ಗಂಡನ್ನು ತಿರಸ್ಕರಿಸಿದಾಗಲೂ, ಸೋಲನ್ನೊಪ್ಪಿಕೊಳ್ಳದ ಆಸೆಬುರುಕ ಗಂಡು ಹೆಣ್ಣಿನ ಬಳಿಸಾರಿ ಕಣ್ಣು ಮುಚ್ಚಿ ದಾಸ್ಯಭಾವದಿಂದ ನಿಂತುಕೊಳ್ಳುತ್ತದೆ. ಹೆಣ್ಣಿನ ಮೈಯ್ಯನ್ನು ಕುಟುಕಿ ತಗ್ಗು ಧ್ವನಿಯಲ್ಲಿ ಪ್ರೇಮಗೀತೆಯನ್ನುಸುರುತ್ತದೆ; ನರಳುತ್ತದೆ. ಈ ಚೇಷ್ಟೆಗಳಿಗೂ ಕಣ್ಣು ತೆರೆಯದ ಅರಸಿಕ ಹೆಣ್ಣೂ ಇರಬಹುದು! ಹೀಗೆಯೇ ಯಾವ ಹೆಣ್ಣಿಗೂ ಬೇಡಾದ ಬ್ರಹ್ಮಚಾರಿ ಗಂಡುಗಳು (ಪಾಪ !) ತಲೆಮರೆಸಿಕೊಂಡು ತಮ್ಮ ಸಮಾಜದಲ್ಲಿ ಸಮಸ್ಯೆಯಾಗಿ ಉಳಿಯುತ್ತವೆ ಹಾಗೂ ಬರಬರುತ್ತಾ ತಮ್ಮ ಬಂಧುಗಳಿಗೆ ಕೀಟಲೆ ಕೊಡಲು ಆರಂಭಿಸುತ್ತವೆ.

ನಾಂದಿಪದ

ಪ್ರಣಯಾರಾಧನೆ ಗಂಡಿನಿಂದಲೇ ಆರಂಭವಾಗಬೇಕೆಂದಿಲ್ಲ. ಪ್ರಥಮ ಪೂಜೆಯ ಅಧಿಕಾರ ಹೆಣ್ಣಿಗೂ ಇದೆ. ಚಕ್ರವರ್ತಿ ಸುಂದರನಾಗಿದ್ದರೆ ಮೂರು ನಾಲ್ಕು ಯುವತಿಯರು ಪ್ರಿಯಕರನಿಗಾಗಿ ಕಚ್ಚಾಡುವುದುಂಟು. ನಲ್ಲೆಯರ ಹೋರಾಟ ನೋಡುತ್ತಾ ನಿಲ್ಲುವುದು ಗಂಡು ಪಕ್ಷಿಗೊಂದು ಹಬ್ಬ.

ನವದಂಪತಿಗಳ ಸಂಸಾರ ನಾಟಕದ ಪ್ರಥಮಾಂಕದ ಪ್ರಾರಂಭ ನಾಂದೀ ಪದದೊಂದಿಗೆ. ಜೋಡಿಯ ಒಂದು ಪಕ್ಷಿ 'ತುತ್ತೂರಿ - ರಾಗ' ವನ್ನು ಸರಾಗವಾಗಿ ಆಲಾಪಗೈಯುತ್ತದೆ. ರಾಗ ನಿಲ್ಲುವುದರೊಳಗಾಗಿ ಇನ್ನೊಂದು ಅದನ್ನೆತ್ತಿಕೊಂಡು 'ಕಹಳೆ

- ರಾಗ' ದಲ್ಲಿ ಮುಂದುವರಸುತ್ತದೆ. ಈ ಗೀತ ಸಂವಾದ ಬಹಳ ಹೊತ್ತು ನಡೆಯುತ್ತದೆ. ಅದು ನಿಲ್ಲುತ್ತಲೇ ಗಂಡು ಪಕ್ಷಿ ತನ್ನ ಗೂಡಿಗಾಗಿ ಸಮುದ್ರ ಸಸ್ಯಗಳನ್ನೂ, ಹುಲ್ಲನ್ನೂ, ಕಲೆಹಾಕಿ ಒಂದೊಂದು ಹೊರೆಯನ್ನು ತಂದು, ನಲ್ಲೆ ಎದುರು ಕೆಡವಿ ಅಭಿಮಾನದಿಂದ ಕೂಗುತ್ತದೆ. ಮಿತಭಾಷಿಯಾದ ಹೆಣ್ಣು ಮೌನಿಯಾಗಿ ಗೂಡುಕಟ್ಟತೊಡಗುತ್ತದೆ.

ಆದರೆ ದಾಂಪತ್ಯ ಜೀವನದ ಸುಖದಾಚೆಗೆ ಅದೆಂಥ ಭಯಾನಕ ಸನ್ನಿವೇಶಗಳು ! ಹಿಮದಿಂದಾವೃತವಾದ ಸಮುದ್ರ ತೀರ ೧೦೦-೧೨೫ ಮೈಲು ಒಳಸೇರಿದೆ. ಬಿಳಿಯ ಬೆಂಗಾಡಿನ ಕ್ಷೇತ್ರ ಹೆಚ್ಚಿ ಎಲ್ಲೂ ಆಹಾರದ ಒಂದು ಕಣವೂ ಸಿಗದು. ಬದಲು ರಾಶಿ ರಾಶಿ ಹಿಮ. ಉತ್ತರದ ಚಳಿಗಾಲ ಬಿರುಸಾಗಿ ಹಿಮಶಿಖರಗಳು ಉರುಳಿದರೂ ಪೆಂಗ್ವಿನ್ ಪಕ್ಷಿಗಳು ಹೆದರವು. ಸಾವಿರ ಸಂಖ್ಯೆಯಲ್ಲಿ ಕಲೆತು ಚಳಿಗೆ ಬೆನ್ನುಮಾಡಿ ಒಂದಕ್ಕೊಂದು ತಬ್ಬಿಕೊಂಡು ನಿಬಿಡವಾಗಿ ಕುಳಿತು ಅವು ''ಕೋಲ್ಡ್ ಪ್ರೂಫ್' ಗೋಡೆಯನ್ನೇ ನಿರ್ಮಿಸಿಕೊಳ್ಳುತ್ತವೆ. ಮುಂದಾಲೋಚಿಸಿ ಚಳಿಗಾಲದ ಪೂರ್ವದಲ್ಲಿಯೇ ಸಾಕಷ್ಟು ಆಹಾರ ಸೇವಿಸಿ ತಮ್ಮ ದೇಹಗಳಲ್ಲಿ ಕೊಬ್ಬು ಸಂಗ್ರಹಿಸಿಕೊಂಡಿರುತ್ತವೆ. ಬಾಯಾರಿದರೆ ಚುಂಚಿನಿಂದ ಹಿಮವನ್ನು ಕಡಿದು ಅದರ ಚೂರುಗಳಿಂದ ದಾಹ ಅಡಗಿಸಿಕೊಳ್ಳುತ್ತವೆ. ಈ ಎಲ್ಲಾ ಅಸಹನೀಯ ವೈಪರೀತ್ಯಗಳ ನಡುವೆ ಅವು ತಮ್ಮ ವಂಶಾಭಿವೃದ್ಧಿಯ ಕಡೆಗೆ ಗಮನ ಕೊಡಬೇಕು.

ಚಾತುರ್ಮಾಸ

ಹೆಣ್ಣು ಎಂದು ಮೊಟ್ಟೆಹಾಕೀತು ಎಂಬ ಆತುರ ಗಂಡಿಗೆ, ಕುತೂಹಲವನ್ನು ತಡೆಯದು. ಗಂಡು ಮೊಟ್ಟೆಗಾಗಿ ಹೆಣ್ಣನ್ನು ಕಾಡುವುದೂ ಉಂಟು. ಕೊನೆಗೊಂದು ದಿನ ಹೆಣ್ಣು ಮೈ ಹಿಗ್ಗಿಸಿ ಕಾಲಬಳಿಯಲ್ಲಡಗಿದ ಒಂದು ಪೌಂಡ್ ಭಾರವಾದ ಒಂದೇಒಂದು ದೊಡ್ಡ ಮೊಟ್ಟೆಯನ್ನು ಗಂಡಿಗೆ ತೋರಿಸುತ್ತದೆ. ಉತ್ಸಾಹದ ಅತಿರೇಕವನ್ನು ಮುಟ್ಟಿದ ಗಂಡು ಪಕ್ಷಿಯ ಹರ್ಷ ಮೇರೆವರಿದು ಸಂಗೀತವಾಗಿ ರೂಪುಗೊಳ್ಳುತ್ತದೆ. ಹೆಣ್ಣೂ ದನಿಗೂಡಿಸುತ್ತದೆ.

ಪಿತೃವಾತ್ಸಲ್ಯ ದಿನೇ ದಿನೇ ಹೆಚ್ಚುತ್ತದೆ. ಕಳೆದೆರಡು ತಿಂಗಳುಗಳಿಂದ ನಿರಾಹಾರಿಯಾದ ಹೆಣ್ಣು ಕೂಡಲೇ ಮೊಟ್ಟೆಯನ್ನು ಗಂಡಿಗೊಪ್ಪಿಸಿ ತಾನು ಆಹಾರಾರ್ಥಿಯಾಗಿ ಸಮುದ್ರಕ್ಕೆ ಪ್ರಯಾಣಬೆಳೆಸುತ್ತದೆ. ಹಾರಲು ಬಾರದ ಅದು ನೂರು ಮೈಲಿಗಳಾಚೆಯ ಸಮುದ್ರ ತೀರವನ್ನು ಎಡವುತ್ತ, ಮುಗ್ಗರಿಸುತ್ತಾ ಮುಟ್ಟಬೇಕು.

ಬಾಣಂತಿ ಹೊರಹೊರಟಾಗ ಗೂಡಿನೊಳಗಿನ ಗಂಡು ಎರಡು ತಿಂಗಳು ''ಬಾಣಂತಿ'' ಯಾಗಬೇಕು! ಒಟ್ಟಿನಲ್ಲಿ ಗಂಡಿಗೆ ಚಾತುರ್ಮಾಸದ ಉಪವಾಸ ತಪ್ಪಿದ್ದಲ್ಲ. ಮೊಟ್ಟೆಯ ಮೇಲಿನ ಅದರ ನಿಷ್ಠೆ ಅಷ್ಟು ಅಪಾರ.

ಮೊಟ್ಟೆಯನ್ನು ತನ್ನ ಮೆತ್ತನೆಯ ಜಾಲಪಾದಗಳ ಮೇಲೆ ಇಟ್ಟುಕೊಂಡು ತೆಳುವಾದ ತನ್ನ ಹೊಟ್ಟೆಯನ್ನೇ ಹೊದಿಸಿ ಬೆಚ್ಚಗೆ ಮಾಡಿ ಕಾವು ಕೊಡುವಾಗ ಕೆಳಗಿನ ಹಿಮಸ್ಪರ್ಶ ಸ್ವಲ್ಪವೂ ಆಗದಂತೆ ಜಾಗ್ರತವಾಗಿರುತ್ತದೆ. ಇಂಥ ತ್ಯಾಗಮಯಿ ಗಂಡು ಇನ್ನಾವ ಪ್ರಾಣಿ ಜಾತಿಯಲ್ಲೂ ಸಿಗಲಾರದೇನೋ!

ಮೇ ೨೧ ರಿಂದ ಜುಲೈ ೨೩ ರವರೆಗೂ ಸೂರ್ಯನ ಬೆಳಕಿಲ್ಲದೆ ದಿನವಿಡೀ ದಟ್ಟ ಅಂಧಕಾರ. ಬಿಡುವಿಲ್ಲದ ಕುಳಿರ್ಗಾಳಿಗೆ ಸಿಕ್ಕಿ ಹೊಟ್ಟೆಯನ್ನು ಬಚ್ಚಿಟ್ಟುಕೊಂಡ ಏಕೈಕ ಗಂಡು ದಿನಗಳನ್ನೆಣಿಸುತ್ತ ಕುಳಿತಿರುತ್ತದೆ. ಜೀವನ ಸಂಗಾತಿಯೂ ಪಕ್ಕದಲ್ಲಿಲ್ಲ. ಮೊಟ್ಟೆಯ ಆಶೆಗಾಗಿ ಮೇಲೆರಗುವ ಕದೀಮ ಬ್ರಹ್ಮಚಾರಿ ಹಕ್ಕಿಗಳ ಕಾಟ ಬೇರೆ. ಗಂಡಿನ ಸಹನೆ ನಿಜಕ್ಕೂ ಅಪಾರ.

ಜುಲೈ೨೩ರ ನಂತರ ಸೂರ್ಯ ಇಣಿಕಿ ಉಷಃಕಾಲವನ್ನು ತರುತ್ತಾನೆ . ಸಮುದ್ರಕ್ಕೆ ಹೋದ ಹೆಣ್ಣೂ ಮರಳಿ ಬರುತ್ತದೆ. ಉಂಡು ತಿಂದು ಹಾಯಾಗಿದ್ದ ಅದೀಗ ಪುಷ್ಟವಾಗಿದೆ. ಅದು ಬರಲಿರುವ ಉತ್ತರಾಧಿಕಾರಿಗಾಗಿ ಎರಡು ಪೌಂಡಿನಷ್ಟು ಹೆಚ್ಚಿನ ಆಹಾರವನ್ನೂ ತನ್ನ ಜಠರದಲ್ಲಿ ಶೇಖರಿಸಿಕೊಂಡೇ ಬರುತ್ತದೆ.

ಮರಳಿದ ಹೆಣ್ಣಿಗೆ ತನ್ನ ಗಂಡನನ್ನು ಗುರುತಿಸುವುದೊಂದೇ ಸಮಸ್ಯೆ. ಒಂದೇ, ಎರಡೇ, ಸಾವಿರ ಸಂಖ್ಯೆಯ ಗಂಡು ಸಮುದಾಯವದು. ಪ್ರತಿಯೊಂದು ಗಂಡಿನೆದುರು ಕತ್ತು ತಗ್ಗಿಸಿ ಹೆಣ್ಣು ಹಾಡಬೇಕು. ತನ್ನವಳಾರೆಂಬುದು ಗಂಡಿಗೂ ಗೊತ್ತು. ಗಂಡಿನಿಂದ ಪ್ರತಿಕ್ರಿಯೆ ಬಾರದಿದ್ದರೆ ಇನ್ನೊಂದು ಗಂಡಿನೆದುರು ಪುನಃ ಗೀತ ಪ್ರದರ್ಶನ. ನಿಜವಾದ ಪ್ರೇಮಿಗೆ ಜಯ ಕಟ್ಟಿಟ್ಟ ಬುತ್ತಿಯಾದ್ದರಿಂದ ಕೊನೆಗೂ ಹೆಣ್ಣು ತನ್ನ ಗಂಡನನ್ನು ಗುರುತಿಸುತ್ತದೆ. ಈ ಸಂದರ್ಭದ ದುರುಪಯೋಗಕ್ಕಾಗಿ ಬಾಯ್ದೆರೆದ ಕದೀಮ ಹಕ್ಕಿಗಳಿಗೇನೂ ಕೊರತೆಯಿಲ್ಲ. ತಾವೇ ಗಂಡಂದಿರೆಂದು ನಟಿಸುತ್ತವೆ. ಆದರೆ ಎರಡು ತಿಂಗಳು ಕಾಲ ಗಂಡನ ಮೈಗೆ ಮೈ ತಾಗಿ ಕುಳಿತು ಮೊಟ್ಟೆ ಹಾಕಿದ ಹೆಣ್ಣಿಗೆ ಗಂಡಿನ ಧ್ವನಿಯ

ಒಂದೊಂದು ತಂತೂ ಕಂಪನ ಚೆನ್ನಾಗಿ ಗೊತ್ತು.

ಋಣಮುಕ್ತ

ಇಂದೊ ನಾಳೆಯೋ ಒಡೆಯಲಿರುವ ಮೊಟ್ಟೆಯನ್ನು ಹೆಣ್ಣು ಅತಿ ಜಾಗರೂಕತೆಯಿಂದ ತನ್ನ ಜಾಲಪಾದಗಳ ಮೇಲೆ ಸರಿಸಿಕೊಂಡು ಗಂಡನನ್ನು ಋಣಮುಕ್ತ ಮಾಡುತ್ತದೆ. ನಾಲ್ಕು ತಿಂಗಳಿಂದ ಆಹಾರವಿಲ್ಲದೆ, ಎರಡು ತಿಂಗಳಿಂದ ಒಂದಂಗುಲವೂ ಚಲಿಸದೆ ಕುಳಿತು ಕಾಪಾಡಿದ ಮೊಟ್ಟೆಯ ಸಂರಕ್ಷಣಾ ಭಾರವನ್ನು ಕೊಬ್ಬಿ ಬಂದ ಹೆಂಡತಿಗೊಪ್ಪಿಸಿ ಆಹಾರಾರ್ಥಿಯಾಗಿ ಹೊರಡಲು ಈಗ ಗಂಡಿನ ಸರದಿ.

ಮೊಟ್ಟೆಯಿಂದ ಹೊರಬಂದ ಮರಿ ಪಕ್ಷಿ ೬ ಅಂಗುಲ ಎತ್ತರವಿದ್ದು ಗರಿಗಳಿಲ್ಲದೆ ಬೋಳಾಗಿ ಕಾಣುತ್ತದೆ. ಕೆಲ ದಿನಗಳಲ್ಲಿಯೇ ದೇಹದ ಮೇಲೆ ಬೂದು ಬಣ್ಣದ ತುಪ್ಪಳ ಬೆಳೆಯುತ್ತದೆ. ತಾನು ಶೇಖರಿಸಿದ ಆಹಾರವನ್ನು ಆಗಾಗ ಚುಂಚಿನೊಳಗೆ ತಂದುಕೊಂಡು ಮರಿಗೆ ಉಣಿಸುತ್ತದೆ. ಸಪ್ಟೆಂಬರ್ ತಿಂಗಳಲ್ಲಿ ಗಂಡು ಪಕ್ಷಿಯೂ ಮರಳಿ ಬಂದು ಹೆಂಡತಿಯನ್ನು ಸೇರಿಕೊಳ್ಳುತ್ತದೆ. ಬೆಳೆಯುವ ಮರಿಗೆ ಈಗ ಗಂಡ ಹೆಂಡಿರಿಬ್ಬರೂ ಆಹಾರ ಪೂರೈಸಬಲ್ಲರು. ಇದರಿಂದ ೫-೬ ತಿಂಗಳಲ್ಲಿಯೇ ಮರಿಯು ಗಾತ್ರದಲ್ಲಿ ತಾಯಿ ತಂದೆಗಳನ್ನು ಮೀರಿಸುವಷ್ಟು ಬೆಳೆಯುತ್ತದೆ.

ಮರಿಗಳ ಸಂರಕ್ಷಣೆ ಸುಲಭವಲ್ಲ. ಅವು ಆಕಸ್ಮಾತ್ತಾಗಿ ಗೂಡಿನಿಂಗ ಮುಗ್ಗರಿಸುತ್ತ ದೂರ ಹೋದರೆ ಸುತ್ತಲೂ ಹೊಂಚು ಹಾಕಿ ಕುಳಿತ ಬ್ರಹ್ಮಚಾರಿ ಹಕ್ಕಿಗಳು ಕೂಡಲೇ ಅವುಗಳನ್ನು ಕದಿಯುವುದುಂಟು. ಅಥವಾ ಮರಿ ತಮ್ಮದೆಂದು ವಾದಿಸಿ ಬಂಜೆ ಪಕ್ಷಿಗಳು ಗಂಭೀರವಾದ ಕಾಳಗ ಆರಂಭಿಸಬಹುದು. ಜಾಣಮರಿ ಹೇಗೋ ನುಸುಳಿ ತಾಯಿಯ ಪಾದಗಳಲ್ಲಿ ಅಡಗಿಕೊಳ್ಳುತ್ತದೆ. ಆದರೆ ಅಂಥ ನೂಕು ನುಗ್ಗಲಿನಲ್ಲಿ ಚಿಕ್ಕ ಚಿಕ್ಕ ಮರಿಗಳು ಸಾಯುವುದೇ ಹೆಚ್ಚು. ಇಲ್ಲವೆ ಕಿತ್ತಾಟದಲ್ಲಿ ಅನೇಕ ಮರಿಗಳು ಛಿದ್ರ ಛಿದ್ರವಾಗಿ ತುಂಡರಿಸಲ್ಪಡುವುದೂ ಉಂಟು. ಅಥವಾ ತಾಯಿ ಸಮುದ್ರದಿಂದ ಮರಳುವ ಮುನ್ನವೇ ಮೊಟ್ಟೆಯೊಡೆದು ಹೊರಬಂದ ಮರಿ ಆಹಾರವಿಲ್ಲದೆ ಸಾಯಬಹುದು. ತಂದೆಯ ಬಳಿ ಪ್ರೀತಿ ಮಾತ್ರ ಉಂಟು ; ಆಹಾರವೆಲ್ಲಿಂದ ಬಂದೀತು ! ಅಂತೂ ಮರಿಗಳ ಮರಣ ಸಂಖ್ಯೆ ಗಣನೀಯ. ೧೦೦ಕ್ಕೆ ೭೭ರಷ್ಟು ಮರಿಗಳು ಈ ರೀತಿ ಸಾಯುತ್ತವೆಂದು ಡಾ॥ ವಿಲ್ಸನ್

ಲೆಕ್ಕ ಹಾಕಿದ್ದಾರೆ.

ಸಹಜೀವನ

ಮರಿಗಳು ಪ್ರೌಢಾವಸ್ಥೆಯನ್ನು ತಲುಪುತ್ತಲೆ ಪೆಂಗ್ವಿನ್ ಪಕ್ಷಿಗಳ ಜೀವನದಲ್ಲಿ ದೊಡ್ಡ ಮಾರ್ಪಾಟು ಗೋಚರವಾಗುತ್ತದೆ. ತಮ್ಮ ಹಳೆಯ ಹಗೆತನ ತಿರಸ್ಕಾರಗಳನ್ನು ಮರೆತು ಸಹಜೀವನ ನಡೆಸುತ್ತವೆ. ಹೀಗೆ ಕಲೆತ ಪಕ್ಷಿಗಳ ಸಂಖ್ಯೆ ಅನೇಕ ಲಕ್ಷ!

ಡಿಸೆಂಬರ್ ತಿಂಗಳಲ್ಲಿ ಸೂರ್ಯ ಪ್ರಖರನಾಗಿ ಹಮ ಕರಗತೊಡಗುತ್ತದೆ. ದೂರ ಸರಿದ ತೌರು (ಸಮುದ್ರ) ೧೨ ಮೈಲುಗಳಷ್ಟು ಸಮೀಪಿಸಿದೆ. ಇಡೀ ಪಕ್ಷಿ ಸಮುದಾಯ ಒಂದೇ ಕುಟುಂಬದ ಘಟಕಗಳಂತೆ ವಿಜಯೀ ಸೈನಿಕರಂತೆ ರಭಸದಿಂದ ಮುನ್ನಡೆದು ತಮ್ಮ ಜೀವನ ಸರ್ವಸ್ವದಂತಿರುವ ಸಮುದ್ರದಲ್ಲಿ ಬಿದ್ದು ಈಜತೊಡಗುತ್ತದೆ.

ಮೊದಲ ಬಾರಿ ಈ ಪಕ್ಷಿಯನ್ನು ಕಂಡ ವೀಕ್ಷಕರು ಇವು ಕಾವು ಕೂತು ಮರಿ ಮಾಡುವ ವಿಧಾನದ ಬಗ್ಗೆ ತಪ್ಪು ವಿವರಣೆ ನೀಡಿದ್ದರು. ಗಂಡು ಹೆಣ್ಣುಗಳೆರಡೂ ಈ ಕಾರ್ಯಕ್ಕೆ ಬದ್ಧಕಂಕಣವಾಗಿ ಸರದಿ ಪ್ರಕಾರ ಕಾವು ಕೊಡುತ್ತವೆಂದೂ, ಬಿಡುವಿನ ಸಮಯದಲ್ಲಿ ಜೋಡಿಯ ಒಂದು ಹಕ್ಕಿ ನೀರ್ಗಲ್ಲುಗಳ ಬಳಿ ಸುಳಿಯುತ್ತ ಆಹಾರ ಶೋಧಿಸುತ್ತದೆಂದೂ ಹೇಳಲಾಗಿತ್ತು. ಆದರೆ ಅದು ತಪ್ಪು. ಈಚೆಗೆ ಅನೇಕಬಾರಿ ಅಂಟಾರ್ಕ್ಟಿಕಾ ಪ್ರದೇಶಕ್ಕೆ ಭೇಟಿ ಕೊಡುವ ಪ್ರಕೃತಿ ವಿಜ್ಞಾನಿಗಳು, ಪಕ್ಷಿ ಶಾಸ್ತ್ರಜ್ಞರು, ಚಲನಚಿತ್ರಕಾರರು ಪ್ರತ್ಯಕ್ಷವಾದ, ಪ್ರಮಾಣಬದ್ಧವಾದ ವಿವರಣೆ ನೀಡಿದ್ದಾರೆ. ಮೊಟ್ಟೆ ಇಡುತ್ತಲೇ ಹೆಣ್ಣು ಸಮುದ್ರದ ಕಡೆಗೆ ಧಾವಿಸುತ್ತದೆಂದೂ, ಮೊಟ್ಟೆಗೆ ಶಾಖ ಕೊಡುವ ಹೊಣೆ ಸಂಪೂರ್ಣ ಗಂಡಿನದೆಂದೂ ಗೊತ್ತಾಗಿದೆ.

ಕಾಡಿಸದಿದ್ದರೆ ಚಕ್ರವರ್ತಿ ಪೆಂಗ್ವಿನ್ ತುಂಬಾ ಮೃದು ಸ್ವಭಾವದ ಗೃಹಸ್ಥ. ಚಕ್ರವರ್ತಿಗಳ ಎರಡು ಗುಂಪುಗಳು ಎದುರಾದರೆ ನಾಯಕ ಚಕ್ರವರ್ತಿಗಳು ಒಂದನ್ನೊಂದು ಸಮೀಪಿಸಿ, ಗಂಭೀರವಾಗಿ ತಲೆ ತಗ್ಗಿಸಿ, ಗೌರವ ಭಾವನೆಯನ್ನು ಸೂಚಿಸುತ್ತವೆ. ಇಷ್ಟೇ ಅಲ್ಲದೇ, ಒಂದು ತನ್ನ ನೀಳವಾದ ಚುಂಚನ್ನು ಇನ್ನೊಂದರ ಹೊಟ್ಟೆಯ ಗರಿಗಳಲ್ಲಿಟ್ಟು ದೀರ್ಘ ವಿಚಾರ ವಿನಿಮಯಗಳಲ್ಲಿ ತೊಡಗುತ್ತದೆ. ಯಾವ ರಾಜಕಾರಣ ಸಮಸ್ಯೆಯೋ ಭಗವಂತನೇ ಬಲ್ಲ!


ಪೆಂಗ್ವಿನ್ ಪಕ್ಷಿಗಳು ಉತ್ಪಾದನಾ ಋತುವಿಗಿಂತಲೂ ಮೊದಲು ಒಂದು ಸ್ಥಳದಲ್ಲಿ - ಹಿಮದ ಮೇಲಾಗಲೀ, ಸಮುದ್ರದ ದಡದಲ್ಲಾಗಲೀ ಅಚಲವಾಗಿ ನಿಂತು, ತಮ್ಮ ಹಳೇ ಗರಿಗಳನ್ನು ಬಿಸುಟು, ಹೊಸ ಗರಿಗಳನ್ನು ಪುನರುತ್ಪತ್ತಿ ಮಾಡಿಕೊಳ್ಳುವ ವಿಧಾನ ನಿಜವಾಗಿಯೂ ಮರುಕ ಹುಟ್ಟಿಸುವ ದೀನ ದೃಶ್ಯ. ನಿದ್ರೆ, ಸ್ನಾನ, ಆಹಾರಗಳಿಲ್ಲದೆ ಒಂದು ತಿಂಗಳ ಕಾಲ ಹಾಗೇ ನಿಲ್ಲುತ್ತವೆ. ಕತ್ತು ಬಗ್ಗಿಸಿಕೊಂಡು ಹೊಸ ಗರಿಗಳು ಮೂಡುತ್ತಲೇ ಹೊಸ ಜನ್ಮ ಬಂದಂತಾಗಿ ಸಮುದ್ರಕ್ಕೆ ಧುಮುಕುತ್ತವೆ.

ಮಾನವನನ್ನು ಹೋಲುವ ಈ ಬುದ್ಧಿವಂತ ಪಕ್ಷಿಗಳನ್ನು 'ಗರಿಗಳಲ್ಲಡಗಿದ ಮೇಧಾವಿ' ಗಳೆಂದು ವರ್ಣಿಸಲಾಗಿದೆ. ಶ್ರೇಷ್ಠ ಸಾಹಿತಿಗಳು ಮಾನವ ಸದೃಶ್ಯ ಈ ಪಕ್ಷಿಗಳಿಗೆ ತಮ್ಮ ಸಾಹಿತ್ಯದಲ್ಲಿ ಸ್ಥಾನ ಕೊಟ್ಟಿದ್ದಾರೆ. 'ಅನಾಟೋಲ್ ಫ್ರಾನ್ಸ್'ರ ವ್ಯಂಗ್ಯ ಸಾಹಿತ್ಯ ಕೃತಿ ''ಪೆಂಗ್ವಿನ್ ಐಲಂಡ್'' 'ಅಲನ್‌ಪೋ' ರ''ನೆರೇಟಿವ್ ಆಫ್ ಎ ಗೋರ್ಡನ್ ಪಾಯಿಮ್' ಎಂಬ ಕೃತಿಗಳಲ್ಲಿ ಪೆಂಗ್ವಿನ್ ಪಕ್ಷಿಗಳಿಗೆ ವಿಶೇಷವಾದ ಸ್ಥಾನ ದೊರೆತಿದೆ.

ಕಡುಚಳಿಯೊಂದನ್ನು ಬಿಟ್ಟರೆ ಅಂಟಾರ್ಟಿಕಾದಂಥ ಆರೋಗ್ಯಕರವಾದ ಪ್ರದೇಶ ಈ ಭೂಮಂಡಲದಲ್ಲಿಯೇ ಇನ್ನೊಂದಿರಲಾರದು. ಅಲ್ಲಿಯ ತೀವ್ರ ಚಳಿಗೆ ಯಾವ ರೋಗ ಜಂತು, ಬುಳುಸು, ದಂಡಾಣು ಮುಂತಾದವುಗಳು ಬದುಕಲಾರವು. ರೋಗವನ್ನೇ ಅರಿಯದ ತಾಣವದು. ಕಾರಣ ಪೆಂಗ್ವಿನ್ ಪಕ್ಷಿಗಳು ಯಾವ ರೋಗಕ್ಕೂ ಬಲಿಯಾಗದೆ ದೇಹದ ಒಂದು ಗರಿಯನ್ನೂ ಕಳೆದುಕೊಳ್ಳದೆ ಕೇವಲ ವೃದ್ಧಾಪ್ಯದಿಂದ ತಮ್ಮ ೩೫ನೇ ವರುಷದ ಒಳಹೊರಗೆ ಮರಣವನ್ನಪ್ಪುತ್ತವೆ. ಅದು ಅವುಗಳ ಸಂಸಾರ ನಾಟಕದ ಕೊನೆಯಂಕ!!

❊❊❊

೧೨. ನೀರಿನ ಧೀರ ; ನೆಲದ ಧೀರೋದಾತ್ತ



ಹುಲಿ ಮೊಸಳೆಗಳ ಘನ ಘೋರ ಕಾದಾಟ

ಕೃಷ್ಣೆ ಪಶ್ಚಿಮ ಘಟ್ಟಗಳನ್ನಿಳಿದು ಕಣಿವೆಗಳನ್ನು ಸೀಳಿ ಬಯಲನ್ನಪ್ಪಿ ಪೂರ್ವಾಭಿಮುಖವಾಗಿ ಹರಿಯುತ್ತಾಳೆ. ಎತ್ತರದಿಂದ ಕೆಳಗೆ ಧುಮುಕಿದ ಶ್ರಮ ಹೆಚ್ಚಿತೋ ಏನೋ ಎನ್ನುವಂತೆ ಬಯಲಲ್ಲಿ ತನ್ನೆರಡು ತೋಳುಗಳನ್ನು ಚಾಚಿ ನಿಧಾನವಾಗಿ ಶಾಂತವಾಗಿ ಮುನ್ನುಗ್ಗುತ್ತಾಳೆ. ಬಯಲಿನ ಮೌನವೂ ಅವಳಿಗೆ ಭಾರವಾಗಿ ಕಂಡಿರಬೇಕು ; ತನ್ನ ಬಾಲ್ಯವನ್ನು ನೆನೆದು ಮತ್ತೊಮ್ಮೆ ಬಂಡೆಗಲ್ಲುಗಳ ರಾಶಿಯಲ್ಲಿ ಧುಮುಕಿ, ಸೆರಗಿನಂಚನ್ನು ಸೂರ್ಯಕಿರಣಗಳಿಗೆ ಲೀಲಾಜಾಲವಾಗಿ ಚಿಮ್ಮಿ, ಬಣ್ಣ ಬಣ್ಣಗಳ ಸೊಬಗಿನಲ್ಲಿ ಮುನ್ನಡೆಯುತ್ತಾಳೆ. ಕಣಿವೆಯೊಂದು ಬಯಲನ್ನಪ್ಪಿದ ಇಂಥ ರಮಣೀಯ ಕಾಡಿನ ದಾರಿಯನ್ನು ತುಳಿಯಬೇಕಿತ್ತು ಒಮ್ಮೆ ನಮ್ಮ ತಂದೆಯವರು. ಇದು ಸುಮಾರು ೫೦ ವರುಷಗಳ ಹಿಂದಿನ ಮಾತು. ಅಲಂಕೃತ ಅವಗುಂಠನವತಿಯಂತೆ ರಮ್ಯವಾದ ಆ ಕಣಿವೆಯ ಕೆಳಕ್ಕೆ ಪ್ರವಹಿಸುತ್ತಿದ್ದ ಕೃಷ್ಣೆಯ ತಟಾಕದಲ್ಲಿ ನಡೆದ ಅಭೂತಪೂರ್ವ ಘಟನೆಯೊಂದನ್ನು ಕಣ್ಣಾರೆ ಕಂಡು ನಡುಗಿದ್ದರು ತಂದೆಯವರು ; ಕೇಳಿ ನಡುಗಿದ್ದೆ ನಾನು. ಅವರು ವರ್ಣಿಸಿದ ಘಟನೆಯ ಒಂದೊಂದು ಅಂಶವೂ ನನ್ನ ಸ್ಮರಣೆಯಲ್ಲಿ

ಇಂದಿಗೂ ಉಳಿದುಕೊಂಡಿದೆ. ಹೇಳಿದವರು ಮಾತ್ರ ಈಗಿಲ್ಲವಷ್ಟೇ. ಅವರ ಶಬ್ದಗಳಲ್ಲಿಯೇ ಈ ಕಥೆ ಮುಂದುವರಿಸುತ್ತೇನೆ.

ಮೊದಲನೇ ಜಾಗತಿಕ ಯುದ್ಧದ ಕಪ್ಪು ಮೋಡಗಳು ರಾಜಕೀಯ ರಂಗದಲ್ಲಿ ಕಾಣುತ್ತಿದ್ದ ಕಾಲವದು. ನಾನು ಕೆಲವು ವರುಷಗಳನ್ನು ಘಟ್ಟದ ಕೆಳಗಿನ ಹಳ್ಳಿಗಳಲ್ಲಿ ಕಳೆಯಬೇಕಾಗಿತ್ತು. ಬಯಲು ನಾಡಿನವನಾದ ನನಗೆ ಆ ಜೀವನ ಹೊಸತು. ಒಂದು ಬಾರಿ ನೆರೆಹಳ್ಳಿಗೆ ಹೋಗಬೇಕಾದ ಪ್ರಸಂಗ ಬಂದಿತು. ಆಗ ಬಸ್ಸುಗಳ ಸೌಕರ್ಯವಿರಲಿಲ್ಲವಾದ್ದರಿಂದ ನಡೆದುಕೊಂಡೇ ಹೋಗಬೇಕಾಯಿತು.

ಚೈತ್ರಮಾಸದ ಶುಕ್ಲಪಕ್ಷ ದ್ವಿತಿಯಾ. ನಸುಕಿನಲ್ಲಿಯೇ ಎದ್ದು ಹೆಗಲ ಮೇಲೆ ಹಸಿಬಿಯೊಂದನ್ನು ಚೆಲ್ಲಿ ಕಂಬಳಿಯನ್ನು ಹೊದ್ದು ನನ್ನ ಏಕಮಾತ್ರ ಸಂಗಾತಿಯಂತಿದ್ದ ಜಡವಾದ ಕೋಲನ್ನು ಬಲಗೈಯಲ್ಲಿ ಹಿಡಿದು ಹೊರಟೆ. ಇಪ್ಪತ್ತು ಮೈಲುಗಳುದ್ದಕ್ಕೂ ದಾರಿಯನ್ನು ಕ್ರಮಿಸಬೇಕಿತ್ತು. ಕೊನೆಯ ಐದಾರು ಮೈಲುಗಳ ದಾರಿ ನದಿಯ ಬದಿಗುಂಟ ಬಂಡೆಗಲ್ಲುಗಳನ್ನು ಸೀಳಿ ಸಾಗಿತ್ತು. ಅದು ದುರ್ಗಮ ದಾರಿಯೆಂದು ನಾನು ಕೇಳಿದ್ದೆ. ಸೂರ್ಯನು ನೆತ್ತಿಯ ಮೇಲೆ ಬರುತ್ತಲೇ ದಾರಿಯ ಬದಿಗಿದ್ದ ಛತ್ರ ಒಂದರಲ್ಲಿ ಊಟ ಮುಗಿಸಿ ದಣಿದ ಮೈಯನ್ನು ನೆಲಕ್ಕೆ ಚೆಲ್ಲಿ ತಾಸೆರಡು ತಾಸುಗಳನ್ನು ಕಳೆದೆ. ಹೊರಡುವಾಗ ಛತ್ರದ ಎದುರಿನಲ್ಲಿ ಮಾರಾಟಕ್ಕಿಟ್ಟ 'ಕಾಡು-ದೀವಟಿಗೆ' ★ಗಳನ್ನು ಕೊಳ್ಳುವ ವಿಚಾರ ಬಂದರೂ ಸೂರ್ಯಾಸ್ತದೊಳಗಾಗಿ ಹಳ್ಳಿಯನ್ನು ತಲುಪುವ ನನ್ನ ವಿಶ್ವಾಸ ಹಾಗೆಯೇ ಹೆಜ್ಜೆಗಳಿಗೆ ಚಾಲನೆ ಕೊಟ್ಟಿತು. ಆದರೆ ನನ್ನೆಣಿಕೆ ತಪ್ಪಾಗಿತ್ತೆಂದು ಆಮೇಲೆ ತಿಳಿಯಿತು.

ಚೈತ್ರದ ಬಿಸಿಲು ಕಾನನವನ್ನು ಸೀಳಿ ದಾರಿಗೆ ದೀವಟಿಗೆಯಾಗಿತ್ತು. ಕಾಡು ಭೀಕರವಾದರೂ ಸುಂದರವಾಗಿತ್ತು. ನೆಳಲು ಬೆಳಕಿನ ಅಡವಿಯ ಆಟಕ್ಕೆ ನಾನೊಬ್ಬನೇ

★ ಒಂದು ತರಹದ ಮರದ ಕಡ್ಡಿಗಳನ್ನು ಕಸಬರಿಗೆಯಂತೆ ಜೋಡಿಸಿ, ಅದರುದ್ದಕ್ಕೂ ಬಿಗಿದು ಪೆಂಡಿ ಕಟ್ಟಿರುತ್ತಾರೆ. ದುಡ್ಡಿಗೆ ನಾಲ್ಕು ಪೆಂಡಿಗಳು ಸಿಗುತ್ತವೆ. ಅವು ನಿಧಾನವಾಗಿ ಉರಿಯುವುದರಿಂದ ರಾತ್ರಿ ಸಮಯದಲ್ಲಿ ಇಂಥ ಪೆಂಡಿಗಳನ್ನು ಹೊತ್ತಿಸಿ ಕೈಯಲ್ಲಿ ಹಿಡಿದು ಗಡಿಯಾರದ 'ಪೆಂಡ್ಯೂಲಂ'ದಂತೆ ತೂಗುತ್ತಾ ಸಾಗುವ ದೃಶ್ಯ ನೋಡುವಂತಹದು. ಇವು ಬೆಳಕು ಕೊಡುತ್ತವಲ್ಲದೆ, ವನ್ಯ ಪಶುಗಳಿಂದಲೂ ಸಂರಕ್ಷಿಸುತ್ತವೆ. ದೂರದಿಂದ ನೋಡಿದರೆ ಬಯಲು ನಾಡಿನ ಜನ ಇವುಗಳನ್ನು ಕೊಳ್ಳಿ ದೆವ್ವಗಳೆಂದು ತಿಳಿಯುತ್ತಾರೆ.

ಪ್ರೇಕ್ಷಕನಾಗಿವೇಗದಿಂದ ಹೆಜ್ಜೆ ಹಾಕುತ್ತಲಿದ್ದೆ. ಬೇಸಿಗೆಯ ಅಡ್ಡ ಮಳೆಯ ಸೆಳಕೊಂದು ಬಂದು ಮರೆಯಾಯಿತು. ಎಳೆ ಬಿಸಿಲು, ಮಳೆಯ ತುಂತುರು ಹನಿಗಳು, ಹಸಿರು ಹಿನ್ನೆಲೆ, ಪಕ್ಷಿಗಳ ಸಂಗೀತ, ಮಳೆಯಿಂದೆದ್ದ ನೆಲದ ವಿಚಿತ್ರವಾದ ಮೋಹಕ ವಾಸನೆ, ಪೊದೆಗಳ ಕಾಡು, ಹೂವುಗಳ ಸುಗಂಧ - ಎಲ್ಲವೂ ಮನಮೋಹಕವಾಗಿ ಕಾಡಿನ ಸೊಬಗನ್ನು ಹೆಚ್ಚಿಸಿ ನನ್ನನ್ನು ಮರುಳುಗೊಳಿಸಿ ಸೆರೆಹಿಡಿದ ಕ್ಷಣಗಳ ಅರಿವೇ ನನಗಿರಲಿಲ್ಲ. ಪುನಃ ತಿಳಿದೆದ್ದು ಹೆಜ್ಜೆ ಕಿತ್ತು ಇಡತೊಡಗಿದೆ. ಆದರೆ ದಾರಿಯನ್ನು ಮುಚ್ಚಿನಿಂತ ತರಗೆಲೆಗಳು ಮಳೆಯಿಂದ ತೊಯ್ದಿದ್ದರಿಂದ ಜಾರಿಕೆ ಹೆಚ್ಚಿ ನನ್ನ ವೇಗವು ಕುಂಠಿತವಾಗತೊಡಗಿತು. ಹಾಗೆಯೇ ಇನ್ನೊಂದು ಮೈಲು ಕ್ರಮಿಸುತ್ತಲೇ ಕೃಷ್ಣೆಯ ಉಲಿವು ಕೇಳಿ ಬಂದಿತು. ಮನಸ್ಸು ಹಗುರಾಗಿ ನೆಮ್ಮದಿ ಎನಿಸಿತು.

ನದಿಯ ದಂಡೆಗೆ ಬಂದಾಗ ಸೂರ್ಯ ಪಶ್ಚಿಮ ದಿಗಂತವನ್ನು ಮುಟ್ಟುವುದರಲ್ಲಿದ್ದ. ಕೈಕಾಲು ಮುಖ ತೊಳೆದುಕೊಂಡು ದಣಿವಾರಿಸಿಕೊಂಡೆ. ನೀರಡಿಕೆಯೂ ತುಂಬಾ ಆಗಿತ್ತು. ಸಂಧ್ಯಾವಂದನೆಯ ಸಮಯವಾಗಿದ್ದರಿಂದ ಮುಗಿಸಿಕೊಂಡೇ ನೀರು ಕುಡಿದರಾಯಿತೆಂದು ಪಾತ್ರೆಯಲ್ಲಿ ನೀರು ತುಂಬಿಕೊಂಡು ಎತ್ತರವಾದ ದಿನ್ನೆಯ ಬದಿಗಿದ್ದ ಶಂಕುವಿನಾಕೃತಿಯ ಬಂಡೆಗಲ್ಲನ್ನು ಆಶ್ರಯಿಸಿ ಕುಳಿತುಕೊಂಡೆ. ಹಳ್ಳಿಯನ್ನು ತಲುಪುವ ದುಗುಡ ಹೆಚ್ಚುತ್ತಲೇ ಇತ್ತು.

ಅವಸರದಿಂದ ಆಚಮನವನ್ನು ಮುಗಿಸಿ ಕೇಶವನಿಂದ ಆರಂಭಿಸಿದ ನಾಮಾವಳಿಯನ್ನು ಗೋವಿಂದನಿಗೆ ಮುಟ್ಟಿಸಿರಲಿಲ್ಲ ; ವನ್ಯ ಪಶುವಿನ ಭಯಂಕರ ಗುಡುಗನ್ನು ಮಗ್ಗುಲಲ್ಲೇ ಕೇಳಿ ಹೌಹಾರಿ ಎದುರಿಗಿನ ಬಂಡೆಗಲ್ಲನ್ನೇ ಅಪ್ಪಿ ಎದೆಗವಚಿ ಹಿಡಿದುಕೊಂಡೆ. ಬೆನ್ನ ಹಿಂದೆ ನೋಡುವ ಧೈರ್ಯವಾಗಲಿಲ್ಲ. ಇನ್ನೊಂದು ಕ್ಷಣದಲ್ಲಿ ನಾನು ಸಾವಿನ ಬಾಯಿಗೆ ತುತ್ತಾಗುತ್ತೇನೆ.....ಎಂದುಕೊಂಡೆ. ನೂರಾರು ವಿಚಾರಗಳು ಮಿಂಚಿನಂತೆ ತಾಕಲಾಡಿ ಗುಡುಗದೆ ಅಡಗಿ ಮರೆಯಾದವು. ತೊಪ್ಪನೆ ತೊಯ್ದ ದೇಹದಿಂದ ಬೆವರಿನ ಹನಿಗಳು ಉದುರಿ ಬಂಡೆಗಲ್ಲಿನ ಮೇಲೆ ಬಿದ್ದವು.

ಈ ಸ್ಥಿತಿಯಲ್ಲಿಯೇ ಹತ್ತು ಹದಿನೈದು ನಿಮಿಷಗಳು ಉರುಳಿರಬಹುದು. ನಿಧಾನವಾಗಿ ಇದ್ದುಬಿದ್ದ ಶಕ್ತಿಯನ್ನೆಲ್ಲಾ ಕೇಂದ್ರೀಕರಿಸಿ ಹೇಗೋ ಸಾವರಿಸಿಕೊಂಡು ಹಿಂತಿರುಗಿ ನೋಡಿದೆ. ಏನೂ ಕಾಣಿಸಲಿಲ್ಲ. ಸ್ವಲ್ಪ ಧೈರ್ಯ ಬಂತು. ಎದುರಿಗಿದ್ದ ಬಂಡೆಗಲ್ಲನ್ನು ಹಾಗೇ ತಬ್ಬಿಕೊಂಡೇ ತಲೆಯನ್ನು ಚಾಚಿ ನದಿಯ ಕಡೆಗೆ ನೋಡುತ್ತೇನೆ

; ಪಟ್ಟೆಪಟ್ಟೆಯ ಹೆಬ್ಬುಲಿಯೊಂದು ನದಿಯ ದಡದ ಬಂಡೆಗಲ್ಲುಗಳಲ್ಲಿ ಪ್ರಚಂಡವಾಗಿ ವಿಲಕ್ಷಣ ಭಂಗಿಯಲ್ಲಿ ನಿಂತುಕೊಂಡಿದೆ ! ನಾನು ಕುಳಿತ ಸ್ಥಳ ಹತ್ತು ಮಾರೂ ಆಗಿರಲಾರದು. ನನ್ನ ಕೈಯಲ್ಲೇನು ಪಿಸ್ತೂಲಿದೆಯೇ, ಬಂದೂಕಿದೆಯೇ ? ಗಂಡು ಬಿದಿರಿನ ಒಂದು ಬಡಿಗೆಯಿಂದ ಏನು ತಾನೇ ಸಾಧಿಸೇನು ? ಮರೆಯಾಗಿ ಕುಳಿತು ಪಾರಾಗುವುದೊಂದೇ ನನಗಿರುವ ಉಪಾಯವಾಗಿತ್ತು. ಹೇಗೂ ಸುದೈವದಿಂದ ಎತ್ತರವಾದ ಬಂಡೆಗಲ್ಲಿನ ಹಿಂದೆ ಕುಳಿತಿದ್ದೆ. ಕಂಬಳಿಯನ್ನು ಬಿಚ್ಚಿ ತಲೆತುಂಬ ಹೊದ್ದುಕೊಂಡು ಕಣ್ಣೆದುರಿಗೆ ಒಂದು ಕಿಂಡಿ ಮಾಡಿಕೊಂಡು ಮೊಣಕಾಲೂರಿ ಆ ಹೆಬ್ಬುಲಿಯನ್ನೇ ಭಯಗಣ್ಣುಗಳಿಂದ ನೋಡುತ್ತಾ ಕುಳಿತೆ. ಸೂರ್ಯನ ಕೆಂಪು ಕಡಿಮೆಯಾಗಿ ಬೆಳಕು ಭರದಿಂದ ಕುಗ್ಗುತ್ತಲಿತ್ತು. ಅಳಿವು ಉಳಿವಿನ ಹೋರಾಟದಲ್ಲಿ ಹಳ್ಳಿಯನ್ನು ತಲುಪುವ ವಿಚಾರವೇ ಹಾರಿಹೋಗಿತ್ತು.

ಹುಲಿಯು ತನ್ನ ಎರಡೂ ಹಿಂಗಾಲುಗಳನ್ನು ಕಲ್ಲುಗಳ ಸಂದುಗಳಲ್ಲಿಟ್ಟು ಮುಂಗಾಲುಗಳನ್ನು ನೀರೊಳಗೆ ಚಾಚಿ ದೇಹವನ್ನು ಹಿಂದೆಳೆದುಕೊಳ್ಳುತ್ತಿರುವ ವಿಚಿತ್ರ ವರ್ತನೆ ನನಗೆ ಮೊದಲು ಅರ್ಥವಾಗಲೇ ಇಲ್ಲ. ನಾನು ನೋಡುತ್ತಿರುವಂತೆಯೇ ಕರಿ ಹೆಬ್ಬಾವಿನಂತಹ ಬಾಲವೊಂದು ನೀರನ್ನು ಬದಿಗೆ ತಳ್ಳಿ ಹುಲಿಯ ಎಡಮುಂಗಾಲಿಗೆ ಜೋರಿನಿಂದ ಅಪ್ಪಳಿಸಿತ್ತು. ಆ ಹೊಡೆತದ ನೋವು ತಾಳಲಾರದೆ ಹುಲಿಯು ಪ್ರಚಂಡವಾಗಿ ಗುಡುಗಿತು. ನಾನು ಇನ್ನೂ ಭಯಭೀತನಾಗಿ ಕುಳಿತಲ್ಲಿಯೇ ಕುಸಿದೆ. ಗುಡುಗು ಎಡಬಲದ ದಿನ್ನೆಗಳಿಗೆ ಅಪ್ಪಳಿಸಿ ಪ್ರತಿ ಧ್ವನಿಗಳೂ ತಾಕಲಾಡಿ ದ್ವಿಗುಣಿತ ಪ್ರತಿಧ್ವನಿಗಳುಂಟಾದಾಗ ಮರದ ಹಕ್ಕಿಗಳೆಲ್ಲ ಚಿಲಿಪಿಲಿ ಗುಟ್ಟಿ ದೂರ ಚದುರಿದವು. ಒಂದು ಕ್ಷಣದಲ್ಲಿಯೇ ಭಯಾನಕ ಶಾಂತತೆ ಕಾಡನ್ನು ಆವರಿಸಿತು. ಬಿದಿಗೆಯ ಚಂದ್ರನ ಕೋರೆ ಅಸ್ಪಷ್ಟವಾಗಿ ತಿಳಿಬಾನಿನಲ್ಲಿ ಮೂಡತೊಡಗಿತು. ನನ್ನ ಎದೆ ಬಡಿತಗಳು ರೇಸಿನ ಕುದುರೆಯಂತೆ ಜೋರಾಗಿ ಓಡುತ್ತಲೇ ಇದ್ದವು. ಜೀವನದಲ್ಲಿ ಗಂಡಾಂತರ ಕ್ಷಣಗಳು ಒಮ್ಮೆಯಾದರೂ ಬರಬೇಕೆಂದು ಹಾತೊರೆದ ಮನವು ಅದನ್ನು ಪ್ರತ್ಯಕ್ಷ ಎದುರಿಸಿದಾಗ ತತ್ತರಿಸಿ ಹೋಯಿತು.'

ಪುನಃ ಹತ್ತು ನಿಮಿಷಗಳು ಕಳಿದಿರಬೇಕು. ಭಯದ ನಡುಕದಲ್ಲಿಯೂ ಕುತೂಹಲ ಕೆರಳಿ ಮತ್ತೊಮ್ಮೆ ಹಣಿಕಿದೆ. ಹೆಬ್ಬುಲಿಯು ತನ್ನ ವೈರಿಯನ್ನು ಹೊರಗೆಳೆಯುತ್ತಿತ್ತು. ನೋಡುತ್ತಿದ್ದಂತೆಯೇ ಮುಂಗಾಲಿನ ಹಿಂದೆಳೆತದ ಜೊತೆಗೇ

ಜಲಚರ ಪ್ರಾಣಿಯು ಕಲ್ಲುಗಳ ಮೇಲೆ ಕಾಣಿಸಿಕೊಂಡಿತು. ಅದೊಂದು ಮೊಸಳೆ! ತನ್ನ ಮೊಳ ಉದ್ದದ ದವಡೆಗಳನ್ನು ಇಷ್ಟಗಲ ತೆಗೆದು ಕರಗಸದಂತಹ ಹಲ್ಲುಗಳಿಂದ ಹುಲಿಯ ಎಡ ಮೊಳಕಾಲನ್ನು ಕಚ್ಚಿ ಹಿಡಿದಿತ್ತು. ಗೋಡೆಯನ್ನು ಅದುಮಿ ಹಿಡಿಯುವ ಉಡದ ಹಿಡಿತಕ್ಕಿಂತಲು ಮೊಸಳೆಯ ಈ ಹಲ್ಲುಗಳ ಹಿಡಿತ ಇನ್ನೂ ಬಿಗಿಯಾದುದೆಂದು ತೋರಿತು. ಒಂದು ನೀರಿನ ಧೀರ; ಇನ್ನೊಂದು ನೆಲದ ಧೀರೋದಾತ್ತ. ಎರಡೂ ತಮ್ಮ ತಮ್ಮ ಸೀಮೆಗಳಲ್ಲಿ ಕುಸ್ತಿಯ ಕಣಕ್ಕೆ ಇಳಿದಿದ್ದವು. ಮೊಸಳೆಯು ಮಲ್ಲಯುದ್ಧದ ಸೆಣಸಾಟದಲ್ಲಿ ಯಾವ ಪ್ರಾಣಿಗೂ ಕಡಿಮೆಯಿಲ್ಲ. ಅದ್ಭುತ ಶಕ್ತಿಯ ಕರಗಸದಂತಹ ಬಾಲವನ್ನು ಬೀಸಿದರೆ ಎಂಥ ಪ್ರಾಣಿಯೂ ಅದನ್ನೆದುರಿಸಲಾರದು. ಹಲ್ಲುಗಳಲ್ಲಿ ಕಚ್ಚಿದ ಆಹಾರ ತುಣುಕಾಗಿಯೇ ಹೊರಬರಬೇಕೇ ವಿನಾ ಇಡಿಯಾಗಿ ಪಾರಾಗಲಾರದು. ಹುಲಿಯು ನೆಲದ ಮೇಲಿನ ಪ್ರಚಂಡ ಪ್ರಾಣಿ . ಕೆಣಕಿದರೆ ಸೀಳಿ ಒಗೆಯುವ ಸೇಡಿನ ಪ್ರಾಣಿ. ನೀರಡಿಸಿ ನದಿಯ ದಡಕ್ಕೆ ಬಂದಿರಬೇಕು. ಅಲ್ಲಿಯೇ ಕಲ್ಲುಬಂಡೆಗಳ ಬಿರುಕಿನಲ್ಲಿ ಅಡಗಿದ ಮೊಸಳೆ ಜಪ್ಪಿಸಿ ಜಿಗಿದು ಹುಲಿಯ ಮೊಳಕಾಲನ್ನು ಕಚ್ಚಿ ಹಿಡಿದಿರಬೇಕು ಎಂಬುದು ನನ್ನ ತರ್ಕಕ್ಕೆ ತಾಕಿದುದು ಆಮೇಲೆ.

ಅರ್ಧಗಂಟೆಯಿಂದಲೂ ನಡೆದ ಈ 'ಘಟೋತ್ಕಚ ಹೋರಾಟ' ಮುಗಿಯುವುದೋ ಇಲ್ಲವೋ ಎನ್ನುವಂತಾಯಿತು. ಈ ಸಂಧಿಯನ್ನೇ ಸಾಧಿಸಿ 'ಯಃ ಪಲಾಯನ' ಸೂತ್ರಕ್ಕೆ ಶರಣು ಬರ ಬೇಕೆಂದರೆ ಜಡ ವಾದ ಕಾಲು ಗಳೇ ಕೀಳಲಾರ ದಂತೆ ಆಗಿದ್ದವು. ಭಯ ದಿಂದ ನಡುಗುತ್ತ ಲಿದ್ದೆ. ನಡು ಗುವ ಪ್ರಸಂಗವೇ ಆದಾ ಗಿತ್ತು. ನಾನು ನೋಡುತ್ತಿರುವಾಗಲೇ ಮೊಸಳೆಯ ದವಡೆಗಳಿಂದ ಪಾರಾಗಿ ಈ ಹಸಿದ ಹೆಬ್ಬುಲಿ ಏನಾದರೂ ನನ್ನನ್ನೇ ಬೆನ್ನಟ್ಟಿ ಬಂದರೆ ಎಂದೆಲ್ಲ ವಿಚಾರಿಸಿ ದೈವವನ್ನೇ ನಂಬಿ ಆ ಬಂಡೆಗಲ್ಲನ್ನೇ ಆಶ್ರಯಿಸಿ ಕುಳಿತೆ.



ಮೊಸಳೆಯ ಚೂಪಾದ ಹಲ್ಲುಗಳ ಕತ್ತರಿಯಲ್ಲಿ ಸಿಕ್ಕಿದ ಹುಲಿಯ ಮೊಳಕಾಲಿನಿಂದ ರಕ್ತ ಧಾರೆಯಾಗಿ ಸುರಿಯತೊಡಗಿತು. ದಂಡೆಯ ಹರಿಗಡಿದ ನೀರೆಲ್ಲ ಕೆಂಪಾಗಿ ಕಾಣತೊಡಗಿತು. ಆಗಲೇ ನಸುಗತ್ತಲೆಯಾಗಿತ್ತು. ರಕ್ತದ ವಾಸನೆಯಿಂದಲೋ ಏನೋ ಎರಡು ಹದ್ದುಗಳು ತಲೆಯ ಮೇಲೆ ಹಾರಾಡುತ್ತಿದ್ದವು.

ಒಮ್ಮೆಲೇ ಹುಲಿಯು ಟಣ್ಣನೆ ಹಿಮ್ಮೆಟ್ಟಿ ನೆಗೆದು ನಿಂತಿತು. ನಾನು ಕುಳಿತ ಬಂಡೆ ದೂರವಾಗಿಲ್ಲವಾದ್ದರಿಂದ ಆ ನಸುಗತ್ತಲಲ್ಲೂ ಹುಲಿಯ ಸ್ವರೂಪ ನನಗೆ ಸ್ಪಷ್ಟವಾಗಿ ಕಂಡಿತು. ಅದರ ಎಡಗಾಲಿನ ಮೊಳಕಾಲೇ ಇರಲಿಲ್ಲ. ಕಚ್ಚಿ ಹಿಡಿದ ಭಾಗವನ್ನು ಬಲಿಷ್ಠ ಮೊಸಳೆ ಕಡಿದು ಕಚ್ಚಿಕೊಂಡೇ ಒಳಸೇರಿತ್ತು. ಪಾಪ ! ತೊಡೆಯಿಂದ ಧಾರಾಕಾರವಾಗಿ ಸೋರುತ್ತಿದ್ದ ರಕ್ತವನ್ನು ನೆಕ್ಕುತ್ತಲಿದ್ದ ಹುಲಿ ನೆಲದ ಮೇಲೆ ಧೊಪ್ಪನೆ ಬಿದ್ದು ಹೊರಳಾಡಿತು.

ಹಾಗೆ ಹೊರಳಾಡಿದ್ದು ಕೆಲವು ಕ್ಷಣಗಳು ಮಾತ್ರ. ಆಮೇಲೆ ಅದು ಪುಟಚೆಂಡಿನಂತೆ ಚೆಂಗನೇ ನೆಗೆದು ಎದ್ದು ನಿಂತಿತು. ಉರಿಯುತ್ತಿರುವ ಕೆಂಡದಂಥ ಕಣ್ಣುಗಳು ನಸುಬೆಳದಿಂಗಳ ಬೆಳಕಿನಲ್ಲಿ ಹೊಳೆಯುತ್ತಿದ್ದವು. ಕೆಂಡವನ್ನು ಕಾರುವ ಆ ಕಣ್ಣುಗಳನ್ನು ನೆನೆದರೆ ಶಿವನು ತನ್ನ ಹಣೆಗಣ್ಣಿನ ಅಂಶವನ್ನೇನಾದರೂ ಹುಲಿಗೆ ಕೊಟ್ಟಿರಬಹುದೋ ಎಂದು ಅನಿಸದಿರಲಿಲ್ಲ. ಒಮ್ಮೆ ಅದು ಘೋರವಾಗಿ ಗುಡುಗು ಹಾಕಿದಾಗ ನನ್ನ ಬದಿಯಲ್ಲಿದ್ದ ನೀರಿನ ಪಾತ್ರೆಯೂ ಕಂಪಿಸಿತು. ! ಕಾಡು ಮತ್ತೊಂದು ಬಾರಿ ನಿನದಿಸಿತು.

ಕುಂಟ ಹುಲಿಯು ರೌದ್ರಾವತಾರವನ್ನೇ ತಾಳಿತ್ತು. ಒಂದೇ ನೆಗೆತಕ್ಕೆ ಪುನಃ ನದಿಯ ದಡವನ್ನು ಸೇರಿ ತನ್ನ ಮೊಳಕಾಲನ್ನು ಬಲಿಕೊಟ್ಟ ಸ್ಥಳದಲ್ಲಿಯೇ ಗಂಭೀರವಾಗಿ ನಿಂತುಕೊಂಡಿತು. ಎಡಗಾಲಿನ ಮೊಂಡ ತೊಡೆ ನೀರ ಮೇಲೆ ಅಲುಗಾಡುತ್ತಿತ್ತು; ಆದರೆ ಬಲಗಾಲನ್ನು ನೀರಿನಲ್ಲಿ ಚಾಚಿ ನಿಂತಿತು.

ಹಸಿವು ಹಿಂಗದ ಮೊಸಳೆಯೂ ಇನ್ನೂ ಆಶೆಗಾಗಿ ಅಲ್ಲಿಯೇ ಮುಳುಗಿ ಅಡಗಿತ್ತು. ಇದು ಹುಲಿಯ ತಿಳುವಳಿಕೆಗೆ ಹೇಗೆ ಹೊಳೆಯಿತೋ ಏನೋ ! ಒಂದು ಹೊಟ್ಟೆಯ ಹಸಿವಿಗಾಗಿ ಕಾದಿತ್ತು. ಇನ್ನೊಂದು ಸೇಡಿನ ಪೂರ್ತಿಗಾಗಿ ನಿಂತಿತ್ತು. ಕೋಪ

ಕೆರಳಿದರೆ ಹುಲಿಯನ್ನು ತಡೆಯುವ ವನ್ಯಪ್ರಾಣಿ ಇನ್ನೊಂದಿಲ್ಲ.

ಹುಲಿಯು ತನ್ನ ಮುಂಭಾಗದ ಬಲಗಾಲನ್ನು ಚಾಚುತ್ತಲೇ ಮೊಸಳೆ ಒಂದೇ ನೆಗೆತಕ್ಕೆ ಬಲಗಾಲನ್ನು ಕಚ್ಚಿ ಕತ್ತರಿಯಂತೆ ಹಿಡಿದೇಬಿಟ್ಟಿತು. ಹಲ್ಲುಗಳ ಬಿಗಿತ ಇನ್ನೂ ಪೂರ್ತಿಯಾಯಿತೋ ಇಲ್ಲವೋ, ಹುಲಿ ಎಡಗಾಲಿನ ರಕ್ತವನ್ನು ನೆಕ್ಕುತ್ತಲೇ ಬಲಗಾಲನ್ನು ಮೇಲಕ್ಕೆ ಚಿಮ್ಮಿ ಅದರೊಂದಿಗೇ ಬಂದ ಹದಿನೈದು ಅಡಿಗಳ ಭಯಂಕರ ಮೊಸಳೆಯನ್ನು ದಡದ ಮೇಲೆ ಧೊಪ್ಪನೇ ಕೆಡವಿತ್ತು. 'ಭಾಪುರೇ ಹುಲಿರಾಯ !' ಎಂದು ಧ್ವನಿಬಾರದ ಒಳದನಿಯಲ್ಲಿಯೇ ಉಸುರಿದೆ. ಅಂಥ ನಡುಕದಲ್ಲಿಯೂ ನನ್ನ ಬಾಹುಗಳು ಸ್ಫುರಣಗೊಂಡವು.

ಮೊಸಳೆ ಅಂಗಾತಾಗಿ ಬೀಳುತ್ತಲೇ ಹುಲಿ ಮತ್ತೊಂದು ಜಿಗಿತಕ್ಕೆ ಅದರ ಹೊಟ್ಟೆಯ ಮೇಲೆ ತನ್ನ ಬಲಗಾಲನ್ನು ಊರಿ ಕ್ಷಣದಲ್ಲಿಯೇ ಅದನ್ನು ಹರಿದು ಕರುಳನ್ನು ಚೆಲ್ಲಾಪಿಲ್ಲಿ ಮಾಡಿದ ಆ ಭಯಾನಕ ದೃಶ್ಯವನ್ನು ಕಂಡಾಗ ಭೀಮನೂ ದುಃಶಾಸನನನ್ನು ಇದೇ ರೀತಿ ಸೀಳಿರಬಹುದಲ್ಲ ಎಂಬ ಕಲ್ಪನೆ ಬಾರದಿರಲಿಲ್ಲ.

ಹುಲಿಗೆ ಈಗ ವಿಜಯೋನ್ಮಾದವಾಗಿತ್ತು. ತನ್ನ ಪ್ರಚಂಡ ಶಕ್ತಿಯು ಸಾರ್ಥಕತೆಯನ್ನು ಪಡೆದಿತ್ತು. ಕಾಡನ್ನು ನಿನದಿಸುವ ಗುಡುಗು ಈಗಿರಲಿಲ್ಲ. ನಿಜವಾದ ಶೂರನಿಗೆ 'ಕೇಕೆ' ಬೇಕಿಲ್ಲವೇನೋ ! ಮೊಸಳೆಯ ಮಾಂಸದ ಒಂದು ತುಣುಕನ್ನೂ ಮುಟ್ಟದೆ ಆ ಸ್ವಾಭಿಮಾನಿ ಶೂರ ಹುಲಿ ಕುಂಟುತ್ತಲೇ ಕಾಡಿನಲ್ಲಿ ಮರೆಯಾಯಿತು.


ಚಂದ್ರನ ಕೋರೆ ಪೂರ್ಣವಾಗಿ ಕರಗಿತ್ತು. ಕತ್ತಲೆ ಕಾಡನ್ನು ಆಮೂಲಾಗ್ರವಾಗಿ ಕುಡಿದಿತ್ತು. ಆ ರಾತ್ರಿಯನ್ನು ನಿಶ್ಚಿಂತೆಯಿಂದ ನಾನು ಕಳೆಯಲಿಲ್ಲ. ಹುಲಿ ಅಲ್ಲಿರದಿದ್ದರೂ ಭಯವು ಇನ್ನೂ ಆವರಿಸಿತ್ತು. ಕಂಬಳಿಯ ಮುಸುಕಿನಲ್ಲಿ ಬಂಡೆಗಲ್ಲಿನ ಆಶ್ರಯದಲ್ಲಿ ಹೇಗೋ ಆ ಭಯಂಕರ ರಾತ್ರಿಯನ್ನು ಕಳೆದು ಬೆಳಕು ಹರಿಯುತ್ತಲೇ ನನ್ನ ಮುದುಡಿದ ದೇಹವನ್ನು ಕೊರಕಲಿನಲ್ಲಿ ಎಳೆಯುತ್ತ ಮುನ್ನಡೆದೆ.

❊❊❊

೧೩. ಸಸ್ಯ ಧ್ವಂಸಿ - ದೈತ್ಯ ಬಸವನ ಹುಳು

ಅದು ಅರ್ಧಭೂಮಂಡಲವನ್ನು ಜಯಿಸಿತು !

ಗಂಟೆಗೊಂದು ಅಂಗುಲ ಕೂಡ ಸಾಗದಂತೆ ಕಾಣುವ ಬಸವನ ಹುಳು ಕೋಟಿಗಟ್ಟಲೆಯ ಹಾನಿಯನ್ನುಂಟು ಮಾಡುತ್ತ ಅರ್ಧ ಭೂಮಂಡಲವನ್ನು ವ್ಯಾಪಿಸಬಹುದೆಂಬ ಅಸಂಭವ ಕಲ್ಪನೆ ಎನಿಸಬಹುದು. ಆದರೆ ಗೋಲಿಯಾಥ್ ಅಥವಾ ದೈತ್ಯಬಸವನ ಹುಳು ಈ ಅಸಾಧ್ಯವನ್ನು ಸಾಧಿಸಿದೆ. ಕಳೆದ ಒಂದೂವರೆ ಶತಮಾನಗಳ ತನ್ನ ಯಾತ್ರೆಯಲ್ಲಿ ಅದು ಭಾರತದ ತೆಂಗಿನ ತೋಟಗಳನ್ನು ಹಾಳುಗೆಡಹಿದೆ, ಮಲಯದ ಚಹಾ ತೋಟಗಳನ್ನು ಬೆತ್ತಲೆ ಮಾಡಿ, ಹವಾಯಿಯ ಸಸ್ಯ ಸಂಪತ್ತನ್ನು ನುಂಗಿ ತೇಗಿದೆ. ಅದರ ಕುಲನಾಶ ಮಾಡಲು ಯತ್ನಿಸಿದ ವಿಜ್ಞಾನಿಗಳನ್ನು ಸೋಲಿಸಿದೆ.



ಗೋಲಿಯಾಥ್ ಬಸವನ ಹುಳುಗಳಲ್ಲೇ ದೈತ್ಯಗಾತ್ರದ್ದು. ಅದು ಒಂಬತ್ತಂಗುಲದವರೆಗೂ ಬೆಳೆಯಬಲ್ಲದು. ತಲೆಯ ಮೇಲೆ ಕೋಡಿನಂತೆ ಕಾಣುವ ನಾಲ್ಕು 'ಮೀಸೆ'ಗಳು, ಆ ಮೀಸೆಗಳ ತುದಿಯಲ್ಲಿ ಟಾರ್ಚಿನಂಥ ನಾಲ್ಕು ಕಣ್ಣುಗಳು, ಜಿಗುಟಾಗಿ ಒಸರುವ ರಸದಿಂದ ತಾನು ಹೋದ ದಾರಿಯಲ್ಲಿ ಬೆಳ್ಳಿಯ ಧಾರೆಯನ್ನೆಳೆಯುವ ಕಾಲುಗಳು - ತನ್ನ ಇಡೀ ಶರೀರವನ್ನು ಚಿಪ್ಪಿನೊಳಗೆ ಹುದುಗಿಸಿಕೊಂಡು ಮೂಟೆ ಹೊತ್ತ ಅಗಸನಂತೆ ಹೋಗುವ ಈ ಪ್ರಾಣಿ ಕುರೂಪ ಸ್ಪರ್ಧೆಯಲ್ಲಿ ಪ್ರಥಮಸ್ಥಾನ ಗಳಿಸುವಂತಿದೆ. ಮುಟ್ಟಿದರೆ ತನ್ನ ಕಾಲುಗಳನ್ನೂ ಮೀಸೆಗಳನ್ನೂ ಪೂರ್ತಿ ಚಿಪ್ಪಿನೊಳಗೆ ಎಳೆದುಕೊಂಡು ನಿಶ್ಚಲವಾಗಿ ಬಿದ್ದುಕೊಳ್ಳುವ

ಅದರ ಅಸಹ್ಯತನವನ್ನು ಹೆಚ್ಚಿಸಲೆಂದೇ ಅದು ಜಿಗುಟು ರಸವನ್ನು ಸ್ರವಿಸುವಂತೆ ಕಾಣುತ್ತದೆ. ಆದರೆ ಅದರ ಉದ್ದೇಶ ಗೋಲಿಯಾಥ್‌ನ ಮಾರ್ಗವನ್ನು ನಯಗೊಳಿಸುವುದಾಗಿದೆ. ಕಲ್ಲಿರಲಿ, ಮುಳ್ಳಿರಲಿ, ಏರಿರಲಿ ತಗ್ಗಿರಲಿ, ಈ ರಸದ ಸೇಚನೆಯಿಂದ ಬಸವನಹುಳದ ಪಾಲಿಗೆ ಜುಳುಜುಳು ಜಾರುವ ಜಾರುಬಂಡೆಯಾಗಿಬಿಡುತ್ತವೆ.

ಚಿಪ್ಪಿನಿಂದ ಆವರಿಸಲ್ಪಟ್ಟ ಅಸ್ಥಿರಹಿತ ಮಾಂಸದ ಮುದ್ದೆಯಾದ ಗೋಲಿಯಾಥ್‌ನ ಶಕ್ತಿಯ ಮೂಲಗಳು ಎರಡು : ತಣಿಯದ ಹಸಿವಿಗಾಗಿ ಸಸ್ಯವನ್ನು ಧ್ವಂಸಮಾಡಲು ೮೦,೦೦೦ ಹಲ್ಲುಗಳಿಂದ ಸಾಯುಧವಾದ ನಾಲಗೆ ಮತ್ತು ರಕ್ತಬೀಜ ಸದೃಶವಾದ ಸಂತಾನ ಶಕ್ತಿ. ಉಭಯಲಿಂಗಿ (ಅಂದರೆ ಗಂಡು ಹೆಣ್ಣು ಎರಡೂ ಜನನೇಂದ್ರಿಯಗಳುಳ್ಳದ್ದು) ಪ್ರಾಣಿ ಅದು. ಪ್ರತಿಯೊಂದು ಗೋಲಿಯಾಥ್ ಒಂದು ಸಾರಿಗೆ ೩೦೦ರಂತೆ ಅವರೆ ಕಾಳಿನ ಗಾತ್ರದ ಅಂಡಗಳನ್ನೂ, ಲಕ್ಷಾಂತರ ವೀರ್ಯಾಣುಗಳನ್ನೂ ವರ್ಷದಲ್ಲಿ ಅನೇಕ ಬಾರಿ ಉತ್ಪತ್ತಿ ಮಾಡಬಲ್ಲದು. ಹೀಗೆ ಒಂದೇ ಜೋಡಿ ಬಸವನ ಹುಳುಗಳು ಐದು ವರ್ಷಗಳ ಅವಧಿಯಲ್ಲಿ ೨೨ ಶತಕೋಟಿ ಸಂತಾನದ ಉತ್ಪತ್ತಿಗೆ ಕಾರಣವಾಗಬಲ್ಲವು.

ಗೋಲಿಯಾಥ್ ಬಸವನ ಹುಳದ ಜನ್ಮಭೂಮಿ ಆಫ್ರಿಕಾಖಂಡದ ಪೂರ್ವ ಕರಾವಳಿ. ೧೯ನೆಯ ಶತಮಾನದ ಆದಿಯವರೆಗೂ ತವರುಮನೆ ಬಿಡದಿದ್ದ ಈ 'ದೈತ್ಯ'ನ ದಿಗ್ವಿಜಯ ಆಗ ಪ್ರಾರಂಭವಾಯಿತು. ಬಹುಶಃ ವ್ಯಾಪಾರಿ ಹಡಗುಗಳಲ್ಲಿ ಅಡಗಿ, ಮೊದಲು ಮಾಡಗಾಸ್ಕರ ದ್ವೀಪಕ್ಕೆ ಅಂಬೆಗಾಲಿಕ್ಕಿ, ೧೮೨೧ರಷ್ಟರಲ್ಲಿ ಹಿಂದೂ ಮಹಾಸಾಗರವನ್ನು ದಾಟಿತು. ಯೂನಿಯನ್ ದ್ವೀಪಗಳ ಗೌರ್ನರ್‌ನ ಹೆಂಡತಿ ಈ ಹುಳದ ಸಾರಿನ ರುಚಿಯನ್ನು ಸವಿದು ಅದರ ಸಂತಾನಾಭಿವೃದ್ಧಿಗಾಗಿ ಪ್ರತ್ಯೇಕ ವ್ಯವಸ್ಥೆಯನ್ನೇ ಮಾಡಿಬಿಟ್ಟಳು. ಕೇಳುವುದೇನು - ಹಿಂದೂ ಮಹಾಸಾಗರದ ಇನ್ನೂ ಅನೇಕ ದ್ವೀಪಗಳಿಗೆ ಗೋಲಿಯಾಥ್ ಕಾಲಿಟ್ಟಿತು. ೧೮೪೭ರಲ್ಲಿ ಅದು ಭಾರತಕ್ಕೂ ಬಂದಿತು. ದೈತ್ಯನ ದಂಡು ಪೂರ್ವ ಕರಾವಳಿಗುಂಟ ತನ್ನ ಬೀಡು ಬಿಟ್ಟಿತು. ಕರಾವಳಿ ಪ್ರದೇಶದ ತೆಂಗಿನ ಗಿಡಗಳು ತಲೆ ಕೆಳಗಾದವು. ಚಹಾ-ಕಾಫಿ ತೋಟಗಳ ಚಿಗುರುಗಳು ಮರೆಯಾದವು. ಆಮೇಲೆ ದಕ್ಷಿಣಕ್ಕೆ ಸರಿಯುತ್ತ ಸಿಂಹಳವನ್ನು ಮುತ್ತಿತು. ಅಗಣಿತ ಸಂಖ್ಯೆಯಲ್ಲಿ ಈ ಪ್ರಾಣಿಗಳನ್ನು

ಕಂಡ ಓರ್ವ ಕೀಟ ಶಾಸ್ತ್ರಜ್ಞನು ಆಗ ವರದಿ ಮಾಡಿದ್ದ - ''ಅಕ್ಷರಶಃ ಲಕ್ಷಾನುಲಕ್ಷ ದೈತ್ಯ ಬಸವನ ಹುಳುಗಳು ನೆಲ, ಗೋಡೆ, ಕಂಬ, ಗಿಡಮರಗಳನ್ನು ಮುತ್ತಿ ಹರಿಯುತ್ತಿವೆ. ೨೨೭ ಬಸವನ ಹುಳುಗಳು ಆರಡಿ ಎತ್ತರದ ಒಂದು ತೆಂಗಿನ ಗಿಡವನ್ನು ಅವಚಿ ಕುಳಿತಿದ್ದವು.'''

ಪಯಣ ಪುನಃ ಮುಂದುವರಿಯಿತು. ಪೆರಾಕಿನ ಚಹ ತೋಟಗಳ ಹಸುರೆಲೆಗಳು ಕಣ್ಮರೆಯಾದವು. ಮಲಯದ ರಬ್ಬರ್ ಗಿಡಗಳು ಬತ್ತಲೆಯಾಗಿ ನಿಂತವು. ಜಾವಾದ ತೋಟಗಳು ಧ್ವಂಸವಾದವು. ಸುಮಾತ್ರಾ, ಥಾಯಲ್ಯಾಂಡಗಳ ಬವಣೆಯೂ ಹೇಳದಂತಾಯಿತು. ಸಾರವಾಕ್ ಪ್ರಾಂತದ ಜನ ರೊಚ್ಚಿಗೆದ್ದು ಕೇವಲ ೧೫ ದಿನಗಳಲ್ಲಿಯೇ ೫,೦೦,೦೦೦ ದೈತ್ಯ ಬಸವನ ಹುಳುಗಳನ್ನು ಕೊಂದರು ; ೨,೦೦,೦೦೦ ತತ್ತಿಗಳನ್ನು ನಾಶ ಮಾಡಿದರು. ಆದರೆ ಒಂದೇ ಒಂದು ವರುಷದಲ್ಲಿ ತಮಗೆ ಯಾವ ನಷ್ಟವೂ ಆಗಿಲ್ಲವೆಂಬಂತೆ ಗೋಲಿಯಾಥಗಳು ಲಕ್ಷಾನುಲಕ್ಷ ಸಂಖ್ಯೆಯಲ್ಲಿ ಕಂಡುಬಂದವು. !

೧೯೩೦ರಷ್ಟರೊಳಗೆ ಈ ಮಂದಗಾಮಿ 'ದೈತ್ಯ'ನು ಸಿಂಗಾಪುರವನ್ನು ತಲುಪಿ ಅಲ್ಲಿಯ ಹಸಿರನ್ನೆಲ್ಲ ಭಕ್ಷಿಸಿ, ಏನೂ ಸಿಗದಂತಾದಾಗ ಬಿಳೀ ಗೋಡೆಯನ್ನೇ ನೆಕ್ಕುತ್ತಾ ಕುಳಿತುಕೊಂಡಿದ್ದವು ! ಮುಂದೆ ಹತ್ತು ವರುಷಗಳಲ್ಲಿಯೇ ಚೀನಾ, ಹಾಂಗ್‌ಕಾಂಗ್, ಫೋರ್ಮೋಸಾ, ನ್ಯೂಗಿನೀ, ಫಿಲಿಪಾಯಿನ್ಸ ದ್ವೀಪಗಳನ್ನು ಪಾದಾಕ್ರಮಣ ಮಾಡಿ ಕೋಟಿ ಕೋಟಿ ರೂಪಾಯಿಗಳ ಹಾನಿ ಉಂಟುಮಾಡಿದವು. ಫೋರ್ಮೋಸಾದಲ್ಲಿ ರಜೆ ಕಳೆದು ತನ್ನ ನಾಡಿಗೆ ಮರಳುತ್ತಿದ್ದ ಓರ್ವ ಹೆಣ್ಣುಮಗಳು ಗೋಲಿಯಾಥ್‌ಗಳನ್ನು ಮುದ್ದು ಪ್ರಾಣಿಗಳೆಂದು ತನ್ನ ಸೂಟ್‌ಕೇಸಿನಲ್ಲಿಟ್ಟುಕೊಂಡು ಹವಾಯಿಗೆ ಬಂದಳು. ಕೇವಲ ಎರಡು ದೈತ್ಯ ಬಸವನಹುಳುಗಳು ತಮ್ಮ ಸಂತಾನಶಕ್ತಿಯ ವರದಿಂದ ಒಂದು ವರುಷದಲ್ಲಿಯೇ ಹವಾಯೀ ದ್ವೀಪವನ್ನು ಆದ್ಯಂತವಾಗಿ ಮುತ್ತಿ ಬೀಡುಬಿಟ್ಟವು.

ಈ ಪ್ರಾಣಿಗಳ ಸಾರಿನ ರುಚಿಗೆ ಮನಸೋತ ಜಪಾನಿಯರೂ ಮರಿಅನಾಜ ದ್ವೀಪದಲ್ಲಿ ಇವುಗಳನ್ನು ತಂದು ಬಿಟ್ಟರು. ಅಲ್ಲಿ ಬರುತ್ತಲೇ ಅವು ಆ ದ್ವೀಪದ ಬೆಳೆಗಳನ್ನು ತಿಂದು ತೇಗಿದವು. ೧೯೪೪ ರಲ್ಲಿ ಈ ದ್ವೀಪಗಳನ್ನು ಗೆದ್ದ ಅಮೇರಿಕನ್ನರು ಅಲ್ಲಿ ಜೀಪುಗಳನ್ನು ಸಾಗಿಸುತ್ತಿದ್ದಾಗ ಅವು ಸ್ರವಿಸಿದ ಜಾರಿಕೆ ರಸದಲ್ಲಿ ಉರುಳಿ

ಬೀಳುವಂತಾಯಿತಂತೆ ! ಇಡೀ ರಾತ್ರಿ ಅವು ಕೊಳೆತೆಲೆಗಳನ್ನು ತಿನ್ನುವಾಗ ಉಂಟುಮಾಡುವ ಕರ್.....ಕರ್ ಎಂಬ ಕರ್ಣಕಠೋರ ಶಬ್ದವನ್ನು ಕೇಳುವುದೂ ದುಃಸಹನೀಯವಾಗಿತ್ತೆಂದು ಓರ್ವ ಅಮೆರಿಕನ್ ಸೈನಿಕ ವರದಿ ಮಾಡಿದ್ದ.

ಪೌರಸ್ತ್ಯ ದೇಶಗಳನ್ನು ಸಹಜವಾಗಿಯೇ ಪಾದಾಕ್ರಾಂತ ಮಾಡಿದ 'ದೈತ್ಯ' ಅಮೇರಿಕವನ್ನು ಮಾತ್ರ ಎಂಟು ಬಾರಿ ಮುತ್ತಿ, ಎಂಟು ಬಾರಿಯೂ ಸೋತು ಹಿಂದಿರುಗಬೇಕಾಯಿತು. ದ್ವಿತೀಯ ಮಹಾಯುದ್ಧ ಮುಕ್ತಾಯಗೊಂಡು ಯುದ್ಧ ಸಾಮಗ್ರಿಗಳನ್ನು ಅಮೇರಿಕೆಯ ಪಶ್ಚಿಮ ಕರಾವಳಿಯಲ್ಲಿಯ ಒಂದು ಬಂದರದಲ್ಲಿ ಇಳಿಸಿಕೊಳ್ಳುತ್ತಿದ್ದಾಗ ಜೀಪು ಟ್ರಕ್ಕುಗಳ ಬುಡಕ್ಕೆ ಮೆತ್ತಿದ ಕೆಸರಿನಲ್ಲಿ ದೈತ್ಯ ಬಸವನ ಹುಳುಗಳು ಕಳ್ಳರಂತೆ ಅಡಗಿ ಕುಳಿತಿದ್ದು ರೋಗ ನಿಷೇಧಕ ಅಧಿಕಾರಿಗಳ ಕಣ್ಣಿಗೆ ಕಂಡಿತು. ಕೂಡಲೇ ಬಂದರ ಪ್ರವೇಶವನ್ನು ನಿಷಿದ್ಧವೆಂದು ಸಾರಿ ಹಡಗುಗಳ ತುಂಬ ಒತ್ತಡ ಉಗಿಯನ್ನು ಉಪಯೋಗಿಸಿ 'ದೈತ್ಯ'ರನ್ನು ಜೀವಂತ ಬೇಯಿಸಿ, ಕುದಿಸಿ ಕೊಲ್ಲಲಾಯಿತು. ೧೯೪೯ರಲ್ಲಿ ಸ್ಯಾನ್ ಡಿಗೋ, ವ್ಯಾನ್‌ಕೋವರ ಬಂದರುಗಳಲ್ಲಿಯೂ ಇದೇ ರೀತಿ ಹಡಗಿನಿಂದ ಸಾಮಾನುಗಳನ್ನು ಇಳಿಸಿಕೊಳ್ಳುವಾಗ ಗೋಲಿಯಾಥ್ ಪ್ರಾಣಿಗಳು ಅಧಿಕಾರಿಗಳ ಕಣ್ಣಿಗೆ ಬಿದ್ದವು. ಫಿಲಿಪಾಯಿನ್ಸ್‌ನಿಂದ ಹೊರಟ ಆ ಹಡಗಿನಲ್ಲಿ ಅವು ಎರಡು ತಿಂಗಳ ಕಾಲವೂ ಆಹಾರವಿಲ್ಲದೆ ಬದುಕಿದ್ದವು. ಅವು ಆರು ತಿಂಗಳುಗಳವರೆಗೂ ನಿರಾಹಾರದಿಂದ ಇರಬಲ್ಲವೆಂದು ಕೀಟಶಾಸ್ತ್ರಿಗಳಿಗೆ ಗೊತ್ತಾಯಿತು. ಗೋಲಿಯಾಥ್ ಮೇಲೆ ಅಮೆರಿಕ ಸರಕಾರ ಯುದ್ಧ ಸಾರಿತು. ಅದನ್ನು ಅಮೇರಿಕಕ್ಕೆ ತಂದವರಿಗೆ ೫೦೦ ಡಾಲರು ದಂಡ, ಒಂದು ವರ್ಷ ಶಿಕ್ಷೆ ಸಾರಲಾಯಿತು.

ಅಮೆರಿಕಾದ ಬಾಲಕನೊಬ್ಬನನ್ನು ಮರುಳುಗೊಳಿಸಿ ಆ ದೇಶವನ್ನು ಗೆಲ್ಲಬೇಕೆನ್ನುವ 'ದೈತ್ಯ'ನ ಸಾಹಸದ ಕತೆ ಇನ್ನೂ ವಿಚಿತ್ರವಾಗಿದೆ. ಹವಾಯೀ ದ್ವೀಪದಿಂದ ಎರಿಝೋನಾಕ್ಕೆ ಹೋಗುತ್ತಿದ್ದ ಒಬ್ಬ ಹುಡುಗ ಸುಪ್ತಾವಸ್ಥೆಯಲ್ಲಿದ್ದ ಎರಡು ಗೋಲಿಯಾಥ್ ಪ್ರಾಣಿಗಳನ್ನು ತನ್ನ ಸೂಟ್‌ಕೇಸ್‌ನಲ್ಲಿ ಹಾಕಿಕೊಂಡಿದ್ದ. ಗೋಲಿಯಾಥ್ ಪ್ರಾಣಿಗಳು ಏಕೋ ಸುಂಕದ ಅಧಿಕಾರಿಗಳ ಕಣ್ಣಿಗೆ ಬೀಳಲಿಲ್ಲ. ತಮ್ಮ ಬಂಗಲೆಗೆ ಹೋಗಿ ಸೂಟ್‌ಕೇಸ್‌ನ್ನು ತೆರೆದಾಗ ಮಾತ್ರ ಅವರು ಕಂಡ ದೃಶ್ಯ ಅಸಹ್ಯವಾಗಿತ್ತು. ಎರಿಝೋನಾದ ಉಷ್ಣತೆಗೆ ಎಚ್ಚರಗೊಂಡ ಪ್ರಾಣಿಗಳು ಕಾಲಿನ ಜಿಗುಟು ದ್ರವದಿಂದ ಸೂಟ್‌ಕೇಸ್‌ನ್ನು

ಹೊಲಸು ಮಾಡಿದ್ದವು. ಕೂಡಲೇ ತಂದೆ ಮತ್ತು ಮಗ ಆ ಪ್ರಾಣಿಗಳನ್ನು ಸನಿಹದ ವನ್ಯಮೃಗ ಕೇಂದ್ರಕ್ಕೆ ಒಯ್ದುಕೊಟ್ಟರು. ಮೇಲಾಧಿಕಾರಿಗಳಿಗೆ ಇದು ತಿಳಿದೊಡನೆ ಅವರು ಆ ದೈತ್ಯದ್ವಯರನ್ನು ನಾಶ ಮಾಡಿಸಿದರು.

ಇಪ್ಪತ್ತು ವರ್ಷಗಳ ಕಾಲ ದೈತ್ಯ ಬಸವನ ಹುಳುಗಳ ನಿರ್ಮೂಲನೆಗಾಗಿ ಬೆಂಕಿ, ವಿಷ, ಡಿ. ಡಿ. ಟಿ. ಸಾಯನಾಯ್ಡ ವಾಯು ಮುಂತಾದ ಉಪಾಯಗಳನ್ನು ಮಾಡಿ ಸೋತ ಅಮೇರಿಕನ್ ಅಧಿಕಾರಿಗಳು ಪೂರ್ವ ಆಫ್ರಿಕೆಯ ಮೊಂಬಾಸಾ ಪ್ರಾಂತದ ದಕ್ಷಿಣ ಅರಣ್ಯದಲ್ಲಿ 'ಡೇವಿಡ್' ವೆಂಬ ಮಹಾದೈತ್ಯ ಬಸವನ ಹುಳು ವಾಸಿಸುತ್ತಿರುವುದಾಗಿಯೂ ಸಜಾತಿ ಭಕ್ಷಕನಾದ ಈ ಜೀವಿಗೆ ಗೋಲಿಯಾಥ್‌ನಂಥ 'ಮೃಷ್ಟಾನ್ನ' ಭೋಜನ ಬೇರೊಂದಿಲ್ಲವೆಂದೂ ಹೇಳಿದರು. ಈ ದಾಯಾದಿ ಯುದ್ಧ ಮೋಜಿನದಾಗಿದೆ. ಬೇಟೆಯ ವಾಸನೆ ಡೇವಿಡ್‌ನಿಗೆ ಚೆನ್ನಾಗಿ ಗೊತ್ತು ; ತನ್ನ ಭಕ್ಷಕ ಸನಿಹದಲ್ಲಿರುವುದು ಗೋಲಿಯಾಥ್‌ನಿಗೂ ಗೊತ್ತು. ಕೂಡಲೇ ಗೋಲಿಯಾಥ್ ತನ್ನ ತಲೆ ಕಾಲುಗಳನ್ನು ಚಿಪ್ಪಿನೊಳಕ್ಕೆಳೆದುಕೊಂಡು ಕಲ್ಲಾಗಿ ಬಿದ್ದುಬಿಡುವನು. ಅದೇ ಅವನಿಗೆ ಮುಳುವು. ಚಿಪ್ಪಿನ ದ್ವಾರವನ್ನು ಮುಚ್ಚಿದ ಕಾಲನ್ನು ಡೇವಿಡ್ ಕಚ್ಚಿ ಹಿಡಿಯುವನು. ಅದನ್ನು ನಿಧಾನವಾಗಿ ಭಕ್ಷಿಸುತ್ತಾ ಒಳನುಗ್ಗುವನು. ಪಾರಾಗಲೆತ್ನಿಸುವ ಮೂರ್ಖ ಬೇಟೆ ಒಳಗೊಳಗೇ ಸರಿಯುವುದು. ಬೇಟೆ ಒಳಸರಿದಷ್ಟೂ ಡೇವಿಡ್‌ನ ಕಾರ್ಯ ಇನ್ನೂ ಸುಲಭ; ನೇರವಾಗಿ ಡೇವಿಡ್ ತನ್ನ ತಲೆಯನ್ನು ಒಳಗೆ ಸರಿಸುತ್ತ ಗೋಲಿಯಾಥನನ್ನು ಸಜೀವವಾಗಿ ತಿಂದು ಮುಗಿಸುವನು !

ಅಮೇರಿಕದ ಅಧಿಕಾರಿಗಳು ಮೊಂಬಾಸಾಕ್ಕೆ ಬಂದು ಸಾವಿರಾರು ಡೇವಿಡ್ ದೈತ್ಯರನ್ನು ದುಡ್ಡು ಕೊಟ್ಟು ಕೊಂಡರು.


ಡೇವಿಡ್‌ಗಳನ್ನು ಎಗೀಗ್ವಾನ್ ದ್ವೀಪಕ್ಕೆ ಸಾಗಿಸಿ ಗೋಲಿಯಾಥ್‌ಗಳ ಮೇಲೆ ಹರಿಬಿಡಲಾಯಿತು 'ಭೀಮ-ಬಕಾಸುರ' ಕಾಳಗವನ್ನು ಕುತೂಹಲಿಗಳಾದ ಪ್ರಾಣಿ ಶಾಸ್ತ್ರಜ್ಞರು ನಾಲ್ಕು ವರುಷಗಳವರೆಗೂ ನೋಡಿದರು. ಗೋಲಿಯಾಥ್‌ಗಳ ಸಂಖ್ಯೆ ಕ್ರಮೇಣ ಕುಗ್ಗುತ್ತಿರುವುದು ವಿಜ್ಞಾನಿಗಳ ಗಮನಕ್ಕೆ ಬಂದಿತು. ೧೯೫೫ರ ಸುಮಾರಿಗೆ ಡೂಡೂಗಳು 'ಸುಖ ಭೋಜನ' ಮೇಲೆ ನೂರಕ್ಕೆ ಅರವತ್ತರಷ್ಟು ನಿಯಂತ್ರಣ ಇಟ್ಟುಕೊಳ್ಳಬಲ್ಲವೆಂಬುದು ವಿದಿತವಾಯಿತು.

ಇದೇ ವೇಳೆಗೆ ಸಿಲೋನ್, ಸಿಂಗಾಪುರ, ಹಾಂಗ್‌ಕಾಂಗ್, ಹವಾಯೀ ದ್ವೀಪಗಳಿಂದ ಗೋಲಿಯಾಥ್‌ಗಳ ಸಂಖ್ಯೆ ಭರದಿಂದ ಇಳಿಮುಖವಾಗುತ್ತಿರುವ ಆಶಾದಾಯಕ ವರದಿಗಳು ಬರತೊಡಗಿದವು. ಅವು ಯಾವುದೋ ಒಂದು ಅಜ್ಞಾತ ಸಾಂಸರ್ಗಿಕ ರೋಗಕ್ಕೆ ಬಲಿಯಾಗತೊಡಗಿದ್ದೇ ಕಾರಣವಾಗಿತ್ತು. ಆದರೆ ಈ ಆಶೆ ಕ್ಷಣಿಕವಾಗಿತ್ತು. ಗೋಲಿಯಾಥ್‌ಗಳ ಅಸಾಮಾನ್ಯ ಜನನ-ಶಕ್ತಿ ಎಂಥ ಭಯಾನಕ ರೋಗಕ್ಕೂ ಸೊಪ್ಪು ಹಾಕಲಾರದೆಂಬ ಕಟು ಸತ್ಯ ವಿಜ್ಞಾನಿಗಳಿಗೆ ಖಚಿತವಾಯಿತು !

ಈಗ ಸಜಾತಿ ಭಕ್ಷಕನಾದ ಡೇವಿಡ್‌ನಾಗಲೀ, ಯಾವುದೊಂದು ಸಾಂಸರ್ಗಿಕ ರೋಗವಾಗಲೀ ಈ 'ದೈತ್ಯನ' ಸಂಖ್ಯೆಯನ್ನು ತಗ್ಗಿಸಬಲ್ಲವೇ ವಿನಾ ನಿರ್ಮೂಲ ಮಾಡಲಾರವೆಂಬುದು ವಿಜ್ಞಾನಕ್ಕೆ ಮನದಟ್ಟಾದಂತಿದೆ. ಅದು ಕಾರಣವೋ ಏನೋ - ಗೋಲಿಯಾಥ್‌ನನ್ನು ನಿರ್ವಂಶಮಾಡಬಲ್ಲೆನೆಂದು ಯಾವ ಪ್ರಾಣಿ ಶಾಸ್ತ್ರಜ್ಞನೂ ಈವರೆಗೆ ಶರತ್ತು ಕಟ್ಟಿಲ್ಲ. !ಹವಾಯೀ ದೇಶದ ಕೃಷಿ ಅರಣ್ಯಗಳ ಖಾತೆ ಮಾತ್ರ ಈ ವಿಷಯದಲ್ಲಿ ಇನ್ನೂ ಆಶಾವಾದಿಯಂತಿದೆ. ಡೇವಿಡ್‌ನಂತಿರುವ ಬೇರೆರಡು ಶತ್ರುಗಳನ್ನು ತರಿಸಿಕೊಂಡು ತನ್ನ ನಾಡಿನಲ್ಲೆಲ್ಲ ಬಿಡಬೇಕೆಂದು ನಿರ್ಧರಿಸಿದೆ. ಡೇವಿಡ್‌ನಿಂದಾಗುವ ಕಾರ್ಯ ಇವುಗಳಿಂದಾದೀತೇ ? ನೋಡಬೇಕಷ್ಟೇ.

***

೧೪. ಹೊನ್ನಿ ಹುಳು



ಸಂಜೆಯ ಸಮಯದಲ್ಲಿ ಹುಲ್ಲುಗಾವಲುಗಳಲ್ಲಿ, ಹಸಿರು ಕಂಟಿಗಳಲ್ಲಿ ಹೊನ್ನಿ ಹುಳುಗಳು ಮಿಣಕ್ ಮಿಣಕ್ ಎಂದು ನಕ್ಷತ್ರಗಳಂತೆ ಮಿನುಗುತ್ತ ಹಾರುವ ದೃಶ್ಯ ನಯನ ಮನೋಹರವಾದುದು. ಮಲೆನಾಡಿನಲ್ಲಿ ಇದು ಸರ್ವ ಸಾಮಾನ್ಯ. ಮಿಣಕು ಹುಳು, ಮಿಂಚು ಹುಳು ಎಂದೂ ಅದನ್ನು ಕರೆಯುವುದುಂಟು. ಕಳೆದ ಮಾರ್ಚ್-ಏಪ್ರಿಲ್‌ನಲ್ಲಿ ನಾನು ಪಾಟ್ನಾಕ್ಕೆ ಹೋದಾಗ ಗಂಗಾ ತಟಾಕದಲ್ಲಿ ಸಾವಿರ ಸಂಖ್ಯೆಯಲ್ಲಿ ಈ ಕೀಟಗಳನ್ನು ಕಂಡು ಆನಂದ ತಂದುಲನಾದೆ. ಬೊಗಸೆ ತುಂಬ ಸಂಗ್ರಹಿಸಿ ಜೇಬಿನಲ್ಲಿ ಹಾಕಿಕೊಂಡು ಕತ್ತಲಲ್ಲಿ ಮನೆಗೆ ಮರಳುವಾಗ ಮೋಜೆನಿಸುತ್ತಿತ್ತು. ಮಧ್ಯ ಅಮೆರಿಕದಲ್ಲಿ ಕಾಣ ಸಿಗುವ ದೊಡ್ಡ ಗಾತ್ರದ ಹೊನ್ನಿ ಹುಳುಗಳನ್ನು ಗಾಜಿನ ಲಾಂದ್ರಗಳಲ್ಲಿ ಇಟ್ಟು ದೀಪದಂತೆ ಬಳಸುವ ರೂಢಿ ನಿಜವಿರಬೇಕು ಎನಿಸಿತು.

ಈ ಕೀಟದ ವೈಜ್ಞಾನಿಕ ಹೆಸರು ಲ್ಯಾಂಪ್ರಿಸ್ ನೊಕ್ಟಿಲುಕ. ಇದು ಕ್ಯಾಂಥರಿಡೀ ಕುಟುಂಬ, ಶೊಲಿಒಪ್ಟೆರ ಉಪವರ್ಗ ಹಾಗೂ ಕೀಟ ವರ್ಗಕ್ಕೆ ಸೇರಿದ ಜೀವಿ ಜಾತಿಯ ಒಂದು ಪ್ರಭೇದ. ಈ ಕುಟುಂಬದಲ್ಲಿ ಲ್ಯಾಂಪ್ರಿಸ್ ಅಲ್ಲದೆ ಲುಸಿಒಲಾ, ಫೋಸ್ಫೀನಸ್, ಫೊಟ್ಯುರಸ್, ಫೋಟಿನಸ್, ಫಿಗೊಂಡ್ಸ ಮುಂತಾದ ಕೀಟ ಪ್ರಭೇದಗಳೂ ತಮ್ಮ ದೇಹ ಭಾಗಗಳಿಂದ ಬೆಳಕನ್ನು ಚೆಲ್ಲಬಲ್ಲವು. ಬೆಳಕು ಚೆಲ್ಲುವ ಜೀವಿಗಳಲ್ಲಿ ಹೊನ್ನಿ

ಹುಳುವಿನಂತೆ ಇನ್ನೂ ಹಲವಾರು ಜೀವಿಗಳಿವೆ. ಬ್ಯಾಕ್ಟೀರಿಯಾಗಳು, ಸಾಗರ ಜೀವಿಗಳು, ಅಣಬೆಗಳು ಸಹ ಹೀಗೆ ತಂಪು ಪ್ರಕಾಶ ನೀಡಬಲ್ಲವು.

ಹೊನ್ನಿಹುಳು ರಾತ್ರಿ ಸಂಚಾರಿ. ದೊಡ್ಡ ಕಣ್ಣಿನ ಗಂಡು ಹುಳು ಗಾತ್ರದಲ್ಲಿ ಚಿಕ್ಕದು. ಅದಕ್ಕೆ ಜೋಡು ರೆಕ್ಕೆಗಳಿವೆ. ಇದು ಹಾರಬಲ್ಲದು. ಹಾರಾಡುವಾಗ ಅವು ಚಲಿಸುವ ದೀವಟಿಗೆಗಳಂತೆ ಕಾಣುತ್ತವೆ. ಚಿಕ್ಕ ಕಣ್ಣಿನ ಹೆಣ್ಣು ಜೀವಿ ಗಾತ್ರದಲ್ಲಿ ದೊಡ್ಡದು. ರೆಕ್ಕೆಗಳಿಲ್ಲದ್ದರಿಂದ ಲಾರ್ವಾದಂತೆ ಭೂಮಿಯ ಮೇಲೆ ಚಲಿಸುವುದು. ಗಂಡು ಸಂಘ ಜೀವಿ ; ಸಂಖ್ಯೆಯಲ್ಲಿಯೂ ಅಪಾರ. ಹೆಣ್ಣು ಒಂಟಿ ಜೀವಿ ; ಸಂಖ್ಯೆಯಲ್ಲಿ ವಿರಳ. ಎರಡರಲ್ಲಿಯೂ ಸಾಮಾನ್ಯವಾದ ಗುಣವೆಂದರೆ, ಉದರದ ಹಿಂಭಾಗದಲ್ಲಿ ಕೆಳಮುಖವಾಗಿರುವ ಪ್ರಕಾಶಾಂಗ. ಇದೇ ದೀಪದಂತೆ ಬೆಳಕನ್ನು ಕೊಡುವ ಅಂಗಭಾಗ.

ಹೊನ್ನಿ ಹುಳುವಿಗೆ ಈ ಬೆಳಕಿನ ಪ್ರಯೋಜನವೇಂಥದು ? ಪ್ರೌಢವಾದ ಹೆಣ್ಣು ಗಂಡು ಕೀಟಗಳು ಪರಸ್ಪರ ಆಕರ್ಷಿತವಾಗಲು ಹಾಗೂ ಆಹಾರಾನ್ವೇಷಣೆಯ ಕ್ರಿಯೆಗೆ ನೆರವಾಗಲು ಬೆಳಕು ಸಹಾಯಕವಾಗಿದೆ.


ಪ್ರೌಢಾವಸ್ಥೆಯಲ್ಲಿ ಈ ಕೀಟವು ಜೀವಿಸುವುದು ಕೇವಲ ಸಂಭೋಗ ಹಾಗೂ ಮೊಟ್ಟೆಗಳನ್ನಿಡುವುದಕ್ಕಾಗಿ ಮಾತ್ರ. ಹೀಗಾಗಿ ಈ ಅವಸ್ಥೆಯಲ್ಲಿ ಅವು ನಿರಾಹಾರಿಯಾಗಿರುವುದೇ ಹೆಚ್ಚು. ಆದರೆ ಮರಿ ಹುಳುವಿನ ಹಂತದಲ್ಲಿ ಅದು ಬಕಾಸುರ; ಬಸವನ ಹುಳುಗಳನ್ನು ಸಹ ತಮ್ಮ ಕುಡುಗೋಲಿನಂಥ ಹಲ್ಲುಗಳಿಂದ ಕತ್ತರಿಸಿ ಭಕ್ಷಿಸುವ ಮಾಂಸಾಹಾರಿ.

ಬೆಳಕು ಕೊಡುವ ಕ್ರಿಯೆ ಹುಳುವಿನ ಎಲ್ಲ ಅವಸ್ಥೆಗಳಲ್ಲಿಯೂ ಕಂಡುಬರುತ್ತದೆ. ಆದರೆ ಮೊಟ್ಟೆಯಲ್ಲಿ ಪ್ರಕಾಶ ಸಾಮಗ್ರಿಯು ಹರಡಿ ಹಂಚಿದ ಸ್ಥಿತಿಯಲ್ಲಿದ್ದು ಕೀಟವು ಪ್ರೌಢಾವಸ್ಥೆಯನ್ನು ತಲುಪಿದಂತೆ ಅದರ ಉದರದ ಹಿಂಭಾಗದ ತುದಿಯಲ್ಲಿ ಸಂಗ್ರಹವಾಗಿ ಪ್ರಕಾಶಾಂಗವಾಗಿ ಪರಿವರ್ತನೆಗೊಳ್ಳುತ್ತದೆ.

ಪ್ರಕಾಶಾಂಗದ ಹೊರ ಆವರಣವು ಪಾರದರ್ಶಕ ಕ್ಯುಟಿಕಲ್‌ದಿಂದ ನಿರ್ಮಾಣವಾಗಿದೆ. ಇದಕ್ಕೆ ಹೊಂದಿಕೊಂಡಿರುವಂತೆ ಅಪಾರದರ್ಶಕವಾದ ಕೆಳಪದರು ಇದೆ. ಇದರ ಒಳಭಾಗಕ್ಕಿರುವುದೇ 'ಪ್ರಕಾಶ ಪದರು.' ಇದು ಪ್ರಕಾಶ ಕೋಶಗಳನ್ನು ಒಳಗೊಂಡಿದೆ. ಪ್ರತಿಯೊಂದು ಪ್ರಕಾಶ ಕೋಶದಲ್ಲಿಯೂ ಲುಸಿಫೆರೇಸ್ ಎಂಬ ಕಿಣ್ವ

ಹಾಗೂ ಲುಸಿಫೆರಿನ್ ಎಂಬ ರಾಸಾಯನಿಕ ಸಂಯುಕ್ತಗಳಿವೆ. ಪ್ರಕಾಶ ಕೋಶಗಳನ್ನು ದಾಟಿದರೆ ಹಳದಿ ಬಣ್ಣದ ಕನ್ನಡಿಯಂತಹ ಕೋಶಗಳ ಪದರು ಇದೇ ಪ್ರತಿಫಲಕ ಪದರು. ಈ ಪದರಿನಲ್ಲಿ ಹಾಲಿನ ಬಣ್ಣವನ್ನು ಹೋಲುವ ಅಸಂಖ್ಯ ಯುರೆಟ ಸ್ಫಟಿಕಗಳಿವೆ. ಕೀಟದ ಹೊರ ಮೈ ಮೇಲೆ ಸ್ಪೈರಕಲ್ ಎಂಬ ರಂಧ್ರಗಳಿದ್ದು ಅವುಗಳಿಗೆ ಹೊಂದಿಕೊಂಡ ಶ್ವಾಸನಾಳಗಳು ಶಾಖೋಪಶಾಖೆಗಳಾಗಿ ವಿಭಜಿಸುತ್ತ ದೇಹದ ಇನ್ನಿತರೆಡೆ ಹರಡಿವೆಯಲ್ಲದೆ ಪ್ರಕಾಶಕೋಶಗಳನ್ನೂ ಸೇರುತ್ತವೆ.

ಪ್ರಕಾಶಾಂಗದಿಂದ ಬೆಳಕು ಹೇಗೆ ಹೊರಚೆಲ್ಲುತ್ತದೆ ? ಇದೊಂದು ಕುತೂಹಲಕಾರಿ ವಿಷಯ. ಹುಳುವಿನ ಉಸಿರಾಟ ಬೆಳಕನ್ನು ಉಂಟುಮಾಡುವುದರಲ್ಲಿ ಸಹಾಯಕವಾಗಿದೆ. ಉಸಿರಾಟ ಕ್ರಿಯೆಯಲ್ಲಿ ಒಳಸೆಳೆದುಕೊಂಡ ಗಾಳಿಯಲ್ಲಿರುವ ಆಕ್ಸಿಜನ್ ಶ್ವಾಸನಾಳಗಳ ಮೂಲಕ ಪ್ರಕಾಶಕೋಶಗಳನ್ನು ತಲುಪುತ್ತದೆ. ಅಲ್ಲಿ ಅದು ಲುಸಿಫೆರೇಸ್ ಕಿಣ್ವ ಸಾನ್ನಿಧ್ಯದಲ್ಲಿ ಲುಸಿಫೆರಿನ್ ಸಂಯುಕ್ತದೊಡನೆ ಕೂಡಿದಾಗ ಆಕ್ಸಿಲುಸಿಫೆರಿನ್ ಎಂಬ ರಾಸಾಯಿನಿಕ ಹುಟ್ಟುತ್ತದೆ. ಹೀಗೆ ಆಗುವ ಉತ್ಕರ್ಷಣೆಯ ಕ್ರಿಯೆಯೇ(Oxidation) ಬೆಳಕನ್ನು ಚೆಲ್ಲುವುದು. ಟಾರ್ಚ್ ದೀಪದಂತೆ ಈ ಬೆಳಕನ್ನು



ನೇರವಾಗಿ ಹೊರಚೆಲ್ಲಲು ಸಹಾಯಕವಾಗುವ ರಚನಾಭಾಗ ಪ್ರಕಾಶಾಂಗದಲ್ಲಿದೆ. ಯುರೇಟ ಸ್ಫಟಿಕಗಳು ಬೆಳಕನ್ನು ವರ್ಧಿಸುತ್ತವೆ ಹಾಗೂ ಅವುಗಳನ್ನೊಳಗೊಂಡ ಪ್ರತಿಫಲಕ ಪದರು ಬೆಳಕಿನ ಕಿರಣಗಳನ್ನು ಪ್ರತಿಫಲಿಸಿ ಕೆಳಪದರ ಹಾಗೂ ಹೊರಪದರಗಳ (ಕ್ಯುಟಿಕಲ್) ಮುಖಾಂತರ ನೇರವಾಗಿ ಹೊರಚೆಲ್ಲುತ್ತದೆ.

ಈ ಬೆಳಕಿಗೂ ಸಾಮಾನ್ಯ ಬೆಳಕಿನ ಹಲವಾರು ಗುಣಗಳಿವೆ. ಅಪಾರಕ ವಸ್ತುಗಳ ಮೂಲಕ ಹಾಯುವ ಅತಿಕೆಂಪು ಅಥವಾ ನೇರಳಾತೀತ ವಿಕಿರಣಗಳು ಇದರಲ್ಲಿಲ್ಲ. ಇದು ವಸ್ತುಗಳ ಅನುದೀಪ್ತಿಗೆ (phosphorescence) ಮತ್ತು ಪ್ರತಿ ದೀಪ್ತಿಗೆ (fluorescence) ಕಾರಣವಾಗಬಲ್ಲುದು. ಛಾಯಾಚಿತ್ರ ಫಲಕದ ಮೇಲೆಯೂ ಪರಿಣಾಮ ಬೀರಬಲ್ಲದು.

ಬಲ್ಬಿನ ಬೆಳಕಿಗೂ ಹೊನ್ನಿ ಹುಳುವಿನ ಬೆಳಕಿಗೂ ಏನು ವ್ಯತ್ಯಾಸ? ಬಲ್ಬಿನ ಬೆಳಕು ಶಾಖೋತ್ಪನ್ನವಾದುದು, ಆದರಿಂದ ಅದು ಕೈಗೆ ಬಿಸಿಯಾಗಿ ತಗಲುತ್ತದೆ. ಹೊನ್ನಿ ಹುಳುವಿನ ಬೆಳಕು ಶಾಖೋತ್ಪನ್ನವಾದುದಲ್ಲ. ಅದರ ಪ್ರಕಾಶಾಂಗವನ್ನು ಮುಟ್ಟಿ ನೋಡಿದಾಗ ಅದು ತಂಪಾಗಿರುವುದು ಕಂಡು ಬರುತ್ತದೆ. ನ್ಯೂಟನ್ ಹಾರ್ವೆ ಎಂಬ ವಿಜ್ಞಾನಿಯು ಈ ಉತ್ಕರ್ಷಣ ಕ್ರಿಯೆಯಲ್ಲಿ ಅತ್ಯಲ್ಪ ಪ್ರಮಾಣದ (೦.೦೦೧ ಸೆಂಟಿಗ್ರೇಡ್) ಉಷ್ಣತೆ ಹುಟ್ಟುವುದನ್ನು ಪ್ರಯೋಗದಿಂದ ಕಂಡುಕೊಂಡಿದ್ದಾನೆ.

ವಿದ್ಯುತ್ತಿನ ಬಲ್ಬು ತನ್ನೊಳಗೆ ಬರುವ ಶಕ್ತಿಯನ್ನೆಲ್ಲ ಬೆಳಕಾಗಿ ಪರಿವರ್ತಿಸುವುದಿಲ್ಲ. ಅದು ೧೦೦ ಭಾಗ ಶಕ್ತಿಯನ್ನು ಪಡೆದರೆ ೮೫-೯೦ರಷ್ಟು ಶಕ್ತಿಯು ತಂತಿಯನ್ನು ಕಾಯಿಸಲು ವ್ಯಯವಾಗುತ್ತದೆ. ೧೦-೧೫ರಷ್ಟು ಭಾಗ ಮಾತ್ರ ಬೆಳಕಾಗಿ ಪರಿವರ್ತನವಾಗುತ್ತದೆ. ಹೀಗೆ ಶಾಖ ರೂಪದಲ್ಲಿ ನಷ್ಟವಾಗುವ ಶಕ್ತಿಯನ್ನು ಉಳಿಸುವ ಪ್ರಯತ್ನ ಹೊನ್ನಿ ಹುಳುವಿನಲ್ಲಿ ನಡೆದಿದೆ.

***

೧೫. ಹವಳದ ಬಂಡೆಯಲ್ಲಿ

ಅದೊಂದು ಕ್ರಿಮಿ ನಿರ್ಮಿತ ಮಾಯಾಲೋಕ

ಆಸ್ಟ್ರೇಲಿಯಾದ ನ್ಯೂಗಿನಿ ಪ್ರಾಂತದ ಆಗ್ನೇಯ ದಿಕ್ಕಿಗೆ ಪ್ಯಾಸಿಫಿಕ್ ಸಾಗರವನ್ನು ಹನ್ನೆರಡು ನೂರು ಮೈಲುಗಳವರೆಗೂ ಸೀಳಿ ಮಲಗಿದ ದೈತ್ಯ ಶಿಲಾಭಿತ್ತಿಯೊಂದಿದೆ; ಅದುವೇ 'ಹವಳದ ಬಂಡೆ' ಎಂದು ಜಗತ್ಪ್ರಸಿದ್ಧವಾದುದು. ಇದು ಯಾವುದೇ ಭೂಕಂಪದಿಂದಾಗಲೀ ಇಲ್ಲವೆ ಇನ್ನಾವುದೇ ಭೌಗೋಳಿಕ ಸ್ಥಿತ್ಯಂತರಗಳಿಂದಾಗಲೀ ನಿರ್ಮಿತವಾದ ಶಿಲೆಯಲ್ಲ. ಇಷ್ಟೊಂದು ಬೃಹದಾಕಾರದ ಬಂಡೆ ಸೂಕ್ಷ್ಮಾಂಗ ಜೀವಿಗಳು ಕಟ್ಟಿದುದು.

ಪ್ರಾಣಿಗಳು ಅತಿ ದೊಡ್ಡವೆಂದರೆ ಹಲವಾರು ಅಡಿಗಳೆತ್ತರದ ಮನೆಗಳನ್ನು ಕಟ್ಟಿಕೊಳ್ಳಬಹುದು. ಉತ್ತರ ಆಸ್ಟ್ರೇಲಿಯದಲ್ಲಿಯೇ ಕಾಣಸಿಗುವ ಒಂದು ಜಾತಿಯ ಗೆದ್ದಲು ಹುಳು ೨೦ ಅಡಿ ಎತ್ತರ, ೧೨ ಅಡಿ ತಳವ್ಯಾಸವಿರುವ ಹುತ್ತವನ್ನು ಕಟ್ಟಿಕೊಳ್ಳುತ್ತದೆ. ಇರುವೆಯ ಹುತ್ತಗಳು ನೆಲದಿಂದ ಐದಾರು ಅಡಿ ಎತ್ತರಕ್ಕೂ ಮುಟ್ಟಬಹುದು. ಆದರೆ ಈ ಕುಟುಕುಕಣವಂತ ಜೀವಿಗಳು - ಅದು ಹವಳದ ಹುಳುಗಳಿಗಿರುವ ಸಾಮಾನ್ಯ ಹೆಸರು - ತಮ್ಮ ಪ್ರವಾಳ ಶಿಲಾ ಗೃಹಗಳನ್ನು ಹನ್ನೆರಡು ನೂರು ಮೈಲುಗಳುದ್ದ ನಿರ್ಮಿಸಿ ಇನ್ನೂ ಅದನ್ನು ಬೆಳೆಸುತ್ತಲೇ ಇವೆ. ಮತ್ತು ಈ ಭಿತ್ತಿ ಸಾಗರದ ತಳಕ್ಕೆ ೬೦೦ ಅಡಿ ಆಳದವರೆಗೂ ಇಳಿದಿದೆ.



ಅವುಗಳ ವಾಸ್ತುಶಿಲ್ಪ ಚಾತುರ್ಯ ವೈವಿಧ್ಯ ಪೂರ್ಣವಾದದ್ದು. ಒಂದು ಜಾತಿಯ ಕುಟುಕು ಕಣವಂತಗಳು ತಮ್ಮ ಮೈಯಿಂದ ತೆಳುವಾದ ಕಡ್ಡಿಗಳನ್ನು ಬೆಳೆಯಿಸಿ, ಅವುಗಳನ್ನು ಒಂದಕ್ಕೊಂದು ಜೋಡಿಸಿ 'ಸಮುದ್ರ ಬೀಸಣಿಕೆ' ಯಾಗಿ ; ಇನ್ನೊಂದು ಜಾತಿ-ಹಕ್ಕಿಯ ಹಾರುವ ಪುಚ್ಛದಂತೆ ಬೆಳೆದು 'ಸಮುದ್ರಲೆಕ್ಕಣಿಕೆ' ಯಾಗಿ ; ಮತ್ತೊಂದು, ವೃಕ್ಷದಂತೆ ಟಿಸಿಲು ಟಿಸಿಲಾಗಿ, ರೆಂಬೆ ಹವಳಗಲ್ಲಾಗಿ ; ಇನ್ನೊಂದು ಮಾನವ ಮಿದುಳಿನಂತೆ ನಿರಿಗೆಯಾಕಾರದ ಮನೆ ಕಟ್ಟಿ ಮಿದುಳು ಹವಳಗಲ್ಲಾಗಿ ; ಬೇರೊಂದು ಉದ್ದನ್ನ ಕೊಳವೆಗಳನ್ನು ಲಂಬವಾಗಿ ಜೋಡಿಸಿದ ಕೊಳಲ ಹವಳಗಲ್ಲಾಗಿ ; ಮತ್ತಿನ್ನೊಂದು - ಚಿಕ್ಕ ಚಿಕ್ಕ ತಾರಾ ಸಮೂಹದಂತೆ ಬೆಳೆದು ನಕ್ಷತ್ರ ಹವಳಗಲ್ಲಾಗಿ ಸಾಗರ ಗರ್ಭದ ಪ್ರವಾಳ ರಾಜ್ಯಕ್ಕೆ ಅಲಂಕಾರಪ್ರಾಯ ವೆನಿಸಿವೆ. ಸಾಲದ್ದಕ್ಕೆ ನಾಯಿಕೊಡೆ ಹವಳಗಲ್ಲು, ಕೆಂಪು ಹವಳಗಲ್ಲು, ಪಾಟಲಪುಷ್ಪ ಹವಳಗಲ್ಲು- ಮುಂತಾಗಿ ನೂರಾರು ತರಹದ ಹವಳಗಲ್ಲುಗಳ ರೂಪವೈವಿಧ್ಯ, ವರ್ಣವೈವಿಧ್ಯಗಳಿಂದ ಚಿತ್ರವಿಚಿತ್ರವಾಗಿ ನಿರ್ಮಿಸಲ್ಪಟ್ಟ ಈ ಮಾಯಾಲೋಕದ ಒಟ್ಟು ವಿಸ್ತಾರ ೮೦,೦೦೦ ಚದರ ಮೈಲು. ನಮ್ಮ ರಾಜ್ಯಕ್ಕಿಂತಲೂ ಹೆಚ್ಚು.

ಕೋಟಿ ವರುಷಗಳಿಂದ ಬೆಳೆಯುತ್ತ ಬಂದ ಈ ಕಾಡು ನಂದನ ವನವು ಇಂದು ನಾಗರಿಕ ಮಾನವನನ್ನು ಆಕರ್ಷಿಸಿದೆ. ಕ್ವೀನ್ಸ್‌ಲ್ಯಾಂಡ್ ಕರಾವಳಿಯಿಂದ ಹತ್ತು ಮೈಲು ಅಂತರದೊಳಗೆ ಒಲೆದು ಪುನಃ ಹಿಂದೆ ಸರಿದ ಹವಳದ ಬಂಡೆಯ ಒಂದು ಗೊತ್ತಾದ



ಆಯಕಟ್ಟಿನ ಸ್ಥಳವು ಶೀಘ್ರದಲ್ಲಿಯೇ ಆಕರ್ಷಕ ಪ್ರವಾಸೀ ಕೇಂದ್ರವಾಗಲಿದೆ. ಇಲ್ಲಿ ವಿಟ್‌ಸಂಡೇ ದ್ವೀಪದ ಬಳಿ ಅತ್ಯದ್ಭುತವಾದ ಜಲಾಂತರ್ಗತ ವೀಕ್ಷಣಾಲಯವು ಭರದಿಂದ ಹಣಿಕಿಕ್ಕುತ್ತಲಿದೆ. ★

ಹವಳಗಲ್ಲು ಸಮುದ್ರ ಮಟ್ಟದಿಂದ ೬೦೦ ಅಡಿಗಳ ಆಳದವರೆಗೂ ಬೆಳೆಯುತ್ತದೆ. ಈ ವಲಯದಲ್ಲಿ ಸೂರ್ಯರಶ್ಮಿಗಳು ತೂರಿಕೊಂಡು ಹೋಗಬಲ್ಲವು ; ಅಲ್ಲದೆ ಸಮುದ್ರದ ಅಬ್ಬರವೂ ಸದಾ ಇಳಿಮುಖದಲ್ಲಿರುತ್ತದೆ ; ಪ್ರಾಣವಾಯುವಿನ ಪೂರೈಕೆಯೂ ಚೆನ್ನಾಗಿ ಆಗುತ್ತದೆ. ಈ ಅಂಶಗಳು ಕುಟುಕುಕಣವಂತ ಜೀವಿಗಳ ಬೆಳವಣಿಗೆಗೆ ಸಹಾಯಕವಾಗಿವೆ.

ಸದ್ಯ ಕಟ್ಟುತ್ತಲಿರುವ ಮಹಾ ಗಾಜಿನ ಮನೆಯು ಇಂಥ ಆದರ್ಶ ಸ್ಥಳದಲ್ಲಿ ತಲೆ ಎತ್ತುತ್ತಲಿದೆ. ಸಮುದ್ರತಳದಲ್ಲಿ ಹಾಕಿದ ೨೦ ಅಡಿ ಕಾಂಕ್ರೀಟ್ ಕಟ್ಟೆಯ ಮೇಲೆ ಸಮೀಕ್ಷಾಮಂದಿರವು ನಿಂತುಕೊಂಡಿದೆ. ಕಾಂಕ್ರೀಟ್‌ನ ಮೇಲ್ಗಡೆಗೆ ನಿಂತುಕೊಂಡ ಗಾಜು ಮಂದಿರವೂ ಜಲಾಂತರ್ಗತವಾಗಿದೆ. ಇದರಲ್ಲಿ ಒಟ್ಟು ೩೪ ಕಿಂಡಿಗಳಿದ್ದು ಅವುಗಳಿಗೆ ದುರ್ಬೀನು ಕೂಡಿಸಲಾಗಿದೆ. ಈ ಕಿಂಡಿಗಳಿಂದ ನಯನ ಮನೋಹರವಾದ ''ಹವಳದವನ'' ಗಳನ್ನೇ ನೋಡಬಹುದು. ಕಟ್ಟಡವು ಪೂರ್ತಿಗೊಂಡಾಗ ನೀರ ಮೇಲಿನ ಅಂತಸ್ತು ೪೦ ಅಡಿ ಎತ್ತರವಾಗುವುದು. ಇದರೊಳಗೆ ಕಟ್ಟಿದ ನಾಗಮುರಿಗೆಯಾಕಾರದ ಸೋಪಾನ ಶ್ರೇಣಿಯು ಕಿಂಡಿಗಳಿದ್ದ ಒಳ ಅಂಗಣಕ್ಕೆ ನಿಮ್ಮನ್ನು ಕರೆದೊಯ್ಯುವುದು. ಒಂದು ಹನಿಯನ್ನೂ ಮೈಗೆ ತಾಕಿಸಿಕೊಳ್ಳದ ನೀವು ಸಮುದ್ರಗರ್ಭದಲ್ಲಿ ಅಡಗಿ ಸೃಷ್ಟಿ ಚಮತ್ಕಾರವನ್ನು ಕಣ್ತುಂಬ ನೋಡಿ ತಣಿಯಬಹುದು. ವಿವಿಧ ವರ್ಣಗಳ ಪ್ರವಾಳ 'ಪುಷ್ಪ' ಗಳನ್ನಲ್ಲದೆ ಉರುಳುವ ನೀಲ ರಾಶಿಯಲ್ಲಿ ತೇಲಿ, ಈಜಿ ಮರೆಯಾಗುವ ಪ್ರಚಂಡ ಪ್ರಾಣಿಗಳನ್ನು ಕಾಣಬಹುದು.

ಈ ಹವಳದ ಬಂಡೆ ತನ್ನುದ್ದಕ್ಕೂ ಅಖಂಡ ತುಂಡಾಗಿ ಬಿದ್ದುಕೊಂಡಿಲ್ಲ; ಅಲ್ಲಲ್ಲಿ ಚಿಕ್ಕ ಚಿಕ್ಕ ವರ್ತುಳಗಳಲ್ಲಿ ಸಮುದ್ರವನ್ನು ಕೊರೆದು ಮಧ್ಯದಲ್ಲಿ ಸಮುದ್ರ ನೀರಿನಿಂದಲೇ ಉಂಟಾದ ನಿರ್ಮಲ ಸರೋವರಗಳನ್ನು ನಿರ್ಮಿಸಿದ್ದು ಅದರ ಇನ್ನೊಂದು ವೈಶಿಷ್ಟ್ಯ.

★ ಕಟ್ಟಡವು ಇಷ್ಟರಲ್ಲೇ ಪೂರ್ತಿಯಾಗಬೇಕಿದ್ದರೂ ಆ ರೀತಿಯ ವರದಿ ಇನ್ನೂ ಬಂದಿಲ್ಲ.

ಸಾಗರ ಮಧ್ಯದಲ್ಲಿ ಸರೋವರಗಳನ್ನು ರಚಿಸಿ ಚಕ್ರಾಕಾರವಾಗಿ ತಲೆ ಎತ್ತಿದ ಪ್ರವಾಳ ಶಿಲಾಭಿತ್ತಿಗಳು ನಿಸರ್ಗದ ಅತಿ ಸುಂದರ ದೃಶ್ಯಗಳ ಸಾಲಿಗೆ ಸೇರುತ್ತವೆ.

ಬಂಡೆಯು ಎಷ್ಟು ಮೋಹಕವೋ ಅಷ್ಟೇ ರುದ್ರವಾಗಿದೆ. ಒಂದೆಡೆ 'ಕಲ್ಲರಳಿ ಹೂವಾಗಿ' ಸೌಂದರ್ಯ ನಿಧಿಯೇ ಬಾಯ್ದೆರೆದಿದ್ದರೆ, ಇನ್ನೊಂದೆಡೆ ಹಿಂಸ್ರ ಜಂತುಗಳು ತಮ್ಮ-ತಮ್ಮೊಳಗೆ ಕಚ್ಚಾಡಲು ಬಾಯ್ದೆರೆದಿವೆ. ಸಹ್ಯ, ಅಸಹ್ಯ ಚಿತ್ರಗಳನ್ನೊಳಗೊಂಡ ಪ್ರಕೃತಿಯ ಈ ಅಗಾಧ ಸ್ಥಳವು ಕೇವಲ ಆಸ್ಟ್ರೇಲಿಯದ ಜನಗಳಿಗಷ್ಟೇ ಅಲ್ಲ, ಜಗತ್ತಿನ ಮೂಲೆಮೂಲೆ ಗಳ ಶ್ರೀಮಂತರಿಗೂ, ಮೀನುಗಳನ್ನು ಬಲೆ ಹಾಕಲು ನುರಿತ ಮೀನುಗಾರರಿಗೂ. ಬೇಟೆಯ ಆಸಕ್ತಿ ಇರುವವರಿಗೂ ಇದು ಮನೋರಂಜನೆಯ ಹಾಗೂ ವ್ಯಾಪಾರದ ಕೇಂದ್ರವಾಗಿದೆ. ರಜೆಯ ದಿನಗಳಲ್ಲಿಯಂತೂ ಆಸ್ಟ್ರೇಲಿಯದ ಶ್ರೀಮಂತ ವಿದ್ಯಾರ್ಥಿಗಳಿಗೂ ಧನಿಕರಿಗೂ ಇದು ಆಶ್ರಯ ಸ್ಥಾನ. ಇತ್ತಿತ್ತಲಾಗಿ ಈ ಬಂಡೆಯು ಭೂಗರ್ಭ ವಿಜ್ಞಾನಿಗಳ ಲಕ್ಷ್ಯವನ್ನೂ ಸೆಳೆದಿದೆ. ಇದರ ಬುಡದಲ್ಲಿ ತೈಲ ಸಂಪತ್ತು ಇರಬಹುದೆಂದು ಆಶಿಸಲಾಗಿದೆ. ಇದು ತುಂಬಾ ಆದರ್ಶವಾದ, ಮನೋಜ್ಞವಾದ ಪ್ರದೇಶ.

ಪ್ರಾಚೀನ ಪ್ರಾಣಿಗಳ ಅಳಿವು ಉಳಿವುಗಳನ್ನವಲಂಬಿಸಿ ಕಲ್ಪಿಸಿದ ಪೃಥ್ವಿಯ ಆರು ಭಾಗಗಳಲ್ಲಿ ಆಸ್ಟ್ರೇಲಿಯಕ್ಕೇ ಒಂದು ಪ್ರತ್ಯೇಕ ಸ್ಥಾನವಿರುವುದು ಅಲ್ಲಿನ ಪ್ರಾಣಿ ವೈಶಿಷ್ಟ್ಯವನ್ನು ಎತ್ತಿ ತೋರಿಸುತ್ತದೆ. ಭೂಮಿಯಿಂದ ಬೇರ್ಪಟ್ಟ ಭೂಖಂಡಗಳಲ್ಲಿ ಆಸ್ಟ್ರೇಲಿಯ ತೀರ ಪ್ರಾಚೀನದ್ದಿರಬೇಕೆಂದೂ ; ಆದುದರಿಂದಲೇ ಬಾಹ್ಯ ಪ್ರಪಂಚದಲ್ಲಿ ಕಾಣಸಿಗದ ಕಾಂಗರೂವಿನಂಥ ವಿಚಿತ್ರ ಸಸ್ತನಿಗಳೂ, ಹವಳದ ದಂಡೆಗುಂಟ ಕಾಣುವ ಹಲವಾರು ಅಪರೂಪದ ಪ್ರಾಣಿಗಳೂ ಪ್ರತಿಸ್ಪರ್ಧಿಗಳಿಲ್ಲದೆ ಬೆಳೆದು, ಅಲ್ಲಿನ ನೀರು ಭೂಮಿಗಳ ಪ್ರಭುತ್ವ ಪಡೆದು ಬಾಳುತ್ತಿರಬಹುದೆಂದೂ ತರ್ಕಿಸಲಾಗಿದೆ.

ಹವಳದ ಬಂಡೆಯಲ್ಲಿ ಬಂದಿಳಿದರೆ ನಿಮ್ಮನ್ನು ಚಕಿತಗೊಳಿಸುವ ಪ್ರಾಣಿಗಳೆಂದರೆ ಅಸಂಖ್ಯಾತ ದೈತ್ಯ ಮೀನುಗಳು, ನರಭಕ್ಷಕ ಕಪ್ಪೆಚಿಪ್ಪುಗಳು, ಫುಟ್‌ಬಾಲ್ ಗಾತ್ರದ ಬಸವನ ಹುಳುಗಳು, ರಾಕ್ಷಸ ಕೂರ್ಮಗಳು, ಮುತ್ತಿನ ಸಿಂಪುಗಳು - ಇನ್ನೂ ಅನ್ಯತ್ರ ಅಲಭ್ಯವಾದ ಅನೇಕಾನೇಕ ಪ್ರಾಣಿಗಳು. ಇವುಗಳನ್ನು ನೋಡುತ್ತಿದ್ದ ಹಾಗೆ ಕಾಲಚಕ್ರವು ಕೋಟಿ ಕೋಟಿ ವರುಷಗಳ ಹಿಂದೆ ಉರುಳಿ ನಿಂತಂತೆ ಭಾಸವಾಗುತ್ತದೆ. ಮಧ್ಯಯುಗದ

ಶಿರಸ್ತ್ರಾಣವನ್ನು ಹೋಲುವ ದೈತ್ಯ ಬಸವನ ಹುಳುಗಳು ಉಸುಬಿನಲ್ಲಿ ಅರ್ಧ ಹುದುಗಿಕೊಂಡು ಅತ್ಯಂತ ಮಂದಗತಿಯಲ್ಲಿ 'ನೇಗಿಲು ಹೊಡೆಯುತ್ತ 'ನಿಮಗೆ ಮಿಲಿಟರೀ ಗೌರವರಕ್ಷೆಯನ್ನು ನೀಡುತ್ತವೆ. ನೀರಿನ ಪಾತಳಿಗೆ ಕಣ್ಣೋಡಿಸಿ: ಮೀನುಗಳ ಸಾಮ್ರಾಜ್ಯವನ್ನೇ ಕಾಣುವಿರಿ. ಬೂದು ಬಣ್ಣದ ಶಾರ್ಕ್ ಮೀನುಗಳು ಟಣ್ಣನೆ ನೀರಿನಿಂದ ಹಾರಿ ಪುನಃ ನೀರಿನಲ್ಲಿ ಮುಳುಗು ಹಾಕುತ್ತವೆ. ಅವುಗಳ ಮೈಯನ್ನು ಬಲವಾಗಿ ಅದುಮಿ ಹಿಡಿದ ಹೀರುಬಟ್ಟಲ ಮೀನುಗಳು ಜಿಗಳೆಗಳಂತೆ ತಮ್ಮ ಆಶ್ರಯ ಪ್ರಾಣಿಗಳನ್ನು ಬಿಟ್ಟೂಬಿಡದೆ ಅನುಸರಿಸುತ್ತಲೇ ಇರುತ್ತವೆ. ಅತ್ಯಂತ ವೇಗದಿಂದ ನೀರ ಮೇಲೆ ಗೆರೆಕೊರೆಯುತ್ತಾ ಸುಯ್ಯನೇ ಮರೆಯಾಗುವ, ಮೂರು ಅಡಿಗಳುದ್ದಕ್ಕೂ ಬೆಳೆದ ಮೆಕ್ರೆಲ್ ಮೀನುಗಳು ಅಸಂಖ್ಯ, ಕೆಂಪು ಬೂದು ಬಣ್ಣಗಳ ಕಚ್ಚುವ ಮೀನುಗಳು, ಚೂಪಾದ ಮೊಸಡೆಯ ಹಾವುಮೀನುಗಳು ನೀರನ್ನು ಸೀಳುತ್ತ ನುಗ್ಗುತ್ತಲೇ ಇರುತ್ತವೆ. ನೀರ ಪಾತಳಿಯಿಂದ ಸ್ವಲ್ಪ ಕೆಳಗಡೆಗೆ ತಮ್ಮ ಘನ ಗಾಂಭೀರ್ಯವನ್ನು ಪ್ರದರ್ಶಿಸುತ್ತ, ಮೆಲ್ಲನೆ ಜಾರಿ ಮರೆಯಾಗುವ ವಿದ್ಯುತ್ ಮೀನುಗಳು ಮುಂತಾದ ಅಸಂಖ್ಯ ಚಪ್ಪಟೆ ಮೀನುಗಳನ್ನು ನೋಡುವುದು ಕಣ್ಣಿಗೊಂದು ಹಬ್ಬವೇ ಸರಿ.

ನೀರಿನ ನೀಲರಾಶಿ ಅಲ್ಲಿ ಎಷ್ಟು ಸಮೃದ್ಧವಾಗಿದೆಯೋ ಅಷ್ಟೇ ಪ್ರಾಣಿಗಳೂ ಹೇರಳವಾಗಿವೆ. ಅರಳುವ ಹವಳದ ''ಹೂ''ಗಳಿಗೆ ಮಾರುಹೋದ ಅನೇಕ ವಿಲಕ್ಷಣ ಮೀನುಗಳು ಚಿತ್ರವಿಚಿತ್ರವಾದ ಬಣ್ಣಗಳಿಂದ ಥಳ ಥಳಸಿ ನೀಲ ಹಿನ್ನೆಲೆಗೆ ಮಿಂಚುವ ರತ್ನಗಳಂತೆ ಶೋಭಾಯಮಾನವಾಗಿವೆ. ಕಿತ್ತಳೆ, ಕಪ್ಪು ಬಣ್ಣಗಳ ದೇವದೂತ ಮೀನುಗಳು 'ಆ' ಆ ವರ್ಣಗಳ ಹವಳಗಲ್ಲುಗಳ ಬದಿಯಲ್ಲಿಯೇ ಸುಳಿಯುತ್ತಿರುತ್ತವೆ. ದುರ್ಬಲವಾದ ಈ ಸಾಧುಮೀನುಗಳು ದೈತ್ಯಾಕಾರದ ಶತ್ರು ಮೀನುಗಳಿಂದ ರಕ್ಷಿಸಿಕೊಳ್ಳಲು ಇಂಥ ಅಣಕ ವರ್ಣಗಳನ್ನು ಧರಿಸಿವೆ. ನೀರಿನಲ್ಲಿಯೇ ''ಬೆಂಕಿ'' ಇಟ್ಟುಕೊಂಡು ನಿರ್ಭಯವಾಗಿ ತಿರುಗುವ ಮೀನಿಗೆ ಬೆಂಕಿ ಮೀನು ಎಂದು ಹೆಸರು. ಇದರ ಮೈಬಣ್ಣ ಕಡು ಕೆಂಪು. ಬಾಲದ ತುದಿಯು ಇನ್ನೂ ಕಡುಕೆಂಪಾಗಿದ್ದು ಅದು ಹೊಯ್ದಾಡಿದಾಗ ಬೆಂಕಿಯ ನಾಲಗೆಯಂತೆ ಕಾಣುವುದರಿಂದ ಎಂಥ ಮಹಾಶತ್ರುವೂ ಇದರ ಸನಿಹಕ್ಕೆ ಸುಳಿಯುವ ಧೈರ್ಯ ತೋರದು. ತನ್ನ ಎಲುವಿನ ಪೆಟ್ಟಿಗೆಯೊಳಗೆ ಹುದುಗಿಕೊಂಡು ತಲೆ ಹಾಗೂ ಅದಕ್ಕಂಟಿದ ಎರಡು ಕೋಡುಗಳನ್ನು ಮಾತ್ರ ಹೊರತೆಗೆದ ಆಕಳಮೀನು ಹೆಸರಿಗನ್ವರ್ಥವಾಗಿ ಸದ್ದಿಲ್ಲದೆ ಸುಳಿಯುತ್ತಿರುತ್ತದೆ. ಊದು

ಮೀನಿನ ಲಕ್ಷಣವೇ ಬೇರೆ; ನೀರಿನಲ್ಲಿದ್ದಾಗ ಇದು ಚಪ್ಪಟೆಯಾಕಾರದ ಮೀನು. ಕೈಯಲ್ಲಿ ಹಿಡಿಯಿರಿ; ತಕ್ಷಣವೇ ತನ್ನೊಳಗೆ ಹವೆಯೂದಿಕೊಂಡು "ಫುಟ್‌ಬಾಲ್" ಆಗಿಬಿಡುತ್ತದೆ !

ಮೀನುಗಳ ಸಾಮ್ರಾಜ್ಯದಲ್ಲಿ ಕಲ್ಲುಮೀನಿನಂಥ ಭಯಂಕರ ಪ್ರಾಣಿ ಇನ್ನೊಂದಿರಲಾರದು. ಇದಕ್ಕೆ ದೆವ್ವ ಮೀನು , ಸಮುದ್ರ ಭೂತ, ಸಮುದ್ರ ಚೇಳು ಇತ್ಯಾದಿಯಾಗಿ ಅನೇಕ ಹೆಸರುಗಳಿವೆ. ಹುರುಕುಬುರುಕಾದ ಮೈ, ಮೇಲೆ ಹಸಿರು ಬೂದು ಬಣ್ಣಗಳ ಮಚ್ಚೆಗಳು, ಸಾಲದ್ದಕ್ಕೆ ಉಸುಕಿನಲ್ಲಿ ಅಡಗಿ ಕುಳಿತುಕೊಳ್ಳುವ ಸ್ವಭಾವ-ಇವುಗಳಿಂದ ಸಮುದ್ರ ತಳದ ಬಣ್ಣದೊಡನೆ ಒಂದಾಗಿ ಅದು ಅಲ್ಲಿಯೇ ಇದ್ದರೂ ಕಣ್ಣಿಗೆ ಕಾಣುತ್ತಿರುವುದಿಲ್ಲ. ಇದರ ರಕ್ಕಸ ಪ್ರವೃತ್ತಿಯನ್ನರಿತ ಅಲ್ಲಿನ ಮೂಲ ನಿವಾಸಿಗಳು ಇದರ ಹೆಸರು ಕೇಳಿದರೇನೇ ನಡುಗುತ್ತಾರೆ. ಚಲಿಸಲು ಇದು ದುರ್ಬಲವಾಗಿದ್ದರಿಂದ ತನ್ನನ್ನು ರಕ್ಷಿಸಿಕೊಳ್ಳಲು ಪ್ರಬಲ ಆಯುಧಗಳನ್ನು ಸಂಪಾದಿಸಿದೆ. ಇದರ ಬೆನ್ನ ಮೇಲೆ ಮೊನಚಾದ, ಉಕ್ಕಿಗಿಂತಲೂ ಬಿರುಸಾದ ೧೩ ಮುಳ್ಳುಗಳಿವೆ. ಪ್ರತಿಯೊಂದು ಮುಳ್ಳಿನ ಬುಡದಲ್ಲಿ ಎರಡೆರಡು ವಿಷಚೀಲಗಳಿವೆ.

ಅಪಾಯದ ಮುನ್ಸೂಚನೆ ಬಂದೊಡನೆಯೇ ಮುಳ್ಳುಗಳು ಸೆಟೆದು ನಿಲ್ಲುತ್ತವೆ. ಬರಿಗಾಲಿನಿಂದ ನಡೆದ ಅನೇಕರು ಈ ಮುಳ್ಳುಗಳ ಮೇಲೆ ಕಾಲಿಟ್ಟು ಮರಣಯಾತನೆಯನ್ನು ಅನುಭವಿಸಿದ್ದಾರೆ. ಸಮುದ್ರದಲ್ಲಿ ನಡೆಯಲು ಉಪಯೋಗಿಸುವ ಉಸುಕಿನ ಬೂಟುಗಳನ್ನು ಧರಿಸಿದಾಗಲೂ ಈ ಮುಳ್ಳುಗಳಿಂದ ಪಾರಾಗುವಂತಿಲ್ಲ. ಸಹಿಸಲಸಾಧ್ಯವಾದ ನೋವು ೩-೪ ತಿಂಗಳುವರೆಗೆ ಹಾಸಿಗೆ ಹಿಡಿಸುತ್ತದೆ. ಕೆಲ ವರುಷಗಳ ಹಿಂದೆ ಕ್ವೀನ್ಸ್‌ಲ್ಯಾಂಡಿನ ಸೋಂಕುರೋಗ ನಿರೋಧಕ ಅಧಿಕಾರಿಯೊಬ್ಬ ಹವಳದ ದಂಡೆಗುಂಟ ತಿರುಗುತ್ತಿದ್ದಾಗ ಕಲ್ಲುಮೀನಿನ ಮುಳ್ಳಿಗೆ ಆಹುತಿಯಾಗಿ ಅಸಾಧ್ಯವಾದ ನೋವಿನಿಂದ ನರಳುತ್ತ ಮೂರನೆಯ ದಿನವೇ ಮರಣವನ್ನಪ್ಪಿದ.

ದಂಡೆಯಿಂದ ಸ್ವಲ್ಪ ಒಳಕ್ಕೆ ಸುಮಾರು ನಾಲ್ಕು ಅಡಿ ಆಳ ನೀರಿನಲ್ಲಿ 'ಬಾಯ್ದೆರೆದು' ಮಲಗಿದ ಇನ್ನೊಂದು ವಿಕಟರೂಪದ ಮಹಾರಾಕ್ಷಸ ಪ್ರಾಣಿಯು ದೆವ್ವ ಮೀನಿಗಿಂತಲೂ ಪ್ರಚಂಡವಾದುದು. ಆ ಪಡಂಭೂತ ಐದು ಅಡಿ ಉದ್ದವಾದ, ೫೫೦

ಪೌಂಡು ಭಾರದ ಕಪ್ಪೆಚಿಪ್ಪು! ಬಾಯ್ದೆರೆದ ಚಿಪ್ಪುಗಳ ಮಧ್ಯೆ ಕಾಲು ಅಕಸ್ಮಾತ್ತಾಗಿ ಸಿಕ್ಕರೆ - ಆ ವ್ಯಕ್ತಿಯ ಇತಿಶ್ರೀ ಆದಂತೆಯೆ! ಎಂಥ ಭೀಮಕಾಯದ ಬಲಾಢ್ಯನೂ ಆ ಪ್ರಚಂಡವಾದ ಬಿಗಿತದಿಂದ ಪಾರಾಗಲಾರ. ಸುದೈವದಿಂದ ಹಾರೆಗೋಲನ್ನು ಹಿಡಿದ ಮನುಷ್ಯ ಕಣ್ಣಿಗೆ ಬಿದ್ದರೆ ಆ ಆಯುಧದಿಂದ ಕಪ್ಪೆಚಿಪ್ಪಿನ ಸ್ನಾಯುಗಳನ್ನು ಕಡಿದು ಆಹುತಿಯಾದವನನ್ನು ಬದುಕಿಸಬಹುದಷ್ಟೇ. ಮುಳುಗು ಹಾಕುವ ಅನೇಕ ಮೀನುಗಾರರು ಈ 'ರಾಕ್ಷಸ'ನ ಚಿಪ್ಪುಗಳಲ್ಲಿ ಸಿಕ್ಕು ತೊಳಲಾಡಿ ಸತ್ತಿದ್ದಾರೆ.

ಈ ರೌದ್ರ ದೃಶ್ಯದ ಪಕ್ಕದಲ್ಲೇ ಮನೋಹರ ದೃಶ್ಯವೂ ಕಾಣುತ್ತಿದೆ. ವಿಧವಿಧ ಆಕಾರಗಳ, ವಿವಿಧ ವರ್ಣಗಳ, ಚಿತ್ರವಿಚಿತ್ರ ಛಾಯೆಗಳ ಚಿಪ್ಪಗಳು ಸೂರ್ಯನ ಬೆಳಕಿನಲ್ಲಿ ರತ್ನಗಳಂತೆ ಹೊಳೆಯುತ್ತಿರುತ್ತವೆ. ಹವಳಗಲ್ಲುಗಳ ಸಮೃದ್ಧಿಯಂತೂ ಇಲ್ಲಿಯಂತೆ ಇನ್ನೆಲ್ಲಿಯೂ ಇರಲಾರದು. ನೀಲಿ, ಹಸಿರು, ಹಳದಿ, ಕಂದು, ಕೆಂಪು, ಕಿತ್ತಳೆ-ವರ್ಣ ವೈಖರಿಯಿಂದ ಅರಳಿದ ಹೂಗಳಂತೆ ರಾರಾಜಿಸುತ್ತಿರುತ್ತವೆ. ಬ್ರಿಟಿಷ್ ಪರ್ವಾತಾರೋಹಣ ತಂಡದ ಮುಖ್ಯಸ್ಥರಾಗಿದ್ದ ಡಾ. ಯಾಂಗರು ಹವಳದ ಬಂಡೆಗೆ ಭೆಟ್ಟಿಯಿತ್ತಾಗ ಅಲ್ಲಿಯ ಹವಳಗಲ್ಲುಗಳ ಕಲ್ಪನಾತೀತ ಸೌಂದರ್ಯಕ್ಕೆ ಮುಗ್ಧರಾಗಿ ಅವುಗಳ ವರ್ಣನೆಯನ್ನು ಬರೆದಿಟ್ಟಿದ್ದಾರೆ. ''ಸಾರಂಗ ಕೋಡಿನ ಹವಳಗಳು ಗಿಡದ ಶಾಖೋಪಶಾಖೆಗಳಂತೆ ಕಾಣುತ್ತವೆ. ಅವುಗಳ ನಯ, ನಾಜೂಕು ಅವುಗಳದೇ, ಬೊಟ್ಟು ತಾಗಿದರೆ ಸಾಕು, ಪುಡಿಪುಡಿಯಾಗುತ್ತವೆ. ಇನ್ನು ಕೆಲವು ಚೀನೀ ಮಣ್ಣಿನ ಬಸಿಗಳಿಗಿಂತಲೂ ತೆಳ್ಳಗಾಗಿ, ದುಂಡಾಗಿ, ಅಗಲವಾಗಿ ಬೆಳೆದು, ಹೂವಿನ ಪಕಳೆಗಳಂತೆ - ದೊಡ್ಡದರಲ್ಲಿ ಚಿಕ್ಕದು, ಅದಕ್ಕೂ ಚಿಕ್ಕದು, ಹೀಗೆ ಪೋಣಿಸಿಕೊಂಡು ಅತಿ ದೊಡ್ಡ ಹೂಗಳಂತೆ ಕಾಣುತ್ತವೆ. ವರ್ತುಳಾಕಾರದ ನಾಯಿಕೊಡೆ ಹವಳಗಲ್ಲು ಮೊದಲು ದೇಟಿನ ಮೇಲೆ ಬೆಳೆದು, ಆ ನಂತರ 'ಕೊಡೆ'ಯನ್ನಷ್ಟೇ ಕಿತ್ತುಕೊಂಡು ನೀರಿನ ಪ್ರವಾಹದಲ್ಲಿ ತೇಲುತ್ತ ಉಸುಬಿನ ದಂಡೆಯನ್ನು ತಲುಪುತ್ತದೆ.''

ಕ್ವಿನ್ಸ್‌ಲ್ಯಾಂಡ್ ಕರಾವಳಿಯಿಂದ ಹವಳದ ಬಂಡೆಯು ಕೆಲವೆಡೆಗಳಲ್ಲಿ ಹತ್ತು ಮೈಲುಗಳ ಅಂತರದಲ್ಲಿಯೇ ಇದ್ದರೂ ಆ ಪ್ರಾಂತದ ಬೇರೆ ಪ್ರದೇಶಗಳಿಂದ ೧೫೦ ಮೈಲು ದೂರವಾಗುವಷ್ಟು ಹಿಂದೆ ಒಲಿದಿದೆ. ಇದರ ಹೊರಗೋಡೆಯ ಬಹುಭಾಗ ಪ್ಯಾಸಿಫಿಕ್ ಸಾಗರದಲ್ಲಿ ಮುಳುಗಿದೆ. ಅದರೀಚೆಗೆ ಇರುವುದೇ ಮುಖ್ಯ ಪ್ರವಾಳಶಿಲೆ. ಇದು ಪರ್ವತಶ್ರೇಣಿಯಂತೆ ಎತ್ತರವಾಗಿ, ಅವಿಚ್ಛಿನ್ನವಾಗಿ ಬೆಳೆಯದೆ ಅಗಲವಾಗಿ

ಹಬ್ಬಿಕೊಂಡು ಅಲ್ಲಲ್ಲಿ ಚಿಕ್ಕ ಚಿಕ್ಕ ದ್ವೀಪಸ್ತೋಮಗಳಿಂದ ಆಚ್ಛಾದಿತವಾಗಿದೆ. ಕೆಲವು ದ್ವೀಪಗಳು ಥಳಥಳಿಸುವ ಉಸುಬಿನಿಂದ ಹೊದಿಸಲ್ಪಟ್ಟಿವೆ ; ಹಲವು, ದೇವದಾರು ವೃಕ್ಷಗಳ ಸಮೃದ್ಧ ಬೆಳವಣಿಗೆಯಿಂದ ತುಂಬಿಹೋಗಿವೆ. ಹರಿದು, ಹಂಚಿ, ಸಮುದ್ರಮಟ್ಟದಿಂದ ಎತ್ತರವಾಗಿ ನಿಂತ ದ್ವೀಪಗಳ ಹಾಗೂ ಕರಾವಳಿಯ ಮಧ್ಯದ ಪ್ರದೇಶವೇ ಗ್ರಾಂಡ್‌ಕೆನಾಲ್ ಎಂಬ ಹೆಸರಿನ ಕಡಲುಗಾಲುವೆ. ಇದರ ನೀರು ಆಳವಾಗಿ, ತಿಳಿಯಾಗಿ, ಶಾಂತವಾಗಿ ಪ್ರವಹಿಸುತ್ತಿರುತ್ತದೆ. ಕ್ವೀನ್ಸ್‌ಲ್ಯಾಂಡಿನ ಉತ್ತರ ದಿಕ್ಕಿನ ಬಂದರಗಳಿಗೆ ಹೋಗುವ ಹಡಗುಗಳು ಈ ಕಡಲುಗಾಲುವೆಯೊಳಗಿಂದಲೇ ಹಾಯ್ದು ಹೋಗುತ್ತವೆ.

ಮೆಕ್ಸಿಕೋ, ಪರ್ಶಿಯನ್, ಕ್ಯಾಸ್ಪಿಯನ್ ಅಖಾತಗಳಲ್ಲಿರುವಂತೆ ಹವಳದ ಬಂಡೆಯ ಬುಡದಲ್ಲಿ ತೈಲ ಸಂಪತ್ತು ದೊರೆಯಬಹುದೆಂಬ ಆಶೆ ಇಂದಿಲ್ಲ ನಾಳೆ ಸತ್ಯವಾಗಿ ಕೃತಿಗಿಳಿದೀತು. ಸದ್ಯ, ತೈಲ ವ್ಯಾಪಾರ ಅಲ್ಲಿರದಿದ್ದರೂ ಇನ್ನಿತರೆ ವ್ಯಾಪಾರೋದ್ಯಮಗಳು ಭರದಿಂದ ಸಾಗಿವೆ. ನೋಡಲು ಅಷ್ಟಾವಕ್ರವಾಗಿದ್ದ ಆದರೆ ನಾಲಗೆಗೆ ಸವಿಯಾದ ಸಮುದ್ರ ಸವತೆಕಾಯಿ ಎಂಬ ಪ್ರಾಣಿಗಳನ್ನು ಹಿಡಿದು ಅವುಗಳಿಗಾಗಿ ಬಾಯಿ ಚಪ್ಪರಿಸುತ್ತಿರುವ ಜಗತ್ತಿನ - ಸುಖಭೋಗಿಗಳಿಗೆ ನಿರ್ಯಾತ ಮಾಡುವ ದೊಡ್ಡ ಕೇಂದ್ರ ಇಲ್ಲಿದೆ. ತಿನ್ನಲು ರುಚಿಕರವಾದ ಮುತ್ತಿನ ಸಿಂಪುಗಳೂ ಇಲ್ಲಿ ಬಹು ಸಂಖ್ಯೆಯಲ್ಲಿ ಸಿಗುತ್ತವೆ. ಬಂಡೆಯ ಉತ್ತರ ದಿಕ್ಕಿಗೆ ಅನರ್ಘ್ಯ ಮುತ್ತುಗಳನ್ನು ಕೊಡುವ ಅಮೂಲ್ಯ ಮುತ್ತಿನ ಸಿಂಪುಗಳಿವೆ. ಅಲ್ಲಿ ಮುತ್ತು ತೆಗೆಯುವ ಉದ್ಯೋಗ ಸಾಗಿದೆ.

***

೧೬. ಪ್ರಾಣಿಗಳಲ್ಲಿ ನಿದ್ರಾ ವೈಚಿತ್ರ್ಯಗಳು.

ನಿದ್ರೆ ಪ್ರಾಣಿಮಾತ್ರಕ್ಕೆ ಅವಶ್ಯ ಆದರೆ ನಿದ್ರಾಭಂಗಿಗಳು ಅನಂತ!

'ನಿದ್ರೆ ಪ್ರತಿದಿನದ ಸಾವು' ಎಂದೊಬ್ಬ ಹೇಳಿದ್ದಾನೆ. ನಿತ್ಯದ ಈ 'ಸಾವು' ಇರದಿದ್ದರೆ 'ಚಿರನಿದ್ರೆ' ತೀರ ಹತ್ತಿರವಾಗಬಹುದಿತ್ತೇನೋ! ಆಯಾ ಪ್ರಾಣಿಗಳ ಆಯುಷ್ಯ ವೃದ್ಧಿಗೆ ಗಾಳಿ, ನೀರು, ಆಹಾರ ಹಾಗೂ ಸುತ್ತಲಿನ ಪರಿಸ್ಥಿತಿ ಎಷ್ಟು ಅವಶ್ಯಕಗಳೋ ಅಷ್ಟೇ ನಿದ್ರೆಯೂ ಅವಶ್ಯ ಎಂಬ ಮಾತನ್ನು ಮಾನವ ಪ್ರಾಣಿಗೆ ಪ್ರತ್ಯೇಕವಾಗಿ ಹೇಳಬೇಕಿಲ್ಲ. ಕೆಲವು ಪ್ರಾಣಿಗಳು ಗಳಿಗೆಯ ನಿದ್ರೆಯಿಂದ ವಿಶ್ರಾಂತಿ ಪಡೆಯುತ್ತಿದ್ದರೆ, ಬೇರೆ ಕೆಲವು ಪ್ರಾಣಿಗಳು ತಿಂಗಳುಗಟ್ಟಲೆ ಮಲಗಬಹುದು. ಮಿದುಳಿನ ಗಾತ್ರ ಬೆಳೆದಂತೆ ನಿತ್ಯದ ನಿದ್ರಾ ಸಮಯವೂ ಹೆಚ್ಚು ಬೇಕಾಗುತ್ತದೆಂದು ತಿಳಿದುಬಂದಿದೆ. ಕಶೇರುಕಗಳಲ್ಲಿ (ಬೆನ್ನೆಲುಬುಳ್ಳ ಪ್ರಾಣಿಗಳು) ಮತ್ಸ್ಯವರ್ಗ, ಉಭಯಜೀವಿಗಳು, ಸರೀಸೃಪಗಳು, ಪಕ್ಷಿಗಳು ಇವುಗಳಿಗಿಂತ ಸಸ್ತನಿ ಪ್ರಾಣಿಗಳ ನಿದ್ರಾಸಮಯ ಹೆಚ್ಚು. ಅನುಭವ , ಬುದ್ಧಿಶಕ್ತಿ , ಇಚ್ಛೆ, ಅರಿವು ಮುಂತಾದ ಜ್ಞಾನಕೇಂದ್ರಗಳನ್ನು ಬೆಳೆಸಿಕೊಂಡ ಮಿದುಳಿನ ಬೆಳವಣಿಗೆಯೇ ಸಸ್ತನಿಗಳ ದೀರ್ಘನಿದ್ರೆಗೆ ಕಾರಣ. ಸತತವಾಗಿ ಐದು ದಿನಗಳವರೆಗೆ ಮಲಗಲು ಅವಕಾಶ ಕೊಡದ ನಾಯಿ ಸತ್ತು ಹೋಗುತ್ತದೆಂಬುದು ಇದಕ್ಕೆ ಸಾಕ್ಷಿ. ಒತ್ತಾಯಪೂರ್ವಕವಾದ ಜಾಗೃತಾವಸ್ಥೆ ಎಲ್ಲ ಸಸ್ತನಿಗಳಿಗೂ ಮಾರಕವೇ.

ದೈಹಿಕ ಹಾಗೂ ಮಾನಸಿಕ ಶ್ರಮಗಳಿಂದ ದೇಹವು ಚೇತರಿಸಿಕೊಳ್ಳುವಂತೆ ಮಾಡುವ ಸಂಜೀವಿನಿಯೇ ನಿದ್ರೆ. ಅಹರ್ನಿಶವಾಗಿ ದುಡಿಯುವ ಈ ಶಾರೀರಿಕ ಯಂತ್ರದ ಬಿಡಿಭಾಗಗಳಾದ ಅಂಗಾಂಗಗಳಿಗೆ ವಿಶ್ರಾಂತಿ ಬೇಡವೇ? ಅವು ತಮ್ಮ ಚಟುವಟಿಕೆಗಳನ್ನು ನಿಲ್ಲಗೊಡದೆ, ಅವುಗಳ ವೇಗವನ್ನು ಮಾತ್ರ ತಗ್ಗಿಸಿ ವಿಶ್ರಾಂತಿ ಪಡೆಯುತ್ತವೆ. ನಿದ್ರೆ ಎಂಬುದು ಆ ವೇಗವನ್ನು ತಗ್ಗಿಸುವ ಲಗಾಮು ಅಷ್ಟೇ. ಹಲವು ಪ್ರಾಣಿಗಳ ಜೀವಕೋಶಗಳು ಹಗಲಿರುಳೆನ್ನದೆ ದುಡಿಯಲು ಸಿದ್ಧವಿದ್ದರೂ ಅವುಗಳಿಗೆ ಸತತವಾಗಿ ಬೇಕಾಗುವ ಆಹಾರದ ಪೂರೈಕೆಯಾಗುವುದೆಂತು? ನಿರಾಹಾರಕ್ಕೆ ಮದ್ದು ನಿದ್ರೆ ತಾನೇ ?

ಕಾರಣವೇ ಚಳಿಗಾಲದಲ್ಲಿ ಆಹಾರದ ಕೊರತೆಯಾದಾಗ ಅನೇಕ ಪ್ರಾಣಿಗಳು ಶಿಶಿರನಿದ್ರೆಗೊಳಗಾಗುತ್ತವೆ. ಈ ರೀತಿ ಚಳಿಗಾಲದ ಈ ದೀರ್ಘನಿದ್ರೆ ಜೀವನ ಹೋರಾಟದಲ್ಲಿ ಪ್ರಾಣಿಗಳನ್ನು ಬದುಕಿಸಿ ಅವುಗಳ ಸಂತತಿಯನ್ನು ಕಾಪಾಡುವ ಆಪದ್ರಕ್ಷಕವಾಗಿದೆ.


ನಿದ್ರೆಯ ಬಾಹ್ಯ ಲಕ್ಷಣಗಳನ್ನು ಸಾಮಾನ್ಯವಾಗಿ ಎಲ್ಲರೂ ಬಲ್ಲರು. ಕೆಲವು ಪ್ರಾಣಿಗಳು ನೆಲಕ್ಕೊರಗಿಕೊಂಡು, ಹಲವು ನಿಂತುಕೊಂಡು ಇನ್ನು ಕೆಲವು ಕುಳಿತ ಸ್ಥಿತಿಯಲ್ಲಿಯೇ ನಿದ್ರೆ ಹೋಗುತ್ತವೆ. ನಿದ್ರಿಸುವಾಗ ಕೆಲವು ಪ್ರಾಣಿಗಳ ಕಣ್ಣುಗಳು ಮುಚ್ಚಲ್ಪಟ್ಟಿದ್ದರೆ, ಬೇರೆ ಕೆಲವುಪ್ರಾಣಿಗಳ ಕಣ್ಣುಗಳು ತೆರೆದುಕೊಂಡೇ ಇರುತ್ತವೆ. ಒಂದೊಂದು ಪ್ರಾಣಿಯಲ್ಲೂ ಅಥವಾ ಪ್ರಾಣಿಜಾತಿಯಲ್ಲೂ ಈ ಬಾಹ್ಯಲಕ್ಷಣಗಳು ಒಂದೊಂದು ತೆರನಾಗಿರುತ್ತವೆ. ಆದರೆ ಆಂತರಿಕ ಬದಲಾವಣೆಗಳು ಸಾಮಾನ್ಯವಾಗಿ ಎಲ್ಲ ಪ್ರಾಣಿಗಳಲ್ಲಿಯೂ ಹೆಚ್ಚು ಕಡಿಮೆ ಒಂದೇ ಇರುತ್ತವೆ. ನಿದ್ರಾಪೂರ್ವದಲ್ಲಿ ಸ್ನಾಯುಗಳು ಸಡಿಲಾಗುತ್ತವೆ ; ಆಗ ತಾನೇ ದೇಹವು ನಿದ್ರೆಗೊಳಗಾಗುತ್ತದೆ. ರಕ್ತಾಭಿಸರಣ, ಶ್ವಾಸೋಚ್ಛ್ವಾಸ ಕ್ರಿಯೆಗಳು ಬಹುಮಟ್ಟಿಗೆ ತಗ್ಗುತ್ತವೆ. ಉದಾಹರಣೆಗಾಗಿ, ತೊಗಲುಬಾವಲಿಯು ದೀರ್ಘನಿದ್ರೆಗೊಳಗಾಗುತ್ತಲೇ ನಿಮಿಷಕ್ಕೆ ೧೮೦ ರಷ್ಟಿದ್ದ ಹೃದಯದ ಬಡಿತಗಳು ಕೇವಲ ೩ ಕ್ಕಿಳಿಯುತ್ತವೆ. ಜಾಗ್ರತಾವಸ್ಥೆಯಲ್ಲಿ ಸೆಕೆಂಡಿಗೆ ೮ರಷ್ಟಿದ್ದ ಉಸಿರಾಟಗಳು ನಿದ್ರಾವಸ್ಥೆಯಲ್ಲಿ ನಿಮಿಷಕ್ಕೆ ೮ ರಷ್ಟಾಗುತ್ತವೆ. ಶರೀರದ ಉಷ್ಣತೆಯೂ ಇಳಿಯುತ್ತದೆ. ಈ ರೀತಿ ಆಂತರಿಕವಾದ ದೈಹಿಕ ಚಟುವಟಿಕೆಗಳು ಕುಗ್ಗುವುದರಿಂದ ದೇಹದ ಅಂಗಾಂಶಗಳು 'ಬಕಾಸುರ ಆಹಾರ'ಕ್ಕೆ ಬಾಯ್ದೆರೆಯದೆ ತಮ್ಮ ಅವಶ್ಯಕ ಅಲ್ಪಾಂಶಕ್ಕಾಗಿ ಪಿತ್ತಕೋಶದಂಥ ಆಹಾರ ಸಂಗ್ರಹಾಂಗಗಳನ್ನು ಅವಲಂಬಿಸುತ್ತವೆ. ; ಹಾಗೂ ದುಡಿತದಿಂದ ಶಕ್ತಿಹೀನವಾದ ಅಂಗಾಂಗಗಳು ನಿದ್ರಾ 'ಮೋಡಿ'ಯಿಂದ ಚೇತರಿಸಿಕೊಳ್ಳುತ್ತವೆ.


ಪ್ರಾಣಿಜಗತ್ತಿನಲ್ಲಿಯೇ ಆನೆಯಷ್ಟು ಗೊರಕೆ ಹೊಡೆಯುವ ಇನ್ನೊಂದು ಜೀವಿ ಸಿಗಲಾರದು. ಹಗಲು ವೇಳೆಯ ಲಘು ನಿದ್ರೆ ಇವುಗಳಿಗೆ ತಿಳಿಯದು. ರಾತ್ರಿವೇಳೆ ಮಗ್ಗುಲಾಗಿ ಮೂರು ನಾಲ್ಕುಗಂಟೆಗಳವರೆಗೆ ಮಲಗುತ್ತವೆ. ಆಹಾರ ಸೇವನೆ ನಂತರ ಪುನಃ ಇನ್ನೊಂದು ಮಗ್ಗುಲಾಗಿ ನಿದ್ರೆ ಹೋಗುತ್ತವೆ. ಫ್ರಾನ್ಸ್ ದೇಶದ ಒಂದು ಆನೆ ಈ ನಿಯಮಕ್ಕೆ ಅಪವಾದವಾಗಿತ್ತು. ಅದು ಸತತವಾಗಿ ಐದು ವರ್ಷಗಳವರೆಗೆ ಒರಗಿ

ನಿದ್ರಿಸಲೇ ಇಲ್ಲ. ಅದನ್ನು ಕಟ್ಟದ ಎದುರಿನ ಗೋಡೆಯ ಬಿರುಕಿನಲ್ಲಿ ತನ್ನ ಕೋರೆ ಹಲ್ಲುಗಳನ್ನು ನೆಟ್ಟು ಅವುಗಳ ಮೇಲೆ ತನ್ನ ಜಡ ತಲೆಯ ಭಾರವನ್ನು ಚೆಲ್ಲಿ ನಿಂತ ಸ್ಥಿತಿಯಲ್ಲಿಯೇ ನಿದ್ರಿಸುತ್ತಿತ್ತು. ಸರ್ಕಸ್ ಒಂದರಲ್ಲಿಯ ಆನೆಗಳ ಹಿಂಡನ್ನು ನಿರೀಕ್ಷಿಸಿದಾಗ, ಎಲ್ಲ ಆನೆಗಳೂ ಒಂದೇ ವೇಳೆಗೆ ಮಲಗುತ್ತಿರಲಿಲ್ಲ. ಕೆಲವು ನಿರ್ಭೀತವಾಗಿ ಮಲಗಿದಾಗ ಉಳಿದ ಆನೆಗಳು ಕಾವಲುಗಾರರಂತೆ ಎಚ್ಚರದಿಂದ ಇರುತ್ತಿದ್ದವು. ಹೀಗೆ ಸರತಿಯಂತೆ ಕೆಲವು ಮಲಗುತ್ತಿದ್ದವು. ನಿದ್ರೆ ತಿಳಿದೆದ್ದಹಲವು ಕಾವಲಿರುತ್ತಿದ್ದವು.

ಕುದುರೆ ನಿಂತುಕೊಂಡೇ ನಿದ್ರಿಸುವ ಪ್ರಾಣಿ; ಸುಮಾರು ಏಳು ಗಂಟೆಗಳವರೆಗೆ ನಿದ್ರಿಸುತ್ತದೆ. ನೆಲಕ್ಕೊರಗಿ ಮಗ್ಗುಲಾಗಿಯು ವಿಶ್ರಾಂತಿ ಪಡೆಯಬಲ್ಲದು. ದನಕರು, ಆಡು, ಕುರಿಗಳಂತಹ ಮೆಲುಕು ಹಾಕುವ ಪ್ರಾಣಿಗಳ ನಿದ್ರೆ ತೀರ ಕಡಿಮೆ. ಅವು ಮೈಕೆಡವಿ ಸಪಾಟಾಗಿ ಮಲಗಲಾರವು . ಮಡಿಚಿದ ಕಾಲುಗಳ ಮೇಲೆ ದೇಹ ಭಾರವಿಟ್ಟು, ಕಣ್ಣು ತೆರೆದುಕೊಂಡು ಮಲಗುತ್ತವೆ. ಮಲಗಿದಾಗ ಎದೆ ಭಾಗ ಹಾಗೂ ಕುತ್ತಿಗೆ ಲಂಬವಾಗಿ ನಿಂತುಕೊಂಡು ತಲೆಯೊಂದಿಗೆ ತಮ್ಮ ಭಾರವನ್ನು ಭುಜಗಳ ಮೇಲೆ ಚೆಲ್ಲಿರುತ್ತವೆ. ಉಸಿರಾಟದ ವೇಗ ಕಡಿಮೆಯಾದರೆ, ಅದು ಅವುಗಳ ಗಾಢ ನಿದ್ರೆ ಎಂದು ತಿಳಿಯಬೇಕು. ಅಂಥ ಗಾಢ ನಿದ್ರೆ ಕೇವಲ ಅರ್ಧ ಗಂಟೆ ಮಾತ್ರ ; ಆಗ ಕಣ್ಣು ರೆಪ್ಪೆಗಳು ಮುಚ್ಚಿಕೊಳ್ಳುವುದುಂಟು.

ಈ ಪ್ರಾಣಿಗಳು ದಿನದ ಒಂಬತ್ತು ತಾಸುಗಳನ್ನು ಮೆಲುಕು ಹಾಕುವುದರಲ್ಲಿ ಕಳೆಯುತ್ತವೆ. ಇವುಗಳ ಜಠರದ ಅಂತರಿಕ ರಚನೆ ವಿಚಿತ್ರವಾಗಿದೆ. ಜಠರದಲ್ಲಿ ನಾಲ್ಕು ಕೋಣೆಗಳಿದ್ದು, ಮೊದಲನೆಯ ಕೋಣೆಗೆ 'ರುಮೆನ್' ಎಂದು ಹೆಸರು. ಅದರಲ್ಲಿ





ಆಹಾರವನ್ನು ಜಗಿಯಲು ಬೇಕಾದ ದ್ರವವಿರುತ್ತದೆ. ಜಠರದ ಈ ಭಾಗವು ಆಚೀಚೆ ಒಲಿದರೆ ಅದು ಕ್ರಿಯಾಬಾಹಿರವಾಗುವುದೆಂದೇ ಇಂಥ ಪ್ರಾಣಿಗಳು ಮೈಕೆಡವಿ ಮಲಗಲಾರವು. ಆಕಳ ಕರುಗಳಲ್ಲಾಗಲೀ, ಆಡಿನ ಮರಿಗಳಲ್ಲಾಗಲೀ ರುಮೆನ್ ಪೂರ್ಣ ಬೆಳವಣಿಗೆ ಹೊಂದಿರುವದಿಲ್ಲವಾದ್ದರಿಂದ ಅವು ತಮ್ಮ ಚಿಕ್ಕ ವಯಿಸ್ಸಿನಲ್ಲಿ ಮೈಕೆಡವಿ, ಸಪಾಟಾಗಿ ಮಲಗುತ್ತವೆ.

ಮಂಗಗಳು ಗಿಡದ ಟೊಂಗೆಗಳನ್ನಾಶ್ರಯಿಸಿ ಮಲಗುತ್ತವೆ. ಮನುಷ್ಯನ ಸಾಮೀಪ್ಯದಲ್ಲಿ ಬಾಳುವ ಮಂಗಗಳು ಮನೆಗಳ ಮಾಳಿಗೆಗಳನ್ನಾಶ್ರಯಿಸಬಹುದು. ಇವು ಹಲವಾರು ರೀತಿಯ ಅಂಗವಿನ್ಯಾಸಗಳಿಂದ ಮಲಗುತ್ತವೆ. ಮನುಷ್ಯನಂತೆ ಕೈಕಾಲು ಚಾಚಿ ಅಂಗಾತಾಗಿ, ಇಲ್ಲವೆ ಮಗ್ಗುಲಾಗಿ, ಹೊಟ್ಟೆಕೆಳಗಾಗಿ ಅಥವಾ ಕುಳಿತ ಠೀವಿಯಲ್ಲಿಯೇ ನಿದ್ರಿಸಬಹುದು.

ಈ ವಿಷಯದಲ್ಲಿ ಗೋರಿಲ್ಲಾ ಕಪಿಯ ಸ್ವಭಾವ ತುಂಬಾ ಚಿತ್ತಾಕರ್ಷಕವಾಗಿದೆ. ಇದಕ್ಕೆ ಮೆತ್ತಗಿನ, ಸುಖಕರವಾದ ಹಾಸಿಗೆಯೇ ಬೇಕು. ಗಿಡಗಳ ಮೃದು ಟೊಂಗೆಗಳನ್ನು ಮಣಿಸಿ, ಒಂದರೊಳಗೊಂದು ಸೇರಿಸಿ ಮೊದಲು 'ಪಲ್ಲಂಗದ' ಚೌಕಟ್ಟನ್ನು ಕಟ್ಟಿಕೊಳ್ಳುತ್ತದೆ ; ಆದರ ಮೇಲೆ ಚಿಗುರೆಲೆಗಳನ್ನು ಹರವಿ ತನ್ನ ಕುತನೀಗಾದಿಯನ್ನು ಸಿದ್ಧಗೊಳಿಸಿ ಮಲಗುತ್ತದೆ. ಕುತೂಹಲಕಾರಿಯಾದ ಅಂಶವೆಂದರೆ - ಇದು ಈ ಹಾಸಿಗೆಯ ಮೇಲೆ ಎರಡು ರಾತ್ರಿಗಳಿಗಿಂತ ಹೆಚ್ಚಿಗೆ ಮಲಗಲಾರದು. ತಿನುಸುಬಾಕ ಸ್ವಭಾವದ ಈ ಕಪಿಯು ಚಿಗುರಿನಿಂದ ಆಚ್ಛಾದಿತವಾದ ತನ್ನ ಮೆತ್ತಗಿನ 'ಗಾದಿಯನ್ನೇ ಭಕ್ಷಿಸಿ ಮೂರನೆಯ ರಾತ್ರಿಯ ಸಿದ್ಧತೆಯಲ್ಲಿ ತೊಡಗುತ್ತದೆ.



ಓರಂಗುಟಂಗ್ ಸ್ವಾಭಾವಿಕವಾಗಿಯೇ ಗಿಡಗಳ ಉನ್ನತ ಭಾಗದಲ್ಲಿ ವಾಸಿಸುವ ಬಾಲವಿಲ್ಲದ ಕಪಿ. ನೆಲದಿಂದ ಸುಮಾರು ೩೦-೪೦ ಅಡಿ ಎತ್ತರದಲ್ಲಿ ಟಿಸಿಲೊಡೆದ ಟೊಂಗೆಯೊಂದನ್ನು ಆರಿಸಿಕೊಂಡು ಎರಡು ಟಿಸಿಲುಗಳ ಮಧ್ಯೆ ರೆಂಬೆಗಳನ್ನೂ, ಅವುಗಳ ಮೇಲೆ ಎಲೆಗಳನ್ನೂ

ಜೋಡಿಸಿ ಹಾಸಿಗೆ ಸಿದ್ಧಗೊಳಿಸಿ ಅದರ ಮೇಲೆ ಮನಷ್ಯನಂತೆ ಕಾಲುಗಳನ್ನು ಚಾಚಿ ಅಂಗಾತಾಗಿ ಮಲಗುತ್ತದೆ. ತನ್ನ ನಿಡಿದಾದ ಕೈಗಳಿಂದ ಬದಿಯ ಟೊಂಗೆಗಳನ್ನು ಅದುಮಿ ಹಿಡಿಯುವುದರಿಂದ ಎಂಥ ಭಯಂಕರ ಬಿರುಗಾಳಿಯೂ 'ಸ್ವರ್ಗದ ತೊಟ್ಟಿಲ'ನ್ನು ತೂಗೀತೇ ವಿನಾ' ಸಿಂಹಾಸನಾಧಿಷ್ಠ ರಾಜ'ನನ್ನು 'ಪದಚ್ಯುತ' ಗೊಳಿಸಲಾರದು. !

ಪಕ್ಷಿಗಳು ಸಾಮಾನ್ಯವಾಗಿ ಲಘುನಿದ್ರೆಯಿಂದ ತೃಪ್ತಿ ಪಡೆಯುತ್ತವೆ. ಅಪಾಯದ ಸೂಕ್ಷ್ಮ ಸಂಜ್ಞೆಗೂ ತಟ್ಟನೆ ಎಚ್ಚರಗೊಳ್ಳುತ್ತವೆ. ಮಲಗುವ ಪೂರ್ವದಲ್ಲಿ ತಮ್ಮ ದೇಹದ ಗರಿಗಳನ್ನು ಕೊಕ್ಕೆಯಿಂದ ಊದಿಕೊಳ್ಳುತ್ತವೆ ; ಇದರಿಂದ ದೇಹದ ಉಷ್ಣತೆಯನ್ನು ಕಾಪಾಡಿಕೊಂಡಂತಾಗುತ್ತದೆ. ರೆಂಬೆಗೆ ಬೆರಳುಗಳನ್ನು ಸುತ್ತಿ ಮಲಗಿದ ಪಕ್ಷಿಗಳು ತಪ್ಪಿಯೂ ಕೆಳಗೆ ಬೀಳದಿರುವುದು ಅಚ್ಚರಿಯೇ. ಇದಕ್ಕಾಗಿ ಪಕ್ಷಿಗಳ ಮೇಲಡಿಯ ಸ್ನಾಯುಗಳ ರಚನೆ ಅವುಗಳಿಗೆ ಅನುಕೂಲವಾಗಿದೆ. ನಖಯುಕ್ತ ಬೆರಳುಗಳು ರೆಂಬೆಯನ್ನು ಸುತ್ತಿಕೊಂಡ ತಕ್ಷಣವೇ ದೇಹಭಾರಕ್ಕೊಳಗಾದ ಕಾಲಿನ ಸ್ನಾಯುಗಳು ಸ್ವಯಂಚಾಲಿತ ಯಂತ್ರದಂತೆ ಯತ್ನ ಇಲ್ಲದೇನೇ 'ಬೀಗ' ಹಾಕಿಕೊಂಡುಬಿಡುತ್ತವೆ.

ಕಪ್ಪೆಬಾಯಿ ಎಂಬ ಆಸ್ಟ್ರೇಲಿಯದ ಪಕ್ಷಿ ಹೆಸರಾಂತ 'ಕುಂಭಕರ್ಣ'! ಪ್ರಕೃತಿಯಲ್ಲಿಯೇ ಇದರಂಥ ಕುರೂಪಿ ಪ್ರಾಣಿ ಇನ್ನೊಂದು ಇರಲಿಕ್ಕಿಲ್ಲ. ಮಲಗಿದ ಈ ಪಕ್ಷಿಯನ್ನು ರೆಂಬೆಯಿಂದ ಕಿತ್ತಿ ಎತ್ತಿಕೊಂಡು ಹೋದರೂ ಇದಕ್ಕೆ ಎಚ್ಚರವಾಗಲಿಲ್ಲ. ಇಷ್ಟೇ ಅಲ್ಲ, ಮಗ್ಗುಲಲ್ಲಿ ಮಲಗಿದ ಸಂಗಾತಿಯನ್ನು ಗುಂಡು ಹೊಡೆದು ಕೊಂದಾಗಲೂ ಇನ್ನೊಂದು ಸುಖವಾಗಿ ನಿದ್ರಿಸುತ್ತಲೇ ಇತ್ತು. ! ಮಲಗುತ್ತಲೇ ಸುತ್ತಲಿನ ಪರಿಸ್ಥಿತಿಗೆ ಪ್ರಜ್ಞಾಶೂನ್ಯವಾಗಿ ಬಿಡುವುದು ಈ ಪಕ್ಷಿಯ ವಿಶೇಷ ಲಕ್ಷಣ.



ಜಲಚರ ಪಕ್ಷಿಗಳು ತಮ್ಮದೇ ಆದ ನಿದ್ರಾ ರೀವಿಯನ್ನು ತೋರುತ್ತವೆ. ಸೀ ಗಲ್ ಎಂಬ ಸಮುದ್ರ ಪಕ್ಷಿ , ಬಾತುಕೋಳಿ, ಹಂಸಪಕ್ಷಿಗಳು ನೀರಪಾತಳಿಯ ಮೇಲೆ ತೇಲುತ್ತಲೇ ನಿದ್ರಿಸುತ್ತವೆ. ಜಲಚರ ಸಸ್ತನಿಗಳಲ್ಲಿ ಒಂದಾದ ನೀರ್ನುದುರೆಯ ರೀತಿಯೇ ಬೇರೆ. ಸಂಗಾತಿಯ ಮೈಮೇಲೆ

ತನ್ನ ತಲೆ ಇಟ್ಟು. ದೇಹವನ್ನು ಬಿಸಿಲಿಗೆ ಒಡ್ಡಿ ತೇಲುತ್ತ ಮಲಗುತ್ತದೆ. ಇದಕ್ಕೆ 'ತಲೆದಿಂಬಿನ ಚಾಳಿ'- ಬಹಳಿದ್ದಂತೆ ಕಾಣುತ್ತದೆ. ಯಾಕೆಂದರೆ ಸಂಗಾತಿ ಸಿಗದಿದ್ದಾಗ ತನ್ನ ಮರಿಗಳನ್ನೇ 'ತಲೆದಿಂಬು' ಮಾಡಿಕೊಂಡು ನಿಶ್ಚಿಂತೆಯಿಂದ ನಿದ್ರಿಸುತ್ತದೆ.

ಮೀನು ಉಳಿದ ಪ್ರಾಣಿಗಳಂತೆ ಗಾಢವಾಗಿ ಮಲಗಲಾರದು. ಅದರ ನಿಶ್ಚಲ ಸ್ಥಿತಿಯೇ ಅದರ ನಿದ್ರೆ. ದಿನದ ೨೪ ಗಂಟೆಗಳಲ್ಲಿ ಕೆಲ ಕ್ಷಣಗಳನ್ನು ಮಾತ್ರ ನಿಶ್ಚಲ ಸ್ಥಿತಿಯಲ್ಲಿ ಕಳೆದು ಚೇತರಿಸಿಕೊಳ್ಳುತ್ತದೆ. ನೀರಿನ ತಳದಲ್ಲಿ ವಾಸಿಸುವ ಚಪ್ಪಟೆ ಮೀನು ಹಗಲು ವೇಳೆ ಉಸುಕಿನಲ್ಲೋ, ಕೆಸರಿನಲ್ಲೋ ಹುದುಗಿಕೊಂಡು ವಿಶ್ರಾಂತಿ ಪಡೆಯುತ್ತದೆ ; ರಾತ್ರಿಯಾಗುತ್ತಲೇ ಚುರುಕಾಗಿ ಓಡಾಡುತ್ತದೆ. ತೊಟ್ಟಿಯಲ್ಲಿಟ್ಟ ಸಮುದ್ರ ಮೀನುಗಳು ಈಜುವುದನ್ನು ನಿಲ್ಲಿಸಿ ತೊಟ್ಟಿಯ ತಳಕ್ಕಿಳಿದು ಕೆಲ ಕ್ಷಣಗಳವರೆಗೆ ಸ್ತಬ್ಧವಾಗಿ ನಿಲ್ಲುತ್ತವೆ. ಈ ವಿಶ್ರಾಂತಿಯೇ ಅವುಗಳ ನಿದ್ರೆ.

ಮಲಗಿದ ಪತಂಗವನ್ನು ಸಲೀಲವಾಗಿ ಎತ್ತಿ ಇನ್ನೊಂದು ರೆಂಬೆಗೆ ಆನಿಸಿಟ್ಟರೆ ಅದು ತನ್ನ ನಿದ್ರಾವಸ್ಥೆಯಲ್ಲಿಯೇ ಹೊಸ ರೆಂಬೆಯನ್ನು ಗಟ್ಟಿಯಾಗಿ ಅವಚಿಕೊಳ್ಳುತ್ತದೆ ; ಗಾಳಿಯಲ್ಲಿ ತೂರಿದರೆ, ಸೆರೆಗುಡುಕನಂತೆ ಝೋಲಿ ಹೊಡೆಯುತ್ತ ಕೆಳಗಿಳಿದು ತನ್ನ ಕಾಲುಗಳಿಗೆ ಸಿಗುವ ವಸ್ತುವನ್ನು - ಟೊಂಗೆ ಇರಲಿ ,ಎಲೆ ಇರಲಿ ಕೂಡಲೇ ಅದುಮಿ ಹಿಡಿದುಕೊಳ್ಳುತ್ತದೆ.

ಕಡಜೀರಗಿ ಹುಳುಗಳು ಸುಖವಾಗಿ ನಿದ್ರಿಸಲು ಕಲಿತಿವೆ ಹಾಗೂ ಮಲಗಲು ಹಲವಾರು ತರದ 'ಹಾಸಿಗೆ' ಗಳನ್ನು ಕಲ್ಪಿಸಿಕೊಂಡವೆ. ಹೂವಿನ ಪಕಳೆ ಇಲ್ಲವೆ ಎಲೆಯ ಮೇಲೆ ಒರಗಿ ನಿದ್ರಿಸಬಹುದು. ಅಥವಾ ತಾಯಿ ಹುಳು ತನ್ನ ಮರಿಗಳಿಗಾಗಿ ಗಿಡದ ತೊಗಟೆಯಲ್ಲಿ, ತೊಲೆಗಳಲ್ಲಿ ಇಲ್ಲವೆ ಇನ್ನಿತರ ಪೊಳ್ಳುಜಾಗದಲ್ಲಿ ಮನೆಗಳನ್ನು ಕೊರೆದು 'ಬೆಡ್‌ರೂಮು' ಗಳನ್ನು ನಿರ್ಮಿಸಿ, ಮುಖ್ಯದ್ವಾರವನ್ನು ಕಸಕಡ್ಡಿಗಳಿಂದ ಮುಚ್ಚಿ ಏಕಾಂತತೆಯನ್ನು ಒದಗಿಸಬಹುದು. ಕೆಲವು ಜಾತಿಯ ಕಡಜೀರಗಿಗಳು ಬಾಗಿಲಿನ ಸಂದಿ ಗೊಂದಿಗಳಲ್ಲಿ , ಗೋಡೆಯ ಬಿರುಕುಗಳಲ್ಲಿ ಮನೆ ಮಾಡಿ ಮನುಷ್ಯನಂತೆಯೇ ಅಂಗಾತಾಗಿ ಮಲಗಿ ನಿದ್ರಿಸುತ್ತವೆ !

ಪ್ರಾಣಿಗಳು ತಮ್ಮ ಸ್ವಾಭಾವಿಕ ವಾಸಸ್ಥಾನಗಳಲ್ಲಿ ಮುಖ್ಯವಾಗಿ ಚಳಿ, ಬಿಸಿಲು, ಆಹಾರಾಭಾವ- ಈ ಮೂರು ಪ್ರತಿಕೂಲ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ. ಇಂಥ

ವಿರೋಧ ಸನ್ನಿವೇಶಗಳಿಂದ ಪಾರಾಗಿ ಬಾಳಲು ಅವು ಹಲವು ಉಪಾಯಗಳನ್ನು ಕಲ್ಪಿಸಿಕೊಂಡಿವೆ. ತಮ್ಮ ನಾಡಿನಲ್ಲಿ ಚಳಿಗಾಳಿ, ಬಿಸಿಲು ಆರಂಭಿಸಿದಾಗ ಆಹಾರಾಭಾವವೂ ಹೆಚ್ಚುವುದರಿಂದ - ಅನೇಕ ಪಕ್ಷಿಗಳು ಬೆಚ್ಚಗಿನ ಹವೆ ಇರುವ ಹಾಗೂ ವಿಪುಲ ಆಹಾರ ದೊರೆಯುವ ನಾಡುಗಳತ್ತ ವಲಸೆ ಹೋಗುವುದನ್ನು ಕಲಿತಿವೆ. ನೀರಗಪ್ಪೆ, ನೆಲಗಪ್ಪೆಗಳಂಥ ಉಭಯಜೀವಿಗಳು, ಹಾವು, ಆಮೆಗಳಂಥ ಸರೀಸೃಪಗಳು ಶೀತರಕ್ತಕ ಪ್ರಾಣಿ ಗಳಾಗಿರುವುದರಿಂದ ಹೊರಗಿನ ಭಯಂಕರ ಚಳಿಯನ್ನು ಅವು ಸಹಿಸಿಕೊಳ್ಳಲಾರವು. ಆಗ ಆಹಾರದ ಕೊರತೆಯಂತೂ ಇದ್ದದ್ದೇ. ಈ ಎರಡು ಪ್ರತಿಕೂಲ ಸನ್ನಿವೇಶಗಳಿಂದ ಪಾರಾಗಲು ಅವು ಬೆಚ್ಚಗಿನ, ಆಳವಾದ ತಾವುಗಳನ್ನು ಹುಡುಕಿ ಹಲವಾರು ತಿಂಗಳುಗಳ ವರೆಗೆ ಮಲಗಿಬಿಡುತ್ತವೆ. ಇದುವೇ ಅವುಗಳ ಶಿಶಿರನಿದ್ರೆ. ದೇಹದ ಎಲ್ಲ ಚಟುವಟಿಕೆಗಳೂ ಕನಿಷ್ಠ ಸ್ಥಿತಿಗೆ ಬರುವುದರಿಂದ ಸಂಗ್ರಹಾಂಗಗಳಲ್ಲಿ ಶೇಖರವಾದ ಆಹಾರವು ಅವುಗಳಿಗೆ ಸಾಕಾಗುತ್ತವೆ. ಹಾವುಗಳು ಆಗಾಗ ತಮ್ಮ ಬಿಲಗಳಿಂದ ಹೊರಬಿದ್ದು ಆಹಾರ ದೊರಕುವ ತಾವುಗಳನ್ನು ಹುಡುಕುತ್ತಾ ಹೋಗುವುದುಂಟು. ಆದರೆ ಆಮೆಗಳು ಇಡೀ ಶಿಶಿರ ಋತುವನ್ನು ನಿದ್ರೆಯಲ್ಲಿಯೇ ಕಳೆಯುತ್ತವೆ. ಇದೇ ರೀತಿ ಬೇಸಿಗೆಯ ಬಿಸಿಲನ್ನು ಸಹಿಸದ ಕೆಲವು ಸಸ್ತನಿಗಳು ಆಳವಾದ ಬಿಲಗಳನ್ನು ಕೊರೆದುಕೊಂಡು ಸುಖವಾಗಿ ನಿದ್ರಿಸುವುದುಂಟು. ಇದು ಅವುಗಳ ಬೇಸಿಗೆ ಅಥವಾ ಗ್ರೀಷ್ಮನಿದ್ರೆ. ಅಳಿಲನ್ನು ಹೋಲುವ ಡಾರಮೌಸ್ ಎಂಬ ಹೆಸರಿನ ಚಿಕ್ಕ ಇಲಿಯ ನಿದ್ರೆಯ ರೆಕಾರ್ಡನ್ನು ಬೇರೆ ಯಾವ ಪ್ರಾಣಿಯೂ ಮುರಿದಿಲ್ಲ. ಇದರ ನಿದ್ರಾ ಸಮಯ ಆರು ತಿಂಗಳು ಇಪ್ಪತ್ತುಮೂರು ದಿನಗಳು !

***

೧೭. ಹಕ್ಕಿಗಳು ವಿಸ್ಮಯಕಾರಕ ಹಾರುಯಂತ್ರಗಳು



'ಲಕ್ಷಾಂತರ ವರುಷಗಳಿಂದ ಮಾನವನು ವಿವಿಧ ಹಕ್ಕಿಗಳ ಚೆಲುವನ್ನು ವೀಕ್ಷಿಸುತ್ತ, ಅವುಗಳ ಚಿಲಿಪಿಲಿಯನ್ನು ಆಲಿಸುತ್ತ ಬಂದಿದ್ದಾನೆ. ಪ್ರಾಚೀನ ಕಾಲದಲ್ಲಿ ಮಾನವನು ಭೂಚರ ಪ್ರಾಣಿಗಳನ್ನು ಅನುಕರಣೆ ಮಾಡಿ ಹೊಂಚು ಹಾಕುವುದನ್ನೂ, ಬೇಟೆಯಾಡುವುದನ್ನೂ ಕಲಿತುಕೊಂಡ. ಚಲಚರ ಪ್ರಾಣಿಗಳನ್ನು ನೋಡಿ ಈಜುವುದನ್ನು ಕಲಿತ. ಆದರೆ ಆಕಾಶದಲ್ಲಿ ಸ್ವಚ್ಛಂದವಾಗಿ ಹಾರಾಡುವ ಪಕ್ಷಿಗಳನ್ನು ಕಂಡು ಮೂಗಿನ ಮೇಲೆ ಬೆರಳಿಟ್ಟುಕೊಂಡ. ತನ್ನ ಅಸಹಾಯಕತೆಗೆ ಅಸೂಯೆಪಟ್ಟುಕೊಂಡ. ಸ್ವಾರಸ್ಯಕರ ಕಲ್ಪನೆಗಳೊಂದಿಗೆ ಕುತೂಹಲಕಾರಿ ಕಥೆಗಳನ್ನು ಹೆಣೆದು ಆಕಾಶೋಡ್ಡಯಣದ ಹಂಬಲವನ್ನು ಶಮನ ಮಾಡಿಕೊಳ್ಳದೆ ಬೇರೆ ದಾರಿ ಇರಲಿಲ್ಲ. ಆದರೆ ಈ ಕಲ್ಪನಾ ಲಹರಿಯೇ ಮುಂದೊಂದು ದಿನ ತನ್ನನ್ನು ಜೆಟ್ ಯುಗಕ್ಕೆ ಕರೆದೊಯ್ಯಬಹುದೆಂಬ ಕನಸು ಅವನಿಗಿರಲಿಲ್ಲ. ಅವನ ಈ ಯಶಸ್ಸಿನ ಸ್ಫೂರ್ತಿ - ಪಕ್ಷಿ.

ಆದರೆ ಹಕ್ಕಿಯ ಸ್ವಾಭಾವಿಕ ಉಡ್ಡಯಣ ಅವನಿಗೆ ಬಾರದು. ಅವನದು ಕೃತ್ರಿಮ ಹಾರಾಟ. ಪಕ್ಷಿಯ ಅಂಗ ರಚನಾ ವೈವಿಧ್ಯಗಳನ್ನು ವೈಜ್ಞಾನಿಕವಾಗಿ ಅಭ್ಯಸಿಸಿದ ಮಾನವನು ಇಂದು ನಾನಾ ಬಗೆಯ ಉಡ್ಡಯಣ ವಾಹಕಗಳನ್ನು ನಿರ್ಮಿಸಿಕೊಂಡಿದ್ದಾನೆ. ವಿಜ್ಞಾನದ ಈ ವಿಭಾಗಕ್ಕೆ 'ವಾಯುಚಲನ ವಿಜ್ಞಾನ' (Aero dynamics)ಎಂದು ಹೆಸರು. ಅಂತರ್‌ಗ್ರಹ ಯಾನವನ್ನು ಆರಂಭಿಸುವಷ್ಟು ನಾವು ಇಂದು ಮುಂದುವರೆದಿರಬಹುದು.

ಆದರೆ ಒಂದು ಗುಬ್ಬಚ್ಚಿಯ ಲೀಲಾಜಾಲವಾದ ಹಾರಾಟದೆದುರು ನಮ್ಮ 'ಹಾರಾಟ' ತೀರ ಸಪ್ಪೆ! ಅದರ ಸ್ವಾಭಾವಿಕತೆ, ಸ್ವಚ್ಛಂದತೆ ನಮಗೆ ಬಾರದು.

ಪಕ್ಷಿಯು ಇದನ್ನೆಲ್ಲ ಹೇಗೆ ಸಾಧಿಸಿತು? ಅದೊಂದು ಜೀವೇತಿಹಾಸದ ದೀರ್ಘ ಕಥೆ. ಈ ಅದ್ಭುತವಾದ ಕೌಶಲ್ಯ ಸಾಧಿಸಲು ಅದಕ್ಕೆ ತಗುಲಿದ ಸಮಯ ೧೭೦ ಮಿಲಿಯ ವರುಷಗಳು! ಅದು ಜುರಾಸಿಕ್ ಯುಗ. ಸರೀಸೃಪಗಳ ಸುವರ್ಣ ಕಾಲ. ಎಲ್ಲಿ ನೋಡಿದರಲ್ಲಿ ನೆಲ, ಜಲ, ಆಕಾಶಗಳ ಸ್ವತಂತ್ರ ಸಾರ್ವಭೌಮಗಳಂತಿದ್ದ ಅಜಾನುಬಾಹು ಭಯಂಕರ ಸರೀಸೃಪಗಳು. ಅವುಗಳಲ್ಲಿ ತೀವ್ರ ಓಟದ ಸ್ವಭಾವಕ್ಕೆ ಹೊಂದಿಕೊಂಡ ಡೈನೊಸೋರ್‌ಗಳು ಪಕ್ಷಿಗಳಿಗೆ ಜನ್ಮ ಕೊಟ್ಟಿರಬೇಕು ಎಂಬುದು ಒಂದು ತರ್ಕ ಸರಣಿಯ ವಾದ. ಇಲ್ಲ, ಆಗಲೇ ವೃಕ್ಷವಾಸಿಗಳಾದ ಟೆರೊಡೆಕ್ಟಿಲ (ಹಾರು ಬೆರಳುಗಳು) ಎಂಬ ಸರೀಸೃಪಗಳು ಪಕ್ಷಿಗಳ ಪೂರ್ವಜ ಪ್ರಾಣಿಗಳು ಎಂಬುದು ಇನ್ನೊಂದು ವಾದ. ವಾದಗಳೇನೇ ಇರಲಿ, ಯಾವುದೊಂದು ಸರೀಸೃಪ ಮರದಿಂದ ಮರಕ್ಕೆ ಹಾರುವಾಗಲೋ, ಭೂಮಿಯ ಮೇಲೆ ಓಟ ಕಿತ್ತಾಗಲೋ ವೇಗದ ಗತಿಯನ್ನು ಹೆಚ್ಚಿಸಿಕೊಳ್ಳುವಾಗ ಮುಂಗಾಲುಗಳನ್ನು ಮೇಲೆತ್ತಿ ತಾತ್ಕಾಲಿಕವಾಗಿಯಾದರೂ ದ್ವಿಪಾದಿಯಾಗುವುದು ಸಹಜ. ಜೊತೆಗೆ ಮೈಮೇಲಿನ ಪೊರೆಗಳು ಗಾಳಿಯ ಘರ್ಷಣೆಗೆ ಒಡೆದು ಬಿಡಿ ಬಿಡಿಯಾಗಿ ಗರಿಗಳಾಗಿ ಮಾರ್ಪಟ್ಟಿರಲೂ ಶಕ್ಯವಿದೆ. ಈ ಎರಡು ಶಾರೀರಿಕ ಮೂಲ ಬದಲಾವಣೆಗಳು ಆಕಾಶ ರಾಜನಾಗಲಿರುವ ಪ್ರಾಣಿಗೆ ನಾಂದಿ ಹಾಡಿರಬೇಕು.


ರೂಪಾಂತರ

ಕಾಲದ ಗುಂಟ ಈಚೆಗೆ ಸರಿದ ಈ ಪೂರ್ವಜ ಪ್ರಾಣಿಗಳು ಪಕ್ಷಿಗಳಾಗಿ ರೂಪಾಂತರ ಹೊಂದುವಾಗ ತಮ್ಮ ದೇಹದ ತೂಕವನ್ನು ಕಡಿಮೆ ಮಾಡಿಕೊಳ್ಳುವುದನ್ನೇ ಏಕೈಕ ಗುರಿಯನ್ನಾಗಿ ಮಾಡಿಕೊಂಡಿದ್ದವು. ಆ ಗುರಿ ತಲುಪಲು ಅವು ಇನ್ನೂ ೧೦೦ ಮಿಲಿಯ ವರುಷಗಳ ಸಾಹಸಮಯ ದಾರಿಯನ್ನು ಕ್ರಮಿಸಬೇಕಿತ್ತು. ಉತ್ಕ್ರಾಂತಿಯ ಈ ದುರ್ಗಮ ದಾರಿಯಲ್ಲಿ ದೇಹದ ಕೆಲವೊಂದು ಅಂಗಗಳನ್ನು ಕಳಚಿಕೊಂಡು ಮುನ್ನಡೆಯ ಬೇಕಾಯಿತು- ಒಂದೊಂದು ಕ್ಷೇತ್ರಸ್ಥಾನದಲ್ಲಿ ಒಂದೊಂದು ಲೋಭವನ್ನು ತ್ಯಜಿಸುವ ಯಾತ್ರಿಕನಂತೆ. ಪೂರ್ವಜ ಪ್ರಾಣಿಯ ದೈತ್ಯ ಶರೀರವನ್ನು ನಿಧಾನವಾಗಿ ಕುಗ್ಗಿಸುತ್ತ ಅಂಗೈ ಗಾತ್ರಕ್ಕೆ ಇಳಿಸಬೇಕಾಯಿತು. ಹೀಗೆ ದೇಹಭಾರವನ್ನು ತಗ್ಗಿಸುವ ಅವುಗಳ ತಂತ್ರ ಕುಶಲತೆ ನಿಜಕ್ಕೂ ಅದ್ಭುತವಾದುದು.

ಮುಂಗಾಲುಗಳೆರಡೂ ರೆಕ್ಕೆಗಳಾಗಿ ಮಾರ್ಪಟ್ಟವು., ವಿವಿಧ ಸಮಾಕೃತಿಯ ಗರಿಗಳು ಹಕ್ಕಿಯ ರೆಕ್ಕೆ, ಬಾಲ ಹಾಗೂ ಇಡೀ ದೇಹವನ್ನು ಆವರಿಸಿದವು. ಈ ಆವರಣವು ದೇಹದ ತೂಕವನ್ನು ಕಡಿಮೆ ಮಾಡಿತಲ್ಲದೆ ಇನ್ನಿತರ ಪ್ರಯೋಜನಗಳನ್ನೂ ತಂದಿತು. ಶರೀರಕ್ಕೆ ದೋಣಿಯಂಥ ಆಕಾರವನ್ನು ತಂದು, ಹಾರಾಟದಲ್ಲಿ ವಾಯುವಿನ ಪ್ರತಿರೋಧಕ ಶಕ್ತಿಯನ್ನು ತಗ್ಗಿಸಿ, ಜೀವಿಯು ಸುಲಭವಾಗಿ ಮುನ್ನುಗ್ಗುವಂತೆ ಮಾಡಿತು. ದೇಹದೊಳಗಿನ ಉಷ್ಣತೆ ಹೊರ ಹೋಗದಂತೆ, ಹೊರಗಿನ ಹವಾಮಾನ ಸ್ಥಿತ್ಯಂತರಗಳು ಒಳಸೇದಂತೆ ರಕ್ಷಾಕವಚವನ್ನು ಹೊದಿಸಿತು. ಹವೆಯಲ್ಲಿಯ ಆರ್ದ್ರತೆಗೆ ತಡೆಯೊಡ್ಡಿ, ದೇಹಾವರಣ ವನ್ನು ಶುಷ್ಕ ಸ್ಥಿತಿಯಲ್ಲಿ ಉಳಿಸಿ ತೂಕ ಹೆಚ್ಚಾಗದಿರಲು ನೆರವಾಯಿತು.

ಹಕ್ಕಿಗಳಿಗೆ ಹಲ್ಲುಗಳಿಲ್ಲ ; ಹಗುರವಾದ ಚುಂಚು ಇದೆ. ಅನ್ನನಾಳದಲ್ಲಿರುವ ಗಿಝರ್ಡ್ ಆಹಾರವನ್ನು ನುರಿಸುತ್ತದೆ. ಉದರದಲ್ಲಿ ಮೂತ್ರಕೋಶವಿಲ್ಲ. ಕಾರಣ, ಅಡಿಗಡಿಗೆ ಮೂತ್ರ ವಿಸರ್ಜಿಸುವ ಸ್ವಭಾವ ಅವುಗಳಿಗೆ ಬಂದಿದೆ. ಹೆಣ್ಣು ಪಕ್ಷಿಯಲ್ಲಿ ಬಲಭಾಗದ ಅಂಡಾಶಯವಿಲ್ಲ. ಕೆಲವು ಪಕ್ಷಿಯ ಕಾಲುಗಳಲ್ಲಿ ಒಂದೆರಡು ಬೆರಳುಗಳೇ ಇರುವುದಿಲ್ಲ. ಈ ಎಲ್ಲ ರಚನಾ ವೈವಿಧ್ಯಗಳ ಗುರಿ ಒಂದೇ ; ದೇಹದ ತೂಕವನ್ನು ತಗ್ಗಿಸುವುದು.

ಈ ದಿಶೆಯಲ್ಲಿ ಗಣನೀಯವಾದ ಕೊಡುಗೆ ಬಂದುದು ಮೂಳೆಗಳಿಂದ. ಫ್ರಿಗೇಟ ಪಕ್ಷಿಯ ರೆಕ್ಕೆ ಹರವು ೭ ಅಡಿಗಳಿದ್ದಾಗ್ಯೂ , ಅದರ ದೇಹದ ತೂಕ ೧೫ ಗ್ರಾಂ ನಷ್ಟು ಇರುವುದನ್ನು ಕಂಡಾಗ ಹಕ್ಕಿ ಹಾರಾಟದ ಯಶಸ್ಸಿಗೆ ಮೂಳೆಗಳ ರಚನಾತ್ಮಕ ಪಾತ್ರ ಎಂತಹದು ಎಂಬ ಕಲ್ಪನೆ ಬರುತ್ತದೆ. ಪಕ್ಷಿಗಳಲ್ಲಿ ಅನೇಕ ನಿರುಪಯುಕ್ತ ಮೂಳೆಗಳು ಇರುವುದೇ ಇಲ್ಲ. ಇದ್ದ ಮೂಳೆಗಳು ಕಾಗದದಷ್ಟು ತೆಳ್ಳಗೆ, ಆದರೂ ಬಲಶಾಲಿಯಾದವುಗಳು. ಹಲವಾರು ಮೂಳೆಗಳು ವಾಯುವನ್ನೊಳಗೊಂಡ ಪೊಳ್ಳು ಮೂಳೆಗಳಾದರೂ ಬಹು ಗಟ್ಟಿಯಾದ ಮೂಳೆಗಳು. ಇನ್ನು ಕೆಲವು T ಮತ್ತು I ಬೀಮ್ ತತ್ತ್ವದಂತೆ ಹೊಂದಿಕೊಂಡು ದೇಹದ ಸಾಂದ್ರತೆಯನ್ನು ಹೆಚ್ಚಿಸಿವೆ. ಈ ತತ್ತ್ವವನ್ನು ವಾಯುಚಲನ ವಿಜ್ಞಾನದಲ್ಲಿ ಅಳವಡಿಸಿಕೊಳ್ಳಲಾಗಿದೆ. ಪೊಳ್ಳು ಕೊಳವೆಯಂತಿರುವ ಮೂಳೆಗಳ ಸಾಮರ್ಥ್ಯವನ್ನು ಇನ್ನೂ ಹೆಚ್ಚಿಸಲು ಅವುಗಳೊಳಗೆ ಸೂಕ್ಷ್ಮವಾದ ಥಾಮ (ಟ್ರಸ್) ಇರುತ್ತದೆ. ವಿಮಾನ ರಚನೆಯಲ್ಲಿ ಕೂಡ ನಳಿಕೆ ಆಕಾರದ ಹಂದರಗಳನ್ನು ಕಟ್ಟಿ ಅಡ್ಡಲಾಗಿ ಥಾಮಗಳನ್ನು ಒದಗಿಸುವ ವಿಧಾನವನ್ನು ಅನುಸರಿಸುತ್ತಾರಷ್ಟೇ.



ಉಸಿರಾಟ ಕ್ರಿಯೆಯನ್ನೂ ಪಕ್ಷಿಯು ತನ್ನ ಯಶಸ್ವೀ ಹಾರಾಟಕ್ಕೆ ಬಳಸಿಕೊಂಡಿದೆ. ಫುಪ್ಫುಸಗಳಿಗೆ ಹೊಂದಿಕೊಂಡ ವಾಯು ಚೀಲಗಳಿವೆ. ಇದರಿಂದ ಉಚ್ಛ್ವಾಸದಲ್ಲಾಗಲಿ, ನಿಶ್ವಾಸದಲ್ಲಾಗಲೀ ಮಲಿನ ವಾಯು ಫುಪ್ಫುಸಗಳಲ್ಲಿ ಉಳಿಯುವುದಿಲ್ಲ. ಅಲ್ಲಿ ನಿರಂತರವಾಗಿ ಶುದ್ಧ ವಾಯುವೇ ಸಂಚರಿಸುವುದರಿಂದ ಶಕ್ತಿ ಪೂರೈಕೆಯೂ ಸತತವಾಗಿ ಸಾಗುತ್ತದೆ. ಅಲ್ಲದೆ ವಾಯು ಚೀಲಗಳು ದೇಹದೊಳಗಿನ ಅಂಗಾಂಗಗಳನ್ನು ಹಿತಮಿತ ಶಾಖದಲ್ಲಿಡಲು ಸಹಕಾರಿಯಾಗಿವೆ.

ಪಕ್ಷಿಯ ಚಿಕ್ಕ ದೇಹಕ್ಕೆ ಅದರ ಹೃದಯ ತುಸು ದೊಡ್ಡದೇ ಎನ್ನಬೇಕು. ಅದರ ನಾಲ್ಕು ಕೋಣೆಗಳು ಪ್ರತ್ಯೇಕವಾಗಿದ್ದು, ಶುದ್ಧ, ಅಶುದ್ಧ ರಕ್ತಗಳು ಬೆರಕೆಯಾಗದಂತೆ ರಚಿತವಾಗಿವೆ. ಹೃದಯಬಡಿತದ ವೇಗವೂ ಹೆಚ್ಚಾಗಿರುವುದರಿಂದ ರಕ್ತ ಪರಿಚಲನೆಯು ತೀವ್ರ ಗತಿಯಲ್ಲಿ ಸಾಗಿ ಕೂಡಲೇ ರಕ್ತವು ಎಲ್ಲೆಡೆಗೂ ಪೂರೈಸಲ್ಪಡುತ್ತದೆ. ಪಕ್ಷಿಯ ಗಾತ್ರವನ್ನು ನೋಡಿದರೆ ಅದರ ಮಿದುಳೂ ದೊಡ್ಡದೇ; ಪರಿಸರಕ್ಕನುಗುಣವಾಗಿ ಮಿದುಳು ವೃದ್ಧಿಯಾಗಬೇಕಷ್ಟೇ. ಕಣ್ಣುಗಳು ಬಹಳ ತೀಕ್ಷ್ಣ : ಮಾನವ ದೃಷ್ಟಿ ಸಾಮರ್ಥ್ಯಕ್ಕಿಂತ ಎಂಟು ಪಟ್ಟು ಹೆಚ್ಚು.

ಪಕ್ಷಿಯ ರೆಕ್ಕೆಗಳು ದೋಣಿಯ ಹುಟ್ಟಿನಂತೆ ಕೆಲಸ ಮಾಡುತ್ತವೆ. ಮೊದಲು ರೆಕ್ಕೆಗಳನ್ನು ಮೇಲಕ್ಕೆತ್ತಿ, ಅದರ ಮಧ್ಯಭಾಗವನ್ನು ಉಬ್ಬಿಸಿ, ಗಾಳಿಯನ್ನು ಕೆಳಕ್ಕೆ ಅದುಮಿ ನೆಲದಿಂದ ಮೇಲೇಳುತ್ತದೆ.



ಅನಂತರ ರೆಕ್ಕೆಗಳನ್ನು ರಪರಪನೆ ಬಡಿದು ಆಕಾಶಕ್ಕೇರುತ್ತದೆ. ಇದಕ್ಕೆ 'ಉಡ್ಡಯನ' (Active flight) ಎಂದು ಹೆಸರು. ರಪರಪನೆ ಬಡಿಯುವ ರೆಕ್ಕೆಗಳನ್ನು ಕೂಲಂಕುಷವಾಗಿ ನೋಡಿದಾಗ ಅವುಗಳ ಚಲನೆ ಎರಡು ವಿಧವಾಗಿರುತ್ತದೆ. ರೆಕ್ಕೆಗಳನ್ನು ಎತ್ತಿ ಮುಂದೆ ಚಾಚಿದಾಗ ಪ್ರಾಥಮಿಕ ಗರಿಗಳು ಬಿಡಿಬಿಡಿಯಾಗಿ ಗಾಳಿ ಒಳಸೇರಲು ಅನುವು ಮಾಡಿ ಕೊಡುತ್ತವೆ. ಕೆಳಕ್ಕೆ ಬಡಿದಾಗ ಗರಿಗಳು ಒಂದಕ್ಕೊಂದು ಕೂಡಿ ಕೊಂಡು ಗಾಳಿಯನ್ನು ಹಿಂದಕ್ಕೆ ತಳ್ಳುತ್ತವೆ. ಇದರಿಂದ ಉಡ್ಡಯನ ಸಾಧ್ಯವಾಗುತ್ತದೆ. ಈ ರೀತಿ ರೆಕ್ಕೆಗಳ ಚಲನೆ ಒಂದು ರೀತಿಯ ವೃತ್ತಾಕಾರದ ಚಲನೆಯಾಗಿರುತ್ತದೆ. ಸೂಕ್ತ ಎತ್ತರವನ್ನು ತಲುಪಿದ ಹಕ್ಕಿ ರೆಕ್ಕೆಗಳನ್ನು ಬಿಚ್ಚಿ ಹಿಡಿದು ತೇಲುತ್ತದೆ. ಒಂದೊಂದು ಬಾರಿ ಸಾಕಷ್ಟು ಸಮಯದ ವರೆಗೆ ಅಲುಗಾಡದೆ ಸ್ತಬ್ಧವಾಗಿ ನಿಲ್ಲುತ್ತದೆ. ಆಗ ಅದಕ್ಕೆ ಬೇಕಾದ ಶಕ್ತಿ ಗಾಳಿಯಿಂದಲೇ ಒದಗುತ್ತದೆ. ಗಾಳಿಯ ಸಾಂದ್ರತೆಯನ್ನು ಅನುಸರಿಸಿ ಅವಶ್ಯವಾದಾಗ ರೆಕ್ಕೆಗಳನ್ನು ಬಡಿಯುತ್ತ, ತೇಲುತ್ತ ಹೋಗುತ್ತದೆ. ಈ ಬಗೆಯ ಹಾರಾಟಕ್ಕೆ 'ವಿಸರ್ಪಣ' (Gliding flight) ಎಂದು ಹೆಸರು. ಇಳಿಯುವಾಗ ರೆಕ್ಕೆ ಮಡಿಚಿ ಗಂಭೀರವಾಗಿ ಕೆಳಕ್ಕಿಳಿಯುತ್ತದೆ.

ಪ್ರಾಚೀನ ಪಕ್ಷಿಗಳಲ್ಲಿ ಉಡ್ಡಯನ ಸಾಮಾನ್ಯವಾಗಿತ್ತು. ಕಾಲಕ್ರಮದಲ್ಲಿ ಮೈ ಹಗುರವಾದಂತೆ ರೆಕ್ಕೆಗಳ ಹರವು ಹೆಚ್ಚಾದಂತೆ ವಿಸರ್ಪಣ ಪ್ರಮುಖವಾಗುತ್ತ ಬಂದಿತು. ಉಡ್ಡಯನ ವಿಸರ್ಪಣಗಳ ಅನುಪಾತವೇ (Ratio) ಪಕ್ಷಿಗಳ ಯಶಸ್ವೀ ಹಾರಾಟದ ಸೂತ್ರ. ಗಿಡುಗವು ಗಂಟೆಗೆ ೬೫ ಮೈಲು ವೇಗದಲ್ಲಿ ಆಕಾಶದಿಂದ ನೇರವಾಗಿ ಕೆಳಕ್ಕಿಳಿಯಬಲ್ಲದು. ಸ್ವ್ಯಾಲೋ ಗಂಟೆಗೆ೧೧೦ ಮೈಲು ವೇಗದಲ್ಲಿ ಹಾರಬಲ್ಲದು. ಪ್ರಾಣಿ ಪ್ರಪಂಚದಲ್ಲಿಯೇ ಅತ್ಯಂತ ವೇಗದಲ್ಲಿ ಹಾರುವ ಪಕ್ಷಿ ಮುಳ್ಳುಬಾಲದ ಸ್ವಿಫ್ಟ್: ಅದರ ವೇಗ ಗಂಟೆಗೆ ೨೦೯ ಮೈಲು !

ಪ್ರಕೃತಿಯ ಕೊಡುಗೆಗಳಾದ ಈ 'ಹಾರುಯಂತ್ರಗಳು' ಸರೀಸೃಪಗಳಿಂದ ಹುಟ್ಟಿ ಬಂದವು ಎಂಬುದಕ್ಕೆ ಸಾಕ್ಷಿಯಾಗಿ ೧೮೬೧ರಲ್ಲಿ ಬವೇರಿಯದಲ್ಲಿ ಒಂದು ಪಳೆಯುಳಿಕೆ ದೊರಕಿತು. 'ಆರ್ಕಿಯೋಪ್ಟೆರಿಕ್ಸ್' ಎಂಬುದು ಅದರ ಹೆಸರು. ಸರೀಸೃಪಕ್ಕಿರುವ ಹಲ್ಲುಗಳು ಅದಕ್ಕಿದ್ದವು. ಪಕ್ಷಿಗಿರುವ ಗರಿಗಳೂ ಅದರ ಮುಂಗಾಲುಗಳ ಮೇಲಿದ್ದವು. ಹೀಗೆ ಈ ಪಳೆಯುಳಿಕೆಯು ಸರೀಸೃಪ ಹಾಗೂ ಪಕ್ಷಿ ವರ್ಗಗಳ ಕೊಂಡಿಯಂತೆ ಇರುವುದಲ್ಲದೆ ಇಂದಿನ 'ಗರಿಹೊದಿಕೆಯ ದ್ವಿಪಾದಿ'ಗಳಿಗೆ ಮಾತೃಜೀವಿಯೂ ಆಗಿತ್ತು ಎಂಬುದರಲ್ಲಿ ಸಂಶಯವಿಲ್ಲ. ಆದರೆ ಆರ್ಕಿಯೊಪ್ಟೆರಿಕ್ಸ್‌ದ ಪೂರ್ವಜಪ್ರಾಣಿ ಯಾವುದು ? ಅದಿನ್ನೂ ಬಿಡಿಸಲಾಗದ ಸಮಸ್ಯೆಯಾಗಿದೆ.

***

೧೮. ಜಲವಾಸಿ ಸ್ತನಿಗಳು

ಸ್ತನಿಗಳನ್ನು ಯಾರು ತಾನೇ ನೋಡಿಲ್ಲ ? ನಾವು ಮಾನವರು ಸ್ತನಿಗಳೇ ಅಲ್ಲವೇ? ಸುತ್ತಲೂ ಸಾಮಾನ್ಯವಾಗಿ ಕಾಣುವ ದನ, ಕುರಿ, ಕತ್ತೆ, ಕುದುರೆ, ವಾನರುಗಳು ಸ್ತನಿಗಳೇ. ಅಲ್ಲದೆ ಕಾಡು ಕಣ್ಮಣಿಗಳಾದ ಹುಲಿ, ಸಿಂಹ, ಚಿರತೆ, ಜಿಂಕೆಗಳೂ, ಜಲವಾಸಿಗಳಾದ ತಿಮಿಂಗಲ, ಡಾಲ್ಫಿನ್, ಡ್ಯೂಗಾಂಗ್‌ಗಳು ಕೂಡ ಸ್ತನಿಗಳು.

ಹೆಸರೇ ಸೂಚಿಸುವಂತೆ ಈ ಪ್ರಾಣಿಗಳಲ್ಲಿ ಸ್ತನ್ಯಗ್ರಂಥಿಗಳಿವೆ. ಅವು ಸ್ರವಿಸುವ ಹಾಲಿನಿಂದ ತಾಯಿಯು ತನ್ನ ಮರಿಗಳಿಗೆ ಉಣಿಸಿ, ಪೋಷಿಸಿ ಬೆಳೆಸುತ್ತದೆ. ಇದಲ್ಲದೆ, ಇತರ ಕಶೇರುಕಗಳಿರದ ಕೆಲವು ವಿಶಿಷ್ಟ ಲಕ್ಷಣಗಳೂ ಸ್ತನಿಗಳಲ್ಲಿವೆ. ಹೊರಮೈಯನ್ನಾವರಿಸಿದ ಕೂದಲು, ಭಿನ್ನ ರೂಪದ ಹಲ್ಲುಗಳು, ಹೊರಗಿವಿಗಳು, ಉದರ ಮಧ್ಯದ ವಪೆ ಎಂಬ ಸ್ನಾಯು ಪರದೆ, ವಿಕಸಿತವಾದ ದೊಡ್ಡ ಮಿದುಳು, ಈ ಮಿದುಳಿನ ಎರಡು ಭಾಗಗಳನ್ನು ಜೋಡಿಸುವ ಕಾರ್ಪಸ್ ಕಲೋಸಮ್ ಎಂಬ ನಾರಿನ ಮೂಟೆ ಮುಂತಾದ ವೈಶಿಷ್ಟ್ಯಪೂರ್ಣ ಗುಣಗಳು ಸ್ತನಿಗಳಲ್ಲಿ ಮಾತ್ರ ಕಂಡು ಬರುತ್ತವೆ.

ಆರು ಕೋಟಿ ವರುಷಗಳ ಪೂರ್ವದಲ್ಲಿ ಸರೀಸೃಪಗಳ ಉಪಶಾಖೆಯಾಗಿ ಕವಲೊಡೆದು ಇಂದು ಸ್ತನಿಗಳು ವಿಕಾಸದ ಅತ್ಯುನ್ನತ ಹಂತವನ್ನು ತಲುಪಿವೆ. ಪರಿಸರ ಹೊಂದಾಣಿಕೆಯ ಸಾಮರ್ಥ್ಯವೇ ಅವುಗಳ ಯಶಸ್ಸಿನ ಗುಟ್ಟು. ಅಂದಿನ ಆ ಭೀಕರ ಚಳಿಗಾಳಿಗೆ ಸರೀಸೃಪಗಳು ತತ್ತರಿಸಿ ಅವನತಿಗೆ ಕಾರಣವಾದರೆ, ಉಷ್ಣರಕ್ತದ ಸ್ತನಿಗಳು ತಮ್ಮ ರೋಮ ವ್ಯವಸ್ಥೆಯಿಂದ ದೇಹದ ಶಾಖವನ್ನು ಕಾಯ್ದುಕೊಂಡು ಅಭಿವೃದ್ಧಿ ಹೊಂದಿದವು. ಜೊತೆಗೆ ಅವುಗಳ ಬುದ್ಧಿಶಕ್ತಿಯೂ ಪರಿಸರ ಹೋರಾಟದಲ್ಲಿ ಸಹಕಾರಿಯಾಯಿತು. ಚೋಟುದ್ದದ ಇಲಿ ಭೂಪರಿಸರದ ಸಂದುಗೊಂದಿಗಳಲ್ಲಿ ಎಷ್ಟು ಯಶಸ್ವಿಯಾಗಿ ಜೀವಿಸುತ್ತದೋ ಅಷ್ಟೇ ಯಶಸ್ವಿಯಾಗಿ




ವಾಲರಸ್

ದೈತ್ಯಾಕಾರದ ತಿಮಿಂಗಿಲವೂ ವಿಶಾಲವಾದ ಜಲ ಪರಿಸರದಲ್ಲಿ ಬಾಳುತ್ತದೆ. ಭೀಮಾಕಾರದ ಆನೆ ಕಾಡಿನಲ್ಲಿ ಅಭಿವೃದ್ಧಿಯನ್ನು ಹೊಂದಿದಷ್ಟೇ ಒಂದು ಔಂಸು ತೂಗುವ ತೊಗಲುಬಾವಲಿಯೂ ವಾಯು ಜೀವನಕ್ಕೆ ಯಶಸ್ವಿಯಾಗಿ ಹೊಂದಿಕೊಂಡಿದೆ.

ಹೀಗೆ ಸ್ತನಿಗಳು ಭೂ, ವಾಯು, ಜಲ- ಈ ಮೂರೂ ಪರಿಸರಗಳಿಗೆ ಹೊಂದಿಕೊಂಡು ತಮ್ಮೊಳಗಿನ ಅಂತರ ಪ್ರಭೇದ ಹೋರಾಟವನ್ನು ತಗ್ಗಿಸಿಕೊಂಡಿವೆ. ಜಲಚರ ಸ್ತನಿಗಳ ಉಗಮವಾದುದೇ ಹೀಗೆ. ಭೂವಾಸಿಗಳ ಸಂಖ್ಯೆ ಹೆಚ್ಚಾದಾಗ, ಕೆಲ ಸ್ತನಿಗಳು ನೀರಿಗೆ ಧುಮುಕಿ ಹೊಸ ಜೀವನಕ್ಕೆ ಹೊಂದಿಕೊಂಡವು. ಅಳಿವು ಉಳಿವಿನ ಹೋರಾಟದಲ್ಲಿ ತಾವೂ ಬದುಕಿ ತಮ್ಮ ಭೂವಾಸೀ ಬಂಧುಗಳನ್ನೂ ಬದುಕಿಸಿದವು. ಹೀಗೆ ಜಲವಾಸೀ ಸ್ತನಿಗಳು ಆನುಷಂಗಿಕವಾಗಿ ಪರಿಸ್ಥಿತಿ ಒತ್ತಡಕ್ಕೆ ತಲೆಬಾಗಿ ಜಲವಾಸಿಯಾದವು.

ಜಲ ಸ್ತನಿಗಳ ಪ್ರಭೇದಗಳು ತುಂಬ ವಿರಳ. ತಿಮಿಂಗಿಲ, ಹಂದಿಮೀನು, ಸೀಲ್, ವಾಲ್ರಸ್, ಡ್ಯೂಗಾಂಗ್, ಮಾನಟೀ, ಸಮುದ್ರ ಹಂದಿ, ಪ್ಲಾಟಿಪಸ್- ಹೀಗೆ ಬೆರಳಿನಿಂದ ಎಣಿಸಬಹುದಾದಷ್ಟು. ಇವೆಲ್ಲವುಗಳಲ್ಲಿ ಮನುಷ್ಯನ ಕುತೂಹಲ ವನ್ನು ಕೆರಳಿಸಿದ ಜಲಜೀವಿಯೆಂದರೆ ತಿಮಿಂಗಿಲ. ಏಕೆಂದರೆ ಇದು ಕೇವಲ ತನ್ನ ದೈತ್ಯಾಕಾರದಿಂದ ಶತಮಾನಗಳುದ್ದಕ್ಕೂ ಹಲವಾರು ಕಟ್ಟುಕತೆಗಳಿಗೆ, ವಿಚಿತ್ರ ಕಲ್ಪನೆಗಳಿಗೆ ಎಡೆಗೊಟ್ಟ ಪ್ರಾಣಿ. ಗಾತ್ರದಲ್ಲಾಗಲಿ, ತೂಕದಲ್ಲಾಗಲಿ ಇದನ್ನು ಮೀರಿಸುವ ಪ್ರಾಣಿ ಈ ಜೀವ ಜಗತ್ತಿನಲ್ಲಿಲ್ಲ ! ಅಂಟಾರ್ಕಟಿಕ್ ಸಾಗರದಲ್ಲಿ ಹಿಡಿಯ ಲಾದ ಒಂದು ತಿಮಿಂಗಿಲದ ಉದ್ದಳತೆ೧೨೪ ಅಡಿ ಹಾಗೂ ತೂಕ೧೫೦ ಟನ್ ಇತ್ತೆಂದು ವರದಿಯಾಗಿದೆ. ನೋಡಲು



ಸಮುದ್ರ ಸಿಂಹ


ಇದು ಬೃಹತ್ ಮೀನಿನಂತೆ ಕಾಣುವುದರಿಂದ ಇಂದಿಗೂ ಮೀನುಗಾರರು ಇದನ್ನು ತಪ್ಪಾಗಿ ಭೂತ ಮೀನು ಎಂದೇ ಕರೆಯುವರು.

ಭೂಚರ ಚತುಷ್ಪಾದಿಗೂ ತಿಮಿಂಗಿಲಕ್ಕೂ ವಿಶೇಷ ವ್ಯತ್ಯಾಸವಿಲ್ಲ. ಇದರದೂ ಉಷ್ಣ ರಕ್ತ. ಉಸಿರಾಟ ಪುಪ್ಪುಸಗಳ ಮೂಲಕ. ಅದಕ್ಕಾಗಿ ಪ್ರತಿ ೩೦-೪೦ ನಿಮಿಷಗಳಿಗೊಮ್ಮೆ ನೀರ ಪಾತಳಿಯ ಮೇಲೆ ಬರುವುದುಂಟು. ಮೂಗಿನ ರಂಧ್ರಗಳು ತಲೆಯ ಮೇಲ್ಭಾಗದಲ್ಲಿ. ಪ್ರೌಢ ತಿಮಿಂಗಿಲದ ಮೈಮೇಲೆ ಕೂದಲುಗಳಿಲ್ಲ. ಆದರೆ ಗರ್ಭದಲ್ಲಿರುವ ಮರಿಗೆ ದಟ್ಟ ಕೂದಲಿನ ಹೊದಿಕೆ. ಮುಂಗಾಲುಗಳು ಈಜು ಅವಯವಗಳಾಗಿ ಮಾರ್ಪಾಟು ಹೊಂದಿದರೆ ಹಿಂಗಾಲುಗಳು ನೀರಿನ ಪ್ರತಿರೋಧವನ್ನು ತಗ್ಗಿಸಲು ಚರ್ಮದೊಳಕ್ಕೆ ಅಡಗಿವೆ. ಗುಂಪುಗೂಡಿ ಗಂಟೆಗೆ ೨೨ ಮೈಲು ವೇಗದಲ್ಲಿ ಚಲಿಸುತ್ತ, ಆಗಾಗ ನೀರಿನ ಪಾತಳಿಯ ಮೇಲೆದ್ದು ಕವಾಯತು ಮಾಡುವ ಮಕ್ಕಳಂತೆ ಸಾಮೂಹಿಕವಾಗಿಯೇ ಮುಳುಗುವ ದೃಶ್ಯ ನಿಜವಾಗಿಯೂ ಪ್ರೇಕ್ಷಣೀಯವಾದದ್ದು.

ತಿಮಿಂಗಿಲಗಳಲ್ಲಿ ಎರಡು ಜಾತಿಗಳು : ಹಲ್ಲುಗಳಿರುವ ಒಂದು ಜಾತಿ, ಹಲ್ಲುಗಳಿರದ ಇನ್ನೊಂದು ಜಾತಿ. ಸ್ಪರ್ಮ್ ತಿಮಿಂಗಿಲ, ನಾರ್ ತಿಮಿಂಗಿಲ, ಬಿಳಿ ತಿಮಿಂಗಿಲ, ಕಿಲರ್ ತಿಮಿಂಗಿಲ ಮುಂತಾದವು ಹಲ್ಲುಗಳಿರುವ ತಿಮಿಂಗಿಲಗಳು. ಸ್ಪರ್ಮ್ ತಿಮಿಂಗಿಲದ ಹೊರತಾಗಿ ಉಳಿದವುಗಳಿಗೆ ಉತ್ತರ ದಕ್ಷಿಣ ಶೀತ ಸಾಗರಗಳೇ ತವರು ಮನೆ. ಇವುಗಳಿಗೆ ಮೂಗಿನ ರಂಧ್ರಗಳ ಮಧ್ಯೆ ಒಂದು ದೊಡ್ಡ ರಂಧ್ರವಿದೆ. ತಿಮಿಂಗಿಲ ಉಸಿರು ಬಿಟ್ಟಾಗ ಬಾಯೊಳಗಿನ ನೀರು ಈ ರಂಧ್ರದಿಂದ ಬಹುದೂರಕ್ಕೆ ಚಿಮ್ಮುತ್ತದೆ. ಕಾರಂಜಿಯಂತೆ ಪುಟಿಯುವ ಈ ಮನೋಹರ ದೃಶ್ಯವೇ ಮೃತ್ಯುದೇವತೆಗೆ ಆಹ್ವಾನವಿತ್ತಂತೆ ಎಂಬ ವಾಸ್ತವಿಕ ಸತ್ಯ ಆ ಮುಗ್ಧ ಪ್ರಾಣಿಗೆ ಹೇಗೆ ಗೊತ್ತಾದೀತು ? ಇಂಥ ಸುಳಿವು ಸಿಕ್ಕುತ್ತಲೇ ಬೇಟೆಗಾರರು ಅದನ್ನು ಬೆನ್ನಟ್ಟುವುದುಂಟು.

ನೀಲ ತಿಮಿಂಗಿಲ, ರೆಕ್ಕೆ ತಿಮ್ಮಿಂಗಿಲ, ಬೂದು ತಿಮಿಂಗಿಲ ಮುಂತಾದವು ಹಲ್ಲುಗಳಿಲ್ಲದ ತಿಮಿಂಗಿಲಗಳು. ಹಲ್ಲುಗಳ ಬದಲು ಬಲೀನ್ ಅಥವಾ ವ್ಹೇಲ್ ಬೋನ್ ಎಂಬ ಕೊಂಬಿನಂತಹ ವಸ್ತುವಿನಿಂದ ಮಾಡಿದ ಕಡ್ಡಿಗಳ ಪರದೆ ಇವುಗಳ ಬಾಯಿಯಲ್ಲಿ ಜೋತು ಬಿದ್ದಿರುತ್ತದೆ. ೩೭೦ ಕಡ್ಡಿಗಳಿಂದಾದ ಈ ಪರದೆ ಸುಮಾರು ೧೨ ಅಡಿ ಉದ್ದವಾಗಿರುತ್ತದೆ. ಬಾಯಿಯಲ್ಲಿ ನೀರು ತುಂಬಿಕೊಂಡು ಬಲೀನ್ ಮೂಲಕ ಹೊರ

ಚೆಲ್ಲುವಾಗ ನೀರಷ್ಟೇ ಹೊರಹೋಗಿ ಒಳಬಂದ ಪ್ರಾಣಿಗಳು ಒಳಗೇ ಉಳಿದು ತಿಮಿಂಗಿಲಕ್ಕೆ ಆಹಾರವಾಗುತ್ತವೆ. ತಿಮಿಂಗಿಲಗಳು ಸೂಕ್ಷ್ಮಾಣುಜೀವಿಯಿಂದ ಹಿಡಿದು ತನ್ನ ದೇಹ ಗಾತ್ರಕ್ಕಿಂತಲೂ ದೊಡ್ಡದಾದ ಸ್ವಜಾತಿ ಪ್ರಾಣಿಯನ್ನು ಕೂಡ ಕಬಳಿಸಬಲ್ಲವು. ಕಿಲರ್ ತಿಮಿಂಗಿಲದ ಸ್ವಾದಿಷ್ಟ ಭೋಜನ ಯಾವುದು ಗೊತ್ತೆ ? ನೀಲ ತಿಮಿಂಗಿಲದ ೨ ಟನ್ ತೂಕದ ನಾಲಗೆ! ಕಿಲರ್ ತಿಮಿಂಗಿಲಗಳ ಒಂದು ಗುಂಪು ನೀಲ ತಿಮಿಂಗಿಲವನ್ನು ಮುತ್ತಿ, ಕಾಡಿಸಿ, ಕಚ್ಚಿ ಪೀಡಿಸುವಾಗ ನೀಲ ತಿಮಿಂಗಿಲವು ಗಾಬರಿಯಿಂದ ತನ್ನ ನಾಲಗೆಯನ್ನು ಹೊರ ತೆಗಯುತ್ತದಷ್ಟೇ. ಆಗ ಅದರ ಕತೆ ಮುಗಿದಂತೆಯೇ. ಕಿಲರ್ ತಿಮಿಂಗಿಲ ಗಳು ಕೂಡಲೇ ಅದರ ನಾಲಗೆಯನ್ನು ಕತ್ತರಿಸಿಕೊಂಡು ತಮ್ಮ ನಾಲಗೆಗಳನ್ನು ಚಪ್ಪರಿಸಿ ಕೊಳ್ಳುತ್ತವೆ!


ಸೀಲ್


ತಿಮಿಂಗಿಲವು ಒಂದು ಬಾರಿಗೆ ಒಂದೇ ಮರಿಯನ್ನು ಕೊಡುತ್ತದೆ. ನೀಲ ತಿಮಿಂಗಿಲದ ಮರಿ ಹುಟ್ಟಿದಾಗಲೇ ೨೦ ಅಡಿ ಉದ್ದ ೪ ಟನ್ ತೂಕದ್ದಿರುತ್ತದೆ. ತಾಯಿ ಸ್ತನಿ ಒಮ್ಮೊಮ್ಮೆ ಬೋರಲಾಗಿ ಮಲಗಿ ಮರಿಯನ್ನು ಹೊಟ್ಟೆಯ ಮೇಲೆ ತೆಗೆದುಕೊಂಡು ಹಾಲುಣಿಸುತ್ತದೆ. ಮರಿಗೆ ಒಂದೇ ಸಲಕ್ಕೆ ೧೦ ಪೌಂಡು ಹಾಲು ದೊರೆಯುತ್ತದೆ.

ತಿಮಿಂಗಿಲಗಳಲ್ಲಿ ಮಾನವನ ಆಸಕ್ತಿ ಆರ್ಥಿಕ ವಿಷಯದ್ದು. ಅದರ ಚರ್ಮದಡಿ ೮-೧೦ ಅಂಗುಲ ದಪ್ಪ ಕೊಬ್ಬಿನ ಪದಾರ್ಥವಿದ್ದು ಅದು ಮೈಯನ್ನು ಬೆಚ್ಚಗಿಡಲು ನೆರವಾಗಿದೆ. ಈ ಕೊಬ್ಬಿನಿಂದ ತಯಾರಿಸಿದ ಮೇಣಬತ್ತಿಗಳು ಪಾಶ್ಚಿಮಾತ್ಯರ ಮನೆ ಬೆಳಗಿಸಿವೆ. ಬಲೀನ್‌ಗಳಿಂದ ತಯಾರಿಸುವ ಆಭರಣಗಳು ಮಹಿಳೆಯರ ಸೊಂಟದ ಸೌಂದರ್ಯವನ್ನು ಹೆಚ್ಚಿಸಿವೆ. ಅದರ ಹೊಟ್ಟೆಯಲ್ಲಿ ದೊರೆಯುವ ಅಂಬರ್ ಗ್ರೀಸ್

ಎಂಬ ಪರಿಮಳ ದ್ರವ್ಯವಂತೂ ಬಹು ಅಮೂಲ್ಯವಾದುದು.

ಮಾನವನು ಕಳೆದ ಒಂದು ಸಾವಿರ ವರುಷಗಳಿಂದಲೂ ತಿಮಿಂಗಿಲಗಳ ಬೇಟೆಯಾಡುತ್ತ ಬಂದಿದ್ದಾನೆ. ೧೯೪೭ರಲ್ಲಿ ಕೊಲ್ಲಲಾದ ತಿಮಿಂಗಿಲಗಳ ಸಂಖ್ಯೆ ೩೬೦೦೦ಕ್ಕೂ ಮಿಕ್ಕಿತ್ತೆಂದರೆ ಅವುಗಳ ಸಾಮೂಹಿಕ ಕೊಲೆಯ ಕಲ್ಪನೆ ಬರಬಹುದು. ಈಗಾಗಲೇ ಹಲವು ಪ್ರಭೇಧಗಳು ಕಾಣಸಿಗುತ್ತಿಲ್ಲ!

ಡಾಲ್ಫಿನ್ ಆರು ಅಡಿ ಗಾತ್ರದ ಜಲ ಸ್ತನಿ. ಇದು ಬಾತುಕೋಳಿ ಮುಖದ ವಿಚಿತ್ರ ಆಕಾರದ ಪ್ರಾಣಿ. ಇದರ ಆಟ ಆಕರ್ಷಕ. ಸ್ವಲ್ಪ ಮಟ್ಟಿಗೆ ಬುದ್ಧಿ ಜೀವಿ ಕೂಡ. ಮನುಷ್ಯನ ಜೊತೆಗೆ ಆಟವಾಡುವುದು ಇದಕ್ಕೊಂದು ಮೋಜು. ಆಗ ಇದರ ಮುಖ ನೋಡಬೇಕು. ನಕ್ಕಂತೆಯೇ ಕಾಣುವುದು. ಇದು ಕೂಡ ತಿಮಿಂಗಿಲದಂತೆ ಗುಂಪಿನೊಂದಿಗೆ ನೀರ ಪಾತಳಿಯ ಮೇಲೆ ಎದ್ದು ಮುಳುಗುವ ದೃಶ್ಯ ಕಣ್ಣಿಗೊಂದು ಹಬ್ಬ. ಪೋರ್ಪೊಯ್ಸ್ ಎಂಬ ಸಮುದ್ರ ಹಂದಿಯೂ ಇದೇ ಜಾತಿಗೆ ಸೇರಿದ ಇನ್ನೊಂದು ಸ್ತನಿ. ಸೀಲ್ ಎಂಬ ಸಮುದ್ರವಾಸಿ ಸ್ತನಿ ೪-೫ ಅಡಿಗಳಷ್ಟು ಉದ್ದ ಬೆಳೆಯುತ್ತದೆ. ಇದಕ್ಕೂ ಹೊರಗಿವಿಗಳಿಲ್ಲ. ಮುಂಗಾಲುಗಳು ಈಜು ರೆಕ್ಕೆಗಳಾಗಿ ರೂಪುಗೊಂಡಿವೆ. ಹಿಂಗಾಲುಗಳು ಬಾಲದೊಂದಿಗೆ ಒಂದಾಗಿ ಶಕ್ತಿಯುತ ಈಜು ರೆಕ್ಕೆಯನ್ನು ನಿರ್ಮಿಸಿವೆ. ದಿಂಡಿನಾಕಾರದ ದೇಹವು ನೀರಿನ ಪ್ರತಿರೋಧಕ ಶಕ್ತಿಯನ್ನು ತಗ್ಗಿಸಿ ಸಲೀಸಾಗಿ ಈಜಲು ನೆರವಾಗಿದೆ. ಹಾಲುಹಲ್ಲುಗಳು ಮರಿ ಅವಸ್ಥೆಯಲ್ಲಿಯೇ ಬಿದ್ದುಹೋಗಿರುತ್ತವೆ. ಬಹುಪತ್ನಿತ್ವ ಜೀವನಕ್ಕೆ ಒಗ್ಗಿಕೊಂಡ ಈ ಪ್ರಾಣಿಗಳು ಸಂಘಜೀವಿಗಳು. ಗಂಡುಜೀವಿ ಹೆಣ್ಣುಜೀವಿಗಿಂತ ಗಾತ್ರದಲ್ಲಿ




ತಿಮಿಂಗಿಲ

ಬಹುಪಾಲು ದೊಡ್ಡದು. ಉತ್ತರದ ಬಂಡೆಗಲ್ಲುಗಳ ದ್ವೀಪಗಳಲ್ಲಿ ಇವುಗಳ ಸಂತಾನೋತ್ಪತ್ತಿ. ತುಪ್ಪಳ ಚರ್ಮದ ತೃಷೆಯಿಂದ ಮಾನವನು ಇವುಗಳ ಅವ್ಯಾಹತ ಬೇಟೆಯಾಡಿದ್ದರ ಫಲವಾಗಿ ಸೀಲ್ ಸ್ತನಿಗಳ ಸಂಖ್ಯೆ ಬಹಳಷ್ಟು ನಶಿಸಿದೆ. ಆದರೂ ಇತ್ತೀಚೆಗೆ ತೆಗೆದುಕೊಂಡ ಕೆಲ ಸಂರಕ್ಷಣಾ ಕ್ರಮಗಳಿಂದ ಅವುಗಳ ಸಂಖ್ಯೆ ತಕ್ಕಮಟ್ಟಿಗೆ ವೃದ್ಧಿಸತೊಡಗಿದೆ.

ಇದೇ ಜಾತಿಗೆ ಸೇರಿದ ವಾಲ್ರಸ್ ಧ್ರುವ ಪ್ರದೇಶದ ಕಡಲತೀರದಲ್ಲಿ ವಾಸಿಸುವ ಇನ್ನೊಂದು ದೈತ್ಯ ಸ್ತನಿ. ಇದನ್ನು ಸಮುದ್ರಸಿಂಹವೆಂತಲೂ ಕರೆಯುತ್ತಾರೆ. ಬಹುಶಃ ಬಾಯಿಯಿಂದ ಕೆಳಕ್ಕೆ ಜೋತುಬಿದ್ದ ಮೂರುವರೆ ಅಡಿ ಉದ್ದದ ಅದರ ಎರಡು ಕೋರೆಹಲ್ಲುಗಳು, ಮೇಲ್ತುಟಿಯ ಮೇಲಿನ ಬಿರುಗೂದಲಿನ ದಟ್ಟ ಮೀಸೆ, ೧೫ ಅಡಿ ಉದ್ದ, ३,೦೦೦ ಪೌಂಡು ತೂಕದ ಗಾತ್ರ ಇಂಥ ಅನ್ವರ್ಥಕ ಹೆಸರಿಗೆ ಕಾರಣವಾಗಿರಬೇಕು. ಆದರೆ ಸ್ವಭಾವದಲ್ಲಿ ಇದು ತುಂಬ ಸಭ್ಯ ಪ್ರಾಣಿ. ಬೇರಾವುದೇ ಪ್ರಾಣಿಯಿಂದ ಆಕ್ರಮಣವಾದರೆ ಮಾತ್ರ ಕಾಳಗಕ್ಕೆ ಇಳಿಯುತ್ತದೆ. ಮೇ ತಿಂಗಳಲ್ಲಿ ವಲಸೆ ಹೋಗಿ ಮರಿ ಹಾಕುತ್ತದೆ. ಮರಿ ದೊಡ್ಡದಾಗುವ ವರೆಗೆ ತಾಯಿಯ ಹೊಟ್ಟೆಗೆ ಅಂಟಿಕೊಂಡೇ ಇರುತ್ತದೆ. ಎಸ್ಕಿಮೋ ಜನರು ಬೇಟೆಯಾಡಿ ಇದರ ಮಾಂಸ ತಿನ್ನುತ್ತಾರೆ. ಚರ್ಮದಿಂದ ಉಡುಪು ತಯಾರಿಸಿಕೊಳ್ಳುತ್ತಾರೆ. ಕೊಬ್ಬು ತೆಗೆದು ದೀಪ ಉರಿಸುತ್ತಾರೆ,.

ಡ್ಯೂಗಾಂಗ್, ಮಾನಟೀ ಪ್ರಭೇದಗಳೂ ಸಮುದ್ರ ಸ್ತನಿಗಳೇ. ಪೌರಸ್ತ್ಯ ದೇಶಗಳು, ಆಸ್ಟ್ರೇಲಿಯ ಇವುಗಳ ತವರೂರು. ಇವು ಗೊರಸುಳ್ಳ ಸ್ತನಿಗಳ ಜಲ-ಉಪಶಾಖೆಯೆಂದೂ, ಆನೆಯ ವರ್ಗ ಸಂಬಂಧಿಗಳೆಂದೂ ಹೇಳಲಾಗುತ್ತಿದೆ. ಇವು ಕೂಡ ಬೃಹತ್ ಗಾತ್ರದ, ಕೇಶರಹಿತ ಪ್ರಾಣಿಗಳು. ಹಿಂಗಾಲುಗಳಿಲ್ಲ. ಬಾಲವು ಅಗಲವಾಗಿ



ಡಾಲ್ಫಿನ್

ಈಜು ರೆಕ್ಕೆಯಾಗಿದೆ. ಮತ್ಸ್ಯ ಕನ್ಯೆಯ ದಂತ ಕಥೆಗಳಿಗೆ ವಸ್ತುವಾದ ಪ್ರಾಣಿಯೇ ಡ್ಯೂಗಾಂಗ್. ತಾಯಿ ಸ್ತನಿ ಮರಿಗೆ ಹಾಲುಣಿಸಲು ಒಂದು ಈಜು ರೆಕ್ಕೆಯಿಂದ ಮರಿಯನ್ನು ಎದೆಗೆ ಅವಚಿಕೊಂಡು, ಇನ್ನೊಂದು ಈಜುರೆಕ್ಕೆಯಿಂದ ಈಜುವ ಚಿತ್ರ ಮಾನವ ಹೋಲಿಕೆ ತೋರಿಸುವುದರಿಂದ ಇಂಥ ಕಥೆಗಳು ಹುಟ್ಟಿಕೊಂಡಿರಬೇಕು. ಮಾನಟೀ ಎಂಬ ಸ್ತನಿ ಸಿಹಿ ನೀರಿನಲ್ಲಿ ವಾಸಿಸುವ ಪ್ರಾಣಿ. ಫ್ಲೋರಿಡಾ ಕರಾವಳಿಯ ಖಾರಿ (ಲಗೂನ್) ಗಳಲ್ಲಿ ತುಂಬಾ ಸಾಮಾನ್ಯ. ಇವುಗಳ ಮಾಂಸ ಬಲು ರುಚಿ.

ಪ್ಲಾಟಿಪಸ್ ಎಂಬುದು ಆಸ್ಟ್ರೇಲಿಯಾ, ಟಾಸ್ಮಾನಿಯ ಪ್ರದೇಶಗಳ ನದಿಗಳಲ್ಲಿ ಕಾಣಿಸುವ ಮೊಟ್ಟೆ ಇಡುವ ಒಂದು ವಿಚಿತ್ರ ಸ್ತನಿ. ಬಾತುಕೋಳಿಗಿರುವಂತೆ ಇದಕ್ಕೆ ಅಗಲ ಹಾಗೂ ಸಂವೇದನಾಶೀಲವಾದ ಕೊಕ್ಕು ಇದೆ. ಅದರ ಸಹಾಯದಿಂದ ಆಹಾರವನ್ನರಸಿ ಭಕ್ಷಿಸುತ್ತದೆ. ಬಲು ಹೊಟ್ಟೆಬಾಕ ಪ್ರಾಣಿ. ಪ್ರತಿದಿನ ತನ್ನ ತೂಕದ ೧/೩ ತೂಕದಷ್ಟು ಆಹಾರ ಸೇವಿಸುತ್ತದೆ. ಚಪ್ಪಟೆ ಮೈ, ಮೊಂಡು ಬಾಲ, ಹೊರಗಿವಿಗಳಿಲ್ಲದ ತಲೆ, ತಲೆಯ ಇಕ್ಕೆಲಗಳಲ್ಲಿ ಎರಡು ರಂಧ್ರಗಳು, ಕಾಲುಗಳಲ್ಲಿ ಐದೈದು ಉಗುರುಗಳು, ಅವುಗಳನ್ನು ಒಳಗೊಂಡ ಮುಂಚಾಚಿದ ಚರ್ಮದ ಪೊರೆ, ಹಿಂಗಾಲುಗಳಲ್ಲಿ ನಖಯುಕ್ತ ಬೆರಳುಗಳು - ಈ ಪ್ರಾಣಿಯ ಶರೀರ ರಚನಾ ವೈಶಿಷ್ಟ್ಯ. ಪ್ರೌಢ ಸ್ತನಿಗಳ ಬಾಯಲ್ಲಿ ಹಲ್ಲುಗಳಿಲ್ಲ. ಆದರೆ ಮೊಟ್ಟೆಯಿಂದ ಅದೇ ಹೊರಬಂದ ಮರಿಗಳ ಬಾಯಲ್ಲಿ ಹಲ್ಲುಗಳಿರುತ್ತವೆ. ಬಾಯಲ್ಲಿ ಕೊಕ್ಕು ಬೆಳೆಯುತ್ತ ಹೋದಂತೆ ಹಲ್ಲುಗಳು ನಶಿಸಿ ಹೋಗುತ್ತವೆ. ತಾಯಿ ಸ್ತನಿಯ ಉದರದ ಮೇಲೆ ಚದುರಿದಂತೆ ಸ್ತನ್ಯ ಗ್ರಂಥಿಗಳಿವೆ. ಅದು ಅಂಗಾತಾಗಿ ಮಲಗಿ ಮರಿಗಳನ್ನು ಉದರದ ಮೇಲೆ ಎಳೆದುಕೊಂಡು ಹಾಲುಣಿಸುತ್ತದೆ. ೧೮ನೆಯ ಶತಮಾನದ ಕೊನೆಯಲ್ಲಿ ಈ ಪ್ರಾಣಿಯ ಅವಶೇಷ ಯುರೋಪಿನ ವಿಜ್ಞಾನಿಗಳಿಗೆ ದೊರೆತಾಗ ಇಂಥದೊಂದು ಪ್ರಾಣಿ ಇದ್ದೀತೆಂದು ಅವರು ನಂಬಿರಲಿಲ್ಲ. ಅವಶೇಷ ಕೃತಕವೆಂದು ಶಂಕಿಸಿದರು. ಅದು ನಿಜವಾಗಿಯೂ ಜೀವಿಸುತ್ತಿರುವ ಸತ್ಯವನ್ನು ಆ ಮೇಲೆ ಕಂಡುಕೊಂಡರು.

ಜಲಚರ ಸ್ತನಿಗಳಿಂದಲೇ ಮಾನವನ ಉಗಮವಾಯಿತು ಎಂಬ ವಾದವೂ ಇದೆ. ಬ್ರಿಟಿಷ್ ವಿಜ್ಞಾನಿಯೊಬ್ಬರು ಈ ವಾದಕ್ಕೆ ಪುಷ್ಟಿ ನೀಡಿದ್ದರು. ಇಂಥ ವಿಕಾಸ ಪಥವನ್ನು ಕ್ರಮಿಸಲು ಕೋಟ್ಯಂತರ ವರುಷಗಳೇ ಹಿಡಿದಿರಬಹುದು. ವಿಚಿತ್ರವೆಂದರೆ ಇಷ್ಟು ವರುಷಗಳ ನಂತರವೂ ಮಾನವ ಶರೀರದಲ್ಲಿ ಜಲಚರ ಜೀವಿಗಳ ಕೆಲಗುಣಧರ್ಮಗಳು

ಅನೂಚಾನವಾಗಿ ಉಳಿದುಕೊಂಡು ಬಂದಿವೆ. ನಮ್ಮ ರಕ್ತ ಪ್ಲಾಸ್ಮಾದಲ್ಲಿನ ಲವಣ ಪ್ರಮಾಣಕ್ಕೂ, ಸಮುದ್ರ ನೀರಿನ ಲವಣ ಪ್ರಮಾಣಕ್ಕೂ ಅಂತರವಿಲ್ಲ. ಅಲ್ಲದೆ ಸಮುದ್ರ ಸ್ತನಿಗಳ ಚರ್ಮದಡಿ ಕಾಣುವ ಕೊಬ್ಬು ಮಾನವನಲ್ಲಿಯೂ ಇದೆ. ಜಲಜೀವಶಾಸ್ತ್ರಜ್ಞರು ಈ ದಿಶೆಯಲ್ಲಿ ಹಲವಾರು ಪ್ರಯೋಗಗಳನ್ನು ಕೈಕೊಂಡಿದ್ದಾರೆ. ಒಂದು ಇಲಿಯನ್ನು ನೀರಿನಲ್ಲಿ ಬಿಡಲಾಯಿತು. ಅದು ಮೀನಿನಂತೆ ನೀರನ್ನೇ ಉಸಿರಾಟದ ಮಾಧ್ಯಮವನ್ನಾಗಿ ಬಳಸಿಕೊಳ್ಳುವಂತೆ ಕೃತಕ ಪರಿಸರವನ್ನು ನಿರ್ಮಿಸಲಾಗಿತ್ತು. ಇಲಿಯು ನೀರಿನಿಂದಲೇ ಪ್ರಾಣವಾಯುವನ್ನು ದೊರಕಿಸಿಕೊಳ್ಳುವುದನ್ನು ಕಂಡು ವಿಜ್ಞಾನಿಗಳು ಬೆರಳು ಕಚ್ಚಿದರು. ತಿಮಿಂಗಿಲವು ಕೂಡ ಸುಮಾರು ಒಂದು ಗಂಟೆಯ ವರೆಗೂ ನೀರ ಪಾತಳಿಗೆ ಬಾರದೇ, ನೀರಿನೊಳಗೇ ಇದ್ದು ಉಸಿರಾಟ ಸಮಸ್ಯೆಯನ್ನು ಸಮರ್ಥವಾಗಿ ಎದುರಿಸಿದ ಬಗ್ಗೆ ಸಂಶೋಧನೆ ಕೈಕೊಂಡಾಗ ಅವು ಹೈಡ್ರೋಕಾರ್ಬನ್ ಯುಕ್ತವಾದ ಕೆಲ ವಸ್ತುಗಳನ್ನು ಸೇವಿಸುವದು ಕಂಡು ಬಂದಿತು. ಈ ರಾಸಾಯನಿಕಗಳು ಅವಾಯು ಅಣುಜೈವಿಕ ಭಸ್ಮೀಕರಣಕ್ಕೆ ಸಹಾಯಕವಾಗುವುದು ತಿಳಿಯಿತು. ಹೀಗಾಗಿ ತಿಮಿಂಗಿಲಗಳು ಸಾಗರದ ತಳದಲ್ಲಿ ಇದ್ದಾಗಲೂ ಈ ಆಹಾರ ಪದಾರ್ಥಗಳಿಂದಲೇ ಶರೀರಕ್ಕೆ ಅಗತ್ಯವಾದ ಪ್ರಾಣವಾಯುವನ್ನು ದೊರಕಿಸಿಕೊಳ್ಳುವುದು ಕಂಡು ಬಂದಿತು.

ಇಂಥ ಪ್ರಯೋಗಗಳು ಯಶಸ್ವಿಯಾದರೆ ಮಾನವನೂ ಮತ್ತೊಮ್ಮೆ ಜಲಚರ ಜೀವಿಯಾದಾನೇ ? ಜೀವ ನಿರ್ಮಾಣ ಹಾಗೂ ವಿಕಾಸ ನೀರಿನಲ್ಲಿಯೇ ಆರಂಭವಾಗಿರುವಾಗ, ಪುನರಪಿ ನಾವು ನಮ್ಮ ತವರಿಗೆ ಮರಳಿ ಹೋಗುವ ದಿನಗಳು ಬರಬಹುದಲ್ಲವೇ ? ಸಾಗರ ತಳದಲ್ಲಿ ನಗರಗಳನ್ನು ನಿರ್ಮಿಸಬಲ್ಲೆವಾದರೆ ಜನಸಂಖ್ಯಾ ಸಮಸ್ಯೆಗೂ ಪರಿಹಾರ ಸಿಕ್ಕಂತಲ್ಲವೇ ? ಈ ಎಲ್ಲ ಪ್ರಶ್ನೆಗಳಿಗೆ ಜಲಜೀವ ವಿಜ್ಞಾನಿ ಮಾತ್ರ ಉತ್ತರಿಸಿಯಾನು !

***

೧೯. ಪ್ರಾಣಿಗಳಲ್ಲಿ ಹೊಂದಾಣಿಕೆಯ ಅದ್ಭುತಗಳು


ಜೀವನಕ್ಕೆ ತತ್ಸಮಾನ ಅರ್ಥಕೊಡುವ ಇನ್ನೊಂದು ಶಬ್ದವೇ ಹೊಂದಾಣಿಕೆ. ಯಾವುದೇ ಜೀವಿ - ಸಸ್ಯವೇ ಇರಲಿ, ಪ್ರಾಣಿಯೇ ಇರಲಿ. ಬಾಳಿ ಬದುಕಿ ತನ್ನ ಸಂತತಿಯನ್ನು ಮುಂದುವರೆಸುತ್ತಿವೆ ಎಂದರೆ ಅದು ತನ್ನ ಪರಿಸರಕ್ಕೆ ಯಶಸ್ವಿಯಾಗಿ ಹೊಂದಿಕೊಂಡಿದೆ ಎಂದರ್ಥ. ಪರಿಸರದೊಂದಿಗೆ ಸಮರಸವಾಗುವುದು ಹೊಂದಾಣಿಕೆ ; ವಿರಸವಾಗುವುದು ಮರಣ. ''ರಸವೇ ಜನನ, ವಿರಸ ಮರಣ, ಸಮರಸವೇ ಜೀವನ'' ಎಂಬ ಬೇಂದ್ರೆ ವಾಣಿ ಪ್ರಕೃತಿಯ ಮೂಲ ಮಂತ್ರವನ್ನೇ ಉಸುರಿದೆಯೇನೊ!

ಪರಿಸರ ಎರಡು ತೆರನಾಗಿದೆ - ಬಾಹ್ಯ ಪರಿಸರ ಹಾಗೂ ಅಂತಃಪರಿಸರ. ಹುಟ್ಟಿದ ಪ್ರತಿಯೊಂದು ಜೀವಿಯೂ ಈ ಪರಿಸರದೊಂದಿಗೆ ನಿರಂತರವಾಗಿ ಸ್ಪಂದಿಸುತ್ತಲೇ ಇರುತ್ತದೆ. ಇದನ್ನೇ ಹೋರಾಟ ಎಂತಲೂ ಕರೆಯುತ್ತಾರೆ. ಇದು ತೂಕಬದ್ಧವಾಗಿಯೂ ಕ್ರಮ ಬದ್ಧವಾಗಿಯೂ ಇರುತ್ತದೆ. ಇಂಥ ಉಳಿವಿಗಾಗಿ ಹೊಸ ಅಂಗಾಂಗಗಳನ್ನು ಸೃಷ್ಟಿಸಿಕೊಳ್ಳುತ್ತವೆಂಬ ಕಲ್ಪನೆ ಮಾತ್ರ ತಪ್ಪು. ಇದ್ದ ಅಂಗಾಂಗಗಳಲ್ಲಿ ಕೆಲವೊಂದು ಮಾರ್ಪಾಟುಗಳನ್ನು ತಂದುಕೊಳ್ಳುತ್ತವಷ್ಟೇ. ಆಕಾಶ ಪರಿಸರಕ್ಕೆ ಯಶಸ್ವಿಯಾಗಿ ಹೊಂದಿಕೊಂಡ ಪಕ್ಷಿರೆಕ್ಕೆಗಳನ್ನು ಸೃಷ್ಟಿಸಿಕೊಳ್ಳಲಿಲ್ಲ; ಮುಂಗಾಲುಗಳಲ್ಲಿ ಮಾರ್ಪಾಟು ತಂದುಕೊಂಡು ರೆಕ್ಕೆಗಳಲ್ಲಿ ಪರಿವರ್ತಿಸಿಕೊಂಡಿತು. ಜಿರಾಫ್ ನೀಳವಾದ ಕುತ್ತಿಗೆಯನ್ನು ಸೃಷ್ಟಿಸಿಕೊಳ್ಳಲಿಲ್ಲ ; ಮರದೆಲೆಗಳಿಗಾಗಿ ಹಾತೊರೆದು ತನ್ನ ಕುತ್ತಿಗೆಯ್ನು ಚಾಚಿ ಚಾಚಿ ಹಲವು ವರುಷಗಳಲ್ಲಿ ಅದನ್ನು ನೀಳವಾಗಿ ಮಾಡಿಕೊಂಡಿತು. ಮರುಭೂಮಿಯ ಜಾಯಿಂಟ್ ಸಾಗ್ವರೋ ಎಂಬ ಕ್ಯಾಕ್ಟಸ್ ತನ್ನ ಒಡಲಲ್ಲಿ ನೂರಾರು ಗ್ಯಾಲನ್ ನೀರು ತುಂಬಿಕೊಂಡು ಬೆಳೆದುದು ಅದು ಐವತ್ತು ಅಡಿ ಎತ್ತರದ 'ನೀರುಗಂಬ' ವಾಗಿ ಬೆಳೆದುದು ಪರಿಸರಕ್ಕೆ ತೋರಿದ ಪ್ರತಿಕ್ರಿಯೆ. ಹೀಗೆ ಒಂದೊಂದು ಜೀವಿಯೂ ವೈಶಾಲ್ಯದಲ್ಲಿ ತಾನಿರುವ ಪರಿಸರಕ್ಕೆ, ವೈಶಿಷ್ಟ್ಯದಲ್ಲಿ ತನ್ನ ನಿರ್ಧಿಷ್ಟ ವಾಸಸ್ಥಳಕ್ಕೆ ಹೊಂದಿಕೊಳ್ಳಲು ನಿರಂತರವಾಗಿ ಹೋರಾಡುತ್ತಲೇ ಇರುತ್ತದೆ. ನೆಲ, ಜಲ, ಆಕಾಶ ಹಾಗೂ ಸುತ್ತಲಿನ ಜೀವ ಪ್ರಪಂಚ - ಇವುಬಾಹ್ಯ ಪರಿಸರಗಳೆನಿಸಿದರೆ, ದೇಹದ ನಿರಂತರ ಚಟುವಟಿಕೆಗಳು ಆಂತರಿಕ ಪರಿಸರವೆನಿಸುತ್ತವೆ.

ನೀರಿನಲ್ಲಿ ಜೀವ ಸೃಷ್ಟಿಯಾಯಿತಷ್ಟೇ. ಹಲವು ವಿಶಿಷ್ಟ ರಾಸಾಯನಿಕಗಳು ವಿಶಿಷ್ಟ ರೀತಿಯಲ್ಲಿ ವಿಶಿಷ್ಟ ಪರಿಸರದಲ್ಲಿ ಹೊಂದಾಣಿಕೆಯಾಗಿರದಿದ್ದರೆ ಇಂದಿಗೂ ಈ ಪೃಥ್ವಿ ಚಂದ್ರನಂತೆ ಮೃತಕಾಯವಾಗಿಯೇ ಇರುತ್ತಿತ್ತೇನೋ! ಜಲ ಮಧ್ಯದಲ್ಲಿ ಜೀವೋತ್ಪತ್ತಿಗೆ ಕಾರಣವಾದ ಆ ವಿಶಿಷ್ಟ ರಾಸಾಯನಿಕಗಳ ಹೊಂದಾಣಿಕೆಯ ಹದ ಅದ್ಭುತವಲ್ಲದೆ ಮತ್ತೇನು ? ಅದುವೇ ಪ್ರ-ಪ್ರಥಮವಾಗಿ ಕಾಣಿಸಿಕೊಂಡ ಜೀವರಸ. ಅದು ತನ್ನ ಜಲಪರಿಸರದಲ್ಲಿಸಮರಸವಾಗಿ ಹೊಂದಿಕೊಂಡುಕಾಲಕ್ರಮದಲ್ಲಿ ಆದಿಜೀವಿಗಳಾದ ಏಕಕೋಶ ಜೀವಿಗಳಿಗೆ ಜನ್ಮವಿತ್ತಿತು. ಹಾಗೆಯೇ ಉತ್ಕ್ರಾಂತಿ ಹಂತದಲ್ಲಿ ಸಾಗಿ ಅಸಂಖ್ಯ ಜಲಚರಗಳ ಸೃಷ್ಟಿಗೆ ಕಾರಣೀಭೂತವಾಯಿತು. ಇಂದು ಜಲಪರಿಸರಕ್ಕೆ ಅತ್ಯದ್ಭುತವಾಗಿ ಹೊಂದಿಕೊಂಡ ಯಶಸ್ವಿ ಪ್ರಾಣಿ ಎಂದರೆ ಮೀನು. ಅದು ತನ್ನ ಪರಿಸರಕ್ಕೆ ಒಗ್ಗಿಕೊಳ್ಳಲು ದೇಹದ ಬಾಹ್ಯ ಹಾಗೂ ಆಂತರಿಕ ಅಂಗಾಂಗಗಳಲ್ಲಿ ತಂದುಕೊಂಡ ಮಾರ್ಪಾಟುಗಳು ಜೀವೇತಿಹಾಸದ ದೃಷ್ಟಿಯಿಂದ ಅತಿ ಮಹತ್ವದ್ದೆನ್ನಿಸಿವೆ. ಮೀನು ತನ್ನ ದೇಹವನ್ನು ದೋಣಿಯಾಕಾರಕ್ಕೆ ತಂದುಕೊಂಡು ಈಜುವಾಗ ನೀರಿನ ಪ್ರತಿರೋಧಕ ಶಕ್ತಿಯನ್ನು ತಗ್ಗಿಸಿ ಮುನ್ನುಗ್ಗಲು ಅನುವು ಮಾಡಿಕೊಂಡಿತು. ತಲೆಯನ್ನು ಮುಂಡಕ್ಕೆ ಜೋಡಿಸಿಕೊಂಡು ಕುತ್ತಿಗೆಯನ್ನು ಇಲ್ಲವಾಗಿಸಿತು. ಕೈಕಾಲುಗಳ ಮೂಳೆ, ಸ್ನಾಯು, ತ್ವಚೆಗಳಲ್ಲಿ ಅಸಾಧಾರಣ ಪರಿವರ್ತನೆ ತಂದುಕೊಂಡು ಈಜು ರೆಕ್ಕೆಗಳನ್ನು ನಿರ್ಮಿಸಿಕೊಂಡಿತು. ಕೆಲವು ಮೀನುಗಳು ಅನ್ನನಾಳವನ್ನು ಊದಿಕೊಡು ಗಾಳಿಕೋಶವನ್ನು ನಿರ್ಮಿಸಿಕೊಂಡು ಅದರ ನೆರವಿನಿಂದ ನೀರಿನ ಯಾವುದೇ ಸ್ತರದಲ್ಲಿ ಈಜಲು ಸಮರ್ಥವೆನಿಸಿದವು. ಶರೀರದ ಎಡ ಬಲಗಳುದ್ದಕ್ಕೂ ಕಾಣಿಸಿಕೊಂಡ ಪಾರ್ಶ್ವರೇಖಾ ಜ್ಞಾನೇಂದ್ರಿಯಗಳು ನೀರಿನ ಒತ್ತಡ, ವೇಗ, ಉಷ್ಣತೆ ಮುಂತಾದ ಬಾಹ್ಯ ಸ್ಥಿತ್ಯಂತರಗಳನ್ನು ಗ್ರಹಿಸಲು ನೆರವಾದವು.

ಅನಾಬಸ್ ಎಂಬ ಮೀನು ಜಲಸಸ್ಯವನ್ನೇರಿ ಕುಳಿತುಕೊಳ್ಳುವುದುಂಟು, ದೂರದಲ್ಲಿ ಶತ್ರುವನ್ನು ಗುರುತಿಸಲು ಮರವೇರುವ ಯೋಧನಂತೆ. ಆಗ ಅದರ ವಾಯು ಚೀಲಗಳೇ ಉಸಿರಾಟದ ಆಧಾರಗಳು. ಒಂದೊಂದು ಪ್ರಭೇದಕ್ಕೆ ಒಂದೊಂದು ತರಹದ ಹೊಂದಾಣಿಕೆ. ಉಷ್ಣವಲಯದ ಸಾಗರ ಸಮುದ್ರಗಳಲ್ಲಿ ವಿಚಿತ್ರ ರೂಪದ ಹಲವು ಮೀನುಗಳಿವೆ. ಅವು ಸುತ್ತಲಿನ ನೈಸರ್ಗಿಕ ಬಣ್ಣಗಳಿಗೆ ಸಾದೃಶ್ಯ ತೋರಿಸುತ್ತವೆ. ಒಳ ಆಳದ ಮೀನುಗಳ ಬಣ್ಣ ಕಪ್ಪಾಗಿದ್ದರೆ, ಮಧ್ಯಂತರ ಆಳದ ಮೀನುಗಳ ಬಣ್ಣ ನೀಲಿ - ಬೂದು

ಮಿಶ್ರಿತವಾಗಿರುತ್ತದೆ. ಕಿರಿ ಆಳದ ಬೆಚ್ಚನೆಯ ಸಮುದ್ರದ ಮೀನುಗಳು ಕಾಮನ ಬಿಲ್ಲಿನ ವರ್ಣಗಳಿಂದ ಪ್ರಕಾಶಿಸುತ್ತವೆ. ಚಿಟ್ಟೆ ಮೀನು ಬಣ್ಣದ ಚಿಟ್ಟೆಯಂತೆಯೇ ಕಾಣುತ್ತದೆ. ಜೀಬ್ರಾ ಮೀನಿನ ವರ್ಣ ವೈಖರಿಯನ್ನಂತೂ ಹೇಳುವುದೇ ಬೇಡ. ಅದರ ಚುಂಗು ಪುಕ್ಕಗಳ ಚಿತ್ರ ವಿಚಿತ್ರ ಬಣ್ಣಗಳನ್ನು ನೋಡಿ ಮಾನವನೇ ಹೆದರುವಾಗ ಎದುರಿಗಿದ್ದ ಸಣ್ಣ ಮೀನು ಓಡಿ ಹೋಗುವ ಬದಲು ಬೆಚ್ಚಿ ತಟಸ್ಥವಾಗಿ ನಿಂತುಬಿಟ್ಟಾಗಿ ಜೀಬ್ರಾ ಮೀನಿಗೆ ಬಡಿಸಿಟ್ಟ ಆಹಾರದಂತೆ ಕಾಣುವುದರಲ್ಲಿ ಏನಾಶ್ಚರ್ಯ! ಆಳ ಸಮುದ್ರದ ಮೀನುಗಳ ಹೊಂದಾಣಿಕೆ ಇನ್ನೊಂದು ತೆರನಾದುದು. ನಿರಂತರ ಕಗ್ಗತ್ತಲಲ್ಲಿ ವಾಸಿಸುವ ಈ ಮೀನುಗಳು ಸ್ವಯಂ ಪ್ರಕಾಶಿತವಾಗಿವೆ. ಎದೆಯ ಈಜು ರೆಕ್ಕೆಗಳ ಮಧ್ಯದ ಸ್ನಾಯುಗಳು ವಿದ್ಯುತ್ ಅಂಗಗಳಾಗಿ ಮಾರ್ಪಟ್ಟು ಬ್ಯಾಟರಿಯಂತೆ ಕೆಲಸ ಮಾಡುತ್ತವೆ; ಇವು ನೀರಿನಲ್ಲಿ ವಿದ್ಯುತ್ ಹುಟ್ಟಿಸಿ ಬೇರೆ ಪ್ರಾಣಿಗಳಿಗೆ ಆಘಾತ ಕೊಡಬಲ್ಲವು. ಈ ರೀತಿ ಆತ್ಮ ಸಂರಕ್ಷಣೆ ಮಾಡಿಕೊಳ್ಳಬಲ್ಲ ಈ ಮೀನುಗಳಿಗೆ ಹುರುಪೆಗಳ ಹೊದಿಕೆ ಇರುವುದಿಲ್ಲ. ನೀರಿನ ಅಧಿಕ ಒತ್ತಡವನ್ನು ಇವು ಸಲೀಸಾಗಿ ತಡೆದುಕೊಳ್ಳುತ್ತವೆ. ೬೦೦ ಅಡಿಗಳ ಆಳದಲ್ಲಿ ನೀರಿನ ಒತ್ತಡ ಚದರ ಅಂಗುಲಕ್ಕೆ ೨೭೦ ಪೌಂಡು ; ೩೦೦೦ ಅಡಿಗಳ ಆಳದಲ್ಲಿ ಒತ್ತಡ ಚದರಂಗುಲಕ್ಕೆ ೩ ಟನ್ನು !




ಆನುಷಂಗಿಕವಾಗಿ ಜಲಜ[illegible]ಾದ ದೈತ್ಯ ಸ್ತನಿ ತಿಮಿಂಗಿಲದ ಹೊಂದಾಣಿಕೆಯ ಅದ್ಭುತಗಳು ಹಲವಾರು. ಸ್ತ[illegible]ಯಾದರೂ ಮೈ ಮೇಲೆ ರೋಮಗಳಿಲ್ಲ, ಹೊರಗಿವಿಗಳಿಲ್ಲ. ಹಿಂಗಾಲುಗಳಿಲ್ಲ. ನೀರಿನ ಪ್ರತಿರೋಧಕ ಶಕ್ತಿಯನ್ನು ತಗ್ಗಿಸುವುದೇ ಅದರ ಗುರಿ. ಮುಂಗಾಲುಗಳು ಜಾಲಪಾದದಂತೆ ರೂಪುಗೊಂಡು ತಿಮಿಂಗಿಲವು ಲೀಲಾಜಾಲವಾಗಿ ಈಜಲು ನೆರವಾಗಿವೆ. ೮-೧೦ ಅಂಗುಲಗಳ ತ್ವಚೆಕೆಳಗಿನ ಕೊಬ್ಬು ಮೈಯನ್ನು ಬೆಚ್ಚಗಿಡಲು ಸಹಾಯಕವಾಗಿವೆ.

ವಾಯು ಜೀವನಕ್ಕೆ ಹೊಂದಿಕೊಂಡ ಪಕ್ಷಿವರ್ಗದ ಅಂಗ ರಚನಾ ಮಾರ್ಪಾಟುಗಳು ನಮ್ಮನ್ನು ಮೂಕವಿಸ್ಮಿತರನ್ನಾಗಿ ಮಾಡುತ್ತವೆ. ಭೂಮಿಯ ಮೇಲೆ ಸ್ತನಿಗಳ ಪ್ರಾಬಲ್ಯ ಹೆಚ್ಚಿದಾಗ ಸರೀಸೃಪಗಳು ತಮ್ಮ ರಕ್ಷಣೆಗಾಗಿ ಪರದಾಡಿದವಷ್ಟೇ. ಮರದಿಂದ ಮರಕ್ಕೆ ಹಾರುವಾಗಲೋ ಭೂಮಿಯ ಮೇಲೆ ಓಟಕಿತ್ತಾಗಲೋ, ವೇಗದ ಗತಿಯನ್ನು ಹೆಚ್ಚಿಸಿಕೊಂಡಾಗ ಮುಂಗಾಲುಗಳನ್ನು ಮೇಲೆತ್ತಿ ದ್ವಿಪಾದಿ ಆಗಿಬಿಟ್ಟವು. ಆ ಮುಂಗಾಲುಗಳೇ ರೆಕ್ಕೆಗಳಾಗಿ ಮಾರ್ಪಟ್ಟವು. ಗಾಳಿಯ ಘರ್ಷಣೆಗೆ ಒಡೆದ ಹುರುಪೆಗಳು ಗರಿಗಳಾಗಿ ರೂಪಾಂತರಗೊಂಡವು. ಈ ಮೂಲ ಹೊಂದಾಣಿಕೆಗಳು ಆಕಾಶರಾಜನಾಗಲಿರುವ ಜೀವಿಗೆ ನಾಂದಿ ಹಾಡಿದವು ;

ವಾಯು ಪರಿಸರಕ್ಕೆ ಗಾಢವಾಗಿ ಹೊಂದಿಕೊಳ್ಳಲು ದೇಹದ ತೂಕವನ್ನು ಕಡಿಮೆ ಮಾಡಿಕೊಳ್ಳುವುದು ಅವುಗಳಿಗೆ ಅನಿವಾರ್ಯವಾಯಿತು. ಆ ಗುರಿ ತಲುಪಲು ಅವು ಶ್ರಮಪಟ್ಟ ಅವಧಿ ೧೦೦ ಮಿಲಿಯ ವರುಷಗಳು. ಶರೀರವನ್ನು ದೋಣಿಯಾಕಾರಕ್ಕೆ ತಂದುಕೊಂಡವು. ಹಲ್ಲುಗಳನ್ನು ಕಳೆದುಕೊಂಡರೂ ಹಗುರಾದ ಚುಂಚಿನಿಂದ ತೃಪ್ತಿಗೊಂಡವು. ಮೂತ್ರಕೋಶವನ್ನು ಕಳೆದುಕೊಂಡು ಅಡಿಗಡಿಗೆ ಮೂತ್ರವಿಸರ್ಜಿಸುವ ಸ್ವಭಾವಕ್ಕೆ ಒಳಗಾದವು. ಹೆಣ್ಣು ಪಕ್ಷಿ ಬಲಭಾಗದ ಅಂಡಾಶಯವನ್ನು ಕಳಚಿಕೊಂಡಿತು. ಕಾಲ್ಬೆರಳುಗಳು ೨-೪ ಕ್ಕೆ ಇಳಿದವು. ಜೊತೆಗೆ ಮೂಳೆಗಳ ಕೊಡುಗೆ ಏನೂ ಕಡಿಮೆಯಾಗಲಿಲ್ಲ. ಫ್ರಿಗೇಟ್ ಪಕ್ಷಿಯ ರೆಕ್ಕೆಯ ಹರವು ೭ ಅಡಿಗಳಷ್ಟಿದ್ದಾಗ್ಯೂ ಅದರ ದೇಹದ ತೂಕ ಕೇವಲ ೧೧೫ ಗ್ರಾಂ ನಷ್ಟು ಇರಲು ಮೂಳೆಗಳ ಪಾತ್ರವೇ ಮುಖ್ಯ. ಅನೇಕ ನಿರುಪಯುಕ್ತ ಮೂಳೆಗಳು ಇಲ್ಲವೇ ಇಲ್ಲ. ಇದ್ದ ಮೂಳೆಗಳು ಕಾಗದದಷ್ಟು ತೆಳ್ಳಗೆ, ಆದರೂ ಬಲಶಾಲಿ ಮೂಳೆಗಳು. ಹಲವಾರು ಮೂಳೆಗಳು ವಾಯುವನ್ನೊಳಗೊಂಡ ಟೊಳ್ಳುಮೂಳೆಗಳು. ಪುಪ್ಪಸಗಳಿಗೆ ಹೊಂದಿಕೊಂಡ

ವಾಯುಚೀಲಗಳು ಉಸಿರಾಟ ಕ್ರಿಯೆಯನ್ನು ಪರಿಣಾಮಕಾರಿಯಾಗಿ ಮಾಡಿವೆ ; ಅಲ್ಲಿ ನಿರಂತರವಾಗಿ ಶುದ್ಧ ವಾಯುವೇ ಸಂಚರಿಸುವುದರಿಂದ ಶಕ್ತಿ ಪೂರೈಕೆಯು ಸತತವಾಗಿ ಸಾಗುತ್ತದೆ. ಪಕ್ಷಿಯ ಹೃದಯ ದೊಡ್ಡದು. ರಕ್ತ ಪರಿಚಲನೆಯ ವೇಗವೂ ಹೆಚ್ಚು. ಮಿದುಳು ಕೂಡ ದೊಡ್ಡದೇ. ಕಣ್ಣುಗಳು ಬಹು ತೀಕ್ಷ್ಣ. ಇವೆಲ್ಲವೂ ಯಶಸ್ವೀ ಹೊಂದಾಣಿಕೆಯ ಲಕ್ಷಣಗಳೇ.

ಪಕ್ಷಿಗಳಂತೆ ಇತರ ಕೆಲವು ಪ್ರಾಣಿ ಪ್ರಭೇದಗಳೂ ವಾಯು ವಿಹಾರದ ಹವ್ಯಾಸಕ್ಕೆ ಹಾತೊರೆದಿವೆ : ಆದರೆ ಪಕ್ಷಿಯ ಯಶಸ್ವೀ ಹೊಂದಾಣಿಕೆ ಇವುಗಳಿಗೆ ಬರಲಿಲ್ಲ. ಸ್ತನಿಯಾದ ತೊಗಲುಬಾವಲಿ ತನ್ನ ಮೈದೊಗಲನ್ನು ಎಡಬಲಗಳಲ್ಲಿ ಬಾಲ ಕೈಕಾಲು ಬೆರಳುಗಳವರೆಗೂ ಹಿಗ್ಗಿಸಿ ಕತ್ತರಿಸಿದ ಕೊಡೆಯಂತೆ ಕಾಣುವ ಹುಸಿ ರೆಕ್ಕೆಯನ್ನು ಹುಟ್ಟಿಸಿಕೊಂಡಿತು. ಬಾವಲಿಯ ಇನ್ನೊಂದು ವೈಶಿಷ್ಟ್ಯವೆಂದರೆ ಶ್ರವಣಾತೀತ ಧ್ವನಿ ತರಂಗಗಳನ್ನು ಗ್ರಹಿಸಬಲ್ಲ ಅದರ ಶ್ರವಣೇಂದ್ರಿಯ. ಹಾರುವಾಗ ಅದು ನಮಗೆ ಕೇಳಿಸಲಾರದಂಥ ಸೂಕ್ಷ್ಮ ಧ್ವನಿಯನ್ನು ಹೊರಡಿಸುತ್ತದೆ. ಆ ಧ್ವನಿ ತರಂಗಗಳು ಎದುರಿನ ಗೋಡೆಗೆ ಬಡಿದು, ಪ್ರತಿಫಲಿಸಿ ಹಿಂತಿರುಗುವುದನ್ನು ಅದರ ಶ್ರವಣೇಂದ್ರಿಯವು ಗ್ರಹಿಸುತ್ತವೆ. ಕೂಡಲೇ ಬಾವಲಿಯ ಎದುರಿಗಿದ್ದ ಗೋಡೆಯ ಅಸ್ತಿತ್ವ , ಅಂತರ, ಸ್ವರೂಪವನ್ನು ಅರಿತು ಗೋಡೆಗೆ ಡಿಕ್ಕಿ ಹೊಡೆಯದೇ ಹಿಂತಿರುಗುತ್ತದೆ. ಇದನ್ನೇ ನಾವು ರೇಡಾರ್ ತಾಂತ್ರಿಕತೆಯಲ್ಲಿ ಅಳವಡಿಸಿಕೊಂಡಿದ್ದೇವೆ. ಬಹುಸಂಖ್ಯ ಸರೀಸೃಪ, ಸ್ತನಿಗಳು ಭೂವಾಸಿಗಳು. ಇವುಗಳ ಹೊಂದಾಣಿಕೆ ಭೂಗುಣ, ಪ್ರಾದೇಶಿಕ ಹವಾಮಾನ, ಮಳೆ, ಸಸ್ಯಸಂಪತ್ತು ಮುಂತಾದ ಅಂಶಗಳನ್ನು ಅವಲಂಬಿಸಿದೆ. ಹೊರಗಿನ ವಾತಾವರಣ ಹೇಗೇ ಇರಲಿ, ಪ್ರಪಂಚ ಎಷ್ಟೇ ಬದಲಾಯಿಸಲಿ, ಹೊಂದಿಕೊಂಡು ಬಾಳುವ ಸಾಮರ್ಥ್ಯ ಸ್ತನಿಗಳಲ್ಲಿ ಸ್ಫುಟವಾಗಿ ಕಾಣುತ್ತದೆ. ಇದಕ್ಕೆ ಅವುಗಳ ಬುದ್ಧಿ ಮತ್ತೆಯೇ ಕಾರಣ. ಇವು ಭೂಮಿಯ ಮೇಲೆ ಬಾಳಲು ತಮ್ಮ ಚಲನಾಂಗಗಳಲ್ಲಿ ಬಹಳಷ್ಟು ಸುಧಾರಣೆಗಳನ್ನು



ತಂದುಕೊಂಡವು. ಬಲಶಾಲಿ ಸ್ನಾಯುಗಳು, ಮೂಳೆಗಳು, ಕೀಲುಗಳುಳ್ಳ ಕಾಲುಗಳು, ಬೆರಳುಗಳು, ಖುರಗಳು ಮುಂತಾದವು ಚಲನೆಗೆ ನೆರವಾಗುವ ಅಂಗಗಳು. ಕರಡಿ, ಮಂಗ, ಮಾನವ ಮುಂತಾದ ಪ್ರಾಣಿಗಳು ತಮ್ಮ ಸಂರಕ್ಷಣೆಗಾಗಿಯೋ, ಆಹಾರಾನ್ವೇಷಣೆಗಾಗಿಯೋ ಓಟದ ಜೀವನಕ್ಕೆ ಹೊಂದಿಕೊಂಡು ಕಾಲುಗಳನ್ನು ತುಸು ಎತ್ತಿರಿಸಿ ಬೆರಳುಗಳನ್ನು ಮಾತ್ರ ನೆಲಕ್ಕೂರಿದವು. ಈ ವಿಧಾನವನ್ನೇ ಮುಂದುವರಿಸಿ ಕೇವಲ ಮಧ್ಯ ಬೆರಳಿನ ತುದಿಯ ಮೇಲೆ ನಿಂತ ಪ್ರಾಣಿ - ಕುದುರೆ. ಭೂಮಿಯ ಮೇಲಿನ ಪ್ರಾಣಿಗಳಲ್ಲಿ ಕುದುರೆ ಅತ್ಯಂತ ವೇಗದಿಂದ ಓಡುವ ಪ್ರಾಣಿ ಎನಿಸಿದೆ. ಸ್ತನಿಗಳ ಇನ್ನೊಂದು ಗಮನಾರ್ಹ ಹೊಂದಾಣಿಕೆ ಇರುವುದು ಅವು ಪುನರುತ್ಪಾದನೆ ವ್ಯವಸ್ಥೆಯಲ್ಲಿ ತಂದುಕೊಂಡ ಮಿತವ್ಯಯ. ಉದಾಹರಣೆಗೆ ಹೆಣ್ಣು ಕಾಡ್ ಮೀನು ಒಂದೇ ವೇಳೆಗೆ ಎರಡು ಲಕ್ಷ ಮೊಟ್ಟೆಗಳನ್ನು ಹೊರಹಾಕಿದರೆ ಮಾನವನ ಹಂತದಲ್ಲಿ ಅದು ತಿಂಗಳಿಗೆ ಒಂದು ಅಂಡದ ಮೊತ್ತಕ್ಕೆ ಇಳಿದಿದೆ. ಅಲ್ಲದೆ ಭ್ರೂಣವು ತಾಯಿಯ ಗರ್ಭಾಶಯದಲ್ಲಿ ಸುರಕ್ಷಿತವಾಗಿ ಬೆಳೆಯುತ್ತದೆ. ಮರಿ ಹೊರಬಂದ ಮೇಲೂ ಅದರ ವೃದ್ಧಿಗೆ ತಾಯಿಯ ವಾತ್ಸಲ್ಯ ಪಾಲನೆ ಪೋಷಣೆ ನೆರವಾಗುತ್ತವೆ.

ಎಂಥ ಪ್ರತಿಕೂಲ ಪರಿಸ್ಥಿತಿಯಲ್ಲೂ ಪರಿಸರದೊಂದಿಗೆ ಒಂದಾಗಿ ಬಾಳುವ ಜೀವಿಗಳ ಅಂತಃಸ್ಫೂರ್ತಿಗೆ ಮರುಭೂಮಿಯ ಉದಾಹರಣೆ ಸಾಕು. ಕಾಂಗರೂ - ಇಲಿ ನೀರಿಲ್ಲದೆ ಬದುಕಬಲ್ಲದು. ಒಣ ಬೀಜಗಳನ್ನು ತಿಂದು ದೇಹದಲ್ಲಿ ನೀರು ಉತ್ಪತ್ತಿ ಮಾಡಿಕೊಳ್ಳುವ ಸಾಮರ್ಥ್ಯ ಅದಕ್ಕುಂಟು. ಬಾಬ್‌ಕ್ಯಾಟ್ ಎನ್ನುವ ಬೆಕ್ಕು ಅಳಿಲನ್ನು ತಿಂದು ಆಹಾರವನ್ನೂ, ನೀರನ್ನೂ ಒಟ್ಟಿಗೇ ಪಡೆದುಕೊಳ್ಳುತ್ತದೆ. ಒಂಟೆಯಂತೂ ಮರುಭೂಮಿಗಾಗಿಯೇ ಹುಟ್ಟಿ ಬಂದ ಪ್ರಾಣಿಯಂತಿದೆ. ಉಸುಕಿನಲ್ಲಿ ಕುಸಿಯಲಾರದ ಅದರ ಅಗಲವಾದ ಪಾದಗಳು, ಉಸುಕಿನ ಉಷ್ಣತೆಯನ್ನು ತಡೆಯುವ ಕಾಲ್ಬೆರಳಿನ ಮೆತ್ತೆದಿಂಬುಗಳು, ಕಾವು ತಲೆಗೆ ತಾಕದಂತಿರುವ ನೀಳಕುತ್ತಿಗೆ, ಬಿರುಗಾಳಿಯಲ್ಲಿ ತೂರಿ ಬರುವ ಉಸುಕಿನ ಕಣಗಳು ಒಳ ಸೇರದಂತಿರುವ ಮೂಗಿನ ಹೊರಳೆಗಳ ರಚನೆ ಈ ಮುಂತಾದ ಹೊಂದಾಣಿಕೆಗಳಿಂದ ಒಂಟೆ 'ಮರುಭೂಮಿಯ ಹಡಗು' ಎಂಬ ಅನ್ವರ್ಥ ಹೆಸರು ಪಡೆದಿದೆ.

ಜೀವಿ, ಪರಿಸರ, ಹೊಂದಾಣಿಕೆ - ಈ ತ್ರಿವೇಣಿ ಸಂಗಮಕ್ಕೆ ಕೊನೆ ಮೊದಲೆಂಬುದೇ ಇಲ್ಲ. ಮೈ ಬಣ್ಣ ಬದಲಾಯಿಸುವ ಗೋಸುಂಬೆ ಯಾರಿಗೆ ಗೊತ್ತಿಲ್ಲ

? ಆಸ್ಟ್ರೇಲಿಯದ ಕ್ಲಮಿಡೊ ಸೌರಸ್ ಎಂಬ ಹಲ್ಲಿ ತನ್ನ ಕುತ್ತಿಗೆಯ ಸುತ್ತಲಿನ ಚರ್ಮವನ್ನು ಕೆದರಿಕೊಂಡು ನಿಮಿರಿಸಿ ನಿಂತಾಗ ಎಂಥವನಿಗೂ ಹೆದರಿಕೆ ಬರುತ್ತದೆ. ಆದರೆ ವಸ್ತುಸ್ಥಿತಿ ಬೇರೇನೇ. ತನ್ನನ್ನು ಕಂಡು ಶತ್ರು ಹೆದರಿ ಓಡಿಹೋಗಬೇಕೆಂಬುದು ಹಲ್ಲಿಯ ಉದ್ದೇಶ. ಆದರೆ ಹಲ್ಲಿ ಹೆದರಿದಾಗಲೇ ಅದರ ಕುತ್ತಿಗೆಯ ಹುರುಪೆಗಳು ನಿಮಿರಿ ನಿಲ್ಲುತ್ತವಂತೆ! ಮನೆಯಲ್ಲಿಯ ಹಲ್ಲಿಯನ್ನು ಕೂಲಂಕಷವಾಗಿ ನೋಡಿದರೆ, ಅಲ್ಲಿಯೂ ಒಂದು ಹೊಂದಾಣಿಕೆ ಕಂಡುಬರುವುದು. ದೊಡ್ಡ ಹಲ್ಲಿ ಚಿಕ್ಕ ಹಲ್ಲಿಯನ್ನು ಬೇಟೆಯಾಡಿದಾಗ ಆ ಸಣ್ಣ ಹಲ್ಲಿ ಹೇಗೆ ಸಂರಕ್ಷಿಸಿಕೊಳ್ಳಬೇಕು ? ತನ್ನ ಹಿಂಭಾಗವನ್ನೇ ದೊಡ್ಡ ಹಲ್ಲಿಯ ಬಾಯಿ ಕಡೆಗೆ ಚಾಚಿ ಬಲಿ ಕೊಟ್ಟವರಂತೆ ನಟಿಸುತ್ತದೆ. ರೊಟ್ಟಿ ತುಪ್ಪದಲ್ಲಿ ಜಾರಿತು ಎಂಬ ಹುಸಿ ಸಮಾಧಾನ ದೊಡ್ಡ ಹಲ್ಲಿಗೆ. ಕಚ್ಚಿದಾಗ ಸಿಗುವುದೇನು? ಚಿಕ್ಕ ಹಲ್ಲಿಯ ಬಾಲದ ತುಂಡು ಮಾತ್ರ. ಕೂಡಲೇ ಬೇರ್ಪಡುವ ಒಂದು ಬಿಂದು ಬಾಲದ ತಳದಲ್ಲಿ ಇರುವುದೇ ಇದಕ್ಕೆ ಕಾರಣ. ಕಳೆದಬಾಲದ ಭಾಗವು ಪುನಃ ಬೆಳೆಯುತ್ತದೆ

ಪ್ರಾಣಿ ಪ್ರಪಂಚದಲ್ಲಿ ಕಂಡುಬರುವ ಸ್ನೇಹ ಸಹಕಾರಗಳು ಇನ್ನೊಂದುರೀತಿಯ ಹೊಂದಾಣಿಕೆ - ಘೇಂಡಾಮೃಗ ಹಾಗೂ ಒಂದು ಸಣ್ಣ ಹಕ್ಕಿಯ ಮಧ್ಯೆ ಒಂದು ವಿಚಿತ್ರ ಹೊಂದಾಣಿಕೆ ಇದೆ. ಘೇಂಡಾಮೃಗದ ದಪ್ಪ ಚರ್ಮವನ್ನು ಚುಚ್ಚಿರಕ್ತ ಹೀರುವ ಹೇನುಗಳನ್ನು ಆ ಪಕ್ಷಿ ಹೆಕ್ಕಿ ತಿನ್ನುತ್ತದೆ. ಘೇಂಡಾಕ್ಕೆ ರಕ್ಷಣೆ, ಪಕ್ಷಿಗೆ ಆಹಾರ. ಅದರಂತೆ ಮೊಸಳೆಗೂ ಜಿಕ್ ಜಾಕ್ ಎಂಬ ಹಕ್ಕಿಗೂ ಎಲ್ಲಿಲ್ಲದ ಸ್ನೇಹ. ಮೊಸಳೆಯ ಬಾಯಿಯಲ್ಲಿ ಕುಣಿದು, ಕುಪ್ಪಳಿಸುತ್ತ ಈ ಹಕ್ಕಿ ಅಲ್ಲಿಯ ಜಿಗಣೆಗಳನ್ನು ತಿನ್ನುತ್ತದೆ. ಪ್ರಾಣಿಗಳಲ್ಲಿ ಅತಿ ವಿಚಿತ್ರವಾದ ಸ್ನೇಹ ಉಷ್ಟ್ರಪಕ್ಷಿ ಹಾಗೂ ಹೇಸರಗತ್ತೆಗಳ ನಡುವಿನದು. ಹೇಸರಗತ್ತೆಗಳ ದೃಷ್ಟಿ ಮಂದ, ಆದರೆ ಕಿವಿ ಚುರುಕು. ಉಷ್ಟ್ರಪಕ್ಷಿ ದೃಷ್ಟಿ ತೀಕ್ಷ್ಣ ಆದರೆ ಶ್ರವಣ ಮಂದ. ತಮ್ಮ ಶತ್ರುಗಳ ಆಗಮನವನ್ನು ಗುರುತಿಸುವ ಕಾರ್ಯದಲ್ಲಿ ಈ ಪ್ರಭೇದಗಳು ಪರಸ್ಪರ ನೆರವಾಗುವ ಸಲುವಾಗಿ ಜೊತೆಗೂಡಿಯೇ ಮೇಯುವುದುಂಟು !

ಈ ರೀತಿ ಹೊಂದಾಣಿಕೆ ಎಂಬುದು ಜೀವಿ ಪರಿಸರ ನಡುವಿನ ಒಂದು ಪ್ರಯೋಗವೇ ಸರಿ. ಸಫಲವಾದರೆ ಉಳಿವು. ವಿಫಲವಾದರೆ ಅಳಿವು. ಅನೇಕ ಜೀವಿಗಳು ಸೋಲನ್ನುಂಡ ದುರಂತ ಕೊನೆಯನ್ನು ಈ ಜಗತ್ತು ಕಂಡಿದೆ. ಅವುಗಳಲ್ಲಿ ಸ್ವಾರಸ್ಯವಾದವುಗಳೆಂದರೆ 'ಬೃಹತ್ಪಶು' ಎನಿಸಿಕೊಂಡ ಮೇಗಥೀರಿಯಂ ಎಂಬ ಸ್ತನಿ. ಇಡೀ ಮರವನ್ನು ಒಂದೇ ನೆಗೆತಕ್ಕೆ ಕೀಳುವ ಸಾಮರ್ಥ್ಯ ಅದಕ್ಕಿತ್ತು. ನಾಲ್ಕು

ಕಾಲುಗಳಿದ್ದರೂ ಸುಲಭವಾಗಿ ನೆಲದ ಮೇಲೆ ಓಡಾಡಲು ಅದಕ್ಕೆ ಆಗುತ್ತಿರಲಿಲ್ಲ. ಬೆರಳುಗಳ ಉಗುರುಗಳೇ ಅದಕ್ಕೆ ಶತ್ರುವಾದವು. ಈ ಹೊಂದಾಣಿಕೆಯ ಅಭಾವದಿಂದ ಅದು ಬಹಳ ಕಾಲ ಬಾಳಲಿಲ್ಲ. ಅದರಂತೆ ಮೆಮೊಥ್ ಎಂಬ ಆನೆ, ಗುಹೆಯ ಕರಡಿ, ಕೋರೆದಾಡೆಯ ಹುಲಿ, ಮನುಷ್ಯ ಭೂಮಿಯ ಮೇಲೆ ಕಾಣಿಸಿಕೊಂಡ ಮೇಲೂ ಇದ್ದವು. ಹಿಮ ಯುಗದಲ್ಲಿ ಕೂಡ ಪೃಥ್ವಿಯ ಕೆಲವೆಡೆ ಸಜೀವವಾದ ಅಗ್ನಿಪರ್ವತಗಳಿದ್ದವು. ಟಾರಿನಂಥ ಕರಿ ಕೆಸರು ಭೂಮಿಯ ಒಡಲಿನಿಂದ ಬುಗ್ಗೆ ಬುಗ್ಗೆಯಾಗಿ ಉಕ್ಕಿ ದೊಡ್ಡ ಹೊಂಡಗಳಾಗಿದ್ದವು. ಆನೆ, ಕರಡಿ, ಹುಲಿ ಮುಂತಾದ ಪ್ರಾಣಿಗಳು ಅಲೆದಾಡುತ್ತ ಆ ಹೊಂಡಗಳಲ್ಲಿ ನೀರು ಕುಡಿಯಲು ಬಂದು ಕೆಸರಿನಲ್ಲಿ ಬೀಳುತ್ತಿದ್ದವು. ಕೆಸರಿನ ಅಂಟು, ಪ್ರಾಣಿಯ ಮೈಭಾರ - ಎರಡೂ ಸೇರಿ ಒಳಸಿಕ್ಕ ಪ್ರಾಣಿ ಹೊರ ಬರುವ ಶಕ್ಯತೆ ಇರಲೇ ಇಲ್ಲ. ಹತಾಶಗೊಂಡ ಇಂಥ ಪ್ರಾಣಿಗಳ ಕೂಗನ್ನು ಕೇಳಿ ಕೋರೆದಾಡೆಯ ಹುಲಿ ತನಗೆ ನಿರಾಯಾಸವಾಗಿ ಆಹಾರ ಸಿಕ್ಕಿತೆಂಬ ಸಂಭ್ರಮದಲ್ಲಿ ಓಡಿ ಬಂದು ತಾನೂ ಕೆಸರಿನಲ್ಲಿ ಸಿಕ್ಕು ಸಾಯುತ್ತಿದ್ದಿತು. ನಿಸರ್ಗ ಮುಂದೂಡಿದ ಸಮಸ್ಯೆಗೆ ಹೊಂದಾಣಿಕೆಯನ್ನರಿಯದೆ ಜೀವನ ಸಂಗ್ರಾಮದಲ್ಲಿ ಇವು ಹಿಮ್ಮೆಟ್ಟಿದವು.


ಕೋಟಿ ಕೋಟಿ ವರುಷಗಳುದ್ದಕ್ಕೂ ಭೂ ಮತ್ತು ವಾಯುಗುಣಗಳಲ್ಲಾದ ಬದಲಾವಣೆಗಳಿಗೆ ಅದ್ಭುತ ಹೊಂದಾಣಿಕೆ ತೋರಿದ ಪ್ರಾಣಿ ಚೋಟುದ್ದದ ಚೇಳು. ಅದು ೧೦ ಕೋಟಿ ವರುಷಗಳಿಂದ ಯಶಸ್ವಿಯಾಗಿ ಬಾಳಿದೆ. ಅದರ ಉಳಿವಿಕೆ, ಅದು ಬದಲಾದ ವಾತಾವರಣಕ್ಕೆ ಹೊಂದಿಕೊಂಡ ಸಾಮರ್ಥ್ಯವೇ ಕಾರಣ. ಕಾಲಾಯ ತಸ್ಮೈ ನಮಃ ಎಂದು ಕಾಲಕ್ಕೆ ತಲೆ ಬಾಗಿ, ಬದಲಾಗುವ ಪರಿಸ್ಥಿತಿಗಳಿಗೆ ತಲೆಯೊಡ್ಡಿ ಹೊಂದಿಕೊಳ್ಳುವ ಚೇಳಿನ ಚಾತಿ ಮಾನವನಿಗೂ ಬಂದರೆ, ಆತನೂ ಕೋಟಿ ಕೋಟಿ ವರುಷಗಳುದ್ದಕ್ಕೂ ಬಾಳಿಯಾನು. ಇತರ ಜೀವಿಗಳನ್ನೂ ಬಾಳಿಸಿಯಾನು !

❊❊❊

೨೦. ಕಣ್ಮರೆಯಾಗುತ್ತಿರುವ ಕಾಡು ಕಣ್ಮಣಿಗಳು

ಪ್ರಾಣದಯೆಯನ್ನು ಬೋಧಿಸಿದ ಬುದ್ಧ, ಅಶೋಕರ ನಾಡಿನಲ್ಲಿ ಮೃಗಯಾವಿಹಾರದ ನೆಪದಲ್ಲಿ ನಡೆಯುತ್ತಿರುವ ವನ್ಯ ಮೃಗಗಳ ಸಂಹಾರ ಇನ್ನಾದರೂ ನಿಲ್ಲಬೇಕು.

ಹಿಮಾಲಯದ ಧವಳ ಗಿರಿ ಶಿಖರಗಳಿಂದ ಕನ್ಯಾಕುಮಾರಿಯ ನೀಲ ಸಮುದ್ರದಂಚಿನವರೆಗೂ, ಕಚ್ಛದ ರಣಭೂಮಿಯಿಂದ ಗಂಗೆಯ ಬಯಲು ದಾಟಿ ಬಂಗಾಲ ಉಪಸಾಗರದವರೆಗೂ ಭಾರತದ ಅಭಯಾರಣ್ಯಗಳಲ್ಲಿ, ಗಿರಿ ಕಂದರಗಳಲ್ಲಿ, ಕಾಡು ಬೆಟ್ಟಗಳಲ್ಲಿ, ಹಳ್ಳಕೊಳ್ಳಗಳಂಚಿನ ಹುಲ್ಲುಗಾವಲುಗಳಲ್ಲಿ, ಮರುಭೂಮಿಗಳಲ್ಲಿ ತಮ್ಮ ತಮ್ಮ ರಮ್ಯ ಜೀವನವನ್ನು ಸದ್ದಿಲ್ಲ ಸಾಗಿಸುತ್ತ, ತಾವಿರುವ ಆವರಣಗಳಿಗೂ, ಅರಣ್ಯಗಳಿಗೂ ಪೋಷಕವಾಗುತ್ತ ದೇಶದ ಚೆಲುವನ್ನು ಹೆಚ್ಚಿಸಿದ ವನ್ಯ ಮೃಗಗಳ ಕಾಲವೊಂದಿತ್ತು. ಆ ಸೊಗಸು, ಬೆಡಗು ಇಂದು ಭರದಿಂದ ಕುಗ್ಗುತ್ತಿದೆ. ಮಾನವ ತನ್ನ ಹೊಟ್ಟೆಗಾಗಿ ಹೇಯ ಕೃತ್ಯಗಳನ್ನು ನಿರ್ದಾಕ್ಷಿಣ್ಯವಾಗಿ ಮಾಡುತ್ತಿರುವಾಗ ದೇಶದ ಶೋಭೆ ಹೇಗೆತಾನೇ ಉಳಿದೀತು ?



ತನ್ನಷ್ಟಕ್ಕೆ ತಾನೇ ಮೇಯುತ್ತಲಿರುವ ಸಾಧು ಜಿಂಕೆಯನ್ನೋ, ನದಿಯ ದಂಡೆಗೆ ನಿಂತು ನೀರು ಕುಡಿಯುವ ಚಿರತೆಯನ್ನೋ, ತಿಂದುಂಡು ಹುಲ್ಲು ಹಾಸಿಗೆಯ ಮೇಲೆ ಹಾಯಾಗಿ ಮಲಗಿದ ಹುಲಿಯನ್ನೋ ಮರದೆಲೆಗಳಲ್ಲಿ ಮರೆಯಾಗಿ ಗೀತ ಸಂಗೀತ ನೀಡುತ್ತಿರುವ ಪಕ್ಷಿಯನ್ನೋ, ಮರೆಯಲ್ಲಿ ನಿಂತುಕೊಂಡು ಕಳ್ಳ ಹೆಜ್ಜೆಗಳಲ್ಲಿ ಸಾಗಿ ಗುಂಡಿಕ್ಕಿ ಕೊಲ್ಲುವುದೂ ಕಾರ್ಯನಿರತನಾದ ನಿರುಪದ್ರವಿ ಮಾನವನ ಬೆನ್ನಲ್ಲಿ ಚೂರಿ ಹಾಕುವುದೂ ಒಂದೇ !

ಅಭಯಾರಣ್ಯ

ವನ್ಯ ಮೃಗಗಳು ಭರದಿಂದ ಕಣ್ಮರೆಯಾಗುತ್ತಲಿರುವ ಕಟು ಸತ್ಯದ ಕಾರಣಗಳೇನೇ ಇರಲಿ : ಅವುಗಳಿಗೆಲ್ಲ ಮಾನವನೇ ಬಹು ಮಟ್ಟಿಗೆ ಹೊಣೆಗಾರನೆಂಬುದು ನಿರ್ವಿವಾದ. ಪೂರ್ವಜರಿಗಿಂತ ನಾವು ಸುಧಾರಿಸಿದವರು ಎಂದು ವ್ಯರ್ಥವಾಗಿ ಹೆಮ್ಮೆ ಪಡುತ್ತಿದ್ದೇವೆ. ಅಂದಿನ ಪುರುಷಸೂಕ್ತ ಪ್ರಾರ್ಥಿಸಿತು - ''ಶನ್ನೋ ಅಸ್ತು ಶಂಚತುಷ್ಪದೇ'' - 'ಮಾನವನಿಗೂ, ಪ್ರಾಣಿಗಳಿಗೂ ಸುಖ ಶಾಂತಿ ಸಿಗಲಿ ಎಂದು. ಕೌಟಿಲ್ಯನು ತನ್ನ ಅರ್ಥ ಶಾಸ್ತ್ರದಲ್ಲಿ ಅಭಯಾರಣ್ಯಗಳ ಮಹತ್ವವನ್ನು ಒತ್ತಿ ಹೇಳಿದ. ಕಾಳಿದಾಸ ತನ್ನ ಕೃತಿಯಲ್ಲಿ 'ಚಿಗರೆಯೊಂದನ್ನು ಓಡಿಸುತ್ತಾ ಋಷಿಯ ಆಶ್ರಮಕ್ಕೆ ತಂದು ರಕ್ಷಣೆ ನೀಡಿದ. ಕ್ರಿ.ಪೂ. ೩ನೆಯ ಶತಮಾನದಲ್ಲಿಯೇ ಅಶೋಕನು ತನ್ನ ಐದನೆಯ ಶಾಸನ ಸ್ತಂಭದಲ್ಲಿ ಬರೆಯಿಸಿದ ರಾಜಾಜ್ಞೆಯಲ್ಲಿ ಅರಣ್ಯ ಪ್ರಾಣಿಗಳಿಗೆ ಸಂರಕ್ಷಣೆ ಕೊಟ್ಟ.

ಪುರಾಣಗಳಲ್ಲಿ ಹಣಿಕಿಕ್ಕಿದರೂ ದೇವ ದೇವಿಯರ ಬಳಿ ಒಂದಿಲ್ಲೊಂದು ಪ್ರಾಣಿ ಸುರಕ್ಷಿತ ಆಶ್ರಯ ಪಡೆದದ್ದು ತಿಳಿಯುತ್ತದೆ. ಶಿವನ ಬಳಿ ನಂದಿ ಇದೆ. ವಿಷ್ಣುವಿನ ವಾಹನ ಗರುಡ. ಸರಸ್ವತಿಗೆ ಹಂಸ, ಕಾರ್ತಿಕೇಯನಿಗೆ ನವಿಲು, ಲಕ್ಷ್ಮೀದೇವಿಯ ಸುತ್ತಲೂ ಆನೆಗಳು, ಕೃಷ್ಣನ ಬಳಿ ಗೋವುಗಳು - ಇವೆ. ದುರ್ಗಾದೇವಿಯ ಹತ್ತಿರ ನ್ಯಾಯಧರ್ಮಗಳ ಸಾಕಾರ ಮೂರ್ತಿಯಂತಿದ್ದ ಸಿಂಹ ನಿಂತುಕೊಂಡಿದೆ. ಹೀಗೆ ದೈವತ್ವಕ್ಕೆ ಪ್ರಾಣಿಗಳನ್ನು ಪುರಾಣಗಳಲ್ಲಿ ಕಾಣುತ್ತೇವೆ. ಪಂಚತಂತ್ರ ಹಿತೋಪದೇಶಗಳಲ್ಲಿಯೂ ಪಶುಪಕ್ಷಿಗಳ ಕಥೆಗಳೇ ಹೆಚ್ಚಾಗಿ ಉಲ್ಲೇಖಿಸಲ್ಪಟ್ಟಿದೆ.

ಅದೆಲ್ಲ ಹಿಂದಿನ 'ರಕ್ಷಾಕಾಂಡ'ದ ಕಥೆಯಾದರೆ ಇಂದಿನ 'ಹತ್ಯಾಕಾಂಡ'ದ ಸತ್ಯ ಕಥೆಯೇ ಬೇರೆ. ಅದರ ಮಾರ್ಗಗಳನ್ನು ಇಲ್ಲಿ ವಿವರಿಸದೆ. ಹತ್ಯಾಕಾಂಡದಲ್ಲಿ ಅಳಿದುಳಿದ ಹಲವು ವನ್ಯ ಮೃಗಗಳ ಸಮಗ್ರ ಚಿತ್ರಣವನ್ನು ಕೊಡಲಾಗಿದೆ.

ಕರೀಗಂಡೆರಳೆ

ಭಾರತ ಬಿಟ್ಟು ಬೇರೆಯಾವ ದೇಶದಲ್ಲಿಯೂ ಈ ಪ್ರಾಣಿ ಸಿಗುತ್ತಿಲ್ಲ. ಬಯಲು ಪ್ರಿಯವಾದ ಈ ಜಿಂಕೆ ನದಿ ಕೊಳ್ಳಗಳ ಹುಲ್ಲುಗಾವಲಿನಲ್ಲಿಯೂ ವಾಸಿಸುವುದುಂಟು. ಇದು ಅತ್ಯಂತ ಬೆಡಗಿನ ಪ್ರಾಣಿ. ಶ್ಯಾಮ ವರ್ಣದ ಮೈ, ಮುರಿಗೆ ಹೊಡೆದು ನೀಳಾಗಿ ಬೆಳೆದ ಕಪ್ಪು ಕೋಡುಗಳು - ಇವುಗಳಿಂದ ಈ ಜಿಂಕೆ ಹಸಿರಿನ ಹಿನ್ನೆಲೆಯಲ್ಲಿ ರಮ್ಯ



ಮನೋಹರವಾಗಿ ಕಾಣದೇನು? ಕೋಡುಗಳಿಲ್ಲದ ಹೆಣ್ಣೆರಳೆ ಕೂಡ ಸಾಕಷ್ಟು ಆಕರ್ಷಕ. ಗಂಡೆರಳೆ ತಾಸಿಗೆ ೪೦ ಮೈಲು ವೇಗವಾಗಿ ಓಡಬಲ್ಲದು. ಮೊದಮೊದಲು ಎತ್ತರವಾಗಿ ಜಿಗಿಯುತ್ತ ತರುವಾಯ ದೀರ್ಘ ಜಿಗಿತಗಳಿಂದ ಕ್ಷಣಾರ್ಧದಲ್ಲಿ ಕಣ್ಮರೆಯಾಗುವ ಅದರ ನಾಗಾಲೋಟ ನೋಡುವಂತಹದು. ಗುಂಪಿಗೆ ಗುಂಪೇ ಸದ್ದಿಲ್ಲದೆ ಚಲಿಸುತ್ತಿರುವಾಗಲಂತೂ ಸಮುದ್ರ ತೆರೆಯೊಂದನ್ನು ದೂರದಿಂದ ನೋಡಿದಂತೆ ಭಾಸವಾಗುತ್ತದೆ.

ಹುಲ್ಲುಗಾವಲುಗಳಲ್ಲಿ ಈ ಜಿಂಕೆಗಳು ಸಾವಿರಾರು ಸಂಖ್ಯೆಯಲ್ಲಿ ಕಾಣಿಸಿಕೊಳ್ಳುತ್ತಿದ್ದ ಕಾಲವೊಂದಿತ್ತು. ಮಾನವನ ಗುಂಡಿನೇಟಿಗೆ ಬಲಿಯಾಗಿ ಲಾರಿ ತುಂಬಿ ಹೊರ ಚೆಲ್ಲುವಂತೆ ಮೃತದೇಹಗಳ ತುಂಬಿಸಿಕೊಂಡು ಮರೆಯಾಗುತ್ತಿರುವ ಕಾಲವನ್ನೂ ಅವು ಕಾಣುತ್ತಿವೆ.

ಚತುಃಶೃಂಗಿ ಹರಿಣ ಕೂಡ ಭಾರತದಲ್ಲಷ್ಟೇ ಸಿಗುವ ಪ್ರಾಣಿ. ಸದ್ಯ ಪಂಜಾಬಿನ ಕಾಡುಗಳಲ್ಲಿ ಮಾತ್ರ ಇವು ಅಡಗಿಕೊಂಡಿವೆ. ನೀರಿನ ದಾಹವುಳ್ಳ ಈ ಪ್ರಾಣಿಗಳು ಹಳ್ಳಕೊಳ್ಳಗಳ ಬದಿಯ ಕಾಡುಗಳಲ್ಲಿ ಇರುವುದೇ ಹೆಚ್ಚು. ಎರಡು ಜೊತೆ - ಕೋಡುಗಳ ಹರಣ ಇದೊಂದೇ. ಹರಿಣೆಗೆ ಮಾತ್ರ ಕೋಡುಗಳಿಲ್ಲ. ತೀವ್ರ ಗತಿಯಲ್ಲಿ ಓಡುವಾಗ ದಾರಿಯ ಕಂಟಿಗಳನ್ನೂ, ಕೊಳ್ಳಗಳನ್ನೂ ಸಲೀಲವಾಗಿ ಜಿಗಿಯುತ್ತ ಸಾಗುವ ಇದರ ಓಟ ಕಣ್ಣಿಗೊಂದು ಹಬ್ಬ.

ಇತರ ಜಿಂಕೆಗಳು

'ದ್ವಾದಶ ಶೃಂಗೀ ಹರಿಣ'ವನ್ನು ಜವುಳು ನೆಲದ ಜಿಂಕೆ ಎಂದೂ ಕರೆಯುವರು. ಉತ್ತರ ಪ್ರದೇಶದವರು ಇದಕ್ಕೆ 'ಗೋಂದ' ಎಂದೂ, ಮಧ್ಯ ಪ್ರದೇಶದ ಜನರು 'ಬಾರಾಸಿಂಗ' ಎಂದೂ ಕರೆಯುತ್ತಾರೆ. ಒಂದೊಂದು ಕೋಡಿಗೆ ಹನ್ನೆರಡು ಟಿಸಿಲುಗಳಿರುವುದೇ ಈ ಹೆಸರು ಬರಲು ಕಾರಣ. ಟಿಸಿಲುಗಳಿಂದ ವೃಕ್ಷದಂತೆ ಕಾಣುವ ಕೋಡುಗಳು ಜಿಂಕೆಯ ಸೊಬಗನ್ನು ಹೆಚ್ಚಿಸಿವೆ. ಬೆಡಗಿನ ಈ ಕೋಡುಗಳೇ ಬೇಟೆಗಾರನ ದಾಹದ ಬಲೆಯಲ್ಲಿ ಇಂಥ ಅಪರೂಪ ಸೌಂದರ್ಯವನ್ನು ಅಪಹರಿಸುತ್ತಲಿವೆ.

ಹುಬ್ಬು ಗೋಡಿನ ಸಾರಂಗದ ಕೋಡುಗಳು ಹುಬ್ಬಿನ ಮೇಲಿರುವುದರಿಂದ ಈ ಹೆಸರು ಬಂದಿದೆ. ನದಿ ಹಾಗೂ ಗುಡ್ಡದ ಸಾಲುಗಳ ನಡುವಿನ ಬಯಲು ಇದಕ್ಕೆ ಇಷ್ಟ. ಚಿಕ್ಕ ಚಿಕ್ಕ ಗುಂಪುಗಳಾಗಿ ಗಿಡದ ನೆರಳಿನಲ್ಲಿ ಮೈ ಚಾಚಿ ಮಲಗಿರುವುದನ್ನೂ, ಸಂಜೆ ಮುಂಜಾವುಗಳ ಎಳೆ ಬಿಸಿಲಿನಲ್ಲಿ ಮೇಯುತ್ತಿರುವುದನ್ನೂ ನೋಡಬಹುದು.


ಅವುಗಳಿಗಿದ್ದ ಕಣ್ಣಿನ ತೀಕ್ಷ್ಣ ನೋಟ, ನಾಗಾಲೋಟಗಳೇ ಅವುಗಳನ್ನು ಸಂರಕ್ಷಿಸುವ ಸಂಜೀವಿನಿ. ತೀವ್ರಗಾಮಿ ಹರಿಣಗಳಲ್ಲಿ ಇದೂ ಒಂದು. ದೀರ್ಘ ಜಿಗಿತದಿಂದ ಆರಂಭವಾಗುವ ಇದರ ಓಟ ಬರಬರುತ್ತ ಪುಟಿಗೆಯ ಓಟವಾಗಿ, ಕಡೆಗೆ ತಾಳಬದ್ಧವಾದ ಕುಕ್ಕೋಟದಲ್ಲಿ ಕೊನೆಗೊಳ್ಳುತ್ತದೆ. ಈ ಸ್ಥಿತಿಯಲ್ಲಿ ಅದು ಹಲವಾರು ಮೈಲುಗಳನ್ನು ಅನಾಯಾಸವಾಗಿ ಕ್ರಮಿಸಬಲ್ಲದು.

ಕಸ್ತೂರಿ ಮೃಗ

ಈ ಪ್ರಾಣಿ ಕಾನನ ವಾಸಿ. ಬೇಸಿಗೆಯಲ್ಲಿ ಹಿಮಾಲಯದ ೮,೦೦೦ ಅಡಿಗಳೆತ್ತರದಲ್ಲೂ ಕಾಣಸಿಗುತ್ತದೆ. ಜಡದೇಹಿಯಾದ ಈ ಕುಬ್ಜಾಕಾರದ ಜಿಂಕೆಯ ಹಿಂಗಾಲುಗಳು ಮುಂಗಾಲುಗಳಿಗಿಂತ ದೊಡ್ಡವು. ಬಿರುಸು, ಪೆಡಸಾದ ಮೈಗೂದಲು ದೇಹವನ್ನು ಚಳಿಯಿಂದ ಕಾಪಾಡುತ್ತದೆ. ಚಿಗರೆಯ ಲಕ್ಷಣವಾದ ಕೋಡುಗಳು, ಮುಖ ಗ್ರಂಥಿಗಳು ಇದಕ್ಕಿಲ್ಲ. ಆದರೆ ಉಳಿದ ಚಗರಿಗಳಿಗಿಲ್ಲದ ಪಿತ್ತಾಶಯ ಇದಕ್ಕಿದೆ. ಮೇಲ್ದವಡೆಯಲ್ಲಿ ಉದ್ದವಾದ ಸೂಲದ ಹಲ್ಲುಗಳು ಇರುವುದು ಆಶ್ಚರ್ಯವೇ ! ಹೊಟ್ಟೆಯ ಕೆಳ ಬದಿಗೆ ಇದಕ್ಕಿರುವ ಕಸ್ತೂರಿ ಚೀಲವೇ ಜಿಂಕೆಯ ಪ್ರಾಣಕ್ಕೆ ಮುಳುವಾಗಿದೆ. (ಒಂದು ಚೀಲದಲ್ಲಿಯ ಕಸ್ತೂರಿ ಒಂದು ಔನ್ಸಿನಷ್ಟಾಗುತ್ತದೆ.)

ಕಸ್ತೂರಿಯ ಆಶೆಗಾಗಿ ಬೇಟೆಗಾರರು ಅಸಂಖ್ಯ ಸಂಖ್ಯೆಯಲ್ಲಿ ಈ ಎರಳೆಗಳನ್ನು ಗುಂಡಿಕ್ಕಿ ಕೊಂದು ವನಶ್ರೀಯ ಚೆಲುವನ್ನೇ ಹಿಂಡಿದ್ದಾರೆ.

ಕಾಡು ಕೋಣ - ಆಕಳು



ಹುಲ್ಲು ಮೇಯುವ ಈ ಪ್ರಾಣಿ ನಿಡಿದಾದ ಹುಲ್ಲು ಬೆಳೆಯುವ ಅಡವಿಯ ನಿವಾಸಿ. ಬೆಟ್ಟ ಗುಡ್ಡಗಳಿಗಿಂತ ಜವುಳು ನೆಲವೇ ಇದಕ್ಕೆ ಇಷ್ಟ. ಯಾಕೆಂದರೆ ರುಕ್ಷ ಬೆಟ್ಟಗಳಲ್ಲಿ ನಿಂತು ಕೊಂಡಿರುವುದಕ್ಕಿಂತ ಕೆಸರಿನಲ್ಲಿ ಹೊರಳಾಡುವ ಸುಖವನ್ನೇ ಹೆಚ್ಚಾಗಿ ಬಯಸುತ್ತದೆ. ವಿರಾಟವಾದ ಜಡ ದೇಹದಲ್ಲಿ ಕಾಲುಗಳು ಮಾತ್ರ ಚಿಕ್ಕವು. ಕೋಡುಗಳು ವಕ್ರವಾಗಿ ಕುತ್ತಿಗೆಯ ಎಡ ಬಲಗಳಲ್ಲಿ ಚಾಚಿರುತ್ತವೆ. ೪೦ ವರುಷಗಳ ಪೂರ್ವದಲ್ಲಿ ಸಮೃದ್ಧಿಯಾಗಿ ಕಾಣುತ್ತಿದ್ದ ಈ ಕೋಣಗಳು ಇಂದು ಒರಿಸ್ಸಾ ಪ್ರಾಂತದ ಮಹಾ ನದಿಯ ದಡದಲ್ಲಿ ಮಾತ್ರ ಕಾಣಸಿಗುತ್ತದೆ. ಬೆಳೆ ಹಾಳು ಮಾಡುವ ಕೆಟ್ಟ ಚಾಳಿಯೇ ಇದರ ನಾಶಕ್ಕೆ ಕಾರಣ.

ಕಾಡಾಕಳು ಅಂದವಾದ ಗಂಭೀರ ಪ್ರಾಣಿ. ಜೀವಂತವಿರುವ ಆಕಳು ಜಾತಿಗಳಲ್ಲಿ ಇದೇ ದೊಡ್ಡದು. ಆಸ್ಸಾವ್ ಹಾಗೂ ಕರಾವಳಿಗುಂಟ ಇಂದು ಪೂರ್ತಿ ಮರೆಯಾಗಿದ್ದರೂ, ಕೇರಳದ ಅಡವಿಗಳಲ್ಲಿ, ಮದ್ರಾಸ್ ಪ್ರಾಂತದ ಹಲವೆಡೆಗಳಲ್ಲಿ, ಕೊಯಮತ್ತೂರಿನ ದಕ್ಷಿಣಕ್ಕೆ, ಮೈಸೂರು, ಮಲಬಾರ್, ನೀಲಗಿರಿ, ಬಿಳಿಗಿರಿ ಬೆಟ್ಟಗಳಲ್ಲಿ ಕಾಣಸಿಗುತ್ತಿರುವುದು ನಿಜವಾಗಿಯೂ ಆನಂದದ ಸಂಗತಿ. ಬೂದು ಮಿಶ್ರಿತ ತಿಳಿ ಹಸಿರು ಬಣ್ಣದ ಕೋಡುಗಳು ತುಸು ವಕ್ರವಾಗಿ ಹಿಂದೆ ನಸು ಬಾಗಿರುತ್ತವೆ. ಜಡ ದೇಹಿಯಾದರೂ ಕಡಿದಾದ ದಿನ್ನೆಯನ್ನು ಸಲೀಲವಾಗಿ ಮೇಲೇರುವ ಅದರ ಯುಕ್ತಿ ಶಕ್ತಿಗಳಿಗೆ ಯಾರಾದರೂ ಬೊಟ್ಟು ಕಚ್ಚಬೇಕು. ಇದು ಹುಲಿಯೊಂದಿಗೆ ಕೂಡ ಹೋರಾಟ ಮಾಡಬಲ್ಲದು. ಇದರ ಹಗೆ ಹುಲಿಯೊಂದೇ.


ಕಛ್, ಗುಜರಾತ್, ಬಿಕಾನೇರ್‌ಗಳಲ್ಲಿ ಕಾಣುತ್ತಿದ್ದ ಕಾಡುಕತ್ತೆ ಈಗ ಕಚ್ಛದ ರಣಭೂಮಿಗಷ್ಟೇ ಮರ್ಯಾದಿತವಾಗಿದೆ. ಅದರ ಬೆನ್ನು ಉಸುಕಿನ ಬಣ್ಣದ್ದು; ವಕ್ಷಸ್ಥಳ,

ಕಾಲುಗಳು ಶುಭ್ರ ಬಿಳಿ; ಬಾಲದ ತುದಿ ಕಂದು ಇಲ್ಲವೆ ಕಪ್ಪು. ಹಿಂಗಾಲುಗಳನ್ನು ತೂರುವ ಚಟ ಈ ಕತ್ತೆಗೂ ಉಂಟು.

ಕುಳ್ಳು ಹಂದಿ ಈಗ ನಿರ್ನಾಮವಾಗಿದೆ. ೧೦ ಅಂಗುಲ ಎತ್ತರವಿದ್ದ ಈ ವರಾಹಗಳು ಗುಂಪುಗೂಡಿ ತಿರುಗುತ್ತಿದ್ದವು. ಈ ನಿಶಾಚರ ಪ್ರಾಣಿ ಸಿಕ್ಕಿಮ್, ಅಸ್ಸಾಮ್, ನೇಪಾಳಗಳಲ್ಲಿ ಕಾಣುತ್ತಿತ್ತು. ಗಂಡು ಹಂದಿಗಳು ತಮ್ಮ ಮೈ ಮೇಲೆ ಬಿದ್ದ ವೈರಿಯ ಕಾಲುಗಳನ್ನು ಕಚ ಕಚ ಕಡಿಯುವ ವೇಗ, ಕಲಿತನ, ನಿರ್ಭೀತಿ ನಿಜವಾಗಿಯೂ ನೋಡುವಂತಹದಿತ್ತು.

ಖಡ್ಗ ಮೃಗ

೧೮೫೦ರ ವರೆಗೆ ಉತ್ತರ ಪ್ರದೇಶದಲ್ಲಿ, ೧೯೦೦ರ ವರೆಗೆ ಸುಂದರ ಬನದಲ್ಲಿ ಕಾಣುತ್ತಿದ್ದ ಖಡ್ಗಮೃಗ ಸದ್ಯ ಬಂಗಾಲ, ಅಸ್ಸಾಮ್‌ಗಳ ಕೆಲವು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿವೆ. ಇದರ ಮೂಗಿನ ಮೇಲಿರುವ ಕೋಡು (ಖಡ್ಗ) ಔಷಧಿಯ ಉಪಯೋಗಕ್ಕೆ ಬರ ಬಹುದೆಂಬ ಮೂಢ ನಂಬಿಕೆಯಿಂದ ಅದಕ್ಕೆ ಸಾವಿರಾರು ರೂಪಾಯಿಗಳನ್ನು ತೆತ್ತು ಕೊಂಡುಕೊಳ್ಳಲು ಜನ ಸಿದ್ಧರಿದ್ದಾರೆ. ಇದರಿಂದ ಈ ವಿರಾಟ್ ಪ್ರಾಣಿ ಕೂಡ ಗುಂಡಿನೇಟಿಗೆ ಆಹುತಿ ಯಾಗುತ್ತಲಿದೆ. ಎರಡು ಕೋಡುಗಳಿದ್ದ ಖಡ್ಗಮೃಗ ಜಾತಿಗಳಂತೂ ಈಗ ಪೂರ್ತಿ ನಿರ್ನಾಮವಾಗಿವೆ.




ಇದಕ್ಕಿದ್ದ ಕೋಡು ಆಕಳ ಕೋಡಿನಂತಲ್ಲ. ಕೂದಲುಗಳೇ ದಟ್ಟವಾಗಿ ಬೆರೆತ ಅಂಗಾಂಗವದು. ಉದ್ದಾದ ತಲೆ, ಕುಳ್ಳು ಕಾಲುಗಳು, ದಪ್ಪ ಮಡಿಕೆಗಳ ಮೈ ಗೂದಲು, ನಿಡಿದಾದ ಕಿವಿಗಳು, ವಿರಾಟ ದೇಹದಲ್ಲಿ ಹುದುಗಿರುವ ಚಿಕ್ಕ ಕಣ್ಣುಗಳು - ಇವುಗಳಿಂದ ಇದು ಅಕರಾಳವಿಕರಾಳವಾಗಿ ಕಾಣುತ್ತದೆ. ಬಯಲಿಗೆ ಅಟ್ಟಿದಾಗ ಈ ಅಸಹ್ಯ ಪ್ರಾಣಿ ಯಾವೆಡೆಗೆ ಓಡಬೇಕೆನ್ನುವ ವಿಚಾರದಲ್ಲಿ ಅರೆ ಕ್ಷಣ ಮಗ್ನವಾಗಿ ಕಿವಿಗಳನ್ನು ಝಾಡಿಸಿಕೊಳ್ಳುವ ದೃಶ್ಯ ತುಂಬಾ ಮೋಜಿನದು. ಇದನ್ನು ತಡವಿದರೆ ಆನೆಯನ್ನೂ ಸೀಳೀತು! ಕಾಡುಕೋಣದಂತೆ ಕೆಸರು ಇದಕ್ಕಿಷ್ಟ. ಒಂದು ನೂರು ವರುಷ ಬದುಕುವ ದೀರ್ಘಾಯುಷಿ. ಸದ್ಯ ಒಂದು ಖಡ್ಗ ಮೃಗಕ್ಕೆ ೪೦,೦೦೦ ರೂಪಾಯಿ

ಕೊಟ್ಟು ಕೊಳ್ಳಲು ಪರ ದೇಶದ ಪ್ರಾಣಿ ಸಂಗ್ರಹಾಲಯಗಳು ಸಿದ್ಧವಿವೆ. ೬ ಅಡಿ ಎತ್ತರಕ್ಕೂ ಬೆಳೆಯಬಲ್ಲದು; ೩-೪ ಟನ್ನಿನಷ್ಟು ತೂಗ ಬಲ್ಲದು.

ಸಿಂಹ

ಕಂದು ಬಣ್ಣದ ಮೈ, ಚಪ್ಪಟೆತಲೆ, ಬಿರುಸು ಕೂದಲುಗಳ ಆಯಾಲು, ಪೊದರು ಬಾಲ- ಇವುಗಳಿಂದ ಗಂಭೀರವಾಗಿ ತೋರುವ ಈ ವಿರಾಟ್ ಬೆಕ್ಕಿಗೆ 'ವನರಾಜ' ಎಂಬ ಹೆಸರು ಸಾರ್ಥಕವಾಗಿದೆ. ಪಂಜಾಬ್, ರಾಜಸ್ತಾನ, ಮಧ್ಯ ಭಾರತ, ನರ್ಮದೆಯ ಉತ್ತರ ತೀರ ಪಶ್ಚಿಮ ಬಂಗಾಲಗಳಲ್ಲಿ ಕಾಣುತ್ತಿದ್ದ ಈ ಪ್ರಾಣಿ ಈಗ ಸೌರಾಷ್ಟ್ರದ ಗಿರಿನಾರ್ ಅರಣ್ಯಗಳಿಗೆ ಮಾತ್ರ ಸೀಮಿತ ವಾಗಿದೆ.



ಸರಕಾರದ ಬಿಗಿ ಕಾನೂನು ಗಳಿರದಿದ್ದರೆ ಇಷ್ಟ ರೊಳಗೆ ಇವು ಪೂರ್ತಿ ಕಣ್ಮರೆ ಯಾಗಬಹುದಿತ್ತು. ಸದ್ಯ ೩೦೦ ಸಿಂಹಗಳಾದರೂ ಬದುಕಿ ನಮ್ಮ ಸರಕಾರದ ಮುದ್ರೆಯ ಮೇಲಿರುವ ಅಶೋಕ ಸ್ತಂಭದ ಸಂಕೇತವನ್ನು ಸಜೀವ ವಾಗಿರಿಸಿದ್ದು ನಮ್ಮ ಭಾಗ್ಯ. ಈ ಪ್ರತಾಪಿ ಪ್ರಾಣಿ ಹುಲಿಯಂತೆ ಮುಂಜಾಗ್ರತೆ ವಹಿಸುವುದಿಲ್ಲ. ಅದರ ಈ ಶೂರ, ನಿರ್ಭೀತ ಲಕ್ಷಣಗಳೇ ಪ್ರಾಣಾಪಾಯವಾಗಿದೆ. ನೀವು ಬಂದೂಕು ಎತ್ತಿದರೂ ಎದೆ ಕೊಟ್ಟು ಮರಣವನ್ನಪ್ಪೀತೇ ವಿನಹ ಓಡಿಹೋಗಲಾರದು. ಸದೃಢವಾಗಿ ಬೆಳೆದ ಸಿಂಹ ೧೦ ಅಡಿ ಉದ್ದ ಬೆಳೆಯಬಹುದು. ೪೫೦ ಪೌಂಡು ತೂಗ ಬಲ್ಲದು.

ದುಂಡುಕಲೆ ಚಿರತೆ :


ಕೇವಲ ೧೦-೧೫ ವರುಷಗಳ ಹಿಂದೆ ಕಣ್ಮರೆಯಾದ ಈ ಚೆಲುವಿನ ಚಿರತೆಯ ಮೃದು ದೇಹವನ್ನು ಈಗ ಯಾವು ದೊಂದು ವಸ್ತು ಸಂಗ್ರಹಾಲಯ ದಲ್ಲಿ ನೋಡಬಹುದೇ ವಿನಃ ಆ ಜೀವಂತ ಲಾವಣ್ಯ ಎಂದೆಂದಿಗೂ ಮರೆಯಾ ಯಿತು. ಇದು

ಮಧ್ಯ ಭಾರತದ ದಿನ್ನೆಗಳಲ್ಲಿ ಬಯಲಲ್ಲಿ ಜಿಂಕೆಗಳನ್ನು ಬೇಟೆಯಾಡುತ್ತ ಜೀವಿಸಿತ್ತು.

ಬೇಟೆಯ ಮೊದಲು ತನ್ನ ನಖಗಳನ್ನು ಗಿಡದ ತೊಗಟೆಗೆ ಪರಚಿ ಹದಮಾಡಿಕೊಳ್ಳುತ್ತಿತ್ತು. ಇದಕ್ಕಿದ್ದ ಬೇಟೆಯ ಯುಕ್ತಿ ನಾಯಿಗೂ ಬಾರದು. ಬೇಟೆ ಹಿಡಿಯುವಾಗ ಅದು ತೋರುವ ಚಾಕಚಕ್ಯತೆ, ನೆಗೆತ, ಅದುಮಿ ಹಿಡಿದುಕೊಳ್ಳುವ ಯುಕ್ತಿ ರಮಣೀಯವಾಗಿದ್ದವು. ಪ್ರಾಚೀನ ಕಾಲದಲ್ಲಿ ಈ ಚಿರತೆಗಳನ್ನು ಸಾಕಿದ ನಾಯಿಯಂತೆ ಬೇಟೆಗಾಗಿ ಉಪಯೋಗಿಸುತ್ತಿದ್ದರು. ಚಿಗರಿಯಂಥ ತೀವ್ರಗಾಮಿ ಪ್ರಾಣಿಯ ಬೆನ್ನು ಹತ್ತಿದಾಗ ಮೊದಲಿನ ಒಂದೆರಡು ಫರ್ಲಾಂಗುಗಳ ಅಂತರವನ್ನು ತಾಸಿಗೆ ೬೦ ಮೈಲುವೇಗದಲ್ಲಿ ಓಡಿ ಬೇಟೆಯನ್ನು ಹಿಡಿಯುತ್ತಿದ್ದವು. ಇದಕ್ಕೂ, ಈಗ ಕಾಣುವ ಸಾಮಾನ್ಯ ಚಿರತೆಗೂ ಭೇದವಿದೆ.. ಸಾಮಾನ್ಯ ಚಿರತೆಯ ಮೈದೊಗಲಿನ ಕಲೆಗಳು ಗುಲಾಬಿ ಪಕಳೆಗಳಂತಿದ್ದರೆ ಬೇಟೆಯ ಚಿರತೆಯ ಕಲೆಗಳು ಪೂರ್ಣ ದುಂಡಾಗಿದ್ದವು. ಅಲ್ಲದೆ ಇದರ ಕಾಲುಗಳು ಸಬಳ ನೀಳವಾಗಿದ್ದವು.ತಲೆ ದುಂಡಾಗಿ ಚಿಕ್ಕದಿತ್ತು. ಬಾಲದ ಮೇಲೆ ದಪ್ಪ ಕೂದಲುಗಳಿದ್ದವು.

ಭಾರತದ ಕಾಡುಕೋಳಿ

ಬಯಲಿನ ಹುಲ್ಲುಗಾವಲುಗಳಲ್ಲಿ ವಾಸಿಸುವ ಈ ಪಕ್ಷಿ ಇಂದಿಗೂ ಪಂಜಾಬದಿಂದ ಮೈಸೂರು ; ಕಚ್ಛದಿಂದ ಬಿಹಾರದವರೆಗೆ ಸಿಗುತ್ತದೆ. ಆಕಾರದಲ್ಲಿ ರಣಹದ್ದಿಗಿಂತಲೂ ದೊಡ್ಡದು. ಶಹಾ ಮೃಗಕ್ಕಿಂತಲೂ ಚಿಕ್ಕದು. ತಲೆಯ ಮೇಲಿನ ಕಪ್ಪು ಪುಚ್ಛ, ಬೆನ್ನಿನ ಮಾಸಲು ಹಳದಿ ಬಣ್ಣ, ಹೊಟ್ಟೆಯ ಬಿಳಿ ಭಾಗ, ವಕ್ಷಸ್ಥಳದಲ್ಲಿಯ ಅಗಲವಾದ ಕಪ್ಪು ಪಟ್ಟಿ ಇವುಗಳಿಂದ ಇದನ್ನು ಗುರುತಿಸಬಹುದು. ಜಡ ದೇಹಿಯಾದರೂ ಚೆನ್ನಾಗಿ ಹಾರಬಲ್ಲದು. ತನ್ನ ಅಗಲವಾದ ರಾಕ್ಷಸ ರೆಕ್ಕೆಗಳನ್ನುತಾಳಬದ್ಧವಾಗಿ ಬಡಿಯುತ್ತ ಮೇಲೇರುವುದು. ಒಮ್ಮೆಲೇ ಜಿಗಿದು ಹಾರುವ ಸ್ವಭಾವವಿದ್ದ ಈ ಪಕ್ಷಿಯನ್ನು ಎಂಥ ಗುರಿಗಾರನಲ್ಲದ ಬೇಸಾಯಕಾರನೂ ಗುರಿತಪ್ಪದಂತೆ ಗುಂಡಿಕ್ಕಬಲ್ಲ. ಇದರ ಸೊಗಸಾದ ಗರಿಗಳೂ ಬೇಟೆಗಾರನ ಆಸೆ ಹೆಚ್ಚಿಸಿವೆ.ಈಗ ಬಿಳಿ ರೆಕ್ಕೆಯ ಕಾಡು ಬಾತುಕೋಳಿಯ ಸುಳಿವೇ ಇದ್ದಂತಿಲ್ಲ. ವಿರಾಟಾಕಾರದ ಈ ಪಕ್ಷಿ ಆಸ್ಸಾಮದಲ್ಲಿತ್ತು. ಮೈ


ಕಾಡುಕೋಳಿ

ಬಣ್ಣ ಕಂದು, ರೆಕ್ಕೆಗಳು ಶುಭ್ರ ವರ್ಣದವು. ಸಂಭೋಗ ಪೂರ್ವದಲ್ಲಿ ಗಂಡು ಪಕ್ಷಿಯ ಕೆಳ ಚುಂಚು ಅತಿ ಕೆಂಪಾಗುತ್ತಿತ್ತೆಂದು ಹೇಳಲಾಗುತ್ತದೆ!

ಕೆಂಪುತಲೆಯ ಬಾತುಕೋಳಿ ನೇಪಾಳದಿಂದ ಅಸ್ಸಾಮದವರೆಗೆ ಹಿಮಾಲಯದ ಅಡಿಗುಂಟ ಕಾಣುತ್ತಿತ್ತು. ಮಣಿಪುರ ದಲ್ಲಿಯೂ ಇದ್ದವೆಂಬುದಕ್ಕೆ ದಾಖಲೆ ಇದೆ. ೧೯೩೮ರಲ್ಲಿ ಈ ಪಕ್ಷಿಯನ್ನು ಗುಂಡಿಕ್ಕಿ ಕೊಂದ ವರದಿಯ ತರುವಾಯ ಅದರ ಸುಳಿವೇ ಸಿಗುತ್ತಿಲ್ಲ. ಕೆಲವರು ನೋಡಿದ್ದಾಗಿ ಹೇಳಿದರೂ ಅವು ನಿರಾಧಾರ ವರದಿಗಳಾಗಿವೆ. ಇದರಂತೆಯೇ ಕಾಣುವ ಕೆಂಪು ಚುಂಚಿನ ಬಾತುಕೋಳಿಯನ್ನು ಕಂಡು ತಪ್ಪಾಗಿ ಗ್ರಹಿಸಿರುವ ಸಂಭವವಿದೆ.

ಇದೇ ರೀತಿ ಹುಲಿ, ಆನೆ, ಕರಡಿ, ನೀಲಹೋರಿ, ಕಾಡು ಮೊಲಗಳು, ಕಾಡು ಮಿಕಗಳು, ಕತ್ತೆ ಕಿರುಬಗಳು ಹಾಗೂ ನೂರಾರು ತರಹದ ಬೇರೆ ಬೇರೆ ಪಶು ಪಕ್ಷಿಗಳು ಮಾನವನ ಗುಂಡಿಗೆ ಬಲಿಯಾಗಿ ತೀವ್ರವಾಗಿ ನಿರ್ವಂಶ ವಾಗುತ್ತಿರ ಬಹುದು. ಬುದ್ಧಿವಂತ ನಾಗರಿಕ, ಸುಧಾರಕ ಮುಂತಾಗಿ ಹೆಮ್ಮೆಯಿಂದ ಆತ್ಮ ಪ್ರಶಂಸೆ ಮಾಡಿಕೊಳ್ಳುವ ಮಾನವನಿಗೆ ಈ ಭೂಮಿಯ ಮೇಲೆ ಜೀವಿಸಲು ಎಷ್ಟು ಹಕ್ಕಿದೆಯೇ ಅಷ್ಟೇ ಹಕ್ಕು ಪ್ರಾಣಿ ವರ್ಗಕ್ಕೂ ಇದೆ ಎಂಬ ಕಟು ಸತ್ಯವನ್ನು ಆತ ತಿಳಿಯಬೇಕು. ಪಶು ಪಕ್ಷಿಗಳು ಜಗತ್ತಿನಿಂದ ಮರೆಯಾದ ಮರುಗಳಿಗೆಯಲ್ಲಿಯೇ ತಾನೂ ಮರೆಯಾದಾನು ಎಂಬ ಅರಿವು ಅವನಿಗಿರಲಿ. ಪ್ರತಿ ದಿನವೂ ಬರೀ ಮಾನವ ಮುಖಗಳನ್ನೇ ನೋಡಿ ಬೇಸತ್ತ ತನಗೆ ಪ್ರಕೃತಿಯ ಇತರ ಲಾವಣ್ಯಯುತ ಮುಖಗಳೂ ತನ್ನೆದುರಿಗೆ ಸಜೀವವಾಗಿರಲೆಂಬ ಸೌಂದರ್ಯ ತತ್ತ್ವದ ಜ್ಞಾನವಿರಲಿ. ಪ್ರಪಂಚದಾದ್ಯಂತವೂ ಕಾಣುತ್ತಿರುವ ಪಶು ಪಕ್ಷಿಗಳು ಭೂಮಾತೆ ಹರಡಿದ ಮುತ್ತುಗಳು ; ಗಿಡಮರಗಳು ಪ್ರಕೃತಿ ಬರೆದ ಕಾವ್ಯಗಳು. ಅವುಗಳನ್ನು ಕೆಡಿಸುವುದು ನಾಶ ಪಡಿಸುವುದು ಸುಲಭವಾದೀತು ; ಆದರೆ ಪುನಃ ಸೃಷ್ಟಿಸಲಾದೀತೇ ?



ಚೀಟಿ ಚಿರತೆ

***

ಈ ಮಾಲೆಯ ಪುಸ್ತಕಗಳು ಪಠ್ಯಪುಸ್ತಕಗಳಲ್ಲ, ಶಾಲಾ ಕಾಲೇಜುಗಳಲ್ಲಿ ಅಧ್ಯಯನಕ್ಕೆ ಗೊತ್ತು ಮಾಡಿರುವ ಪಠ್ಯಕ್ರಮಕ್ಕೆ ಸಂಬಂಧಿಸಿದವು. ವಿಧ್ಯಾರ್ಥಿಗಳು ಆಧ್ಯಯನ ಮಾಡಬೇಕಾದ ಯಾವುದಾದರೊಂದು ವಿಷಯವನ್ನು ವಿಸ್ತಾರವಾಗಿ ಶಾಸ್ತ್ರೀಯ ಅಧ್ಯಯನಕ್ಕೆ ಸರಳವಾಗಿ ನಿರೂಪಿಸುವುದು ಈ ಮಾಲಿಕೆಯ ಪುಸ್ತಕಗಳ ಗುರಿ. ಆದಷ್ಟು ಸುಲಭ ಬೆಲೆಗೆ ಈ ಪುಸ್ತಕಗಳನ್ನು ಲಭ್ಯಮಾಡಿಕೊಡಬೇಕೆಂದೂ ಕನ್ನಡ ಪುಸ್ತಕ ಪ್ರಾಧಿಕಾರದ ಅಪೇಕ್ಷೆ. ಕನ್ನಡ ಮಗುವಿಗೆ ಕನ್ನಡದಲ್ಲೇ ಎಲ್ಲಾ ತಿಳುವಳಿಕೆಯೂ ಲಭ್ಯವಾಗಬೇಕು. ಈ ಘನವಾದ ಉದ್ದೇಶದ ಸಾದನೆಗಾಗಿ ಕನ್ನಡ ಪುಸ್ತಕ ಪಾಧಿಕಾರವು ಶ್ರಮಿಸುತ್ತದೆ.